ವಿಶ್ವವಾಣಿ

ವಿಶ್ವಾಸವೇ ವಿಶ್ವ

12,692 ಬಿಬಿಎಂಪಿ ಪೌರ ಕಾರ್ಮಿಕರಿಗೆ ಮೇ ಡೇ ಖುಷಿ

ಪೌರಕಾರ್ಮಿಕರನ್ನು ಮಧ್ಯವರ್ತಿಗಳ ಕಾಟದಿಂದ ಮುಕ್ತಗೊಳಿಸುವ ನಿಟ್ಟಿನಲ್ಲಿ 12,692 ಪೌರ ಕಾರ್ಮಿಕರಿಗೆ ನೇಮಕ ಪತ್ರ ವಿತರಣೆ ಮಾಡಲಾಯಿತು.

ಸೊಂಪಾದ ಪುಟಗಳು

ಊರವರೆಲ್ಲ ಉಗ್ರಗಾಮಿಗಳಾದರೆ ಏನಾಗುತ್ತದೆ, ಏನು ಮಾಡಬೇಕು?
ಶಿಶಿರಕಾಲ ಶಿಶಿರ್ ಹೆಗಡೆ 6


ಪ್ರಶಸ್ತಿಗಳ ಆಯ್ಕೆಯಲ್ಲಿ ವಶೀಲಿ ರಾಜಕಾರಣ!
ಶಶಾಂಕಣ ಶಶಿಧರ ಹಾಲಾಡಿ 7

ದಾರಿದೀಪೋಕ್ತಿ

ಬೇರೆಯವರ ರಹಸ್ಯಗಳನ್ನು ನಿಮಗೆ ಹೇಳುವವರು, ನಿಮ್ಮ ರಹಸ್ಯಗಳನ್ನು ಬೇರೆಯವರಿಗೆ ಹೇಳುವುದಿಲ್ಲ ಎಂದು ಭಾವಿಸಬಾರದು. ಸಮಯ ಬಂದಾಗ ಅವರು ನಿಮ್ಮ ರಹಸ್ಯಗಳನ್ನೂ ಬೇರೆಯವರ ಮುಂದೆ ಬಯಲು ಮಾಡುತ್ತಾರೆ. ಅಂಥವರ ಬಗ್ಗೆ ಎಚ್ಚರದಿಂದ ಇರಬೇಕು.

ವಕ್ರತುಂಡೋಕ್ತಿ



ಗಣಿತದಲ್ಲಿ ಪದೇ ಪದೆ ಫೇಲಾಗುವ ಒಂದು ಸಮಸ್ಯೆ ಅಂದ್ರೆ ನಿಖರವಾಗಿ ಎಷ್ಟು ಸಲ ಫೇಲಾಗಿದ್ದೇವೆ ಎಂಬುದು ಗೊತ್ತಾಗದಿರುವುದು.

ಜಿಎಸ್‌ಟಿ ಸಂಗ್ರಹ ಹೊಸ ದಾಖಲೆ

ಮುಂಬೈ: ಏಪ್ರಿಲ್ ತಿಂಗಳಲ್ಲಿ ಜಿಎಸ್‌ಟಿ ಸಂಗ್ರಹವು ದಾಖಲೆಯ ಮಟ್ಟಕ್ಕೆ ಏರಿಕೆ ಕಂಡಿದೆ. ಒಂದೇ ತಿಂಗಳಿನಲ್ಲಿ ಬರೋಬ್ಬರಿ 2.37 ಲಕ್ಷ ಕೋಟಿ ರೂಪಾಯಿ ಸಂಗ್ರಹವಾಗಿದೆ. ಇದು ಹಣಕಾಸು ವರ್ಷದ ಆರಂಭದಲ್ಲಿಯೇ ದೇಶದ ಆರ್ಥಿಕತೆಗೆ ದೊಡ್ಡ ಉತ್ತೇಜನ ನೀಡಿದೆ. ಮಾರ್ಚ್‌ನಲ್ಲಿ 1.96 ಲಕ್ಷ ಕೋಟಿ ರೂ. ಸಂಗ್ರಹವಾಗಿತ್ತು. ವಾರ್ಷಿಕ ಸಂಗ್ರಹದ ವೇಗವು ಶೇ. 12.6 ರಷ್ಟಿದ್ದು, 17 ತಿಂಗಳಲ್ಲಿ ಇದು ಗರಿಷ್ಠ ಮಟ್ಟವಾಗಿದೆ.

ಫನ್‌ತರಂಗ

- ರಘುಪತಿ ಶೃಂಗೇರಿ -



ಪಹಲ್ಗಾಮ್ ತನಿಖೆಯಲ್ಲಿ ಸಹಕರಿಸಲು ಯುಎಸ್ ವಿದೇಶ ಕಾರ್ಯದರ್ಶಿ ಒತ್ತಾಯ, ಪಾಕ್ ಜತೆ ಮಾತಿಲ್ಲ, ಶಿಕ್ಷೆಯೊಂದೇ ಗುರಿ: ಭಾರತ ಸ್ಪಷ್ಟನೆ

ಪಾಕ್‌ಗೆ ಅಮೆರಿಕ ತಾಕೀತು

ದೆಹಲಿ: ಪಹಲ್ಗಾಮ್ ಉಗ್ರರ ದಾಳಿ ಕುರಿತಂತೆ ಭಾರತ ನಡೆಸುತ್ತಿರುವ ತನಿಖೆಯಲ್ಲಿ ಸಹಕರಿಸುವಂತೆ ಪಾಕಿಸ್ತಾನಕ್ಕೆ ಅಮೆರಿಕ ಬುದ್ಧಿಮಾತು ಹೇಳಿದೆ. ಈ ಮೂಲಕ ಪಾಕ್‌ನಲ್ಲಿ ಆಶ್ರಯ ಪಡೆದಿರುವ ಭಯೋತ್ಪಾದಕರನ್ನು ತನ್ನ ವಶಕ್ಕೆ ಒಪ್ಪಿಸಬೇಕೆಂಬ ಭಾರತದ ಬೇಡಿಕೆಯನ್ನು ಬೆಂಬಲಿಸಿದೆ.

ಭಾರತ ಮತ್ತು ಪಾಕಿಸ್ತಾನದ ನಡುವೆ ಹೆಚ್ಚುತ್ತಿರುವ ಉದ್ವಿಗ್ನತೆ ಹಿನ್ನೆಲೆಯಲ್ಲಿ ಅಮೆರಿಕ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರುಬಿಯೊ ಬುಧವಾರ ರಾತ್ರಿ ಭಾರತದ ವಿದೇಶಾಂಗ ಸಚಿವ ಜೈಶಂಕರ್ ಮತ್ತು ಪಾಕಿಸ್ತಾನದ ಪ್ರಧಾನಿ ಶೆಹ ಬಾಜ್ ಷರೀಫ್ ಅವರೊಂದಿಗೆ ಪ್ರತ್ಯೇಕವಾಗಿ ಫೋನ್ ಸಂಭಾ ಷಣೆ ನಡೆಸಿ ಪರಿಸ್ಥಿತಿ ಉಲ್ಬಣಗೊಳ್ಳುವುದನ್ನು ತಪ್ಪಿಸುವಂತೆ ಮನವಿ ಮಾಡಿ ದರು. ದಕ್ಷಿಣ ಏಷ್ಯಾದಲ್ಲಿ ಎರಡೂ ದೇಶಗಳು ಶಾಂತಿ, ಸುವ್ಯ ವಸ್ಥೆ ಕಾಪಾಡಿಕೊಳ್ಳಬೇಕು ಎಂದು ರುಬಿಯೊ ಸಲಹೆ ನೀಡಿದರು.

ಜೈ ಶಂಕರ್ ಅವರೊಂದಿಗಿನ ಮಾತುಕತೆಯ ವೇಳೆ, ಭಯೋ ತ್ಪಾದನೆಯ ವಿರುದ್ಧ ಹೋರಾಟದಲ್ಲಿ ಭಾರತದೊಂದಿಗೆ ಸಹಕರಿ ಸಲು ಅಮೆರಿಕ ಬದ್ಧವಾಗಿದೆ ಎಂದು ರುಬಿಯೊ ಪುನರುಚ್ಚರಿಸಿ ದರು. ಈ ವೇಳೆ ಪಾಕಿಸ್ತಾನದ ಜತೆ ಮಾತುಕತೆ ನಡೆಸುವ ಪ್ರಸ್ತಾಪ ವನ್ನು ತಳ್ಳಿ ಹಾಕಿದ ಜೈಶಂಕರ್, ಪಹಲ್ಗಾಮ್ ಭಯೋತ್ಪಾದಕ ದಾಳಿಯ ದುಷ್ಕರ್ಮಿಗಳು, ಬೆಂಬಲಿಗರು ಮತ್ತು ಯೋಜಕರನ್ನು ಕಟಕಟೆಗೆ ತಂದು ಶಿಕ್ಷಿಸಲು ಭಾರತ ಪಣತೊಟ್ಟಿದೆ ಎಂದು ಸ್ಪಷ್ಟಪಡಿಸಿದರು. ಇದೇ ವೇಳೆ ಶೆಹಬಾಜ್ ಜತೆಗಿನ ಮಾತುಕತೆಯ ವೇಳೆ ಕಾಶ್ಮೀರದಲ್ಲಿ ನಡೆದ ದಾಳಿಯ ತನಿಖೆಯಲ್ಲಿ ಪಾಕ್ ಸಹಕರಿ ಸಬೇಕು ಎಂದು ರುಬಿಯೋ ಒತ್ತಾಯಿಸಿದರು. ದಾಳಿಯನ್ನು ಪಾಕಿಸ್ತಾನ ಖಂಡಿಸಬೇಕು. ಜೊತೆಗೆ ತನಿಖೆಗೆ ಸಹಕರಿಸಬೇಕು ಎಂದು ಸಲಹೆ ನೀಡಿದರು.

ಸಂಚು ಬಯಲು: ಪಹಲ್ಗಾಮ್ ದಾಳಿ ನಡೆಸಿದ ಭಯೋತ್ಪಾದಕರು ಘಟನೆಗೆ ಎರಡು ದಿನಗಳ ಮೊದಲೇ ಬೈಸರನ್ ಕಣಿವೆಗೆ ಬಂದು ತಮ್ಮ ಸಂಭಾವ್ಯ ಗುರಿಗಳ ಬಗ್ಗೆ ಪರಿಶೀಲನೆ ನಡೆಸಿರುವುದು ಬೆಳಕಿಗೆ ಬಂದಿದೆ. ಉಗ್ರನಿಗೆ ನೆರವಿತ್ತ ಸ್ಥಳೀಯನೊಬ್ಬನ ವಿಚಾರಣೆ ವೇಳೆ ಈ ವಿಷಯ ಬೆಳಕಿಗೆ ಬಂದಿದೆ. ಉಗ್ರರು ಬೈಸರನ್ ಕಣಿವೆ ಸೇರಿದಂತೆ ಕನಿಷ್ಠ 4 ಸ್ಥಳಗಳಲ್ಲಿ ಬೇಹುಗಾರಿಕೆ ನಡೆಸಿದ್ದರು. ಕಣಿವೆ, ಸ್ಥಳೀಯ ಮನರಂಜನಾ ಉದ್ಯಾನವನ ಮತ್ತು ಬೇತಾಬ್ ಕಣಿವೆ ಯಲ್ಲೂ ಪರಿಶೀಲನೆ ನಡೆಸಿ, ಸುರಕ್ಷತೆ ಕಡಿಮೆ ಇರುವ ಹಿನ್ನೆಲೆ ಯಲ್ಲಿ ಪಹಲ್ಗಾಮ್ ಉದ್ಯಾನವನ್ನು ಆಯ್ದುಕೊಂಡಿರು ವುದು ವಿಚಾರಣೆ ವೇಳೆ ಬೆಳಕಿಗೆ ಬಂದಿದೆ. ಉಗ್ರರಿಗೆ ನೆರವಿತ್ತ ಆರೋಪ ದಲ್ಲಿ 20 ಸ್ಥಳೀಯರನ್ನು ಬಂಧಿಸಲಾಗಿದೆ. ದಾಳಿ ಪೂರ್ವದಲ್ಲಿ ಮೂರು ಉಪಗ್ರಹ ಫೋನ್‌ಗಳ ಬಳಕೆಯ ಬಗ್ಗೆ ಪುರಾವೆಗಳು ಸಿಕ್ಕಿವೆ. → 4

- ದಾಳಿ ಕುರಿತು ನ್ಯಾಯಾಂಗ ತನಿಖೆ ಕೋರಿದ ಅರ್ಜಿದಾರರಿಗೆ ಸುಪ್ರೀಂ ತರಾಟೆ, ಐಎಸ್‌ಐ ಮುಖ್ಯಸ್ಥನಿಗೆ ಪಾಕ್ ಭದ್ರತಾ ಮಂಡಳಿ ಹೊಣೆ
- ಪಾಕ್ ವಿಮಾನಗಳ ಸಿಗ್ನಲ್ ತಡೆಗೆ ಜಾಮಿಂಗ್ ವ್ಯವಸ್ಥೆ, ಬಾಂಗ್ಲಾ ಗಡಿಯಲ್ಲೂ ಹೈ ಅಲರ್ಟ್, ಅಮೃತಸರದಲ್ಲಿ ಭಾರಿ ಶಸ್ತ್ರಾಸ್ತ್ರ ವಶ
- 2 ದಿನಗಳ ಮೊದಲೇ ಪಹಲ್ಗಾಮ್ ತಲುಪಿದ್ದ ಉಗ್ರರು, ನಾಲ್ಕು ಪ್ರದೇಶಗಳ ವೀಕ್ಷಣೆ ಬಳಿಕ ಕಡಿಮೆ ಸುರಕ್ಷತೆಯ ಉದ್ಯಾನವನ ಆಯ್ಕೆ
- ಗಡಿಯಲ್ಲಿ ಮುಂದುವರಿದ ಗುಂಡಿನ ದಾಳಿ, ಪಿಒಕೆ ವಶಕ್ಕೆ ಓವೈಸಿ ಸಲಹೆ, ಸೋನಾಮಾರ್ಗ್ -ಪಹಲ್ಗಾಮ್ ಉಗ್ರರ ಟೀಮ್ ಒಂದೇ ?

ಪಾಕ್ ವಿಮಾನಕ್ಕೆ ನೋ ಸಿಗ್ನಲ್

ಪಾಕಿಸ್ತಾನದ ಮಿಲಿಟರಿ ವಿಮಾನಗಳು ಬಳಸುವ ಗ್ಲೋಬಲ್ ನ್ಯಾವಿಗೇಷನ್ ಸ್ಯಾಟಲೈಟ್ ಸಿಸ್ಟಮ್ (ಜಿಎನ್‌ಎಸ್‌ಎಸ್) ಸಂಕೇತಗಳನ್ನು ಅಡ್ಡಿಪಡಿ ಸಲು ಭಾರತವು ತನ್ನ ಪಶ್ಚಿಮ ಗಡಿಯುದ್ದಕ್ಕೂ ಸುಧಾರಿತ ಜಾಮಿಂಗ್ ವ್ಯವಸ್ಥೆಗಳನ್ನು ನಿಯೋ ಜಿಸಿದೆ. ಏಪ್ರಿಲ್ 30 ರಿಂದ ಮೇ 23 ರವರೆಗೆ ಜಾರಿಗೆ ಬರುವಂತೆ ಪಾಕಿಸ್ತಾನ ನಿರ್ವಹಿಸುವ ಎಲ್ಲಾ ವಿಮಾನಗಳಿಗೆ ಭಾರತ ತನ್ನ ವಾಯು ಪ್ರದೇಶವನ್ನು ಸ್ಥಗಿತಗೊಳಿಸಿದ ನಂತರ ಈ ಕ್ರಮ ಕೈಗೊಳ್ಳಲಾಗಿದೆ. ಭಾರತೀಯ ಜಾಮಿಂಗ್ ವ್ಯವಸ್ಥೆಗಳು ಅಮೆರಿಕ, ಚೀನಾ ಮತ್ತು ರಷ್ಯಾದ ಉಪಗ್ರಹ ಆಧಾರಿತ ನ್ಯಾವಿಗೇಷನ್ ಪ್ಲಾಟ್‌ಫಾರ್ಮ್‌ಗಳಲ್ಲಿ ಹಸ್ತಕ್ಷೇಪ ಮಾಡುವ ಸಾಮರ್ಥ್ಯವನ್ನು ಹೊಂದಿವೆ.

ವಾಘಾ ಗೇಟ್ ಮುಚ್ಚಿದ ಪಾಕ್

ಭಾರತ ಬಿಟ್ಟು ಹೋಗಲು ಪಾಕಿಸ್ತಾನಿ ಪ್ರಜೆಗಳಿಗೆ ವಿಧಿಸಿದ್ದ ಗಡುವು ಏ.27ರ ಭಾನುವಾರ ಸಂಜೆಗೆ ಮುಕ್ತಾಯವಾಗಿದೆ. ಆನಂತರದಲ್ಲೂ ಭಾರತದಲ್ಲೇ ಉಳಿದಿದ್ದವರು ತಮ್ಮ ದೇಶಕ್ಕೆ ವಾಪಸಾಗಲು ಅಟ್ಟಾರಿ ಬಳಿ ಬರುತ್ತಿದ್ದಾರೆ. ಹೀಗಾಗಿ, ಪಾಕ್ ಪ್ರಜೆಗಳ ವಾಪಸಾತಿಗೆ ವಿಧಿಸಿದ್ದ ಗಡುವನ್ನು ಭಾರತ ಸರಕಾರ ಮತ್ತೆ ವಿಸ್ತರಿಸಿ ಗುರುವಾರ ಆದೇಶ ಹೊರಡಿಸಿದೆ. ಆದರೆ ತನ್ನದೇ ದೇಶದ ಪ್ರಜೆಗಳನ್ನು ಒಳಬಿಡಲು ನಿರಾಕರಿಸಿರುವ ಪಾಕ್ ವಾಘಾ ಗೇಟ್ ಬಂದ್ ಮಾಡಿದೆ.

ಪಂಜಾಬ್‌ನಲ್ಲೂ ಸಂಚು

ಅಮೃತಸರ: ಪಹಲ್ಗಾಮ್ ಘಟನೆ ಬೆನ್ನಲ್ಲೇ ಗಡಿ ಭದ್ರತಾ ಪಡೆ ಅಮೃತಸರ ಗಡಿಯಲ್ಲಿ ಉಗ್ರರು ಬಚ್ಚಿಟ್ಟಿದ್ದ ಶಸ್ತ್ರಾಸ್ತ್ರ ಮತ್ತು ಮದ್ದು ಗುಂಡುಗಳ ಸಂಗ್ರಹವನ್ನು ವಶಪಡಿಸಿಕೊಂಡಿದ್ದು, ಮತ್ತೊಂದು ದಾಳಿ ಸಂಚನ್ನು ವಿಫಲಗೊಳಿಸಿದೆ. ಗುಪ್ತಚರ ಪಡೆಯ ಖಚಿತ ಸುಳಿವಿನ ಮೇರೆಗೆ ಅಮೃತಸರದ ಭರೋಪಾಲ್ ಗ್ರಾಮದ ಬಳಿ ಪಂಜಾಬ್ ಪೊಲೀಸರು ಮತ್ತು ಬಿಎಸ್‌ಎಫ್ ಯೋಧರ ಜಂಟಿ ಕಾರ್ಯಾಚರಣೆಯಲ್ಲಿ ಎರಡು ಹ್ಯಾಂಡ್ ಗ್ರೆನೇಡ್‌ಗಳು, ಮೂರು ಪಿಸ್ತೂಲ್‌ಗಳು, ಆರು ಮ್ಯಾಗಜೀನ್‌ಗಳು ಮತ್ತು 50 ಸುತ್ತಿನ ಮದ್ದುಗುಂಡುಗಳನ್ನು ವಶಪಡಿಸಿಕೊಳ್ಳಲಾಗಿದೆ.!

ಮೀಸಲು ಮಿತಿ ಹೆಚ್ಚಿಸಿ ಮುಖ್ಯಮಂತ್ರಿ ಆಗ್ರಹ

ಜನಸಂಖ್ಯೆಗೆ ಅನುಗುಣವಾಗಿ ಮೀಸಲು ಪ್ರಮಾಣ ನೀಡಲು ಕೇಂದ್ರಕ್ಕೆ ಒತ್ತಾಯ

ಬೆಂಗಳೂರು: ಕಾಂಗ್ರೆಸ್‌ನ ಸಲಹೆಯಂತೆ ಜನ ಗಣತಿಯೊಂದಿಗೆ ಜಾತಿ ಗಣತಿ ನಡೆಸಲು ಮುಂದಾಗಿರುವ ಕೇಂದ್ರ, ಈ ಗಣತಿಯ ಅಂಕಿ- ಅಂಶವನ್ನು ಇಟ್ಟುಕೊಂಡು ಮೀಸಲು ಪ್ರಮಾಣ ವನ್ನು ಹೆಚ್ಚಿಸಬೇಕು. ಜನಸಂಖ್ಯೆಗೆ ಅನುಗುಣವಾಗಿ ಮೀಸಲು ಪರಿಮಿತಿಯನ್ನು ಸಡಿಲಗೊಳಿಸಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಆಗ್ರಹಿಸಿದ್ದಾರೆ.

ಕೇಂದ್ರ ಸರಕಾರ ಜಾತಿಗಣತಿ ನಡೆಸುವುದಾಗಿ ಘೋಷಿಸಿದ ಬೆನ್ನಲ್ಲೇ ಕಾಂಗ್ರೆಸ್ ನಾಯಕರು ಇದರ 'ಕ್ರೆಡಿಟ್' ಪಡೆಯಲು ಮುಂದಾಗಿದ್ದಾರೆ. ಎರಡು ವರ್ಷದ ಹಿಂದೆ ರಾಹುಲ್ ಗಾಂಧಿ ಹಾಗೂ ಮಲ್ಲಿಕಾರ್ಜುನ ಖರ್ಗೆ ಅವರು ಆಗ್ರಹಿಸಿದ್ದಕ್ಕೆ ಈಗ ಜಾತಿ ಗಣತಿಗೆ ಕೇಂದ್ರ ಒಪ್ಪಿದೆ ಎನ್ನುವ ವ್ಯಾಖ್ಯಾನವನ್ನು ನೀಡಲು ಕಾಂಗ್ರೆಸ್ ನಾಯಕರು ಮುಂದಾಗಿದ್ದಾರೆ. ಈ ನಡುವೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಒಂದು ಹೆಜ್ಜೆ ಮುಂದೆ ಹೋಗಿ, ಮೀಸಲಿಗೆ ಇರುವ ಶೇ.50ರ ಮಿತಿ ಸಡಿಲಿಸಿ ಜನಸಂಖ್ಯೆಗೆ ಅನುಗುಣವಾಗಿ ಹೆಚ್ಚಿಸ ಬೇಕು ಎಂದು ಕೇಂದ್ರದ ಮೇಲೆ ಒತ್ತಡ ಹೇರಿದ್ದಾರೆ.

ಸಿಎಂ ಅಧಿಕೃತ ನಿವಾಸ ಕಾವೇರಿ ಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜಾತಿ ಗಣತಿ ಮಾಡುವ ಕೇಂದ್ರದ ನಿರ್ಧಾರವನ್ನು ಸ್ವಾಗತಿಸುತ್ತೇವೆ. ದೇಶದ ಜನತೆಗೆ ಸಾಮಾಜಿಕ ನ್ಯಾಯ ಒದಗಿಸುವ ನಿಟ್ಟಿನಲ್ಲಿ ಜಾತಿ ಗಣತಿ ಯೊಂದಿಗೆ ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆ ನಡೆಸ ಬೇಕು. ಮೀಸಲಿನಲ್ಲಿ ಶೇ.50ರ ಗರಿಷ್ಠ ಮಿತಿ ಸಡಿಲಗೊಳಿಸಿ ಜನಸಂಖ್ಯೆ ಅನುಗುಣವಾಗಿ ಮೀಸಲು ಕಲ್ಪಿಸಬೇಕು ಎಂದು ಒತ್ತಾಯಿಸಿದರು.

ಚುನಾವಣೆಗಾಗಿ ಗಣತಿ

ಕೇಂದ್ರ ಸರಕಾರ ಮಾಡಲು ಹೊರಟಿಸಿರುವ ಜಾತಿ ಗಣತಿಯ ಮಾದರಿಯಲ್ಲಿ ನಮ್ಮ ಸರಕಾರ 2015ರಲ್ಲಿಯೇ ಸಾಮಾಜಿಕ, ಆರ್ಥಿಕ ಶೈಕ್ಷಣಿಕ ಸಮೀಕ್ಷೆಯನ್ನು ನಡೆಸಿದೆ. ಶಾಶ್ವತ ಹಿಂದುಳಿದ ವರ್ಗಗಳ ಆಯೋಗದ ಮೂಲಕ 192 ಕೋಟಿ ರು. ವೆಚ್ಚ ಮಾಡಿ 1.33 ಲಕ್ಷ ಸಿಬ್ಬಂದಿಗಳನ್ನು ನಿಯೋಜನೆ ಮಾಡಿ ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆ ನಡೆಸಲಾಗಿದೆ. ಇದರಿಂದ ಪ್ರೇರಿತವಾಗಿ ಮತ್ತು ಬಿಹಾರ ಚುನಾವಣೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಕೇಂದ್ರ ಸರಕಾರ ಈಗ ಸಮೀಕ್ಷೆಗೆ ಮುಂದಾಗಿದೆ ಎಂದರು. ನಮ್ಮ ಸರಕಾರದ ಸಮೀಕ್ಷೆ ಅವೈಜ್ಞಾನಿಕ ಎಂದು ಕೇಂದ್ರ ಸಚಿವ ಅಶ್ವಿನ್ ವೈಷ್ಣವ್ ಹಾಗೂ ಧರ್ಮೇಂದ್ರ ಪ್ರಧಾನ್ ಅವರು ಹೇಳಿದ್ದಾರೆ. ನಮ್ಮದ್ದನ್ನು ಟೀಕಿಸುವ ಮೊದಲು ಅವರದ್ದೇ ಪಕ್ಷದ ಬೆಂಬಲಿಗರು ಬಿಹಾರದಲ್ಲಿ ನಡೆಸಿರುವ ಸಮೀಕ್ಷೆ ಬಗ್ಗೆ ಅವರು ಏನು ಹೇಳುತ್ತಾರೆ? ರಾಜ್ಯ ಸರಕಾರಗಳಿಗೆ ಜಾತಿ ಅಥವಾ ಜನಗಣತಿ ಮಾಡಲು ಹಕ್ಕಿಲ್ಲ ಎಂದು ಸಂವಿಧಾನದಲ್ಲಿ ಹೇಳಿದೆಯೇ? ಎಂದು ಪ್ರಶ್ನಿಸಿದರು.

ರಾಜ್ಯ ಸರಕಾರ ಸಾಮಾಜಿಕ, ಶೈಕ್ಷಣಿಕ ಆರ್ಥಿಕ ಸಮೀಕ್ಷೆಗೆ ಸಂಬಂಧಿಸಿದಂತೆ ಮುಂದಿನ ಸಚಿವ ಸಂಪುಟದಲ್ಲಿ ಸಚಿವರಿಂದ ಅಭಿಪ್ರಾಯ ಪಡೆದು ತೀರ್ಮಾನಿಸಿ, ಕೇಂದ್ರ ಸರಕಾರಕ್ಕೆ ರವಾನಿಸಲಾಗುವುದು. ಸಮಾನತೆ ತರಲು ಎಲ್ಲರಿಗೂ ರಾಜಕೀಯ, ಶೈಕ್ಷಣಿಕ, ಆರ್ಥಿಕವಾಗಿ ಸಾಮಾಜಿಕವಾಗಿ ಪಾಲಿರಬೇಕು ಎನ್ನುವ ಉದ್ದೇಶದಿಂದ ನಡೆಸಿರುವ ಈ ಸಮೀಕ್ಷೆಯಿಂದ ಹಿಂದುಳಿದವರಿಗೆ ಅನುಕೂಲವಾಗಬೇಕು

- ಸಿದ್ದರಾಮಯ್ಯ, ಮುಖ್ಯಮಂತ್ರಿ

ಎಸ್‌ಎಸ್‌ಎಲ್‌ಸಿ ಫಲಿತಾಂಶ ಇಂದು

ಬೆಂಗಳೂರು: 2025ರ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷಾ ಫಲಿತಾಂಶ ಶುಕ್ರವಾರ ಬೆ.11.30ಕ್ಕೆ ಪ್ರಕಟವಾಗಲಿದೆ.

ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಳಿಯಲ್ಲಿ ನಡೆಯಲಿರುವ ಸುದ್ದಿಗೋಷ್ಠಿಯಲ್ಲಿ ಶಿಕ್ಷಣ ಸಚಿವ ಮಧು ಬಂಗಾರಪ್ಪ ಫಲಿತಾಂಶವನ್ನು ಪ್ರಕಟಿಸಲಿದ್ದಾರೆ. ಮಾರ್ಚ್-ಏಪ್ರಿಲ್‌ನಲ್ಲಿ ನಡೆದ ಪರೀಕ್ಷೆಯಲ್ಲಿ ಒಟ್ಟು 15,881 ಶಾಲೆಗಳ 8,96,447 ವಿದ್ಯಾರ್ಥಿಗಳು 2,818 ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷೆ ಬರೆದಿದ್ದರು. ಮಧ್ಯಾಹ್ನ 12.30ರ ನಂತರ ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಳಿಯ ಅಧಿಕೃತ ವೆಬ್‌ಸೈಟ್ http://karresults.nic.in ನಲ್ಲಿ ಫಲಿತಾಂಶ ವೀಕ್ಷಿಸಬಹುದಾಗಿದೆ.

ಫಲಿತಾಂಶ ಲಿಂಕ್ ಮೇಲೆ ಕ್ಲಿಕ್ ಮಾಡಿ. ನಂತರ ಎಸ್ ಎಸ್‌ಎಲ್‌ಸಿ ಪರೀಕ್ಷೆಯ ಫಲಿತಾಂಶ 2025 ಲಾಗಿನ್ ಪೇಜ್‌ನಲ್ಲಿ ನೋಂದಣಿ ಸಂಖ್ಯೆ ಮತ್ತು ಜನ್ಮ ದಿನಾಂಕ ನಮೂದಿಸಿದರೆ ಫಲಿತಾಂಶ ಲಭ್ಯ. ಎಸ್‌ಎಂಎಸ್ ಮೂಲಕ ಕೆಎಆರ್ 10 ಅಂತ ಬರೆದು ಸ್ಪೇಸ್ ಕೊಟ್ಟು ನೋಂದಣಿ ಸಂಖ್ಯೆ ಟೈಪ್ ಮಾಡಿ 56263ಗೆ ಸಂದೇಶ ಕಳುಹಿಸಿದರೆ. ಫಲಿತಾಂಶವು ಅದೇ ಮೊಬೈಲ್ ಸಂಖ್ಯೆಗೆ ಬರುತ್ತದೆ.

ಮಂಗಳೂರಿನಲ್ಲಿ ಮತ್ತೆ ಹರಿದ ನೆತ್ತರು

ಮಂಗಳೂರು: ಮೂರು ವರ್ಷಗಳ ಹಿಂದೆ ಬೆಳ್ಳಾರೆಯ ಪ್ರವೀಣ್ ನೆಟ್ಟಾರು ಕೊಲೆ ಪ್ರಕರಣದ ಬೆನ್ನಲ್ಲೇ ಸುರತ್ಕಲ್‌ನಲ್ಲಿ ನಡೆದ ಉದ್ಯಮಿ ಫಾಜಿಲ್ ಕೊಲೆ ಪ್ರಕರಣದ ಆರೋಪಿ ಸುಹಾಸ್ ಶೆಟ್ಟಿಯನ್ನು ಬಜಪೆ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಗುರುವಾರ ತಲವಾರಿನಿಂದ ಕಡಿದು ಬರ್ಬರವಾಗಿ ಕೊಲೆ ಮಾಡಲಾಗಿದೆ. ಗುಂಪೊಂದು ಸುಹಾಸ್ ಮೇಲೆ ಹಲ್ಲೆ ನಡೆಸಿ ಪರಾರಿಯಾಗಿದೆ. ತೀವ್ರ ಗಾಯಗೊಂಡ ಸುಹಾಸ್‌ನನ್ನು ತಕ್ಷಣ ಖಾಸಗಿ ಆಸ್ಪತ್ರೆಗೆ ದಾಖಲಿಸಿ ದರೂ ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದಾನೆ. ಆಸ್ಪತ್ರೆಗೆ ಶಾಸಕ ಭರತ್ ಶೆಟ್ಟಿ, ಮಾಜಿ ಸಂಸದ ನವೀನ್ ಕುಮಾರ್ ಕಟೀಲ್ ಭೇಟಿ ನೀಡಿದ್ದಾರೆ. ಘಟನೆ ಹಿನ್ನೆಲೆಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬಿಗಿ ಪೊಲೀಸ್ ಬಂದೋಬಸ್ತ್ ಮಾಡಲಾಗಿದೆ.

ಕೇರಳ ಯುವಕನ ಸಾವು: ಅಮಾನತು

ಮಂಗಳೂರು: ಕೇರಳ ಮೂಲದ ಯುವಕನ ಕೊಲೆ ಪ್ರಕರಣಕ್ಕೆ ಸಂಬಂಧಿಸಿ ಮಂಗಳೂರು ಗ್ರಾಮಾಂತರ ಠಾಣೆ ಇನ್‌ಸ್ಪೆಕ್ಟರ್ ಶಿವಕುಮಾರ್ ಕೆ.ಆರ್, ಹೆಡ್ ಕಾನ್ ಸ್ಟೆಬಲ್ ಚಂದ್ರ ಪಿ ಮತ್ತು ಕಾನ್‌ಸ್ಟೆಬಲ್ ಯಲ್ಲಾಲಿಂಗ ಅವರನ್ನು ಅಮಾನತುಗೊಳಿಸಲಾಗಿದೆ. ಆರೋಪಿ ಗಳನ್ನು ಸ್ವತಂತ್ರ ಸಾಕ್ಷಿಗಳಾಗಿ ಬಳಸಿಕೊಂಡ ಮತ್ತು ಕ್ರಿಕೆಟ್ ಪಂದ್ಯದ ಸಮಯದಲ್ಲಿ ನಡೆದ ಗುಂಪು ಹಲ್ಲೆಯ ಬಗ್ಗೆ ಮೊದಲೇ ಮಾಹಿತಿ ಇದ್ದರೂ ಉನ್ನತ ಅಧಿಕಾರಿಗಳಿಗೆ ಮಾಹಿತಿ ನೀಡದಿರುವ ಹಿನ್ನೆಲೆಯಲ್ಲಿ ಇವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಅಮಾನತು ಗೊಳಿಸಿ ಇಲಾಖಾ ತನಿಖೆಗೆ ಆದೇಶಿಸಲಾಗಿದೆ ಎಂದು ಆಯುಕ್ತ ಅನುಪಮ್ ಅಗರವಾಲ್ ತಿಳಿಸಿದ್ದಾರೆ. ಘಟನೆಗೆ ಸಂಬಂಧಿಸಿದಂತೆ ಪ್ರಚೋದನಕಾರಿ ಸುಳ್ಳು ಪೋಸ್ಟ್ ಸಂಬಂಧ 3 ಪ್ರಕರಣ ದಾಖಲಿಸಲಾಗಿದೆ.

ಜಾತಿ ಸಮೀಕ್ಷೆ ಜಾರಿಗೊಳಿಸಿದರೂ ಕೇಂದ್ರ ಗಣತಿ ಬಳಿಕ ಇದು ಊರ್ಜಿತವೇ ಎನ್ನುವ ಪ್ರಶ್ನೆ

ಕೇಂದ್ರ ಜಾತಿಗಣತಿ ಮಧ್ಯೆ ರಾಜ್ಯದ ಗಣತಿ ಅತಂತ್ರ

ಬೆಂಗಳೂರು: ರಾಜ್ಯದಲ್ಲಿ ಭಾರಿ ವಿವಾದಕ್ಕೆ ಕಾರಣ ವಾಗಿ, ಕಾಂಗ್ರೆಸ್‌ನಲ್ಲಿಯೇ 'ಅಂತಕಲಹ'ಕ್ಕೆ ಕಾರಣವಾ ಗಿದ್ದ ಜಾತಿ ಗಣತಿಯ ಭವಿಷ್ಯದ ಬಗ್ಗೆ ಹಲವು ಗೊಂದಲ ಗಳಿರುವ ಸಮಯದಲ್ಲಿಯೇ, ಕೇಂದ್ರ ಸರಕಾರದಿಂದ ಜಾತಿ ಗಣತಿ ನಡೆಸುವ ಘೋಷಣೆಯಿಂದ ರಾಜ್ಯ ಸರಕಾರ ನಡೆಸಿರುವ ಸಮೀಕ್ಷೆಯ ಕಥೆಯೇನು ಎನ್ನುವ ಕುತೂಹಲ ಶುರುವಾಗಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಸರಕಾರ ಹಿಂದುಳಿದ ವರ್ಗಗಳ ಶಾಶ್ವತ ಆಯೋಗದಿಂದ ನಡೆಸಿದ ಸಾಮಾಜಿಕ, ಶೈಕ್ಷಣಿಕ ಹಾಗೂ ಆರ್ಥಿಕ ಸಮೀಕ್ಷಾ ವರದಿ ಯಲ್ಲಿ 54 ಅಂಶಗಳೊಂದಿಗೆ ಜಾತಿಯ ಮಾಹಿತಿಯನ್ನು ಕಲೆ ಹಾಕಲಾಗಿತ್ತು. ಈ ವರದಿ ಸುಮಾರು ಎಂಟು ವರ್ಷಗಳ ಬಳಿಕ ಕಳೆದ ಏಪ್ರಿಲ್ 17ರಂದು ನಡೆದ ಸಚಿವ ಸಂಪುಟ ಸಭೆಯಲ್ಲಿ ಮಂಡನೆಯಾಗಿ, ಸಚಿವರ ಕೈ ಸೇರಿದೆ. ಲಿಂಗಾಯತ-ವೀರಶೈವ, ಒಕ್ಕಲಿಗ ಹಾಗೂ ಇತರ ಹಲವು ಜಾತಿಗಳು ವರದಿ ಸಂಪೂರ್ಣ ಅವೈ ಜ್ಞಾನಿಕವಾಗಿದ್ದು, ರಾಜ್ಯ ಸರಕಾರ ಅದನ್ನು ತಿರಸ್ಕರಿಸ ಬೇಕು ಎಂಬ ಒತ್ತಡ ಹಾಕುತ್ತಿವೆ. ವಿರೋಧ ಪಕ್ಷಕ್ಕಿಂತಲೂ ಆಡಳಿತ ಪಕ್ಷದಲ್ಲಿಯೇ ಈ ವರದಿಗೆ ಭಾರೀ ವಿರೋಧ ವ್ಯಕ್ತವಾಗಿದೆ.

ಈ ನಡುವೆ ಕೇಂದ್ರ ಸರಕಾರ ಜಾತಿಗಣತಿಯನ್ನು ನಡೆಸಲು ತೀರ್ಮಾನಿಸಿರುವುದರಿಂದ, ರಾಜ್ಯ ಸರಕಾರ ನಡೆಸಿರುವ ಸಮೀಕ್ಷೆಯ ಭವಿಷ್ಯದ ಬಗ್ಗೆ ಹಲವು ಗೊಂದಲಗಳಿವೆ. ಈಗಾಗಲೇ ರಾಜ್ಯ ಸರಕಾರಗಳಿಗೆ ಈ ರೀತಿಯ ಗಣತಿ ಮಾಡಲು ಅಧಿಕಾರವಿಲ್ಲ, ಕೇಂದ್ರ ಸರಕಾರಕ್ಕೆ ಮಾತ್ರ ಗಣತಿ ಅಥವಾ ಜಾತಿ ಗಣತಿ ಮಾಡಲು ಅಧಿಕಾರವಿದೆ. ಆದ್ದರಿಂದ ಸಾಮಾಜಿಕ-ಶೈಕ್ಷಣಿಕ-ಆರ್ಥಿಕ ಸಮೀಕ್ಷೆಯ ಹೆಸರಲ್ಲಿ ಮಾಡಿರುವ ಈ ಗಣತಿಯನ್ನು 'ಊರ್ಜಿತ'ವಾಗಲಿದೆಯೇ ಎನ್ನುವುದನ್ನು ಪರಿಶೀಲಿಸಬೇಕಿದೆ.



ಕಾನೂನು ತಜ್ಞರ ಮೊರೆ

ಕೇಂದ್ರ ಸರಕಾರ ಜಾತಿಗಣತಿಯ ಅಸ್ತ್ರವನ್ನು ಪ್ರಯೋಗಿಸುತ್ತಿದ್ದಂತೆ ರಾಜ್ಯ ಸರಕಾರ ಈ ಗೊಂದಲದ ಸನ್ನಿವೇಶದಲ್ಲಿ ತೆಗೆದುಕೊಳ್ಳಬೇಕಾದ ನಿರ್ಧಾರದ ಬಗ್ಗೆ ಕಾನೂನು ತಜ್ಞರ ಸಲಹೆ ಪಡೆಯುವ ಸಾಧ್ಯತೆ ಇದೆ. ಈಗಾಗಲೇ ಹಿರಿಯ ಅಧಿಕಾರಿಗಳಿಗೆ ಈ ಬಗ್ಗೆ ಸಮಗ್ರ ವರದಿಯನ್ನು ಮಂಡಿಸುವಂತೆ ಸೂಚಿಸಲಾಗಿದೆ. ಕೇಂದ್ರ ಸರಕಾರ ಗಣತಿ ನಡೆಸಿ ವರದಿ ವರದಿ ಸ್ವೀಕರಿಸಿ ಅದು ಅನುಷ್ಠಾನಕ್ಕೆ ಬರಲು ಕನಿಷ್ಠ ಎರಡು ವರ್ಷವಾದರೂ ಬೇಕಿದೆ. ಆವರೆಗೂ ರಾಜ್ಯ ಸರಕಾರ ತೆಗೆದುಕೊಳ್ಳುವ ಯಾವುದೇ ನಿರ್ಧಾರಗಳು ಊರ್ಜಿತಗೊಳ್ಳಲಿವೆಯೇ ? ನ್ಯಾಯಾಲಯಗಳಲ್ಲಿ ತಕರಾರು ಕಾರ್ಯ ಸಾಧುವಾಗಬಲ್ಲವೇ ಎನ್ನುವ ಪ್ರಶ್ನೆಗೆ ಉತ್ತರ ಇನ್ನಷ್ಟೇ ಸಿಗಬೇಕಿದೆ.

ಕೇಂದ್ರ ಸರಕಾರ ಜಾತಿಗಣತಿಯನ್ನು ನಡೆಸಿದರೆ, ರಾಜ್ಯ ಸರಕಾರದ ಜಾತಿಗಣತಿಗೆ ಬೆಲೆ ಇಲ್ಲ. ಜಾತಿಗಣತಿ ಮಾಡುವ ಅಧಿಕಾರವಿರುವುದು ಕೇಂದ್ರ ಸರಕಾರಕ್ಕೆ. ಕೇಂದ್ರದ ವರದಿ ಬಳಿಕ ರಾಜ್ಯ ಸರಕಾರದ ವರದಿ ತನ್ನಿಂದ ತಾನಾಗಿಯೇ ನಿಷ್ಕ್ರಿಯವಾಗಲಿದೆ.

- ವಿ.ಸೋಮಣ್ಣ, ಕೇಂದ್ರ ಸಚಿವ

SADGURU AYURVEDA

ಪರಿಪೂರ್ಣ ಸ್ನಾನಕ್ಕೆ ಬಳಸಿ

ಪರಿಶುದ್ಧ ಕಡಲೆಹಿಟ್ಟಿನೊಂದಿಗೆ ತಯಾರಿಸಲಾದ

ನಂ.1 ಗ್ರೇಡ್‌ನ

ಸದ್ಗುರು ಆಯುರ್ವೇದ

ಗ್ರಾಮ್ ಫ್ಲೋರ್ ಸೋಪ್

ಈಗ ಚಿಕ್ಕ ಪ್ಯಾಕ್ನಲ್ಲಿ ಲಭ್ಯ ಬೆಲೆ ರೂ. 10/- (25ಗ್ರಾಂ)

ಎಲ್ಲಾ ಕಿರಾಣಿ ಅಂಗಡಿ,ಮೆಡಿಕಲ್ ಸ್ಟೋರ್ಸ್,ಸೂಪರ್ ಮಾರ್ಕೆಟ್ ಹಾಗು ಫ್ಯಾನ್ಸಿ ಸ್ಟೋರ್‌ಗಳಲ್ಲಿ ದೊರೆಯುತ್ತದೆ.

For Online shopping-www.sadguruayurveda.com For Queries.:8970703070

ಸಮಾಚಾರ ಸಣ್ಣದಲ್ಲ

ಓಶೋ ಧ್ಯಾನ ಶಿಬಿರ ಮೇ 4ರಂದು

ದಾವಣಗೆರೆ: ನಗರದ ಎವಿಕೆ ಕಾಲೇಜು ರಸ್ತೆಯ ಆಲೂರು ಕನ್ವೆನ್ಷನ್ ಹಾಲ್ ನಲ್ಲಿ ಮೇ 4ರಂದು ಓಶೋ ಸನ್ನಿಧಿ ಇನ್‌ಸ್ಟಿಟ್ ಫೌಂಡೇಶನ್ ವತಿಯಿಂದ ಬೆಳಗ್ಗೆ 6ರಿಂದ 7.30ರ ವರೆಗೆ ಓಶೋ ಧ್ಯಾನ ಶಿಬಿರ ಹಮ್ಮಿಕೊಳ್ಳಲಾಗಿದೆ. ನಮ್ಮ ಆಂತರಿಕ ವೀಣೆಯಾದ ದೇಹ, ಮನಸ್ಸು, ಹೃದಯ ಮತ್ತು ನಾಭಿಗಳನ್ನು ಶ್ರುತಿಗೊಳಿಸಿ, ಆಂತರಿಕ ಸಮತೋಲನ ಮತ್ತು ಸಾಮರಸ್ಯಗಳನ್ನು ಉಂಟುಮಾಡಿ, ತನ್ಮೂಲಕವಾಗಿ ಧ್ಯಾನದ ಅನುಭವಕ್ಕೆ ಹಾದಿಯನ್ನು ಸುಗಮಗೊಳಿಸುವ ಓಶೋರವರ ಧ್ಯಾನ ವಿಧಾನಗಳನ್ನು ಪರಿಚಯಿಸುವ ಮೂಲಕ ಧ್ಯಾನ ಜೀವನಕ್ಕೆ ಸಹಾಯ ಮಾಡಲಾಗುವುದು. ಶಿಬಿರದಲ್ಲಿ ಸಂಗೀತಮಯ ಸರ್ವಸಾರ ಧ್ಯಾನ, ಓಶೋ ಕುಂಡಲಿನಿ ಧ್ಯಾನ, ಓಶೋ ನಾದಬ್ರಹ್ಮ ಧ್ಯಾನ ಮತ್ತು ಓಶೋ ಉಸಿರಾಟದ ಮೂಲಕ ಚಕ್ರ ಧ್ಯಾನ ಇನ್ನು ಮುಂತಾದ ಧ್ಯಾನ ಕ್ರಿಯೆಗಳನ್ನು ಪರಿಚಯಿಸಲಾಗುವುದು ಧ್ಯಾನಾಸಕ್ತರು ಹಾಗು ನಾಗರೀಕರೆಲ್ಲರು ಭಾಗವಹಿಸಬಹುದು. ಹೆಚ್ಚಿನ ಮಾಹಿತಿ ಮತ್ತು ನೋಂದಣಿಗಾಗಿ ಅರ್ಚನಾ : 97385 72318, ಪುಷ್ಪ : 90367 19573 ಸಂಪರ್ಕಿಸಲು ಕೋರಲಾಗಿದೆ.

ಮಾನವೀಯತೆ ಮೆರೆದ ಶಾಸಕರ ಪುತ್ರ

ದಾವಣಗೆರೆ : ತಾಲೂಕಿನ ಮೆಳ್ಳೇಕಟ್ಟೆ ಗ್ರಾಮದ ಬಳಿ ರಸ್ತೆ ಅಪಘಾತದಿಂದ ಅಸ್ವಸ್ಥಗೊಂಡಿದ್ದ, ಗಾಯಾಳುಗಳಿಗೆ ಸೂಕ್ತ ಸಮಯದಲ್ಲಿ ಆಸ್ಪತ್ರೆಗೆ ಸೇರಿಸಲು ಜಗಳೂರು ಶಾಸಕ ಬಿ ದೇವೇಂದ್ರಪ್ಪ ಪುತ್ರ ಎಂ.ಡಿ ಕೀರ್ತಿ ಕುಮಾರ್ ನೆರವಾಗುವ ಮೂಲಕ ಮಾನವೀಯತೆ ಮೆರೆದರು. ದಾವಣಗೆರೆಯಿಂದ ಜಗಳೂರು ಪಟ್ಟಣಕ್ಕೆ ಕಾರಿನಲ್ಲಿ ಎಂ.ಡಿ ಕೀರ್ತಿ ಕುಮಾರ್ ತೆರಳುತ್ತಿದ್ದ ವೇಳೆ ಮೆಳ್ಳೇಕಟ್ಟೆ ಗ್ರಾಮದ ಬಳಿ ರಸ್ತೆ ಅಪಘಾತ ಸಂಭವಿಸಿದೆ. ಈ ವೇಳೆ ಅದೇ ಮಾರ್ಗದಲ್ಲಿ ಬರುತ್ತಿದ್ದ ಕೀರ್ತಿ ಕುಮಾರ್ ತಕ್ಷಣ ವಾಹನ ನಿಲ್ಲಿಸಿ ಅಪಘಾತದಿಂದ ಗಾಯಗೊಂಡವರನ್ನು ತಮ್ಮ ಕಾರಿನಲ್ಲಿ ದಾವಣಗೆರೆ ಜಿಲ್ಲಾ ಆಸ್ಪತ್ರೆಗೆ ದಾಖಲು ಮಾಡಲು ಕರೆದುಕೊಂಡು ಹೋಗಿದ್ದಾರೆ, ಬಳಿಕ ಅಂಬ್ಯುಲೆನ್ಸ್ ಬಂದ ಹಿನ್ನೆಲೆ ಗಾಯಾಳುಗಳನ್ನು ಅಂಬ್ಯುಲೆನ್ಸ್ ಮೂಲಕ ಜಿಲ್ಲಾ ಚಿಗಟೇರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ದಾಖಲು ಮಾಡಿ ಚಿಕಿತ್ಸೆ ನೀಡಲಾಗಿದೆ. ಇದಕ್ಕೂ ಮೊದಲು ಆಸ್ಪತ್ರೆ ಅಧೀಕ್ಷಕರಿಗೆ ಕೀರ್ತಿ ಕುಮಾರ್ ಕರೆ ಮಾಡಿ ಮಾಹಿತಿ ನೀಡಿ ತಕ್ಷಣ ಚಿಕಿತ್ಸೆ ನೀಡುವಂತೆ ಮನವಿ ಮಾಡಿದರು.

ಜಾತಿಗಣತಿ ಸ್ವಾಗತಾರ್ಹ: ರೇಣುಕಾಚಾರ್ಯ

ದಾವಣಗೆರೆ: ಕೇಂದ್ರ ಸರಕಾರ ದೇಶದ ಜಾತಿ ಮತ್ತು ಜನಗಣತಿ ಆಗಬೇಕು ಎಂದು ಘೋಷಣೆ ಮಾಡಿರುವುದು ಸ್ವಾಗತಾರ್ಹ ಎಂದು ಮಾಜಿ ಸಚಿವ ಎಂ.ಪಿ. ರೇಣುಕಾಚಾರ್ಯ ತಿಳಿಸಿದರು. ನಗರದ ಪ್ರವಾಸಿ ಮಂದಿರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ದೇಶದಲ್ಲಿ ಸ್ವಾತಂತ್ರ್ಯ ಪೂರ್ವದಲ್ಲಿ ಜನಗಣತಿ ನಡೆದ ನಂತರ ಈವರೆಗೂ ಆಗಿರಲಿಲ್ಲ. ಪ್ರಧಾನಮಂತ್ರಿ ನರೇಂದ್ರ ಮೋದಿ ಯವ ರು ಮಹತ್ವದ ತೀರ್ಮಾನ ತೆಗೆದುಕೊಂಡು, ಯಾವುದೇ ವರ್ಗಕ್ಕೆ ಅನ್ಯಾಯವಾಗದ ರೀತಿ ಜಾತಿಗಣತಿಗೆ ಮುಂದಾಗಿದ್ದಾರೆ ಎಂದರು. ಜಾತಿ, ಜನಗಣತಿ ಮಾಡುವ ಅಧಿಕಾರ ಕೇವಲ ರಾಜ್ಯಕ್ಕೆ ಮಾತ್ರ ಇರೋದು ರಾಜ್ಯ ಸರಕಾರಕ್ಕೆ ಇಲ್ಲ. ಸಿದ್ದರಾಮಯ್ಯ ಸರಕಾರ ಓಟ್ ಬ್ಯಾಂಕ್ ಗಾಗಿ ಸ್ವಾರ್ಥಕ್ಕಾಗಿ ಜಾತಿ ಜನಗಣತಿ ಮಾಡಿಸಿದ್ದಾರೆ ಎಂದು ದೂರಿದರು. ಕಾಂತರಾಜ್ ಅಯೋಗದ ಮೂಲ ಪ್ರತಿಯೇ ಕಾಣೆಯಾಗಿದೆ, ಮೊದಲು ಅದನ್ನು ಬಿಡುಗಡೆ ಮಾಡಬೇಕು ಎಂದು ಒತ್ತಾಯಿಸಿದರು. ಸಿದ್ದರಾಮಯ್ಯ ಮನೆಯಲ್ಲೇ ಜಯಪ್ರಕಾಶ್ ಹೆಗಡೆಯವರನ್ನು ಕೂರಿಸಿ ಯಾವುದೇ ಮನೆಗೆ ಹೋಗದೆ ಜಾತಿಗಣತಿ ವರದಿ ಸಿದ್ದಪಡಿಸಿದ್ದಾರೆ. ಬಿಜೆಪಿ ಜಾತಿ,ಜನಗಣತಿ ವಿರೋಧಿಯಲ್ಲ ಆದರೆ ಅದು ವೈಜ್ಞಾನಿಕ ವಾಗಿರಬೇಕು ಎನ್ನುತ್ತೇವೆ ಎಂದರು. ಪಹಲ್‌ಗಾಮ್ ವಿಚಾರವಾಗಿ ಸಚಿವ ಸಂತೋಷ್ ಲಾಡ್ ಪದಬಳಕೆ ಸರಿಯಾಗಿಲ್ಲ. ಶಬ್ದಗಳನ್ನು ಬಳಕೆ ಮಾಡುವಾಗ ಎಚ್ಚರಿಕೆಯಿಂದ ಇರಲಿ ಎಂದು ಎಚ್ಚರಿಸಿದರು.

ಅಭಿನಂದನಾ ಸಮಾರಂಭ ನಾಳೆ

ದಾವಣಗೆರೆ: ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ಜಿಲ್ಲಾ ಘಟಕದಿಂದ, ಮೇ 3ರ ಬೆಳಗ್ಗೆ 11.30ಕ್ಕೆ ನಗರದ ಬಿಐಇಟಿ ಆವರಣದ ಎಸ್.ಎಸ್. ಮಲ್ಲಿಕಾರ್ಜುನ್ ಸಾಂಸ್ಕೃತಿಕ ಸಭಾಭವನದಲ್ಲಿ ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷರು ಹಾಗೂ ಹಿರಿಯ ಪದಾಧಿಕಾರಿ ಗಣ್ಯರಿಗೆ ಅಭಿನಂದನಾ ಸಮಾರಂಭ ಏರ್ಪಡಿಸಲಾಗಿದೆ. ಸುದ್ದಿಗೋಷ್ಠಿಯಲ್ಲಿ ಮಹಾಸಭಾದ ಜಿಲ್ಲಾಧ್ಯಕ್ಷ ಐಗೂರು ಸಿ. ಚಂದ್ರಶೇಖರ್ ಮಾಹಿತಿ ನೀಡಿ, ಸತತ ಮೂರನೇ ಬಾರಿಗೆ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷ ಡಾ. ಶಾಮನೂರು ಶಿವಶಂಕರಪ್ಪ, ರಾಷ್ಟ್ರೀಯ ಹಿರಿಯ ಉಪಾಧ್ಯಕ್ಷ ಈಶ್ವರ್ ಖಂಡ್ರೆ, ರಾಷ್ಟ್ರೀಯ ಉಪಾಧ್ಯಕ್ಷ ಡಾ. ಅಥಣಿ ವೀರಣ್ಣ, ಅಣಬೇರು ರಾಜಣ್ಣ, ಎಸ್.ಎಸ್. ಗಣೇಶ್, ರಾಜ್ಯಾಧ್ಯಕ್ಷ ಶಂಕರ ಬಿದರಿ, ರಾಷ್ಟ್ರೀಯ ಕಾರ್ಯದರ್ಶಿ ಎಚ್.ಎಂ. ರೇಣುಕ ಪ್ರಸನ್ನ, ಮಹಿಳಾ ಘಟಕದ ರಾಷ್ಟ್ರೀಯ ಅಧ್ಯಕ್ಷೆ ವೀಣಾ ಕಾಶಪ್ಪನವರ್ ಅವರನ್ನು ಅಭಿನಂದಿಸಲಾಗುವುದೆಂದರು.

{ಮಲ್ಲಿಕಾರ್ಜುನ ಖರ್ಗೆ} ಎಐಸಿಸಿ ಅಧ್ಯಕ್ಷ

ನಾನು ಮೋದಿಗೆ ಹೆದರಲ್ಲ, ಅಮಿತ್ ಶಾಗೂ ಹೆದರಲ್ಲ.ನಾನು ಯಾರಿಗೂ ಹೆದರಲ್ಲ.ಈ ರ‍್ಯಾಲಿ ಕೇವಲ ಕರ್ನಾಟಕಕ್ಕೆ ಸೀಮಿತವಲ್ಲ. ಕೇಂದ್ರದ ವಿರುದ್ಧ ಎಚ್ಚರಿಕೆ ಗಂಟೆ ಕೊಡುವ ಕೆಲಸ ಇಲ್ಲಿಂದ ನಡೀತಿದೆ. ಕಾಂಗ್ರೆಸ್ ಪ್ರತಿಭಟನೆ ರ‍್ಯಾಲಿಯಲ್ಲಿ ಸಂವಿಧಾನ ಇದೆ. ಅದಕ್ಕಾಗಿ ನಮಗೆ ಸ್ವತಂತ್ರವಾಗಿ ಮಾತನಾಡೋ ಶಕ್ತಿ ಇದೆ.



ಮೇ ದಿನಾಚರಣೆ ಹಾಗೂ ಹುತಾತ್ಮರ 55ನೇ ವಾರ್ಷಿಕೋತ್ಸವ ಸಮಾರಂಭ | ಎಐಟಿಯುಸಿ ಮುಖಂಡ ಬಿ. ಅಮ್ಜದ್

ಕಾರ್ಮಿಕರನ್ನು ಗುಲಾಮಗಿರಿಗೆ ತಳ್ಳುವ ಹುನ್ನಾರ

ದಾವಣಗೆರೆ: ಕೇಂದ್ರ ಸರಕಾರವು, ಶ್ರೀಮಂತರ ಪರವಾದ ನೀತಿಗಳನ್ನು ಜಾರಿಗೆ ತಂದು, ದೇಶದ ಕಾರ್ಮಿಕರು ಮತ್ತು ರೈತರನ್ನು ಗುಲಾಮಗಿರಿಗೆ ತಳ್ಳುವ ವ್ಯವಸ್ಥಿತ ಹುನ್ನಾರ ನಡೆಸಿದೆ ಎಂದು ಎಐಟಿಯುಸಿ ರಾಜ್ಯ ಉಪಾಧ್ಯಕ್ಷ ಬಿ. ಅಮ್ಜದ್ ಆರೋಪಿಸಿದರು.

ಗುರುವಾರ ನಗರದ ಜಯದೇವ ವೃತ್ತ ಸಮೀಪದ ನಾಟ್ಯಾಚಾರ್ಯ ಶ್ರೀನಿವಾಸ ಕುಲಕರ್ಣಿ ರಸ್ತೆಯಲ್ಲಿ ಸಿಪಿಐ ಮತ್ತು ಎಐಟಿಯುಸಿ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ, ಮೇ ದಿನಾಚರಣೆ ಹಾಗೂ ಹುತಾತ್ಮರ 55ನೇ ವಾರ್ಷಿಕೋತ್ಸವ ಸಮಾರಂಭ ಉದ್ಘಾಟಿಸಿ ಮಾತನಾಡಿ, 1886ಕ್ಕೂ ಮುಂಚೆ ಸೂರ್ಯೋದಯಕ್ಕೂ ಮೊದಲಿನಿಂದ ಸೂರ್ಯಾಸ್ತಮದವರೆಗೂ ದುಡಿಸಿಕೊಂಡು ಕಾರ್ಮಿಕರು ಮತ್ತು ರೈತರ ಶಕ್ತಿ ದುರ್ಬಳಕೆ ಮಾಡಿಕೊಳ್ಳಲಾಗುತ್ತಿತ್ತು. ಇದರ ವಿರುದ್ಧ ಸಿಡಿದೆದ್ದ ಕಾರ್ಮಿಕರು 8 ಗಂಟೆ ಕೆಲಸದ ಅವಧಿಗಾಗಿ ಅಮೇರಿಕಾದ ಚಿಕಾಗೋದಲ್ಲಿ ನಡೆಸಿದ ಹೋರಾಟದ ಫಲವಾಗಿ ಪಡೆದ ಹಕ್ಕು ಕೇಂದ್ರ ಸರಕಾರ ಕನಿಷ್ಠ 12ರಿಂದ 14 ಗಂಟೆ ದುಡಿಯಬೇಕೆಂಬ ಫಾರ್ಮಾನು ಹೊರಡಿಸಿ ಕಿತ್ತುಕೊಂಡು ಕಾರ್ಮಿಕರನ್ನು ಮತ್ತೇ ಗುಲಾಮಿಗಿರಿಗೆ ತಳ್ಳಲು ಯತ್ನಿಸುತ್ತಿದೆ ಎಂದು ದೂರಿದರು.

ಹೋರಾಟ ಮಾಡಿ ಪಡೆದಿದ್ದ ನೂರಾರು ಕಾರ್ಮಿಕ ಕಾಯಿದೆ ರದ್ದು ಪಡಿಸಿರುವ ಕೇಂದ್ರ ಸರಕಾರವು ಕಾರ್ಮಿಕರಿಗೆ ಮಾರಕವಾಗುವ ರೀತಿಯಲ್ಲಿ ನಾಲ್ಕು ಸಂಹಿತೆ ತರಲು ಮುಂದಾಗಿದೆ. ಇವು ಜಾರಿಯಾದರೆ, ಈಗಿರುವ ಮುಕ್ತವಾಗಿ ಹಕ್ಕು ಕೇಳುವ ಸ್ವಾತಂತ್ರ್ಯ ಹರಣವಾಗಿ, ಪ್ರಾಣಿಗಳಿಗಿಂತ ಹೀನವಾಗಿ ಬದುಕಬೇಕಾಗುತ್ತದೆ. ಆದ್ದರಿಂದ ಎಲ್ಲರೂ ಸಂಘಟಿತರಾಗಿ ಕೇಂದ್ರ ಸರಕಾರದ ವಿರುದ್ಧ ಹೋರಾಟ ನಡೆಸಬೇಕು ಎಂದು ಹೇಳಿದರು.

ಬಿಜೆಪಿ ವ್ಯಾಪಾರದ ಪಕ್ಷ ನಾವು ರಾಷ್ಟ್ರ ಭಕ್ತರು ಎಂದು ಬೊಬ್ಬೆ ಹೊಡೆಯುವ ಬಿಜೆಪಿಯ ಸರಕಾರ ಬಿಎಸ್‌ಎನ್‌ಎಲ್, ಎಲ್ಐಸಿ ಸೇರಿ ರಾಷ್ಟ್ರೀಯ ಸಂಪತನ್ನು ಮಾರಾಟ ಮಾಡಿ ಆಡಳಿತ ನಡೆಸುತ್ತಿದೆ. ಈ ದೇಶದಲ್ಲಿ ಇರುವಷ್ಟು ಅಸಮಾನತೆ ಎಲ್ಲೆಲ್ಲೂ ಇಲ್ಲ. ಧರ್ಮ, ದೇಶ ಎಂಬ ಭಾವನಾತ್ಮ ವಿಷಯ ಮುನ್ನೆಲೆಗೆ ತಂದು ಜನರ ದಾರಿ ತಪ್ಪಿಸುತ್ತಿದೆ ಎಂದರು.

ಪ್ರಾಸ್ತಾವಿಕ ಮಾತನಾಡಿದ ಎಐಟಿಯುಸಿ ಜಿಲ್ಲಾಧ್ಯಕ್ಷ ಕೆ. ರಾಘವೇಂದ್ರ ನಾಯರಿ, ನಮ್ಮ ನಡುವೆಯೇ ಇದ್ದು ನಂಬಿಕೆ ದ್ರೋಹ ಮಾಡಿ, ಆಳುವವರ ಪರವಾಗಿ ಕೆಲಸ ಮಾಡಿದ ಕೆಲವರು ಸಂಘಟನೆ ದುರ್ಬಲಗೊಳಿಸಲು ಪ್ರಶ್ನಿಸಿದರು. ಸಂಘಟನೆಯ ಶಿಸ್ತಿನ ಎಲ್ಲೆ ಮೀರಿದವರಿಗೆ ನಮ್ಮಲ್ಲಿ ಸ್ಥಾನವಿಲ್ಲ. ಸಂಘಟನೆಗೆ ತಾತ್ಕಾಲಿಕ ಹಿನ್ನಡೆಯಾಗಿರಬಹುದು. ಆದರೆ ಮುಂದೆ ಮತ್ತಷ್ಟು ಬಲಿಷ್ಠಗೊಳ್ಳಲಿದೆ ಎಂದರು.

ಸಿಪಿಐ ಜಿಲ್ಲಾ ಮಂಡಳಿ ಕಾರ್ಯದರ್ಶಿ ಆವರಗೆರೆ ಚಂದ್ರು ಅಧ್ಯಕ್ಷತೆ ವಹಿಸಿದ್ದರು. ಎಐಟಿಯುಸಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಎಚ್.ಜಿ. ಉಮೇಶ್, ಜಿ.ಯಲ್ಲಪ್ಪ, ಕೆ.ಜಿ. ಶಿವಮೂರ್ತಿ, ಎಚ್.ಕೆ. ಕೊಟ್ರಪ್ಪ, ಮಹ್ಮದ್ ರಫೀಕ್, ಟಿ.ಎಚ್. ನಾಗರಾಜ್, ಮಹಮದ್ ಬಾಷಾ, ವಿ.ಲಕ್ಷ್ಮಣ್, ಎಸ್.ಎಸ್. ಮಲ್ಲಮ್ಮ, ಜಯಪ್ಪ, ಜೈನುಲ್ಲಾ ಖಾನ್, ಸರೋಜಾ, ನರೇಗಾ ರಂಗನಾಥ್, ಪಿ.ಷಣ್ಮುಖಸ್ವಾಮಿ, ಸುರೇಶ್ ಗೌಡ, ಐರಣಿ ಚಂದ್ರು, ಕೆ.ಬಾನಪ್ಪ ಮತ್ತಿತರರಿದ್ದರು.

ನಗರದ ಜಯದೇವ ವೃತ್ತ ಸಮೀಪದ ನಾಟ್ಯಾಚಾರ್ಯ ಶ್ರೀನಿವಾಸ ಕುಲಕರ್ಣಿ ರಸ್ತೆಯಲ್ಲಿ ಆಯೋಜಿಸಿದ್ದ ಮೇ ದಿನಾಚರಣೆ ಹಾಗೂ ಹುತಾತ್ಮರ 55ನೇ ವಾರ್ಷಿಕೋತ್ಸವ ಸಮಾರಂಭ ಉದ್ಘಾಟಿಸಿ ರಾಜ್ಯ ಉಪಾಧ್ಯಕ್ಷ ಬಿ. ಅಮ್ಜದ್ ಮಾತನಾಡಿದರು.

> **ದೇಶದಲ್ಲಿ ಭಯೋತ್ಪಾದನೆ ನಿರ್ಮೂಲನೆ ಮಾಡುವುದಾಗಿ ಹೇಳಿ ಮೋದಿ ಅಧಿಕಾರಕ್ಕೆ ಬಂದಿದ್ದರು. ಆದರೆ, ಪುಲ್ವಾಮ ದಾಳಿಯಲ್ಲಿ ನೂರಾರು ಸೈನಿಕರು, ಇತ್ತೀಚೆಗೆ ಪಹಲ್‌ಗಾಮ್‌ನಲ್ಲಿ ಅಮಾಯಕರ ಮೇಲೆ ಉಗ್ರರು ಗುಂಡಿನ ಮಳೆ ಸುರಿದರು. ಸರಕಾರ ಆಂತರಿಕವಾಗಿ ಮತ್ತು ಬಾಹ್ಯವಾಗಿಯೂ ದೇಶದ ಜನರನ್ನು ರಕ್ಷಿಸುವಲ್ಲಿ ಸಂಪೂರ್ಣ ವಿಫಲವಾಗಿದೆ.**
> - ಬಿ.ಅಮ್ಜದ್, ಎಐಟಿಯುಸಿ ರಾಜ್ಯ ಉಪಾಧ್ಯಕ್ಷ

ಮೇ 20ಕ್ಕೆ ಮುಷ್ಕರ

ಬಂಡವಾಳಶಾಹಿಗಳ ಮರ್ಜಿಯಂತೆ ನಡೆದುಕೊಳ್ಳುತ್ತಿರುವ ಕೇಂದ್ರ ಸರಕಾರವು, ಕಾರ್ಮಿಕರ ಮೇಲೆ ಶೋಷಣೆ ಮಾಡುತ್ತಿದೆ. ಕಾರ್ಮಿಕರಿಗೆ ಕನಿಷ್ಠ ಕೂಲಿಯ ಖಾತ್ರಿ ಸಹ ಇಲ್ಲವಾಗಿದೆ. ಕಾರ್ಮಿಕರು ಈಗ ಮೈಮರೆತರೆ 139 ವರ್ಷದ ಹಿಂದಿನ ಚರಿತ್ರೆಯ ಪು ಸೇರಬೇಕಾದಿತು. ಬಿಜೆಪಿ ಸರಕಾರದ ವಿರುದ್ಧ ಮೇ 20ರಂದು ಕರೆ ನೀಡಿರುವ ರಾಷ್ಟ್ರ ವ್ಯಾಪಿ ಮುಷ್ಕರದಲ್ಲಿ ಭಾಗವಹಿಸಿ, ಬಿಜೆಪಿ ಅಧಿಕಾರ ಬಿಟ್ಟು ತೊಲಗುವಂತೆ ಮಾಡಬೇಕು ಎಂದು ಅಮ್ಜದ್ ಹೇಳಿದರು.

ಸರಕಾರಗಳ ವಿರುದ್ಧ ಕಾರ್ಮಿಕರು ಹೋರಾಡಲಿ

ಚಿತ್ರದುರ್ಗ: ಕಾರ್ಮಿಕರನ್ನು ಸಂಕಷ್ಟಕ್ಕೆ ದೂಡಿರುವ ಕೇಂದ್ರ ಮತ್ತು ರಾಜ್ಯ ಸರಕಾರಗಳ ವಿರುದ್ಧ ಕಾರ್ಮಿಕರು ಧ್ವನಿಯಾಗಬೇಕೆಂದು ಸಿ.ಪಿ.ಐ. ರಾಜ್ಯ ಕಾರ್ಯದರ್ಶಿ ಕಾಂತಿ ಸುಂದರೇಶ್ ಕರೆ ನೀಡಿದರು.

ಭಾರತ ಕಮ್ಯುನಿಸ್ಟ್ ಪಕ್ಷ, ಜಿಲ್ಲಾ ಕಾರ್ಮಿಕರ ಸಾಮೂಹಿಕ ಸಂಘಟನೆಗಳ ಸಂಯುಕ್ತಾಶ್ರಯದಲ್ಲಿ ಎ.ಐ.ಟಿ.ಯು.ಸಿ. ಕಚೇರಿ ಮುಂಭಾಗ ಗುರುವಾರ ನಡೆದ 48 ವರ್ಷದ ಹುತಾತ್ಮರ ಕಾರ್ಮಿಕರ ಮೇ. ದಿನಾಚರಣೆಯನ್ನು ಗಂಜರ ಬಾರಿಸುವ ಮೂಲಕ ಉದ್ಘಾಟಿಸಿ ಮಾತನಾಡಿದರು.

1886 ರಲ್ಲಿ ಅಮೇರಿಕಾದ ಚಿಕಾಗೋದಲ್ಲಿ ಕಾರ್ಮಿಕರು ಎಂಟು ಗಂಟೆ ಕೆಲಸ, 8 ಗಂಟೆ ವಿಶ್ರಾಂತಿ, 8 ಗಂಟೆಗಳ ಕಾಲ ಮನೋರಂಜನೆ ಇರಬೇಕೆಂದು ಹೋರಾಟ ಆರಂಭಿಸಿದಾಗ ಏಳು ಪೊಲೀಸರು, ನಾಲ್ಕು ಮಂದಿ ನಾಗರಿಕರು ಬಲಿಯಾಗುತ್ತಾರೆ. ಕೆಲವು ಕಾರ್ಮಿಕ ಮುಖಂಡರು ಗಲ್ಲಿಗೇರುತ್ತಾರೆ. ಅಂದಿನಿಂದ ಪ್ರತಿ ವರ್ಷವೂ ಕಾರ್ಮಿಕ ದಿನಾಚರಣೆಯನ್ನು ಆಚರಿಸಿಕೊಂಡು ಬರಲಾಗುತ್ತಿದೆ. ಸರಕಾರ ಮತ್ತು ಶ್ರೀಮಂತರು ಸೇರಿಕೊಂಡು ಕಾರ್ಮಿಕರನ್ನು ಶೋಷಣೆ ಮಾಡುತ್ತಿರುವುದರ ವಿರುದ್ಧ ಕಾರ್ಮಿಕರು ಒಗ್ಗಟ್ಟಾಗಿ ಹೋರಾಟ ಮಾಡಬೇಕಿದೆ ಎಂದು ಹೇಳಿದರು.

ಕೆಲಸಕ್ಕೆ ತಕ್ಕಂತೆ ಕಾರ್ಮಿಕರಿಗೆ ವೇತನ ಸಿಗುತ್ತಿಲ್ಲ, ರಾಜ್ಯದಲ್ಲಿ 27 ಲಕ್ಷ ಕಾರ್ಮಿಕ ಕುಟುಂಗಳಿಗೆ ಸೂರಿಲ್ಲ, ಸರಕಾರ ಜಾತಿ ಗಣತಿಯೊಂದೆ ನಡೆಸಬಾರದು. ಶಿಕ್ಷಣ ಮತ್ತು ಮೂಲಭೂತ ಸೌಲಭ್ಯಗಳಿಂದ ವಂಚಿತರಾಗಿರುವವರ ಮಾಹಿತಿ ಪಡೆದು ವರದಿ ಸಿದ್ದಪಡಿಸಬೇಕು. ಶಿಕ್ಷಣ ಖಾಸಗೀಕರಣವಾಗುತ್ತಿರುವುದರಿಂದ ಕಾರ್ಮಿಕರ ಮಕ್ಕಳು ಉನ್ನತ ಶಿಕ್ಷಣದಿಂದ ವಂಚಿತರಾಗುತ್ತಿದ್ದಾರೆ.

ಭೂಮಿ ಮತ್ತು ವಸತಿಗಾಗಿ ಹೋರಾಟ ಶುರುವಾಗಿದೆ. ದಿನಕ್ಕೆ ಎಂಟು ಗಂಟೆ ಬದಲಿಗೆ ಹನ್ನೆರಡು ಗಂಟೆಗಳ ಕಾಲ ಕೆಲಸ ಮಾಡುವಂತೆ ಕೇಂದ್ರ ಸರಕಾರ ಕಾನೂನು ಜಾರಿಗೆ ತಂದಿರುವುದರ ವಿರುದ್ದ ನಮ್ಮ ಹೋರಾಟ. ಕಾರ್ಮಿಕರು ಮತ್ತು ರೈತರ ಹಿತ ಕಾಪಾಡಬೇಕಾಗಿದೆ ಎಂದರು.

ಎ.ಐ.ಟಿ.ಯು.ಸಿ. ಜಿಲ್ಲಾ ಮಂಡಳಿ ಅಧ್ಯಕ್ಷ ಕಾಂ.ಬಿ.ಬಸವರಾಜ್ ಮಾತನಾಡಿ, ಕೇಂದ್ರ ಮತ್ತು ರಾಜ್ಯ ಸರಕಾರಗಳ ಜಗಳದಿಂದ ಕಾರ್ಮಿಕರು, ಜನಸಾಮಾನ್ಯರು ಬಡವಾಗುತ್ತಿದ್ದಾರೆ. ಕಾರ್ಮಿಕರ ಕಾಯಿದೆಗಳನ್ನು ಸರಕಾರ ತಿದ್ದುಪಡಿ ಮಾಡಿದೆ. ದಿನಕ್ಕೆ ಹನ್ನೆರಡು ಗಂಟೆ ಕೆಲಸ ಎನ್ನುವುದು ಎಷ್ಟು ಸರಿ ಎನ್ನುವ ಬಗ್ಗೆ ಆಲೋಚನೆಯಾಗಬೇಕು. ಸೂರಿಗಾಗಿ ಸಮರ ಆರಂಭವಾಗಿದೆ ಎಂದರು.

ಎ.ಐ.ಟಿ.ಯು.ಸಿ.ಜಿಲ್ಲಾ ಗೌರವಾಧ್ಯಕ್ಷ ಕಾಂ.ಸಿ.ವೈ.ಶಿವರುದ್ರಪ್ಪ, ಸಿ.ಪಿ.ಐ.ಜಿಲ್ಲಾ ಸಹ ಕಾರ್ಯದರ್ಶಿ ಕಾಂ.ದೊಡ್ಡುಳ್ಳಾರ್ತಿ ಕರಿಯಣ್ಣ, ಜಿಲ್ಲಾ ಸಹ ಕಾರ್ಯದರ್ಶಿ ಕಾಂ.ಬಿ.ಹೆಚ್. ಹನುಮಂತಪ್ಪ, ಕಾಂ.ಭಾಗ್ಯಮ್ಮ, ಕಾಂ.ಜಾಫರ್, ಕಾಂ.ಪರ್ವಿನ್, ಕಾಂ.ಜಯದೇವಮೂರ್ತಿ, ಕಾಂ. ಕುಮಾರಣ್ಣ, ರೈತ ಮುಖಂಡ ಧನಂಜಯ ಹಂಪಯ್ಯನಮಾಳಿಗೆ ವೇದಿಕೆಯಲ್ಲಿದ್ದರು.

ಎ.ಐ.ಟಿ.ಯು.ಸಿ. ಜಿಲ್ಲಾ ಸಂಘಟನಾ ಕಾರ್ಯದರ್ಶಿ ಕಾಂ.ಕೆ.ಇ.ಸತ್ಯಕೀರ್ತಿ ಸೇರಿದಂತೆ ನೂರಾರು ಕಮ್ಯುನಿಸ್ಟ್ ಕಾರ್ಯಕರ್ತರು ಹಾಗೂ ಅಂಗನವಾಡಿ ಕಾರ್ಯಕರ್ತೆಯರು ಮೇ. ದಿನಾಚರಣೆಯಲ್ಲಿ ಪಾಲ್ಗೊಂಡಿದ್ದರು.

ಎ.ಐ.ಟಿ.ಯು.ಸಿ. ಕಚೇರಿ ಮುಂಭಾಗ ನಡೆದ 48 ವರ್ಷದ ಹುತಾತ್ಮರ ಕಾರ್ಮಿಕರ ದಿನಾಚರಣೆಯನ್ನು ಗಂಜರ ಬಾರಿಸುವ ಮೂಲಕ ಕಾಂತಿ ಸುಂದರೇಶ್ ಉದ್ಘಾಟಿಸಿದರು.

ವಸತಿಗಾಗಿ 1500 ಅರ್ಜಿ ಸಲ್ಲಿಕೆ

ಎ.ಐ.ಟಿ.ಯು.ಸಿ.ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕಾಂ.ಜಿ.ಸಿ.ಸುರೇಶ್‌ಬಾಬು ಮಾತನಾಡಿ, ವಸತಿಗಾಗಿ 1500 ಅರ್ಜಿಗಳು ಬಂದಿವೆ. ಆರು ಪಂಚಾಯಿತಿಗಳಲ್ಲಿ ಪಿ.ಡಿ.ಓ.ಗಳಿಗೆ ಅರ್ಜಿಗಳನ್ನು ಕೊಡಲಾಗಿದೆ. ಪ್ರತಿ ಹಳ್ಳಿಗಳಲ್ಲಿಯೂ ನಿವೇಶನರಹಿತರ ಸರ್ವೆ ನಡೆಸಿ ಪಟ್ಟ ಕೊಡುವಂತೆ ಮುಖ್ಯಮಂತ್ರಿ ಸಿದ್ದರಾಮ ಯ್ಯನವರು ಜಿಲ್ಲಾ ಪಂಚಾಯಿತಿ ಸಿಇಒ ಗಳಿಗೆ ಸೂಚಿಸಿರುವುದು ನಮ್ಮ ಹೋರಾಟಕ್ಕೆ ಸಿಕ್ಕ ಪ್ರತಿಫಲ ಎಂದರು.

ಜನರ ಜೀವದ ಜತೆ ಅಧಿಕಾರಿಗಳ ಚೆಲ್ಲಾಟ

ಚಳ್ಳಕೆರೆ: ತಾಲೂಕಿನ ದೊಡ್ಡ ಉಳ್ಳಾರ್ತಿ ಗ್ರಾಮದಲ್ಲಿ ಸ್ವಚ್ಚತೆ ಎನ್ನುವುದು ಮರಿಚೀಕೆಯಾಗಿದೆ, ಕಳೆದ ಹಲವು ದಿನಗಳಿಂದ ಚರಂಡಿಯ ಕೊಳಚೆ ನೀರು ಮುಂದಕ್ಕೆ ಹೋಗದೆ ನಿಂತಲ್ಲಿಯೇ ನಿಂತು ಗಬ್ಬು ವಾಸನೆ ಬೀರುತ್ತಿದೆ.

ಇನ್ನೂ ಮನೆಯ ಅಕ್ಕಪಕ್ಕದ ಜನರು ಎಷ್ಟೋ ಬಾರಿ ಅಧಿಕಾರಿಗಳ ಗಮನಕ್ಕೆ ತಂದರು, ಕ್ಯಾರೆ ಎನ್ನದ ಇಲ್ಲಿನ ಅಧಿಕಾರಿಗಳ ವರ್ತನೆಗೆ ಸ್ಥಳೀಯರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಸಾರ್ವಜನಿಕರು ರಕ್ಷಣೆಗೆ ಸ್ಥಳೀಯ ಆಡಳಿತ ಅಧಿಕಾರಿಗಳು ಮುಂದಾಗುವುದು ಸರಕಾರದ ನಿರ್ದೇಶನ ಆದರೆ ಇಲ್ಲಿ ಮಾತ್ರ ಬೇರೆನೆ ಇದೆ. ಚರಂಡಿಯ ಕೊಳಚೆ ನೀರು ಮುಂದಕ್ಕೆ ಹೋಗದೆ ನಿಂತಲ್ಲಿಯೆ ನಿಂತು ಸೊಳ್ಳೆಗಳ ಉತ್ಪತ್ತಿ ತಾಣವಾಗಿ ಮಾರ್ಪಟ್ಟಿದೆ.

ದಿನ ಸಂಜೆಯಾದರೆ ಸೊಳ್ಳೆಗಳ ಕಾಟದಿಂದ ಡೆಂಗ್ಯೂ , ಮಲೇರಿಯಾ, ಈಗೇ ಭಯಾನಕ ಖಾಯಿಲೆಗೆ ತುತ್ತಾಗುವ ಆತಂಕ ಇಲ್ಲಿನ ಸ್ಥಳೀಯರಲ್ಲಿ ಕಾಡುತ್ತಿದೆ. ಇತ್ತ ಸ್ಥಳೀಯ ಅಧಿಕಾರಿಗಳ ನಿರ್ಲಕ್ಷ್ಯಕ್ಕೆ ಮೇಲಾಧಿಕಾರಿಗಳ ಭೇಟಿ ಅನಿವಾರ್ಯವಾಗಿದೆ .

ಇನ್ನಾದರೂ ಸಂಬಂಧಿಸಿದ ಅಧಿಕಾರಿಗಳು ಚರಂಡಿ ಸ್ವಚ್ಚತೆ ಮುಂದಾಗಿ ಚರಂಡಿಯ ಕೊಳಚೆ ನೀರು ಮುಂದಕ್ಕೆ ಸರಾಗವಾಗಿ ಹರಿಯುವಂತೆ ಮಾಡಿ ಸಾರ್ವಜನಿಕರು ರಕ್ಷಣೆಗೆ ಮುಂದಾಗಬೇಕಿದೆ.

ಪಾರಮಾರ್ಥ ಸಮಾಜಕ್ಕೆ ಪರಿಚಯಿಸಿದ ವ್ಯಕ್ತಿ

ಚಳ್ಳಕೆರೆ: ಲೌಕಿಕ ಬದುಕಿನಲ್ಲಿ ಇದ್ದುಕೊಂಡೆ ಪಾರಮಾರ್ಥ ವನ್ನು ಸಮಾಜಕ್ಕೆ ಪರಿಚಯಿಸಿದ ವ್ಯಕ್ತಿ ವಿಶ್ವಗುರು ಜಗಜ್ಯೋತಿ ಬಸವಣ್ಣನವರು ಎಂದು ನಿವೃತ್ತ ಕೆಎಎಸ್ ಅಧಿಕಾರಿ ಎನ್ ರಘುಮೂರ್ತಿ ಹೇಳಿದರು.

ದೊಡ್ಡ ಉಳ್ಳರ್ತಿ ಗ್ರಾಮದಲ್ಲಿ ಬಸವ ಸದನದಿಂದ ಆಯೋಜಿಸಿದ್ದ, ಜಗಜ್ಯೋತಿ ಬಸವೇಶ್ವರ ಜಯಂತೋತ್ಸವದ ಸಮಾರಂಭವನ್ನು ದೀಪ ಬೆಳಗಿಸಿ ಮಾತನಾಡಿ, ಅಂತರಂಗದ ಅರಿವನ್ನು ಹೆಚ್ಚಿಸಲು ಆಚಾರವನ್ನು ಶುದ್ದಿಗೊಳಿಸಲು ಸಮಾಜಕ್ಕೆ ಪ್ರೇರಣೆ ನೀಡಿದ್ದು ಬಸವೇಶ್ವರರು ಇವರ ಅನುಭವ ಮಂಟಪದ ಪರಿಕಲ್ಪನೆ ಸಮಾಜದಲ್ಲಿನ ಲಿಂಗ ತಾರತಮ್ಯ, ಅಸಮಾನತೆ ಮತ್ತು ಮೂಢನಂಬಿ ಕೆಗಳನ್ನು ನಿರ್ಮೂಲನೆ ಮಾಡುವು ದಾಗಿತ್ತು, ಮನುಷ್ಯನ ಬದುಕಿನುದ್ದಕ್ಕೂ ಇವರ ವಚನಗಳು ಜೀವಾಮೃತವಿದ್ದಂತೆ ಎಂದರು. ಹನುಮಂತ್ ರೆಡ್ಡಿ, ವಿರೂಪಾಕ್ಷಪ್ಪ ಕರಿಯಣ್ಣ ಸದನದ ಎಲ್ಲಾ ಕಾರ್ಯಕಾರಿ ಮಂಡಳಿಯ ಸದಸ್ಯರು ಉಪಸ್ಥಿತರಿದ್ದರು.

ದೊಡ್ಡ ಉಳ್ಳರ್ತಿ ಗ್ರಾಮದಲ್ಲಿ ಆಯೋಜಿಸಿದ್ದ ಬಸವೇಶ್ವರ ಜಯಂತೋತ್ಸವದ ಸಮಾರಂಭವನ್ನುದೀಪ ಬೆಳಗಿಸಿ ರಘುಮೂರ್ತಿ ಮಾತನಾಡಿದರು.

ಸಾಮಾಜಿಕ ಕ್ರಾಂತಿ ಹರಿಕಾರ ಬಸವಣ್ಣ

ನಗರದ ತಾಲೂಕು ಕಚೇರಿ ಸಭಾಂಗಣದಲ್ಲಿ ಆಯೋಜಿಸಲಾಗಿದ್ದ ಶ್ರೀ ಬಸವೇಶ್ವರ ಜಯಂತೋತ್ಸವ ಕಾರ್ಯಕ್ರಮ ಸಚಿವ ಡಿ.ಸುಧಾಕರ್ ಉದ್ಘಾಟಿಸಿದರು.

ಹಿರಿಯೂರು: ಸುಮಾರು 12ನೇ ಶತಮಾನದಲ್ಲಿಯೇ ಸಾಮಾಜಿಕ ಕ್ರಾಂತಿ ಹರಿಕಾರ ಜಗಜ್ಯೋತಿ ಬಸವಣ್ಣನವರು ಒಬ್ಬರಾಗಿದ್ದು, ಇವರು ವರ್ಗರಹಿತ ಸಮಾಜವನ್ನು ಸೃಷ್ಟಿಸುವಲ್ಲಿ ಹೋರಾಡಿದ ಮಹಾನ್ ಚೇತನ ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಿ.ಸುಧಾಕರ್ ಹೇಳಿದರು.

ನಗರದ ತಾಲೂಕು ಕಚೇರಿ ಸಭಾಂಗಣದಲ್ಲಿ ತಾಲೂಕು ಆಡಳಿತ , ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ ವತಿಯಿಂದ ಆಯೋಜಿಸಲಾಗಿದ್ದ ಶ್ರೀಬಸವೇಶ್ವರ ಜಯಂತೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಸಮಾಜದಲ್ಲಿನ ಅಸ್ಪೃಶ್ಯತೆ, ಮೂಢ ನಂಬಿಕೆಗಳನ್ನು ತೊಡೆದು ಹಾಕಲು ಸಾಮಾಜಿಕ ಕ್ರಾಂತಿ ಹುಟ್ಟು ಹಾಕಿದ ಬಸವಣ್ಣನವರು ತಮ್ಮ ಸರಳ ವಚನಗಳ ಮೂಲಕ ಸಮಾಜವನ್ನು ತಿದ್ದುವಲ್ಲಿ ಶ್ರಮಿಸಿದರಲ್ಲದೆ, ಕಾಯಕವೇ ಕೈಲಾಸ ಎಂಬ ಮೂಲ ಮಂತ್ರವನ್ನು ಜಗತ್ತಿಗೆ ಸಾರಿದರು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ತಹಸೀಲ್ದಾರ್ ಸಿ.ರಾಜೇಶ್ ಕುಮಾರ್, ಬಿಇಒ ಸಿ. ಎಂ.ತಿಪ್ಪೇಸ್ವಾಮಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಖಾದಿರಮೇಶ್, ಮಹಾಂತೇಶ್, ಜಿ.ಪಿ.ಯಶವಂತ ರಾಜ್, ಉಮೇಶ್ ಗೌಡ, ಶಶಿಕಲಾ ರವಿಶಂಕರ್, ಕುಮಾರ್, ಸಿಎಂ ಸ್ವಾಮಿ, ಮಹೇಶ್, ಸರ್ವಮಂಗಳ, ಗೀತಾ, ಹಿಮಾಚಲೇಶ್, ರಾಜೇಶ್ವರಿ, ನಿರ್ಮಲ ಮಹಂತೇಶ್, ಶ್ಯಾಮಲಾ, ಡಾ.ಲಕ್ಷ್ಮಿ, ಶಶಿಧರ್, ವೀರಭದ್ರಯ್ಯ, ರಾಜಮಲ್ಲೇಶ್, ರವಿಶಂಕರ್, ಆಲೂರು ಸಿದ್ದರಾಮಣ್ಣ, ಜಗದೀಶ್, ಶಿವಪ್ರಸಾದ್, ಶ್ರೀನಿವಾಸ್ ರೆಡ್ಡಿ, ಕಲ್ಲೇಶಪ್ಪ ಸೇರಿದಂತೆ ಇತರರಿದ್ದರು.

ಕಾರ್ಮಿಕರ ಶ್ರಮಿಕತೆಗೆ ಆಧ್ಯಾತ್ಮಿಕ ಶಕ್ತಿ ಅಗತ್ಯ

ಹೊಳಲ್ಕೆರೆ: ಆಧ್ಯಾತ್ಮಿಕ ಶಕ್ತಿಯಿಂದ ಕಾರ್ಮಿಕರು ದೈಹಿಕ ಮತ್ತು ಮಾನಸಿಕ ಶಕ್ತಿಯಾಗಿ ಹೊರಹೊಮ್ಮಬೇಕು ಎಂದು ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರಿ ವಿಶ್ವವಿದ್ಯಾನಿಲಯದ ಸಂಚಾಲಕಿ ಬಿ.ಕೆ ಸುಮಿತ್ರ ತಿಳಿಸಿದರು.

ಪತ್ರಕರ್ತರ ಭವನದಲ್ಲಿ ಪತ್ರಕರ್ತರ ಸಂಘ, ಪತ್ರಿಕೆ ವಿತರಕರ ಸಂಘ ಹಮ್ಮಿಕೊಂಡಿದ್ದ ಕಾರ್ಮಿಕ ದಿನಾಚರಣೆ ಕಾರ್ಯಕ್ರಮದಲ್ಲಿ ಸಸಿಗೆ ನೀರು ಹಾಕುವ ಮೂಲಕ ಉದ್ಘಾಟಿಸಿ ಮಾತನಾಡಿದರು.

ಕಾರ್ಮಿಕ ಸಮುದಾಯ ಸಾಕಷ್ಟು ಸಮಸ್ಯೆಗಳ ಮಧ್ಯೆ ಬದುಕು ಕಟ್ಟಿಕೊಳ್ಳುತ್ತಿದ್ದರು, ಆಧ್ಯಾತ್ಮಿಕ ಮನಸ್ಥಿತಿಯಿಂದ ಸಮಸ್ಯೆಗಳಿಗೆ ಮುಕ್ತಿ ಕಂಡುಕೊಳ್ಳಬಹುದು. ಬದುಕು ಬವಣೆ ಜತೆ ಆಧ್ಯಾತ್ಮಿಕ ಚಿಂತನೆ ನಮ್ಮನ್ನ ಇನ್ನಷ್ಟು ಶಕ್ತಿಶಾಲಿ ವ್ಯಕ್ತಿಗಳನ್ನಾಗಿ ಪರಿವರ್ತಿಸುತ್ತದೆ. ಈ ನಿಟ್ಟಿನಲ್ಲಿ ಪ್ರತಿಯೊಬ್ಬರು ಮಾನಸಿಕವಾಗಿ ಸದೃಢತೆ ಕಂಡುಕೊಳ್ಳಲು ಆಧ್ಯಾತ್ಮಿಕ ಶಕ್ತಿಯನ್ನು ಸದ್ಬಳಕೆ ಮಾಡಿಕೊಳ್ಳಲು ಕರೆ ನೀಡಿದರು.

ಹೊಳಲ್ಕೆರೆ ಪುರಸಭೆಯ ಉಪಾಧ್ಯಕ್ಷೆ ಎಚ್‌ಆರ್ ನಾಗರತ್ನ ವೇದಮೂರ್ತಿ ಮಾತನಾಡಿ, ವಿಶ್ವದಾದ್ಯಂತ ಕಾರ್ಮಿಕರನ್ನು ಸಂರಕ್ಷಣೆ ಮಾಡುವ ಉದ್ದೇಶದಿಂದ ಕಾರ್ಮಿಕ ದಿನಾಚರಣೆಯನ್ನು ಕೈಗೊಂಡು ಅವರಿಗೆ ಅಗತ್ಯ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಿ ಕೊಡುವ ಚಿಂತನ ಜತೆ ಒಂದು ದಿನ ಅವರದೇ ಆದ ದಿನಾಚರಣೆಯನ್ನ ಕೈಗೊಳ್ಳಲು ಅವಕಾಶ ಸಿಕ್ಕಿರುವುದು ಶ್ಲಾಘನೀಯ ಎಂದರು.

ಪತ್ರಿಕಾ ವಿತರಕರ ಸಂಘದ ತಾಲೂಕು ಅಧ್ಯಕ್ಷ ಹಿರೇಕಂದವಾಡಿ ರವಿಕುಮಾರ್, ಪ್ರಧಾನ ಕಾರ್ಯದರ್ಶಿ ಚೀರನಹಳ್ಳಿ ಶಂಕ್ರಪ್ಪ, ಕಾರ್ಯದರ್ಶಿ ಚಿಕ್ಕಜಾಜೂರಿನ ಹಗೇದ್ ಮಂಜುನಾಥ್, ಖಜಾಂಚಿ ಅರೇಹಳ್ಳಿ ನರಸಿಂಹ ಮೂರ್ತಿ, ಉಪಾಧ್ಯಕ್ಷ ರಾಮಗಿರಿ ತಿಪ್ಪೇಸ್ವಾಮಿ, ಯೋಗೇಶ್, ಸಂಘಟನಾ ಕಾರ್ಯದರ್ಶಿ ಮಲ್ಲಿಕಾರ್ಜುನ್, ಸಹ ಕಾರ್ಯದರ್ಶಿ ಹೊಳಲ್ಕೆರೆ ನಿರಂಜನ್, ಸಂಚಾಲಕ ಶಿವಕುಮಾರ್, ಚಿತ್ರಹಳ್ಳಿ ಕೆಂಚಪ್ಪ ಮದು, ನಾಗರಾಜ್ ಉಪಸ್ಥಿತರಿದ್ದರು.

ಪತ್ರಕರ್ತರ ಭವನದಲ್ಲಿ ಪತ್ರಕರ್ತರ ಸಂಘ, ಪತ್ರಿಕೆ ವಿತರಕರ ಸಂಘ ಹಮ್ಮಿಕೊಂಡಿದ್ದ ಕಾರ್ಮಿಕ ದಿನಾಚರಣೆ ಕಾರ್ಯಕ್ರಮದಲ್ಲಿಸಸಿಗೆ ನೀರು ಹಾಕುವ ಮೂಲಕ ಬಿ.ಕೆ ಸುಮಿತ್ರ ಉದ್ಘಾಟಿಸಿದರು.

> **ದೇಶದಲ್ಲಿ ಕಾರ್ಮಿಕರಾಗಿ ವೃತ್ತಿ ನಿರ್ವಹಿಸುತ್ತಿರುವ ಸಮುದಾಯಕ್ಕೆ ಸಂವಿಧಾನಬದ್ದ ಹಕ್ಕು ಮತ್ತು ಸೌಲಭ್ಯಗಳಿದ್ದು ಸದ್ಬಳಕೆ ಮಾಡಿಕೊಂಡು ಆರ್ಥಿಕ ಸಬಲೀಕರಣ ಹೊಂದಬೇಕು. ಇಲಾಖೆಯಲ್ಲಿ ಭ್ರಷ್ಟಾಚಾರ ಹೆಚ್ಚಾಗಿ ಸಕಾಲದಲ್ಲಿ ಕಾರ್ಮಿಕರಿಗೆ ಸಿಕ್ಕಬೇಕಾದ ಸೌಲಭ್ಯಗಳು ಸಿಕ್ಕುತ್ತಿಲ್ಲ ಎನ್ನುವ ಆರೋಪ ಕೇಳಿ ಬರುತ್ತಿದೆ. ಸರಕಾರ ಈ ನಿಟ್ಟಿನಲ್ಲಿ ಪಾರದರ್ಶಕವಾದ ಆಡಳಿತ ಜಾರಿಗೆ ತರಬೇಕು.**
> -ಎಸ್.ವೇದಮೂರ್ತಿ,ವಕೀಲ

ಮಾದಿಗ ಎಂದೇ ಬರೆಯಿಸಿ

ಜಗಳೂರಿನಲ್ಲಿ ಒಳ ಮೀಸಲಾತಿ ಸಮೀಕ್ಷೆ ಹಿನ್ನೆಲೆ ಹಮ್ಮಿ ಕೊಂಡಿದ್ದ ಜಾಗೃತಿ ಜಾಥಾಕ್ಕೆ ಚಾಲನೆ ನೀಡಲಾಯಿತು.

ಜಗಳೂರು: ದಂಡೋರ ಮೀಸಲಾತಿ ಹೋರಾಟ ಸಮಿತಿಯಿಂದ ತಾಲೂಕು ಪ್ರತಿ ಹಳ್ಳಿಗಳಿಗೆ ತೆರಳಿ ಮಾದಿಗ ಸಮಾಜದ ಬಂಧುಗಳನ್ನು ಭೇಟಿ ನೀಡಿ ಕಾಲಂನಲ್ಲಿ ಕಡ್ಡಾಯವಾಗಿ ಮಾದಿಗ ಎಂದು ಬರೆಸಲು ತಿಳಿಸಲಾಗುವುದು ಎಂದು ಮಾದಿಗ ದಂಡೋರ ಮೀಸಲಾತಿ ಹೋರಾಟ ಸಮಿತಿ ಜಿಲ್ಲಾಧ್ಯಕ್ಷ ಗೌರಿಪುರ ಕುಬೇರಪ್ಪ ಹೇಳಿದರು.

ಪಟ್ಟಣದ ಡಾ.ಬಿ. ಆರ್ ಅಂಬೇಡ್ಕರ್ ವೃತ್ತದಲ್ಲಿ ಒಳ ಮೀಸಲಾತಿ ಸಮೀಕ್ಷೆ ಹಿನ್ನೆಲೆ ಹಮ್ಮಿಕೊಂಡಿದ್ದ ಜಾಗೃತಿ ಜಾಥಾಕ್ಕೆ ಚಾಲನೆ ನೀಡಿ ಮಾತನಾಡಿ, ಪ. ಜಾತಿಗಳಲ್ಲಿ ಒಳ ಮೀಸಲಾತಿ ಕಲ್ಪಿಸಲು ನಾಗಮೋಹನ ದಾಸ್ ಆಯೋಗ ಸರಕಾರಕ್ಕೆ ಮಧ್ಯಂತರ ವರದಿ ನೀಡಿದ್ದು, ಒಳಮೀಸಲಾತಿ ಕಲ್ಪಿಸಲು ಒಳ ಮೀಸಲಾತಿಗೆ ಒಳ ಪಡುವ ಜಾತಿಗಳ ಗಣತಿ ಮಾಡಲು ಮೇ.5ರಿಂದ ಮನೆ ಮನೆಗೆ ಬರುತ್ತಿ ರುವ ಗಣತಿದಾರರಿಗೆ ಮಾದಿಗ ಜನಾಂಗದವರು ಕಾಲಂ ನಂ 61ರಲ್ಲಿ ಮಾದಿಗ ಎಂದು ಬರೆಸಬೇಕು ಎಂದರು.

ಮುಖಂಡ ಚದರಗೋಳ ಆನಂದ್, ಮಾದಿಗ ದಂಡೋರ ಸಮಿತಿ ತಾಲೂಕಾಧ್ಯಕ್ಷ ಕ್ಯಾಸೇನಹಳ್ಳಿ ಹನುಮಂತಪ್ಪ, ಕಾರ್ಯದರ್ಶಿ ಮಂಜುನಾಥ್ ಕಸವ್ವನಹಳ್ಳಿ, ಉಪಾಧ್ಯಕ್ಷ ತೋರಣಗಟ್ಟೆ ತಿಪ್ಪೇಸ್ವಾಮಿ, ನಿವೃತ್ತ ಶಿಕ್ಷಕರಾದ ಶಿವಣ್ಣ, ಎ.ಕೆ ಯಲ್ಲಪ್ಪ, ಮುಖಂಡ ಸೂರಡ್ಡಿಹಳ್ಳಿ ರಂಗಸ್ವಾಮಿ, ಹರೀಶ್ ಹನುಮಂತಾಪುರ, ಕಮಂಡಲ ಗೊಂದಿ ಹೊನ್ನೂರಸ್ವಾಮಿ ಮತ್ತಿತರರಿದ್ದರು.

ಬಸವ ಜ್ಯೋತಿ ಎಲ್ಲೆಡೆ ಬೆಳಗಲಿ: ಬಸವಪ್ರಭು ಶ್ರೀ

ದಾವಣಗೆರೆ: ಬಸವ ಜಯಂತಿ ಉತ್ಸವ ಸಮಿತಿಯಿಂದ, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ , ಎಲ್ಲ ಬಸವ ಸಂಘಟನೆಗಳು, ಬಸವ ಭಕ್ತರ ಸಹಯೋಗದಲ್ಲಿ ಬೈಕ್ ರ‍್ಯಾಲಿ ಆಯೋಜಿಸಿರುವುದು ಹೆಮ್ಮೆ ಎನಿಸಿದೆ. ಅದರಲ್ಲೂ ಯುವಕರು ಭಾಗವಹಿಸಿರುವುದು ಸಂತೋಷದ ವಿಷಯ ಎಂದು ವಿರಕ್ತಮಠದ ಡಾ.ಬಸವಪ್ರಭು ಸ್ವಾಮೀಜಿ ಹೇಳಿದರು.

ನಗರದ ಕಾಯಿಪೇಟೆಯ ಬಸವೇಶ್ವರ ದೇವಸ್ಥಾನದ ಮುಂಭಾಗ ಬಸವ ಜಯಂತಿ ಉತ್ಸವ ಸಮಿತಿ ಹಾಗೂ ವಿವಿಧ ಬಸವ ಪರ ಸಂಘಟನೆಗಳ ಸಹಯೋಗದಲ್ಲಿ ಸಾಂಸ್ಕೃತಿಕ ನಾಯಕ, ವಿಶ್ವಗುರು ಬಸವಣ್ಣನವರ ಜಯಂತಿ ಹಾಗೂ ಅಭಿನಂದನಾ ಕಾರ್ಯಕ್ರಮದ ಅಂಗವಾಗಿ ಆಯೋಜಿಸಿದ್ದ ಬೈಕ್ ರ‍್ಯಾಲಿಗೆ ಚಾಲನೆ ನೀಡಿ ಶ್ರೀಗಳು ಮಾತನಾಡಿ, ದಾವಣಗೆರೆಯ ಎಲ್ಲಾ ಬಸವ ಭಕ್ತರು ಸೇರಿ ವಿಶ್ವ ಗುರು ಬಸವಣ್ಣನವರ ಜಯಂತಿ ಆಚರಿಸುತ್ತಿದ್ದೇವೆ. ಈ ಬೈಕ್ ರ‍್ಯಾಲಿ ನಗರದಾದ್ಯಂತ ಬಸವ ಜ್ಯೋತಿಯನ್ನು ಬೆಳಗಲಿದೆ. ಈ ಕಾರ್ಯಕ್ರಮದಲ್ಲಿ ಸರ್ವ ಸಮಾಜದವರು ಭಾಗವಹಿಸಿದ್ದಾರೆ ಎಂದರು.

ರ‍್ಯಾಲಿಯಲ್ಲಿ ಬಸವ ಜಯಂತಿ ಉತ್ಸವ ಸಮಿತಿ ಅಧ್ಯಕ್ಷ ಎಂ.ಶಿವಕುಮಾರ ಅಭಾವೀಲಿಂ ಮಹಾಸಭಾ ಜಿಲ್ಲಾಧ್ಯಕ್ಷ ಐಗೂರು ಸಿ. ಚಂದ್ರಶೇಖರ, ಶರಣ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಕೆ.ಬಿ.ಪರಮೇಶ್ವರಪ್ಪ, ಮಾಜಿ ಮೇಯರ್ ಎಸ್.ಟಿ.ವೀರೇಶ, ಮಾಜಿ ಉಪ ಮೇಯರ್ ಸೋಗಿ ಶಾಂತಕುಮಾರ, ಶಿವಗಂಗಾ ಶ್ರೀನಿವಾಸ, ತಾಲೂಕು ಘಟಕದ ಅಧ್ಯಕ್ಷ ಶಂಭು ಉರೇಕೊಂಡಿ, ಸಿದ್ದಗಂಗಾ ಸಂಸ್ಥೆಯ ನಿರ್ದೇಶಕ ಡಿ.ಎಸ್.ಹೇಮಂತ್, ಪಾಲಿಕೆ ಮಾಜಿ ಸದಸ್ಯ ಗಡಿಗುಡಾಳ್ ಮಂಜುನಾಥ್, ಎಚ್.ಎನ್. ಶಿವಕುಮಾರ್, ಶಿವನಗೌಡ ಪಾಟೀಲ, ಸೋಗಿ ಗುರು, ಧನಂಜಯ, ಬಸವ ಭಕ್ತರು, ಬಸವಾಭಿಮಾನಿಗಳು ಭಾಗವಹಿಸಿದ್ದರು.

ನಗರದ ಕಾಯಿಪೇಟೆಯ ಬಸವೇಶ್ವರ ದೇವಸ್ಥಾನದ ಮುಂಭಾಗ ಬಸವಣ್ಣನವರ ಜಯಂತಿ ಅಂಗವಾಗಿ ಆಯೋಜಿದ್ದ ಬೈಕ್ ರ‍್ಯಾಲಿಗೆ ಬಸವಪ್ರಭು ಸ್ವಾಮೀಜಿ ಚಾಲನೆ ನೀಡಿದರು.

ನಗರದಲ್ಲಿ ಬೃಹತ್ ರ‍್ಯಾಲಿ ಮೆರವಣಿಗೆ

ರ‍್ಯಾಲಿಯು ಕಾಯಿಪೇಟೆ ಬಸವೇಶ್ವರ ದೇವಸ್ಥಾನದಿಂದ ಆರಂಭವಾಗಿ ವಿಜಯಲಕ್ಷ್ಮಿ ರಸ್ತೆ, ಕಾಳಿಕಾದೇವಿ ರಸ್ತೆ, ಹಗೇದಿಬ್ಬ ಸರ್ಕಲ್, ಶ್ರೀ ದುರ್ಗಾಂಬಿಕಾ ದೇವಸ್ಥಾನ, ಕಿತ್ತೂರು ರಾಣಿ ಚೆನ್ನಮ್ಮ (ಅರುಣ ಟಾಕೀಸ್) ಸರ್ಕಲ್, ರಾಮ್ ಅಂಡ್ ಕೋ ವೃತ್ತ, ಸಿಜಿ ಆಸ್ಪತ್ರೆ ರಸ್ತೆ, ಗುಂಡಿ ಮಹದೇವಪ್ಪ ಸರ್ಕಲ್, ವಿದ್ಯಾನಗರ ಎಸ್.ಎಸ್.ಕಲ್ಯಾಣ ಮಂಟಪ, 60 ಅಡಿ ರಸ್ತೆ, ಎಚ್‌ಕೆಆರ್ ಸರ್ಕಲ್ ರಸ್ತೆ,ಡಾಂಗೆ ಪಾರ್ಕ್ ರಸ್ತೆ, ಶಿವಪ್ಪಯ್ಯ ಸರ್ಕಲ್ ಮೂಲಕ ಜಯದೇವ ವೃತ್ತದಲ್ಲಿ ಕೊನೆಗೊಂಡಿತು.

ಸಮಾಚಾರ ಸಣ್ಣದಲ್ಲ

ಬಡ ಮಕ್ಕಳಿಗೆ ಶ್ರವಣ ಸಾಧನ ವಿತರಣೆ

ಶಿವಮೊಗ್ಗ: ಆರ್ಥಿಕವಾಗಿ ಹಿಂದುಳಿದ ಬಡ ಮಕ್ಕಳಿಗೆ ರೆಡ್ ಕ್ರಾಸ್ ವತಿಯಿಂದ 25 ಶ್ರಾವಣ ಸಾಧನಗಳನ್ನು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಮಧು ಬಂಗಾರಪ್ಪನವರ ಹಸ್ತದಿಂದ ವಿತರಿಸಲಾಯಿತು. ಇದೇ ಸಂದರ್ಭದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಮಧು ಬಂಗಾರಪ್ಪನವರು, ರೆಡ್ ಕ್ರಾಸ್ ಸಂಸ್ಥೆಯ ಸೇವೆಗಳನ್ನ ಗುರುತಿಸಿ ಅಭಿನಂದಿಸಿದರು. ಸಮಾಜದಲ್ಲಿ ನೂರಾರು ವರ್ಷಗಳಿಂದ ಮಾನವೀಯ ಸೇವೆಯನ್ನು ಮಾಡುತ್ತಿರುವ ರೆಡ್ ಕ್ರಾಸ್ ಸಂಸ್ಥೆ ಇಂದಿಗೂ ತನ್ನ ವಿಶೇಷ ಸೇವೆಗಳಿಂದ ಗುರುತಿಸಿಕೊಂಡಿದೆ ಎಂದು ನುಡಿದರು. ಸಮಾರಂಭದಲ್ಲಿ ಶಿವಮೊಗ್ಗ ನಗರ ಶಾಸಕ ಎಸ್.ಎನ್.ಚನ್ನಬಸಪ್ಪ, ರೆಡ್ ರೆಡ್ ಕ್ರಾಸ್ ಮಾಜಿ ಸಭಾಪತಿ ಅಶ್ವತ್ ನಾರಾಯಣ್ ಶೆಟ್ಟಿ, ವಿಧಾನ ಪರಿಷತ್ ಸದಸ್ಯ ಡಾ. ಧನಂಜಯ ಸರ್ಜಿ, ಬಲ್ಕಿಶ್ ಬಾನು, ಭಾರತಿ ಚಂದ್ರಶೇಖರ್, ಭಾರತೀ ಶೆಟ್ಟಿ, ಜಿಲ್ಲಾಧಿಕಾರಿ ಗುರುದತ್ತ ಹೆಗಡೆ, ರೆಡ್ ಕ್ರಾಸ್ ನಿರ್ದೇಶಕ ನವೀನ್ ಹಾಗೂ ಎಸ್ ಪಿ ಮಿಥುನ್ ಕುಮಾರ್ ಹಾಗೂ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಮಂಜುನಾಥ್‌ಗೆ ಯುವರತ್ನ ಪ್ರಶಸ್ತಿ

ಶಿವಮೊಗ್ಗ: ಕಟೀಲ್ ಅಶೋಕ್ ಪೈ ಸ್ಮಾರಕ ಕಾಲೇಜಿನ ಸಮಾಜಕಾರ್ಯ ವಿಭಾಗದ ಮುಖ್ಯಸ್ಥರು ಹಾಗೂ ಶಿವಮೊಗ್ಗದ ನಮ್ಮ ಹಳ್ಳಿ ಥಿಯೇಟರ್ (ರಿ) ಕಲಾ ತಂಡದ ರಂಗಕರ್ಮಿ ಮಂಜುನಾಥ್ ಸ್ವಾಮಿಯವರಿಗೆ, ರಂಗಭೂಮಿ ಮತ್ತು ಶಿಕ್ಷಣ ಕ್ಷೇತ್ರದಲ್ಲಿ ಸಲ್ಲಿಸಿರುವ ಸೇವೆಗಾಗಿ ಬೆಂಗಳೂರಿನ ಕರ್ನಾಟಕ ಪ್ರೆಸ್ ಕ್ಲಬ್ ವತಿಯಿಂದ ರವೀಂದ್ರ ಕಲಾಕ್ಷೇತ್ರದ ನಯನ ಸಭಾಂಗಣದಲ್ಲಿ ಆಯೋಜಿಸಿದ್ದ ಪ್ರಶಸ್ತಿ ಪ್ರಧಾನ ಸಮಾರಂಭದಲ್ಲಿ ಖ್ಯಾತ ಚಲನಚಿತ್ರ ನಟಿ ಶೃತಿ ಹಾಗೂ ಖ್ಯಾತ ವೈದ್ಯೆಯಾದ ಡಾ.ಪದ್ಮಿನಿ ಪ್ರಸಾದ್ ರವರು 2024 ನೇ ಸಾಲಿನ ಕರ್ನಾಟಕ ಯುವರತ್ನ ಪ್ರಶಸ್ತಿಯನ್ನು ನೀಡಿ ಗೌರವಿಸಿದರು.

ಕಟ್ಟಡ ಕಾರ್ಮಿಕರು ಶ್ರಮ ಜೀವಿಗಳು

ಶಿಕಾರಿಪುರ: ಕಟ್ಟಡ ಕಾರ್ಮಿಕರು ಶ್ರಮ ಜೀವಿಗಳಾಗಿದ್ದು, ನಿತ್ಯ ಬೆವರು ಸುರಿಸಿ ಶ್ರಮಿಸುವ ಕಟ್ಟಡ ಕಾರ್ಮಿಕರಿಗೆ ವಿವಿಧ ಸೌಲಭ್ಯ ಹೊಂದಿರುವ ಕಾರ್ಡಗಳನ್ನು ನೀಡುವ ಸರಕಾರದ ಕಾರ್ಮಿಕರ ಕಾರ್ಡ ಅನರ್ಹರ ಪಾಲಾಗಿ ದುರುಪಯೋಗ ಹೆಚ್ಚಾಗುತ್ತಿದ್ದು ಈ ಕೂಡಲೇ ಇಲಾಖೆ ಮುಂಜಾಗ್ರತಾ ಕ್ರಮ ಕೈಗೊಳ್ಳಬೇಕು ಎಂದು ಇಲ್ಲಿನ ಟಿ.ಎ.ಪಿ.ಎಂ.ಎಸ್ ಅಧ್ಯಕ್ಷ ಸುಧೀರ್ ಮಾರವಳ್ಳಿ ತಿಳಿಸಿದರು. ಪಟ್ಟಣದ ಅಂಬೇಡ್ಕರ್ ವೃತ್ತದಲ್ಲಿ ಮಲೆನಾಡು ಕಟ್ಟಡ ಕಾರ್ಮಿಕರ ಸಂಘದ ವತಿಯಿಂದ ನಡೆದ ಕಾರ್ಮಿಕರ ದಿನಾಚರಣೆಯಲ್ಲಿ ಅವರು ಭಾಗವಹಿಸಿ ಮಾತನಾಡಿದರು. ಸರಕಾರವು ಕಾರ್ಮಿಕರ ಕಲ್ಯಾಣ ನಿಧಿಯ ಮೂಲಕ ಅನೇಕ ಉಪಯುಕ್ತ ಸೌಲಭ್ಯ ಗಳನ್ನು ಕಾರ್ಮಿಕರಿಗೆ ನೀಡುತ್ತಿದ್ದು ಜತೆಗೆ ನಕಲಿ ಕಾರ್ಮಿಕರ ಪಾಲಾಗುತ್ತಿದ್ದು ಇದನ್ನು ತಡೆಗಟ್ಟುವಲ್ಲಿ ಅಧಿಕಾರಿಗಳು ಶ್ರಮವಹಿಸಬೇಕೆಂದರು.ಕಾರ್ಯಕ್ರಮದಲ್ಲಿ ಜೆ.ಸಿ.ಐ. ಸಂಸ್ಥೆಯ ಅಧ್ಯಕ್ಷ ಪ್ರಶಾಂತ್ ಪ್ರತಿಬಿಂಬ, ಮೇಸ್ತ್ರಿರವಿ ಕುಮಾರ್,ಚಂದ್ರು,,ಗುಡದಪ್ಪ ಸೇರಿದಂತೆ ಸಂಘದ ಪದಾಧಿಕಾರಿಗಳು ಹಾಗೂ ಸದಸ್ಯರು ಹಾಜರಿದ್ದರು. ಇದೇ ಸಂದರ್ಭದಲ್ಲಿ ಸಂಘದ ಹಿರಿಯ ಕಾರ್ಮಿಕ ಚೆನ್ನಪ್ಪರನ್ನು ಸಂಘದ ವತಿಯಿಂದ ಗೌರವಿಸಲಾಯಿತು.

ಮೃತರಾದ ಕುಟುಂಬಕ್ಕೆ ಒಂದು ಕೋಟಿ ಕೊಡಿ

ಶಿವಮೊಗ್ಗ: ಕಾಶ್ಮೀರದಲ್ಲಿ ನಡೆದ ಭಯೋತ್ಪಾದನೆ ಘಟನೆಯಲ್ಲಿ ಮೃತರಾದ ಕುಟುಂಬಗಳಿಗೆ ತಲಾ ಒಂದು ಕೋಟಿ ನೀಡಬೇಕು ಎಂದು ಪೀಪಲ್ ಲಾರ್ಸ್ ಗಿಲ್ಡ್ ಪ್ರಧಾನಮಂತ್ರಿಗಳಿಗೆ ಮನವಿ ಮಾಡಿದೆ. ಕಾಶ್ಮೀರದ ಪಹಲ್‌ಗಾಮ್‌ನಲ್ಲಿ ಭಯೋತ್ಪಾದಕರ ಗುಂಡಿಗೆ ಸುಮಾರು 28 ಜನರು ಮೃತರಾಗಿದ್ದಾರೆ. ಈ ಕೃತ್ಯದಲ್ಲಿ ಭಾಗಿಯಾದವರನ್ನು ಕೇಂದ್ರ ಸರಕಾರ ಆದಷ್ಟು ಬೇಗ ಹುಡುಕಿ ಶಿಕ್ಷೆ ನೀಡಬೇಕು. ಪದೇ ಪದೇ ಇಂತ ಘಟನೆಗಳು ಮರುಕಳಿಸಬಾರದು ಎಂದು ಮನವಿಯಲ್ಲಿ ತಿಳಿಸಲಾಗಿದೆ. ಮೃತರ ಕುಟುಂಬಗಳಿಗೆ ಪರಿಹಾರವಾಗಿ 1 ಕೋಟಿ ರು. ನೀಡುವುದರ ಜತೆಗೆ ಅವರ ಮಕ್ಕಳ ವಿಧ್ಯಾಬ್ಯಾಸದ ಜವಾಬ್ದಾರಿಯನ್ನು ಸರಕಾರಗಳೇ ಹೊರಬೇಕು. ಮೃತಪಟ್ಟ ವ್ಯಕ್ತಿಯ ಕುಟುಂಬಗಳು ಇನ್ನೂ ಸಂಕಟಗಳಿಂದ ಹೊರ ಬಂದಿಲ್ಲ. ಕೆಲವು ರಾಜ್ಯಗಳು ತಮಗೆ ಇಷ್ಟಬಂದುಷ್ಟು ಪರಿಹಾರ ಘೋಷಿಸಿವೆ ನಿಜ. ಆದರೆ ಆ ಪರಿಹಾರ ಅತ್ಯಂತ ಕಡಿಮೆಯಾಗಿದೆ. ಕೇಂದ್ರ ಸರ್ಕಾರ ಇದನ್ನು ಗಮನದಲ್ಲಿಟ್ಟುಕೊಂಡು ಮೃತಪಟ್ಟ ಕುಟುಂಬಗಳಿಗೆ ಕೂಡಲೇ ಪರಿಹಾರ ಬಿಡುಗಡೆ ಮಾಡಬೇಕು ಎಂದು ಮನವಿಯಲ್ಲಿ ಆಗ್ರಹಿಸಲಾಗಿದೆ. ಈ ಸಂದರ್ಭದಲ್ಲಿ ಲಾರ್ಸ್ ಗಿಲ್ಡ್ ಅಧ್ಯಕ್ಷ ಕೆ.ಪಿ.ಶ್ರೀಪಾಲ್, ವಿಜಯ್ ಕುಮಾರ್, ಅನಿಸ್ ಪಾಷ, ಶೇರಾಜ್ ಸಿದ್ದಿಕ್ ಸೇರಿದಂತೆ ಮುಂತಾದವರಿದ್ದರು.

ವಿರಾಮ
ಪ್ರತಿ ಭಾನುವಾರ

{ವಿ. ಸೋಮಣ್ಣ } ಸಚಿವ

ದೇಶದಲ್ಲಿ ಜಾತಿ ಗಣತಿ ಮಾಡುವ ಅಧಿಕಾರ ಇರುವುದು ಕೇಂದ್ರ ಸರಕಾರಕ್ಕೆ ಮಾತ್ರ. ಹಾಗಾಗಿ ರಾಜ್ಯ ಸರಕಾರದ ಜಾತಿ ಗಣತಿಗೆ ಬೆಲೆ ಇಲ್ಲ. ರಾಜ್ಯ ಸರಕಾರ ನಡೆಸಿರುವ ಜಾತಿ ಗಣತಿಗೆ ಯಾವುದೇ ಕಿಮ್ಮತ್ತಿಲ್ಲ. ಹಾಗಾಗಿ ಈ ಸರಕಾರದ ಜಾತಿ ಗಣತಿ ಹೊರಟು ಹೋಗಿದೆ. ದೇಶದ ಜಾತಿ ಗಣತಿಯನ್ನು ಕೇಂದ್ರ ಸರಕಾರವೇ ಮಾಡಲಿದೆ.

ಯಥಾಸ್ಥಿತಿ ಬೈಲಾ ಮಂಡಿಸಲಿ | ಕಸಾಪ ಆಜೀವ ಸದಸ್ಯರ ಆಗ್ರಹ

ಬೈಲಾ ತಿದ್ದುಪಡಿ ಒಪ್ಪಿತ ಇರಲಿ

ಶಿವಮೊಗ್ಗ: ಕೇಂದ್ರ ಕನ್ನಡ ಸಾಹಿತ್ಯ ಪರಿಷತ್‌ನಲ್ಲಿ ಆಗಿರುವ ಆರ್ಥಿಕ ಚಟುವಟಿಕೆಗಳ ಬಗ್ಗೆ ಸರಕಾರ ಕೂಡಲೇ ಉನ್ನತ ಮಟ್ಟದ ತನಿಖೆ ನಡೆಸಬೇಕು. ಸಾಹಿತ್ಯ ಪರಿಷತ್‌ಗೆ ಆಡಳಿತಾಧಿಕಾರಿಯನ್ನು ನೇಮಿಸಬೇಕು ಎಂದು ಶಿವಮೊಗ್ಗದ ಕನ್ನಡ ಸಾಹಿತ್ಯ ಪರಿಷತ್‌ನ ಆಜೀವ ಸದಸ್ಯರು ಆಗ್ರಹಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಪತ್ರಕರ್ತ, ರಂಗಕರ್ಮಿ ಹೊನ್ನಾಳಿ ಚಂದ್ರಶೇಖರ್ ಮಾತನಾಡಿ, ಕನ್ನಡ ಸಾಹಿತ್ಯ ಪರಿಷತ್ ಸರ್ವಸದಸ್ಯರ ವಿಶೇಷ ಸಭೆ ಜೂ.22ರಂದು ನಡೆಯಲಿದೆ. ಈ ಸಭೆಯಲ್ಲಿ ಬೈಲಾ ತಿದ್ದುಪಡಿ ಬಗ್ಗೆ ಚರ್ಚೆಯಾಗಲಿದೆ. ಅದನ್ನು ಈಗಿರುವ ಯಥಾ ಸ್ಥಿತಿಯಲ್ಲಿ ಮಂಡಿಸದೇ ಎಲ್ಲರೂ ಒಪ್ಪುವ ಸ್ಥಿತಿಯಲ್ಲಿ ಮಂಡಿಸಬೇಕು ಎಂದರು.

ಕನ್ನಡ ಸಾಹಿತ್ಯ ಪರಿಷತ್‌ನ ರಾಜ್ಯಾಧ್ಯಕ್ಷರು ಸರ್ವಾಧಿಕಾರಿಯಾಗಿ ವರ್ತಿಸುತ್ತಿದ್ದಾರೆ. ಬೈಲಾ ತಿದ್ದುಪಡಿಯಬಗ್ಗೆ ಅವೈಜ್ಞಾನಿಕವಾಗಿ ಮಾತನಾಡುತ್ತಿದ್ದಾರೆ. ನಮ್ಮ ಸಂವಿಧಾನದಲ್ಲಿ ಆನಂದ ಸಿದ್ಧಾಂತ ಅನ್ವಯವಾಗುವುದು. ರಾಷ್ಟ್ರಪತಿ ಹಾಗೂ ರಾಜ್ಯಪಾಲರಿಗೆ ಮಾತ್ರ, ಆದರೆ ಈ ಸಿದ್ಧಾಂತ ತಮಗೂ ಅನ್ವಯವಾಗುತ್ತೆ ಎಂದು ಕೊಂಡಿದ್ದಾರೆ. ಈ ಅಧಿಕಾರವನ್ನು ರಾಜ್ಯಾಧ್ಯಕ್ಷರಿಗೆ ನೀಡಬಾರದು ಎಂದರು.

ನಾಡೋಜ ಪದ ನಿಲ್ಲಿಸಿ:

ಕೆ.ಪಿ.ಶ್ರೀಪಾಲ್ ಮಾತನಾಡಿ, ಗೌರವ ಪದವಿಗಳನ್ನು ರಾಜ್ಯ ಸರಕಾರ ಬಳಸಿಕೊಳ್ಳಬಾರದು ಎಂದರೂ, ರಾಜ್ಯಾಧ್ಯಕ್ಷರು ನಾಡೋಜ ಎಂಬ ಪದವನ್ನು ಬಳಸುತ್ತಿದ್ದಾರೆ. ಕೂಡಲೇ ಅದನ್ನು ನಿಲ್ಲಿಸಬೇಕು ಮತ್ತು ಈ ಹಿಂದೆ ರಾಜ್ಯಾಧ್ಯಕ್ಷರು ದೂರದರ್ಶನದಲ್ಲಿ ಕೆಲಸ ಮಾಡುತ್ತಿದ್ದರು. ಅಲ್ಲಿ ಅನೇಕ ಭ್ರಷ್ಟಚಾರ ನಡೆದಿದೆ ಎಂದು ತಿಳಿದುಬಂದಿದೆ. ಅವುಗಳನ್ನು ತನಿಖೆ ಮಾಡಬೇಕು. ಮತ್ತು ಸಾಹಿತ್ಯ ಕಾರ್ಯಕ್ರಮಗಳಿಗೆ ಕೇಂದ್ರ ಪರಿಷತ್ ಆದ್ಯತೆ ನೀಡಬೇಕು ಎಂದರು.

ಪತ್ರಿಕಾಗೋಷ್ಠಿಯಲ್ಲಿ ಶಿವಮೊಗ್ಗದ ಕನ್ನಡ ಸಾಹಿತ್ಯ ಪರಿಷತ್‌ನ ಆಜೀವ ಸದಸ್ಯರು ಮಾತನಾಡಿದರು.

ಲೇಖಕ ಬಿ.ಚಂದ್ರೇಗೌಡ ಮಾತನಾಡಿ, ಮಹೇಶ್ ಜೋಷಿ ಕನ್ನಡ ಸಾಹಿತ್ಯ ಪರಿಷತ್‌ಗೆ ಬಂದ ಮೇಲೆ ಸಮಸ್ಯೆಗಳು ಹೆಚ್ಚಿವೆ. ಮಂಡ್ಯದಲ್ಲಿ ನಡೆದ ಸಾಹಿತ್ಯ ಸಮ್ಮೇಳನದ ಖರ್ಚು ವೆಚ್ಚವನ್ನೇ ಇವರು ಕೊಟ್ಟಿಲ್ಲ. ಅಲ್ಲಿ ಬಿಡುಗಡೆಯಾಗಿದ್ದು 33 ಕೋಟಿ, ವಿವಿಧೆಡೆಯಿಂದ ಬಂದ ಹಣ 2.5 ಕೋಟಿ ಆ ಲೆಕ್ಕದ ಬಗ್ಗೆ ಮಾತೇ ಇಲ್ಲ. ಸರ್ವಾಧಿಕಾರಿಯಂತೆ ಅವರು ವರ್ತಿಸುತ್ತಿದ್ದಾರೆ. ತಮ್ಮನ್ನು ವಿರೋಧಿಸಿದ ಜಿಲ್ಲಾ ಅಧ್ಯಕ್ಷರುಗಳಿಗೆ ನೋಟೀಸ್ ಕೊಡುವ ಮೂಲಕ ಬೆದರಿಕೆ ಹಾಕುತ್ತಿದ್ದಾರೆ ಎಂದು ದೂರಿದರು.

ಪತ್ರಿಕಾಗೋಷ್ಠಿಯಲ್ಲಿ ಪ್ರಮುಖರಾದ ಸಂಗಮೇಶ್, ಪ್ರಕಾಶ್, ಕೃಷ್ಣಮೂರ್ತಿ, ಮಂಜಪ್ಪ, ಗಣೇಶ್, ಪುಟ್ಟಯ್ಯ, ಶೇಖರ್ ಗೌಳೇರ್ ಇದ್ದರು.

ಅಪಾಯದ ಸಂಕೇತ

ಹೊಸ ಬೈಲಾ ಜಾರಿಗೆ ಬಂದರೆ ಅಧಿಕಾರವೆಲ್ಲ ಕೇಂದ್ರಿಕೃತವಾಗುತ್ತದೆ. ಅಧ್ಯಕ್ಷರದೇ ಕಾರುಬಾರು ಆಗುತ್ತದೆ. ಸರ್ವಾಧಿಕಾರಕ್ಕೆ ಒತ್ತುಕೊಟ್ಟಾಗುತ್ತದೆ. ಜಿಲ್ಲಾ ಕೇಂದ್ರಗಳಿಗೆ, ಹೋಬಳಿ ಕೇಂದ್ರಗಳಿಗೆ ಯಾವುದೇ ಅಧಿಕಾರ ಇರುವುದಿಲ್ಲ, ಸ್ಥಳೀಯ ನೇಮಕ ಅಧ್ಯಕ್ಷರೇ ಮಾಡಬೇಕಾಗುತ್ತದೆ. ಘಟಕಗಳು ಸ್ವಾತಂತ್ರ್ಯ ಕಳೆದುಕೊಳ್ಳುವ ಸಾಧ್ಯತೆಯಿದೆ ಇದು ಅಪಾಯದ ಸಂಕೇತ ಎಂದು ಹೊನ್ನಾಳಿ ಚಂದ್ರಶೇಖರ್ ಎಚ್ಚರಿಸಿದ್ದಾರೆ.

ಹಮಾಲಿ ಕಾರ್ಮಿಕರ ಸಂಘದ ಹಬ್ಬದ ದಿನ

ಶಿವಮೊಗ್ಗ: ಕಾರ್ಮಿಕರಿಗೆ ದುಡಿಮೆಗೆ ತಕ್ಕ ಪ್ರತಿಫಲ ಸಿಗುತ್ತಿರಲಿಲ್ಲ. ಶ್ರಮಕ್ಕೆ ತಕ್ಕ ಪ್ರತಿಫಲ ನೀಡಬೇಕೆಂಬ ಹೋರಾಟದಿಂದಾಗಿ ಕಾರ್ಮಿಕ ದಿನಾಚರಣೆ ಪ್ರಾರಂಭವಾಯಿತು ಎಂದು ಎಪಿಎಂಸಿ ಹಮಾಲಿ ಕಾರ್ಮಿಕರ ಸಂಘದ ಗೌರವಾಧ್ಯಕ್ಷ ಕೆ.ಎಸ್.ಶಿವಪ್ಪ ಹೇಳಿದ್ದಾರೆ. ನಗರದ ಎಪಿಎಂಸಿ ಆವರಣದಲ್ಲಿ ಎಪಿಎಂಸಿ ಹಮಾಲಿ ಕಾರ್ಮಿಕರ ಸಂಘದಿಂದ ಹಮ್ಮಿಕೊಂಡಿದ್ದ ಮೇ ದಿನಾಚರಣೆ ಸಮಾರಂಭದಲ್ಲಿ ಮಾತನಾಡಿದರು.

ಅಮೇರಿಕದಲ್ಲಿ ಮೊದಲು ದುಡಿಮೆಗೆ ತಕ್ಕ ಪ್ರತಿಫಲ ನೀಡಬೇಕೆಂಬ ಹೋರಾಟ ಪ್ರಾರಂಭವಾಗಿ ಬಳಿಕ ವಿಶ್ವಸಂಸ್ಥೆಯಿಂದ ಕಾರ್ಮಿಕ ದಿನಾಚರಣೆಯಾಗಿ ಮೇ 1ರಂದು ನಿಗದಿಯಾಯಿತು. ಅಸಂಘಟಿಕತ ಕಾರ್ಮಿಕರಿಗೆ ಇವತ್ತಿಗೂ ಜೀವನದ ಭದ್ರತೆ ಇಲ್ಲ. ಜೀವ ಗಟ್ಟಿ ಇರುವವರೆಗೆ ಮಾತ್ರ ಅವರಿಗೆ ಕೂಲಿ ಸಿಗುತ್ತದೆ. ಕಾರ್ಮಿಕ ಕಾನೂನುಗಳು ಎಲ್ಲರಿಗೂ ಅನ್ವಯವಾಗದೇ ಇರುವುದರಿಂದ ಹಮಾಲಿಗಳು ಇದರಿಂದ ವಂಚಿತರಾಗಿದ್ದಾರೆ. ಸರಕಾರ ನಮಗೂ ನಿವೃತ್ತಿ ವೇತನ ನೀಡಬೇಕು ಎಂಬುದು ಬಹು ವರ್ಷದ ಬೇಡಿಕೆಯಾಗಿದೆ. ಹಾಗಾಗಿ ಹಮಾಲಿ ಕಾರ್ಮಿಕರು ಸಂಘಟಿತರಾಗಿ ತಮ್ಮ ಬೇಡಿಕೆಗಳ ಈಡೇರಿಕೆಗೆ ಸರಕಾರವನ್ನು ಒತ್ತಾಯಿಸಬೇಕು. ಇವತ್ತಿನ ದಿನ ಹಮಾಲಿ ಕಾರ್ಮಿಕರ ಸಂಘದ ಹಬ್ಬದ ದಿನವಾಗಿದೆ ಎಂದರು.

ಈ ಸಂದರ್ಭದಲ್ಲಿ ಸಂಘದ ಜಿಲ್ಲಾಧ್ಯಕ್ಷರಾದ ಕೆ.ಮಣಿ, ಉಪಾಧ್ಯಕ್ಷರಾದ ಶೇಖ್ ಇಮ್ರಾನ್, ಕಾರ್ಯದರ್ಶಿ ಹೆಚ್. ಶಿವಾನಂದಪ್ಪ, ಪ್ರಮುಖರಾದ ಜಾವೀದ್, ಇಫ್ರಾನ್, ಯಶ್ವಂತ್, ಸಲೀಂ, ಎ.ಪಳನಿ, ಶರವಣ, ಸಂತೋಷ್‌ಕುಮಾರ್, ವೆಂಕಟರಮಣ, ಎಂ.ಕೆ. ಬುಡೇನ್ ಖಾನ್ ಮತ್ತಿತರರು ಇದ್ದರು.

ನಗರದ ಎಪಿಎಂಸಿ ಆವರಣದಲ್ಲಿ ಎಪಿಎಂಸಿ ಹಮಾಲಿ ಕಾರ್ಮಿಕರ ಸಂಘದಿಂದ ಹಮ್ಮಿಕೊಂಡಿದ್ದ ಮೇ1 ದಿನಾಚರಣೆ ಸಮಾರಂಭದಲ್ಲಿ ಘೋಷಣೆ ಕೂಗಿದರು.

ಕಾರ್ಮಿಕರನ್ನು ಗೌರವಿಸುವ ದಿನ

ಭದ್ರಾವತಿ: ವಿಶ್ವದಾದ್ಯಂತ ಕಾರ್ಮಿಕ ದಿನ, ಪ್ರತಿ ವರ್ಷ ಮೇ 1ರಂದು ಕಾರ್ಮಿಕರ ಹಕ್ಕುಗಳು ಮತ್ತು ಸಾಧನೆಗಳನ್ನು ಗೌರವಿಸುವ ದಿನವಾಗಿದೆ ಎಂದು ದಯಾಸಾಗರ್ ಟ್ರಸ್ಟ್ ಅಧ್ಯಕ್ಷ ಮೋಸಸ್ ಹೇಳಿದರು.

ಗುರುವಾರ ನಗರದ ನ್ಯೂಟೌನ್ ತಮಿಳು ಶಾಲೆ ಆವರಣದಲ್ಲಿ ಟ್ರಸ್ಟ್ ವತಿಯಿಂದ ಹಮ್ಮಿಕೊಂಡ, ಕಾರ್ಮಿಕರ ದಿನಾಚರಣೆಯ ಅಂಗವಾಗಿ ವಿವಿಧ ಭಾಗಗಳಲ್ಲಿ ದುಡಿಯುತ್ತಿರುವ ಕಾರ್ಮಿಕರನ್ನು ಗುರುತಿಸಿ ಸನ್ಮಾನಿಸಿ ಮಾತನಾಡಿದರು.

ಅಂಬ್ಯುಲೆನ್ಸ್ ಚಾಲಕರು, ಶವಗಳಿಗೆ ಗುಂಡಿ ತೋಡುವ ಮತ್ತಿತರೆ ಭಾಗಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಕಾರ್ಮಿಕರ ಪಾಡು ಹೇಳತೀರದು. ಇಂತಹ ಕಾರ್ಮಿಕರಿಗೆ ಗೌರವಿಸುವುದು ಕಾರ್ಮಿಕರ ದಿನಾಚರಣೆಯ ಅರ್ಥ ಕಲ್ಪಿಸುತ್ತದೆ ಎಂದರು.

ನಗರಸಭಾ ಮಾಜಿ ಸದಸ್ಯ ಫ್ರಾನ್ಸಿಸ್ ಹಾಗೂ ಸಂಯುಕ್ತ ಕ್ರೈಸ್ತ ಸಂಘದ ಅಧ್ಯಕ್ಷ ಸೆಲ್ವರಾಜ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

ಮುಖ್ಯ ಅತಿಥಿಗಳು ನಗರಸಭಾ ಸದಸ್ಯ ಐ.ವಿ. ಸಂತೋಷ್,ದಸಂಸ ಮುಖಂಡ ದಾಸ್ ಸೇರಿದಂತೆ ಟ್ರೈಸ್ಟ್ ಪದಾಧಿಕಾರಿಗಳು, ಸದಸ್ಯರು ಭಾಗವಹಿಸಿದ್ದರು. ಇದೆ ಸಂದರ್ಭದಲ್ಲಿ ವಿಐಎಸ್‌ಎಲ್ ಆಸ್ಪತ್ರೆ ಅಂಬ್ಯುಲೆನ್ಸ್ ವಾಹನ ಚಾಲಕ, ಸಾರ್ವಜನಿಕ ಆಸ್ಪತ್ರೆಯ ಬಾಬು, ಮುಕ್ತಿ ವಾಹನ ಚಾಲಕ ಮಂಜು ಹಾಗೂ ಪ್ರತಾಪ್ ರವರನ್ನು ಸನ್ಮಾನಿಸಿ ಗೌರವಿಸಲಾಯಿತು.

ನಗರದ ನ್ಯೂಟೌನ್ ತಮಿಳು ಶಾಲೆ ಆವರಣದಲ್ಲಿ ಟ್ರಸ್ಟ್ ವತಿಯಿಂದ ಹಮ್ಮಿಕೊಂಡ ಕಾರ್ಮಿಕರ ದಿನಾಚರಣೆಯ ಕಾರ್ಯಕ್ರಮದಲ್ಲಿ ಅಂಬ್ಯುಲೆನ್ಸ್ ವಾಹನ ಚಾಲಕನನ್ನು ಗೌರವಿಸಿ ಸನ್ಮಾನಿಸಿದರು.

ಅಂಬ್ಯುಲೆನ್ಸ್ ಚಾಲಕರಿಗೆ ಒಂದು ನಿರ್ದಿಷ್ಟ ಸಮಯ ಇರುವುದಿಲ್ಲ. ಕ್ಲಿಷ್ಟ ಪರಿಸ್ಥಿತಿಯಲ್ಲಿ ರೋಗಿಗಳ ಹಾಗೂ ಕುಟುಂಬಸ್ಥರ ಪಾಲಿಗೆ ಚಾಲಕರು ದೈವ ಸ್ವರೂಪಿಗಳಾಗಿರುತ್ತಾರೆ. ಇಂತಹ ಕ್ಲಿಷ್ಟ ಸೇವೆಯ ಚಾಲಕರನ್ನು ಕಾರ್ಮಿಕರ ದಿನಾಚರಣೆಯ ಸಂದರ್ಭದಲ್ಲಿ ಟ್ರಸ್ಟ್ ಗುರುತಿಸಿ ಸನ್ಮಾನ ಮಾಡುತ್ತಿರುವುದು ಶ್ಲಾಘನೀಯ.

-ಪ್ರಸಾದ್,ಸಮಾಜ ಸೇವಕ

ಕುಂಚಿಟಿಗರ ಮರು ಜನಗಣತಿಗೆ ಆಗ್ರಹ

ಶಿವಮೊಗ್ಗ: ಜನಗಣತಿ ವರದಿಯಲ್ಲಿ ಕುಂಚಿಟಿಗರ ಸಂಖ್ಯೆ ತಪ್ಪಾಗಿದ್ದು, ಮತ್ತೊಮ್ಮೆ ಜನಗಣತಿ ಮಾಡಬೇಕು ಎಂದು ಅಖಿಲ ಕುಂಚಿಟಿಗರ ಮಹಾಮಂಡಲದ ಅಧ್ಯಕ್ಷ ಎಚ್.ರಂಗ ಹನುಮಯ್ಯ ಆಗ್ರಹಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ರಾಜ್ಯ ಸರಕಾರದಿಂದ ಬಿಡುಗಡೆಯಾಗಿರುವ ಕಾಂತರಾಜ್ ಜನಗಣತಿ ವರದಿಯಲ್ಲಿ ಕುಂಚಿಟಿಗ ಜನಾಂಗಕ್ಕೆ ಆಗಿರುವ ತಪ್ಪ ಜನಗಣತಿಯನ್ನು ಸರಿಪಡಿಸಿ, ಆಯೋಗದಿಂದ ಮತ್ತೆ ಜನಗಣತಿ ಮಾಡಿಸಿ ಸರಕಾರದ ಕ್ಯಾಬಿನೆಟ್‌ನಲ್ಲಿ ಅನುಮೋದನೆ ಮಾಡಬೇಕು ಎಂದರು.

ಕಾಂತರಾಜ್ ಜನಗಣತಿ ವರದಿಯಲ್ಲಿ ನಮ್ಮ ಜನಾಂಗಕ್ಕೆ ಅನ್ಯಾಯವಾಗಿರುವುದನ್ನು ಸರಿಪಡಿಸಲು ನಮಗೆ ಪ್ರತ್ಯೇಕ ನಿಗಮ ಸ್ಥಾಪಿಸುವ ಮೂಲಕ, ಮತ್ತು ಮರುಜನಗಣತಿ ಮಾಡುವ ಮೂಲಕ ನಮಗೆ ನ್ಯಾಯ ಒದಗಿಸಬೇಕು ಮತ್ತು ಜನಗಣತಿ ಮಾಡುವಾಗ ಆಧಾರ್ ಕಾರ್ಡಲಿಂಕ್‌ನ್ನು ಕಡ್ಡಾಯವಾಗಿ ಬಳಸಬೇಕು.

-ಕಾಂತರಾಜ್ ಸೋಮಿನಕೊಪ್ಪ, ಜಿಲ್ಲಾಧ್ಯಕ್ಷ

ಪತ್ರಿಕಾಗೋಷ್ಠಿಯಲ್ಲಿ ಕುಂಚಿಟಿಗರ ಮಹಾಮಂಡಲದ ಅಧ್ಯಕ್ಷ ಹೆಚ್.ರಂಗ ಹನುಮಯ್ಯ ಮಾತನಾಡಿದರು.

ಪ್ರಸ್ತುತ ರಾಜ್ಯ ಸರಕಾರ ಬಿಡುಗಡೆ ಮಾಡಿರುವ ಕಾಂತರಾಜ್ ಆಯೋಗದ ವರದಿಯಲ್ಲಿ, ಪ್ರವರ್ಗ 3ಎನಲ್ಲಿ ಬರುವ ಕುಂಚಿಟಿಗ ಒಕ್ಕಲಿಗರು ಸೇರಿದಂತೆ 2.36 ಲಕ್ಷ ಎಂದು ಹೇಳಲಾಗಿದೆ. ಆದರೆ ಇದು ಸುಳ್ಳಾಗಿದ್ದು ನಾವು ರಾಜ್ಯದಲ್ಲಿ 30 ಲಕ್ಷಕ್ಕೂ ಹೆಚ್ಚಾಗಿದ್ದೇವೆ. ಇದು ಅತ್ಯಂತ ಅವೈಜ್ಞಾನಿಕವಾಗಿದೆ ಎಂದರು.

ಜಾತಿಗಣತಿ ಸಂದರ್ಭದಲ್ಲಿ ಕುಂಚಿಟಿಗರು ಜಾತಿ ಕಾಲಂನಲ್ಲಿ ಒಕ್ಕಲಿಗ ಎಂದು ಉಪಜಾತಿ ಕಾಲಂನಲ್ಲಿ ಕುಂಚಿಟಿಗ ಎಂದು ಬರೆಸಿದ್ದಾರೆ. ಆದರೆ ಇದು ತಪ್ಪಾಗಿದೆ. 1920-21ರ ಜನಗಣತಿಯಲ್ಲಿ ಮೈಸೂರು ರಾಜರಿಗೆ ಮನವಿ ಮಾಡಿದಾಗ, ಕುಂಚಿಟಿಗ ಎಂಬುವುದು ಹಿಂದೂ ಧರ್ಮದಲ್ಲಿ ಒಂದು ಸ್ವತಂತ್ರ ಜಾತಿ ಎಂದು ಬರೆಸಿದ್ದಾರೆ. ಶಿವಮೊಗ್ಗ ಜಿಲ್ಲೆ ಒಂದರಲ್ಲಿಯೇ ನಾವು ಸುಮಾರು 50 ಸಾವಿರಕ್ಕೂ ಹೆಚ್ಚು ಜನರಿದ್ದೇವೆ. ಬೆಂಗಳೂರು ಜಿಲ್ಲೆಯಲ್ಲಿ 4 ಲಕ್ಷಕ್ಕೂ ಹೆಚ್ಚು ಜನರಿದ್ದಾರೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಮಹಾಮಂಡಲದ ಕಾರ್ಯದರ್ಶಿ ಎಂ.ರಂಗರಾಜು, ಖಜಾಂಚಿ ವೆಂಕಟೇಶ್ ಆರ್ ಸವಣೂರ, ಪ್ರಮುಖರಾದ ಎಸ್.ಎಲ್.ಗೋವಿಂದರಾಜ್, ಆಂಜನಪ್ಪ, ಲೋಹಿತ್, ರಾಘವೇಂದ್ರ, ಹಾಲೇಶ್, ಕೃಷ್ಣಮೂರ್ತಿ ಮುಂತಾದವರು ಇದ್ದರು.

ರಸ್ತೆಯಲ್ಲಿ ಮೆಕ್ಕೆಜೋಳ, ಸಂಚಾರಕ್ಕೆ ತೊಡಕು

ಸೊರಬ: ತಾಲೂಕಿನ ಉದ್ರಿ, ಗ್ರಾಮದ ತೋಗರ್ಸಿ ಮಾರ್ಗದ ರಸ್ತೆಯಲ್ಲಿ ವಾಹನಗಳ ಸಂಚಾರಕ್ಕೆ ತೊಡಕಾಗುವಂತೆ ಕಟಾವು ಮಾಡಿದ ಮೆಕ್ಕೆಜೋಳವನ್ನು ಹರವಿ ಒಣಗಿಸಲಾಗುತ್ತಿರುವ ದೃಶ್ಯ ಕಂಡು ಬರುತ್ತಿದೆ.

ಸರಕಾರದಿಂದ ಟಾರ್ಪಲ್ ಮತ್ತಿತರ ಸೌಲಭ್ಯಗಳನ್ನು ನೀಡುತ್ತಿದ್ದರೂ, ಕೆಲ ರೈತರು ರಸ್ತೆಯ ಮೇಲೆಯೇ ಮೆಕ್ಕೆ ಜೋಳವನ್ನು ಒಕ್ಕರಣೆ ಮಾಡುತ್ತಿದ್ದಾರೆ. ಇದರಿಂದ ವಾಹನಗಳ ಸಂಚಾರಕ್ಕೆ ತೊಡಕಾಗುತ್ತಿದೆ. ಇತ್ತೀಚೆಗೆ ಉದ್ರಿ ಸಮೀಪದ ಯಡಗೊಪ್ಪ ಗ್ರಾಮದಲ್ಲಿ ರಸ್ತೆ ಬದಿ ಒಣ ಹಾಕಿದ ಜೋಳವನ್ನು ತಪ್ಪಿಸಲು ಹೋಗಿ ಅಪಘಾತಗೊಂಡು ಯುವಕನೋರ್ವ ಮೃತಪಟ್ಟಿದ್ದನು. ಆದರೆ, ಉದ್ರಿ ಭಾಗದಲ್ಲಿ ಮಾತ್ರ ಕೆಲ ರೈತರು ಎಚ್ಚೆತ್ತುಕೊಂಡಂತೆ ಕಾಣುತ್ತಿಲ್ಲ. ವಾಹನಗಳ ಸಂಚಾರಕ್ಕೆ ತೀವ್ರ ಸಮಸ್ಯೆಯಾಗಿದೆ.

ರಾತ್ರಿ ವೇಳೆಯಂತೂ ಬೈಕ್ ಸವಾರರು ಜೀವ ಕೈಯಲ್ಲಿ ಹಿಡಿದು ಚಲಿಸುವಂತಾಗಿದೆ. ಜೋಳದ ಮೇಲೆ ಕಪ್ಪು ಬಣ್ಣದ ಟಾರ್ಪಲ್ ಹೊದಿಸಲಾಗಿರುತ್ತದೆ. ಇದು ವಾಹನ ಸವಾರರಿಗೆ ಗೋಚರಿಸುವುದಿಲ್ಲ. ವಾಹನ ಚಲಿಸಲು ಸ್ಥಳಾವಕಾಶವೇ ಇಲ್ಲದಂತೆ ರಸ್ತೆ ಮೇಲೆ ಮೆಕ್ಕೆ ಜೋಳ ಒಣಗಿಸಲಾಗುತ್ತಿದೆ ಎನ್ನುವುದು ವಾಹನ ಸವಾರರ ಆರೋಪ. ವಾಹನ ಸವಾರರ ಜೀವಕ್ಕೆ ಸಂಚಕಾರ ತರುತ್ತಿರುವ ರಸ್ತೆ ಬದಿ ಮೆಕ್ಕೆಜೋಳ ಒಣಗಿಸುವವರ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕು ಈ ನಿಟ್ಟಿನಲ್ಲಿ ಸಂಬಂಧಪಟ್ಟ ಇಲಾಖೆಯವರು ಎಚ್ಚೆತ್ತುಕೊಳ್ಳಬೇಕು ಎಂಬುದು ಸ್ಥಳೀಯರ ಒತ್ತಾಯವಾಗಿದೆ.

ತಾಲೂಕಿನ ಉದ್ರಿ ಗ್ರಾಮದ ತೋಗರ್ಸಿ ಮಾರ್ಗದ ರಸ್ತೆಯಲ್ಲಿ ವಾಹನಗಳ ಸಂಚಾರಕ್ಕೆ ತೊಡಕಾಗುವಂತೆ ಕಟಾವು ಮಾಡಿದ ಮೆಕ್ಕೆಜೋಳವನ್ನು ಹರವಿ ಒಣಗಿಸಲಾಗುತ್ತಿರುವ ದೃಶ್ಯ.

ಉದ್ರಿ - ತೋಗರ್ಸಿ ಮಾರ್ಗದಲ್ಲಿ ವಾಹನಗಳ ಸಂಚಾರಕ್ಕೆ ಸಮಸ್ಯೆಯಾಗುವಂತೆ ರಸ್ತೆ ಬದಿ ಜೋಳವನ್ನು ಒಣಗಿಸಲಾಗುತ್ತಿದೆ. ಈ ಬಗ್ಗೆ ರೈತರನ್ನು ಪ್ರಶ್ನಿಸಿದರೆ, ಉಡಾಫೆಯಾಗಿ ಉತ್ತರಿಸುತ್ತಾರೆ. ಸಂಬಂಧಪಟ್ಟ ಇಲಾಖೆಯವರು ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕು.

-ಬಿ.ಎಸ್. ಮಧುಕೇಶ್ವರ, ಬಿದರಗೇರಿ ಗ್ರಾಮದ ಯುವ ಮುಖಂಡ

ಸಾರ್ವಜನಿಕರಿಗೆ ರಸ್ತೆ ಮೇಲೆ ಜೋಳ ಮತ್ತು ಇತರೆ ಧಾನ್ಯಗಳನ್ನು ಒಣಗಿಸದಂತೆ ಎಚ್ಚರಿಕೆ ನೀಡಲಾಗಿದೆ. ಮಾತ್ರವಲ್ಲದೇ, ಸ್ಥಳೀಯ ಗ್ರಾಮ ಪಂಚಾಯಿತಿಗೂ ಮಾಹಿತಿ ನೀಡಲಾಗಿದೆ. ರಸ್ತೆ ಮೇಲೆ ಒಕ್ಕರಣೆ ಮಾಡುವವರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು.

-ವಿ. ಯಶೋಧರ, ಸಹಾಯಕ ಕಾರ್ಯಪಾಲಕ ಇಂಜಿನಿಯರ್

ವಚನ ಸಾಹಿತ್ಯ ಅಧ್ಯಯನ ಅಗತ್ಯ


ಶಿಕಾರಿಪುರದಲ್ಲಿ ತಾ.ಆಡಳಿತ,ಅಖಿಲ ಭಾರತ ವೀರಶೈವ ಮಹಾಸಭಾ ವತಿಯಿಂದ ನಡೆದ ಬಸವ ಜಯಂತಿ ಕಾರ್ಯಕ್ರಮದಲ್ಲಿ ತಾಲೂಕಿನ ವಿವಿಧ ಮಠಾದೀಶರು ಭಾಗವಹಿಸಿದ್ದರು.

ಶಿಕಾರಿಪುರ: ಬಸವಾದಿ ಶಿವ ಶರಣರ ಚಿಂತನೆ ಸರ್ವ ಕಾಲಘಟ್ಟಕ್ಕೂ ಪ್ರಸ್ತುತವಾಗಿದ್ದು, ವಚನ ಸಾಹಿತ್ಯದ ಬಗ್ಗೆ ಪ್ರತಿಯೊಬ್ಬ ವಿದ್ಯಾರ್ಥಿ ಉನ್ನತ ಅಧ್ಯಯನ ಕೈಗೊಂಡು ಕಾಲಘಟ್ಟದ ಇತಿಹಾಸವನ್ನು ಅರಿತು ಬದುಕಿನಲ್ಲಿ ಅಳವಡಿಸಿಕೊಳ್ಳುವ ಪ್ರಯತ್ನ ಮಾಡಬೇಕು ಎಂದು ತೊಗರ್ಸಿ ಮಳೇಹಿರೇಮಠದ ಶ್ರೀ ಮಹಾಂತದೇಶಿಕೇಂದ್ರ ಸ್ವಾಮೀಜಿ ತಿಳಿಸಿದರು.

ಪಟ್ಟಣದಲ್ಲಿ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ತಾ.ಘಟಕ,ತಾ.ಆಡಳಿತ ಮತ್ತು ವಿವಿಧ ಸಂಘ ಸಂಸ್ಥೆಗಳ ಸಂಯುಕ್ತ ಆಶ್ರಯದಲ್ಲಿ ನಡೆದ ವಿಶ್ವಗುರು ಬಸವ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಸಮಾಜದ ಎಲ್ಲೆಡೆ ಮೌಢ್ಯ,ಜಾತೀಯತೆ,ಮೇಲು ಕೀಳು ತುಂಬಿರುವ ಕಾಲದಲ್ಲಿ ಬಸವಾದಿ ಶರಣರು ನಡೆಸಿದ ಕ್ರಾಂತಿ ಎಲ್ಲ ಕಾಲಕ್ಕೂ ಮಾದರಿಯಾಗುವಂತಹದ್ದು ಎಂದರು.

ಈ ಸಂದರ್ಭದಲ್ಲಿ ವಿರಕ್ತಮಠದ ಶ್ರೀ ಚನ್ನಬಸವ ಸ್ವಾಮೀಜಿ,ಸಾಲೂರು,ಹಿರೇಮಠದ ಶ್ರೀ ಗುರುಲಿಂಗ ಜಂಗಮ ಸ್ವಾಮೀಜಿ,ಮಾತೆ ಶರಣಾಂಬಿಕೆ,ಪುರಸಭೆ ಅಧ್ಯಕ್ಷೆ ಸುನಂದಾ ಮಂಜುನಾಥ್,ಉಪ ತಹಸೀಲ್ದಾರ್ ವಿನಯ್ ಆರಾಧ್ಯ, ರವಿಕುಮಾರ್,ಕೃಷಿ ಇಲಾಖೆ ಸಹಾಯಕ ನಿರ್ದೇಶಕ ಕಿರಣ್ ಕುಮಾರ್ ಹರ್ತಿ,ಪುರಸಭೆ ವ್ಯವಸ್ಥಾಪಕ ರಾಜ್ ಕುಮಾರ್, ವೀರಶೈವ ಸಮಾಜದ ಮುಖಂಡ ಡಾ.ಬಿ.ಡಿ.ಭೂಕಾಂತ್,ನಿವೇದಿತಾ ರಾಜು,ಶೈಲಾ ಯೋಗೀಶ್,ಮಮತಾ ಬಾಲಚಂದ್ರ,ಜಗದೀಶ್ ಈಸೂರು,ಸತೀಶ್,ಸುನಿಲ್,ಹದಡಿ ಮಂಜುನಾಥ್ ,ಪ್ರವೀಣ್,ಆರ್.ಕೆ.ಶಂಭು,ವೀರನಗೌಡ ಮತ್ತಿತರರು ಉಪಸ್ಥಿತರಿದ್ದರು.

ಕಾರ್ಮಿಕರ ಏಳ್ಗೆಗಾಗಿ ಯೋಜನೆ ಜಾರಿ

ಶಿಕಾರಿಪುರ: ಸರಕಾರ ಕಟ್ಟಡ ಕಾರ್ಮಿಕರ ಏಳ್ಗೆಗಾಗಿ ಹಲವು ಯೋಜನೆಗಳನ್ನು ಜಾರಿಗೊಳಿಸಿದ್ದು,ಕಾರ್ಮಿಕರು ಸಂಘದ ಮೂಲಕ ಸಂಘಟಿತರಾಗಿ ಯೋಜನೆಗಳ ಸಂಪೂರ್ಣ ಪ್ರಯೋಜನ ಪಡೆದುಕೊಳ್ಳುವಂತೆ ಇಲ್ಲಿನ ಕಾರ್ಮಿಕ ಇಲಾಖೆ ಅಧಿಕಾರಿ ಫಕೀರಪ್ಪ ಗೋಡಿ ತಿಳಿಸಿದರು. ಪಟ್ಟಣದ ಕಟ್ಟಡ ಕಾರ್ಮಿಕರ ಕಚೇರಿಯಲ್ಲಿ ನಡೆದ ಕಾರ್ಮಿಕ ದಿನಾಚರಣೆಯನ್ನು ಉದ್ಘಾಟಿಸಿ ಅವರು ಮಾತನಾಡಿದರು. ಕಟ್ಟಡ ಕಾರ್ಮಿಕರು ಶ್ರಮಜೀವಿಗಳಾಗಿದ್ದು ನಿತ್ಯ ಬಿಸಿಲು ಮಳೆ ಎನ್ನದೆ ಶ್ರಮವಹಿಸಿ, ದುಡಿಯುವ ಮೂಲಕ ದೊಡ್ಡ ಕೊಡುಗೆಯನ್ನು ಸಲ್ಲಿಸುತ್ತಿದ್ದಾರೆ. ಕಾರ್ಮಿಕರ ಕುಟುಂಬದ ಏಳ್ಗೆಗಾಗಿ ಕೇಂದ್ರ ಹಾಗೂ ರಾಜ್ಯ ಸರಕಾರ ಹಲವು ಯೋಜನೆಗಳನ್ನು ಜಾರಿಗೊಳಿಸಿದೆ. ಸರಕಾರದ ಯೋಜನೆ ಅರ್ಹರಿಗೆ ಮಾತ್ರ ದೊರೆಯಬೇಕು ಈ ದಿಸೆಯಲ್ಲಿ ಕಾರ್ಮಿಕರು ಸಂಘದ ಮೂಲಕ ಸಂಘಟಿತರಾಗಿ ಸಂಪೂರ್ಣ ಪ್ರಯೋಜನ ಪಡೆದುಕೊಂಡು ನೆಮ್ಮದಿಯ ಬದುಕನ್ನು ರೂಪಿಸಿಕೊಳ್ಳುವಂತೆ ತಿಳಿಸಿದರು. ಈ ಸಂದರ್ಭ ಕಟ್ಟಡ ಕಾರ್ಮಿಕರ ಒಕ್ಕೂಟದ ಗೌರವಧ್ಯಕ್ಷ ಸೂರಿ ಗಿಡ್ಡಣ್ಣ,ಜಿಲ್ಲಾಧ್ಯಕ್ಷ ಸಂಜಯ್ ಕುಮಾರ್,ಜಿಲ್ಲಾ ಕಾರ್ಯಧ್ಯಕ್ಷ ಸುಂದರ್ ಬಾಬು, ಮಹದೇವಾಚಾರ್ ,ಶಶಿಕುಮಾರ್,ಲಕ್ಕಮ್ಮ,ಸತೀಶ್,ಗಿಡ್ಡಪ್ಪ,ಸೈಯದ್ ಸಲೀಂ, ಸುರೇಶ್,ಗುಡದಯ್ಯ,ನಾಗರಾಜ್ ಎಲೆಕ್ಟ್ರಿಕಲ್,ಪ್ರವೀಣ್ ಮಾಳಗಿ ಸೇರಿದಂತೆ ಸಂಘದ ಪದಾಧಿಕಾರಿಗಳು ಕಾರ್ಮಿಕರು ಈ ಸಂದರ್ಭ ಹಾಜರಿದ್ದರು.

ಸಮಾಜ ಬದಲಾವಣೆಗೆ ನಾಟಕ ಕೊಡುಗೆ

ಚಂದ್ರಗುತ್ತಿ: ಸಾಮಾಜಿಕ ನಾಟಕದ ಪರಿಕಲ್ಪನೆಗಳು ಸಮಾಜದಲ್ಲಿ ಬದಲಾವಣೆ ತರುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ ಎಂದು ತಾಪಂ ಮಾಜಿ ಅಧ್ಯಕ್ಷ ಎಚ್ ಗಣಪತಿ ಹುಲ್ತಿಕೊಪ್ಪ ಹೇಳಿದರು.

ಚಂದ್ರಗುತ್ತಿ ಸಮೀಪದ ಪುರದೂರು ಗ್ರಾಮದಲ್ಲಿ ಶ್ರೀ ಬಸವ ಜಯಂತಿ ಅಂಗವಾಗಿ ಹಮ್ಮಿಕೊಂಡಿದ್ದ ಸಾಮಾಜಿಕ ನಾಟಕದ ಸಭಾ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಚಂದ್ರಗುತ್ತಿ ಭಾಗಗಳಲ್ಲಿ ಕ್ರೀಡೆ, ನಾಟಕ, ಸಾಂಸ್ಕೃತಿಕ ಕಲೆಗಳಿಗೆ ಮಹತ್ವವಿದೆ. ಸ್ಥಳೀಯ ಕಲಾವಿದರು ಸಾಮಾಜಿಕ ನಾಟಕವನ್ನು ಏರ್ಪಡಿಸಿ ಕಲಾಭಿಮಾನಿಗಳಿಗೆ ಮನರಂಜಿಸುತ್ತ ನಾಟಕ ಪರಂಪರೆಯನ್ನು ಪರಿಚಯಿಸುತ್ತಿರುವುದು ಶ್ಲಾಘನೀಯ ಎಂದರು.

ಪ್ರತಿಯೊಬ್ಬರು ನಾಟಕದಲ್ಲಿ ಬರುವಂತಹ ಮಹತ್ವದ ಸನ್ನಿವೇಶಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಉತ್ತಮ ಸಮಾಜಕ್ಕೆ ಕಾರಣೀಭೂತರಾಗಬೇಕು ಎಂದರು.

ಸಭಾ ಕಾರ್ಯಕ್ರಮದಲ್ಲಿ ಗ್ರಾಮ ಪಂಚಾಯಿತಿ ಸದಸ್ಯ ಈರಪ್ಪಯ್ಯ, ತಾಪಂ ಮಾಜಿ ಸದಸ್ಯ ಸುನಿಲ್ ಗೌಡ, ಶಿವಮೊಗ್ಗ ಆರ್ಯ ಈಡಿಗರ ಸಂಘದ ಅಧ್ಯಕ್ಷ ಆರ್ ಶ್ರೀಧರ್ ಹುಲ್ತಿಕೊಪ್ಪ, ಬೆನ್ನೂರು ಗ್ರಾಪಂ ಮಾಜಿ ಅಧ್ಯಕ್ಷ ಮಾರ್ಯಪ್ಪ, ಗ್ರಾಮ ಸಮಿತಿ ಅಧ್ಯಕ್ಷ ಡಿ.ಪಿ ನಾರಾಯಣಪ್ಪ, ಪ್ರಮುಖರಾದ ಈಶ್ವರಪ್ಪ ಚನ್ನಪಟ್ಟಣ, ಹಿರಿಯಪ್ಪ ಕಲ್ಲಂಬಿ, ಸೈಯದ್ ವಕೀಲ, ಬಸವರಾಜ್ ನ್ಯಾಯಬೆಲೆ ಅಂಗಡಿ, ಸದಾನಂದ ಗೌಡ ನಾರ್ಶಿ, ಸುರೇಶ ಬಿ, ರಮೇಶ ಕೆ, ಬಸವರಾಜ್ ಬಿ, ರಾಮಪ್ಪ, ಸೇರಿದಂತೆ ಬಸವೇಶ್ವರ ಸೇವಾ ಸಮಿತಿ ಪದಾಧಿಕಾರಿಗಳು ಉಪಸ್ಥಿತರಿದ್ದರು.

ನಾರ್ಶಿ ಗ್ರಂಥಾಲಯ ಮೇಲ್ವಿಚಾರಕ ಆನಂದ್ ಜಿ ಸ್ವಾಗತಿಸಿದರು, ಮಮತಾ ನಿರೂಪಿಸಿದರು.

ಪುರದೂರು ಬಸವೇಶ್ವರ ಕಲಾ ನಾಟ್ಯ ಸಂಘದಿಂದ ಅನ್ನ ಕೊಟ್ಟ ರೈತನಿಗೆ ಸಾವು ಕೊಟ್ಟ ಸರಕಾರ ಅರ್ಥಾತ್ ರೈತ ಮೆಚ್ಚಿದ ಮಡದಿ ಎಂಬ ಸುಂದರ ಸಾಮಾಜಿಕ ನಾಟಕ ಪ್ರದರ್ಶನಗೊಂಡಿತು.

ಚಂದ್ರಗುತ್ತಿ ಸಮೀಪದ ಪುರದೂರು ಗ್ರಾಮದಲ್ಲಿ ಬಸವ ಜಯಂತಿ ಅಂಗವಾಗಿ ನಡೆದ ಸಾಮಾಜಿಕ ನಾಟಕದ ಸಭಾ ಕಾರ್ಯಕ್ರಮವನ್ನು ತಾಪಂ ಮಾಜಿ ಅಧ್ಯಕ್ಷ ಎಚ್ ಗಣಪತಿ ಹುಲ್ತಿಕೊಪ್ಪ ಉದ್ಘಾಟಿಸಿದರು.

4ರಂದು ಬೇಸಿಗೆ ಆರೋಗ್ಯ ಶಿಬಿರ

ಶಿವಮೊಗ್ಗ: ಕುವೆಂಪು ರಸ್ತೆಯಲ್ಲಿರುವ ಯೂನಿಟಿ ಮಹಿಳಾ ಮತ್ತು ಮಕ್ಕಳ ಆಸ್ಪತ್ರೆ ವತಿಯಿಂದ ಮೇ 4ರಂದು ಆಸ್ಪತ್ರೆ ಆವರಣದಲ್ಲಿ ಬೃಹತ್ ಬೇಸಿಗೆ ಆರೋಗ್ಯ ಶಿಬಿರವನ್ನು ಆಯೋಜಿಸಲಾಗಿದ್ದು, ಮುಖ್ಯವಾಗಿ ಈ ಶಿಬಿರದಲ್ಲಿ ಉಚಿತ ದಂತ ತಪಾಸಣೆಯನ್ನು ಮಾಡಲಾಗುವುದು ಎಂದು ಮಕ್ಕಳ ತಜ್ಞ ಡಾ.ಶಂಬುಲಿಂಗ ಬಂಕೊಳ್ಳಿ ಹೇಳಿದರು. ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಯುನಿಟಿ ಆಸ್ಪತ್ರೆಯೂ ಮಕ್ಕಳ ಮತ್ತು ಹಿರಿಯರ ಆರೋಗ್ಯ ದೃಷ್ಟಿಯನ್ನಿಟ್ಟುಕೊಂಡು ಉಚಿತ ಆರೋಗ್ಯ ಶಿಬಿರವನ್ನು ನಡೆಸುತ್ತ ಬಂದಿದೆ. ಈ ಬಾರಿಯೂ ಕೂಡ ಮೇ 5ರಂದು ಈ ಶಿಬಿರ ಬೆಳಗಿನಿಂದಲೇ ಆರಂಭವಾಗುತ್ತದೆ. ದಂತ ಚಿಕಿತ್ಸೆಗೆ ಸಂಬಂಧಪಟ್ಟಂತೆ ತಪಾಸಣೆ ಮತ್ತು ಹಲವು ರೀತಿಯ ಚಿಕಿತ್ಸೆಗಳನ್ನು ಮತ್ತು ಔಷಧಿಯನ್ನು ನೀಡಲಾಗುತ್ತದೆ. ದಂತ ಚಿಕಿತ್ಸೆಯಲ್ಲಿ ಶೇ.25ರಷ್ಟು ರಿಯಾಯಿತಿಯನ್ನು ನೀಡಲಾಗುವುದು ಎಂದರು. ಇತ್ತೀಚಿಗೆ ಮಕ್ಕಳಲ್ಲಿ ಹಿಮೋಗ್ಲೋಬಿನ್ ಕೊರತೆ ಉಂಟಾಗಿದ್ದು, ರಕ್ತಹೀನತೆಯಿಂದ ಮಕ್ಕಳು ಬಳಲುತ್ತಿದ್ದಾರೆ. ಇದು ಗೊತ್ತಾಗುವುದಿಲ್ಲ. ಆಗಾಗಿ ಈ ಬಗ್ಗೆ ನಾವು ಉಚಿತವಾಗಿ 18 ವರ್ಷದ ಒಳಗಿನ ಮಕ್ಕಳಿಗೆ ಉಚಿತವಾಗಿ ಹಿಮೋಗ್ಲೋಬಿನ್ ಪರೀಕ್ಷೆ ಮಾಡಿ ಸೂಕ್ತ ಚಿಕಿತ್ಸೆಯನ್ನು ನೀಡುತ್ತೇವೆ. ರಕ್ತಹೀನತೆಯಿಂದ ಮುಕ್ತಗೊಳಿಸುವುದು ನಮ್ಮ ಉದ್ದೇಶವಾಗಿದೆ ಎಂದರು. ಹೆಚ್ಚಿನ ವಿವರಗಳಿಗೆ ಮತ್ತು ನೊಂದಣಿಗಾಗಿ 8762171225, 7892611723ನ್ನು ಸಂಪರ್ಕಿಸಬಹುದಾಗಿದೆ.

ಸಮಾಚಾರ ಸಣ್ಣದಲ್ಲ

ಕೇಂದ್ರದ ಜಾತಿಗಣತಿ ನಿರ್ಧಾರ ಸ್ವಾಗತಾರ್ಹ

ದಾವಣಗೆರೆ: ಕೇಂದ್ರ ಸರಕಾರ ದೇಶದ ಜಾತಿ ಮತ್ತು ಜನಗಣತಿ ಆಗಬೇಕು ಎಂದು ಘೋಷಣೆ ಮಾಡಿರುವುದು ಸ್ವಾಗತಾರ್ಹ ಎಂದು ಮಾಜಿ ಸಚಿವ ಎಂ.ಪಿ.

ರೇಣುಕಾಚಾರ್ಯ ತಿಳಿಸಿದರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ದೇಶದಲ್ಲಿ ಸ್ವಾತಂತ್ರ್ಯ ಪೂರ್ವದಲ್ಲಿ ಜನಗಣತಿ ನಡೆದ ನಂತರ ಈವರೆಗೂ ಆಗಿರಲಿಲ್ಲ. ಪ್ರಧಾನಮಂತ್ರಿ ನರೇಂದ್ರ ಮೋದಿಯವರು ಮಹತ್ವದ ತೀರ್ಮಾನ ತೆಗೆದುಕೊಂಡಿದ್ದಾರೆ ಎಂದು ತಿಳಿಸಿದರು. ಯಾವುದೇ ವರ್ಗಕ್ಕೆ ಅನ್ಯಾಯವಾಗದ ರೀತಿ ಜಾತಿಗಣತಿಗೆ ಮುಂದಾಗಿದ್ದಾರೆ. ಜಾತಿ ಜನಗಣತಿ ಮಾಡುವ ಅಧಿಕಾರ ರಾಜ್ಯ ಸತಕಾರಕ್ಕೆ ಇಲ್ಲ. ಸಿದ್ದರಾಮಯ್ಯ ಸರಕಾರ ವೋಟ್ ಬ್ಯಾಂಕ್ ಗಾಗಿ, ಸ್ವಾರ್ಥಕ್ಕಾಗಿ ಜಾತಿ ಜನಗಣತಿ ಮಾಡಿಸಿದ್ದಾರೆ. ಕಾಂತರಾಜ್ ಅಯೋಗದ ಮೂಲ ಪ್ರತಿ ಕಾಣೆಯಾಗಿದೆ, ಮೊದಲು ಅದನ್ನು ಬಿಡುಗಡೆ ಮಾಡಬೇಕು ಎಂದು ಒತ್ತಾಯಿಸಿದರು. ಸಿದ್ದರಾಮಯ್ಯ ಮನೆಯಲ್ಲೇ ಜಯಪ್ರಕಾಶ್ ಹೆಗಡೆಯವರನ್ನು ಕೂರಿಸಿ ಯಾವುದೇ ಮನೆಗೆ ಹೋಗದೆ ಜಾತಿಗಣತಿ ವರದಿ ಸಿದ್ಧಪಡಿಸಿದ್ದಾರೆ. ಬಿಜೆಪಿ ಜಾತಿ, ಜನಗಣತಿ ವಿರೋಧಿಯಲ್ಲ, ಆದರೆ ಅದು ವೈಜ್ಞಾನಿಕವಾಗಿರಬೇಕು ಎನ್ನುತ್ತೇವೆ ಎಂದರು.

ಕೊಳಕುಮಂಡಲ ಹಾವು, ಮರಿಗಳ ರಕ್ಷಣೆ

ತುಮಕೂರು: ನಗರದ ಮಹಾಲಕ್ಷ್ಮಿ ಬಡಾವಣೆಯ ವಾಸಿ ಶಿವಣ್ಣ ಟೈರ್ಸ್ ಮಾಲೀಕರಾದ ಕಾರ್ತಿಕ್ ಅವರ



ಕಟ್ಟಡ ಕಾರ್ಮಿಕರ ಶೆಡ್‌ನಲ್ಲಿ 4 ಅಡಿ ಉದ್ದದ ಕೊಳಕುಮಂಡಲ ಹಾವು ಹಾಗೂ ಅದರ 43 ಮರಿಗಳು ಕಾಣಿಸಿಕೊಂಡಿವೆ. ಈ ವಿಷಯ ತಿಳಿದ ವನ್ಯಜೀವಿ ಜಾಗೃತಿ ಹಾಗೂ ಉರಗ ಸಂರಕ್ಷಣಾ ಸಂಸ್ಥೆಯ (ವಾರ್ಕೊ) ಉರಗ ರಕ್ಷಕರಾದ ಚಂದನ್, ಮನು ಅಗ್ನಿವಂಶಿ ಮತ್ತು ಕಾರ್ತಿಕ್ ಸಿಂಗ್ ಅವರು ಸುರಕ್ಷಿತ ವಾಗಿ ಹಾವಿನ ಮರಿಗಳನ್ನು ರಕ್ಷಿಸಿ, ಸಮೀಪದ ದೇವ ರಾಯನ ದುರ್ಗಾ ಅರಣ್ಯ ಪ್ರದೇಶಕ್ಕೆ ಬಿಟ್ಟಿದ್ದಾರೆ.

ಕಲ್ಲು ಎತ್ತಿಹಾಕಿ ವ್ಯಕ್ತಿಯ ಬರ್ಬರ ಕೊಲೆ

ರಾಯಚೂರು: ದುಷ್ಕರ್ಮಿಗಳು ವ್ಯಕ್ತಿಯೊಬ್ಬನ ಮೇಲೆ ಕಲ್ಲು ಎತ್ತಿಹಾಕಿ ಕೊಲೆ ಮಾಡಿರುವ ಘಟನೆ ನಗರದ ರೈಲ್ವೆ ನಿಲ್ದಾಣದ ಹತ್ತಿರದ ಉದ್ಯಾನವನ ಬಳಿ ನಡೆದಿದೆ. ಇಂದಿರಾನಗರದ ನಿವಾಸಿ ವೀರೇಶ (26) ಮೃತ ವ್ಯಕ್ತಿ ಎಂದು ಗುರುತಿಸಲಾಗಿದೆ. ತಲೆಯ ಮೇಲೆ ಕಲ್ಲು ಎತ್ತಿಹಾಕಿ ಬರ್ಬರವಾಗಿ ಕೊಲೆ ಮಾಡಲಾಗಿದ್ದು, ಕೃತ್ಯದ ಬಳಿಕ ದುಷ್ಕರ್ಮಿಗಳು ಸ್ಥಳದಿಂದ ಪರಾರಿಯಾಗಿದ್ದಾರೆ. ಘಟನೆ ನಿಖರವಾದ ಕಾರಣ ತಿಳಿದು ಬಂದಿಲ್ಲ. ವಿಷಯ ತಿಳಿದು ಪಶ್ಚಿಮ ಠಾಣೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಘಟನೆ ಬಗ್ಗೆ ಸಂಪೂರ್ಣ ಮಾಹಿತಿ ಇನ್ನೂ ಸಿಕ್ಕಿಲ್ಲ, ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗುತ್ತಿದೆ. ಆರೋಪಿಗಳ ಪತ್ತೆ ಹಚ್ಚುವ ಕಾರ್ಯ ಮುಂದುವರೆದಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಈ ಬಗ್ಗೆ ಪಶ್ಚಿಮ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಸ್ಥಳಕ್ಕೆ ರಾಯಚೂರು ಪೊಲೀಸ್ ವರಿಷ್ಠಾಧಿಕಾರಿ ಎಂ.ಪುಟ್ಟಮಾದಯ್ಯ ಭೇಟಿ ನೀಡಿ, ಪರಿಶೀಲನೆ ಮಾಡಿದರು.

ಕರಾವಳಿಯಲ್ಲಿ ದೇಶದ್ರೋಹಿಗಳಿದ್ದಾರೆ

ಹುಬ್ಬಳ್ಳಿ: ಸಮುದ್ರ ಮಾರ್ಗದಿಂದ ಬಂದು ದೇಶದ್ರೋಹ ಚಟುವಟಿಕೆ ಮಾಡುವ ಒಂದು ವರ್ಗವೇ ಕರಾವಳಿಯಲ್ಲಿ ಬೀಡುಬಿಟ್ಟಿದ್ದು, ಅಲ್ಲಿಯ ಜನರು ಜಾಗೃತರಾಗಿರಬೇಕು' ಎಂದು ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ಹೇಳಿದರು. ರೋಟರಿ ಕ್ಲಬ್ ಆಫ್ ಹುಬ್ಬಳ್ಳಿ

ಮಿಡ್‌ಟೌನ್ ಮತ್ತು ಇನ್ನರ್‌ವೀಲ್ ಕ್ಲಬ್ ಆಫ್ ಹುಬ್ಬಳ್ಳಿ ಮಿಡ್ಟೌನ್ ನಗರದ ಹೊಸೂರಿನ ಕೊಲ್ಲೂರ ಬಡಾವಣೆ ಮೈದಾನದಲ್ಲಿ ಹಮ್ಮಿಕೊಂಡಿರುವ ಮೂರು ದಿನಗಳ ಕರಾವಳಿ ಉತ್ಸವಕ್ಕೆ ಗುರುವಾರ ಚಾಲನೆ ನೀಡಿ ಅವರು ಮಾತನಾಡಿ, ದೇಶದ್ರೋಹ ಚಟುವಟಿಕೆ ನಡೆಸಲು ಸಮುದ್ರ ಮಾರ್ಗವನ್ನು ಬಳಸಿಕೊಳ್ಳುತ್ತಿದ್ದಾರೆ. ಎಲ್ಲಿಂದಲೋ ಬಂದು ಸ್ಥಳೀಯರನ್ನು ಮದುವೆಯಾಗಿ ದೇಶವಾಸಿಗಳ ಹಾಗೆ ಇರುತ್ತಾರೆ. ನಮ್ಮದೇ ಅನ್ನ ಉಂಡು, ಗಾಳಿ ಸೇವಿಸಿ ನಮಗೇ ದ್ರೋಹ ಎಸಗುತ್ತಾರೆ. ಅಂಥವರ ಬಗ್ಗೆ ಮಾಹಿತಿಯಿದ್ದರೆ ಸರಕಾರಕ್ಕೆ ತಿಳಿಸಬೇಕು ಎಂದು ವಿನಂತಿಸಿದರು. ಕಾಶ್ಮೀರದಲ್ಲಿ ಅಮಾಯಕರನ್ನು ಕೊಂದವರಿಗೆ ಕೇಂದ್ರ ಸರಕಾರ ಸುಮ್ಮನೆ ಬಿಡುವುದಿಲ್ಲ, ಕಠಿಣ ಕ್ರಮ ಕೈಗೊಳ್ಳಲಿದೆ' ಎಂದರು.

ವಿರಾಮ
ಪ್ರತಿ ಭಾನುವಾರ

{ ಎನ್. ಎಸ್. ಬೋಸರಾಜು } ಸಚಿವ

ಮುಂಬರುವ ಮಹಾನಗರ ಪಾಲಿಕೆ ಚುನಾವಣೆ ಹಾಗೂ 2028ಕ್ಕೆ ರಾಜ್ಯದಲ್ಲಿ ಕಾಂಗ್ರೆಸ್ ಸರಕಾರ ಮತ್ತೆ ಅಧಿಕಾರಕ್ಕೆ ಬರುವ ರೀತಿಯಲ್ಲಿ ಬೂತ್ ಮಟ್ಟದಿಂದ ಪಕ್ಷವನ್ನು ಸಂಘಟಿಸಬೇಕಿದೆ. ಈ ದಿಸೆಯಲ್ಲಿ ಕಾರ್ಯಕರ್ತರು ಹೆಚ್ಚು ಜವಾಬ್ದಾರಿಯಿಂದ ನಿರ್ವಹಿಸಬೇಕಿದೆ.

ಮುಂದಿನ ಸಂಪುಟದಲ್ಲಿ ಜಾತಿ ಗಣತಿ ಬಗ್ಗೆ ತೀರ್ಮಾನ : ಸಿಎಂ | ಕೇಂದ್ರ ಜನಗಣತಿಯಿಂದ ಆಗುವ ಪರಿಣಾಮದ ಬಗ್ಗೆಯೂ ಚರ್ಚೆ | ಜಾತಿ ಗಣತಿಗೆ ಅಧಿಕಾರವಿಲ್ಲ ಎನ್ನುವ ಬಿಜೆಪಿಗರು, ಬಿಹಾರದಲ್ಲಿ ಏಕೆ ಒಪ್ಪಿದ್ದಾರೆ

ಕಾಂತರಾಜ್ ವರದಿ; ಕೇಂದ್ರದ ಹೆಗಲಿಗೆ?

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ರಾಜ್ಯದಲ್ಲಿ ತೀವ್ರ ವಿರೋಧಕ್ಕೆ ಕಾರಣವಾಗಿರುವ ಶಾಶ್ವತ ಹಿಂದುಳಿದ ವರ್ಗದ ಸಾಮಾಜಿಕ, ಶೈಕ್ಷಣಿಕ ಹಾಗೂ ಆರ್ಥಿಕ ಸಮೀಕ್ಷೆಯನ್ನು ಕೇಂದ್ರ ಸರಕಾರದ ಹೆಗಲಿಗೆ ಹಾಕುವ ಮೂಲಕ 'ಡ್ಯಾಮೇಜ್' ಮಾಡಿಕೊಳ್ಳುವ ಲೆಕ್ಕಾಚಾರಗಳು ರಾಜ್ಯ ಸರಕಾರದಲ್ಲಿ ಶುರುವಾಗಿದೆ.

ಕೇಂದ್ರ ಸರಕಾರದಿಂದ ಜಾತಿಗಣತಿ ನಡೆಸುವ ಘೋಷಣೆಯಾಗುತ್ತಿದ್ದಂತೆ, ರಾಜ್ಯ ಸರಕಾರ ಮಾಡಿರುವ ಜಾತಿ ಗಣತಿಯನ್ನು ರಾಜ್ಯ ಸಚಿವ ಸಂಪುಟ ಸಭೆಯಲ್ಲಿ ಒಪ್ಪಿಗೆ ಪಡೆದು ಕೇಂದ್ರಕ್ಕೆ ರವಾನಿಸುವ ಮೂಲಕ 'ಕೇಂದ್ರ'ದತ್ತ ಬೊಟ್ಟು ಮಾಡುವ ಸಾಧ್ಯತೆಗಳಿವೆ. ಈ ರೀತಿ ಮಾಡುವುರಿಂದ ಸದ್ಯ ಕಾಂಗ್ರೆಸ್‌ನೊಳಗೆ ಹಾಗೂ ರಾಜ್ಯದಲ್ಲಿ ಎದ್ದಿರುವ ಹಲವು ಗೊಂದಲಗಳಿಗೆ ಪರಿಹಾರ ಕಂಡುಕೊಳ್ಳುವ ಲೆಕ್ಕಾಚಾರದಲ್ಲಿದ್ದಾರೆ ಎನ್ನಲಾಗುತ್ತಿದೆ.

ಇದಕ್ಕೆ ಪೂರಕವಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಾತನಾಡಿದ್ದು, ಜಾತಿಗಣತಿಗೆ ಸಂಬಂಧಿಸಿದಂತೆ ಮುಂದಿನ ಸಚಿವ ಸಂಪುಟದಲ್ಲಿ ಚರ್ಚಿಸಿ ಎಲ್ಲ ಸಚಿವರ ಅಭಿಪ್ರಾಯ ಪಡೆದು ರಾಜ್ಯ ಸರಕಾರದ ತೀರ್ಮಾನವನ್ನು ಕೇಂದ್ರ ಸರಕಾರಕ್ಕೆ ಕಳುಹಿಸಲಾಗುವುದು. ಬಳಿಕ ರೂಪಿಸುವಾಗ ಇದನ್ನು ಆಧಾರವಾಗಿಟ್ಟುಕೊಂಡು ಅನುದಾನ ಹಂಚಿಕೆ ಮಾಡಲಾಗುವುದು ಎಂದು ಸ್ಪಷ್ಟಪಡಿಸಿದರು.

ಮುಖ್ಯಮಂತ್ರಿಗಳ ಅಧಿಕೃತ ನಿವಾಸದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಚಿವ ಸಂಪುಟದಲ್ಲಿ ಮಂಡಿಸಿರುವ ಸಾಮಾಜಿಕ , ಶೈಕ್ಷಣಿಕ ಸಮೀಕ್ಷೆಯನ್ನು ಮೇ.9ರಂದು ನಡೆಯುವ ಸಚಿವ ಸಂಪುಟದಲ್ಲಿ ಸಚಿವರೊಂದಿಗೆ ಚರ್ಚಿಸಿ ನಿರ್ಧಾರ ಕೈಗೊಳ್ಳಲಾಗುವುದು. ಕೇಂದ್ರ ಸರಕಾರ ಶೇ.50 ಮೀಸಲು ಮಿತಿಯನ್ನು ಬದಲಾಯಿಸಬೇಕು. ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಸಂವಿಧಾನದ 15 ವಿಧಿ, ಕಲಂ (5) ರಂತೆ ಮೀಸಲಾತಿಯನ್ನು

ಸುದ್ದಿಗೋಷ್ಠಿಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮಾತನಾಡಿದರು.

> **ಜಾತಿ ಗಣತಿಗೆ ಬಗ್ಗೆ ಈಗಾಗಲೇ ಸಚಿವ ಸಂಪುಟ ಸಭೆಯಲ್ಲಿ ಈ ಬಗ್ಗೆ ಚರ್ಚೆ ನಡೆಸಲಾಗಿದ್ದು, ಸಚಿವರು ಅಂತಿಮ ಅಭಿಪ್ರಾಯ ಕೊಟ್ಟ ನಂತರ ತೀರ್ಮಾನ ತೆಗೆದುಕೊಳ್ಳಲಾಗುವುದು. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಮೀಸಲಾತಿ ಏರಿಕೆಗೆ ಕೇಂದ್ರ ಸರಕಾರಕ್ಕೆ ಶಿಫಾರಸ್ಸು ಮಾಡಲಾಗುವುದು. ಮೀಸಲು ಏರಿಕೆಯಾಗಬೇಕಾದರೆ ಸಂವಿಧಾನಕ್ಕೆ ಕೇಂದ್ರ ಸರಕಾರ ತಿದ್ದುಪಡಿ ಮಾಡಬೇಕು. ರಾಜ್ಯ ಸರಕಾರ ಕೇಂದ್ರಕ್ಕೆ ಎಷ್ಟು ಪ್ರಮಾಣದಲ್ಲಿ ಏರಿಕೆ ಮಾಡಬೇಕೆಂದು ತಿಳಿಸಬಹುದು. ಆಗ ಸಂವಿಧಾನ ತಿದ್ದುಪಡಿ ಮಾಡಿ ಏರಿಕೆ ಮಾಡಬಹುದು.**
> -ಸಿದ್ದರಾಮಯ್ಯ, ಮುಖ್ಯಮಂತ್ರಿ

ಕೊಡಬೇಕೆಂದು ರಾಹುಲ್ ಗಾಂಧಿ ಒತ್ತಾಯಿಸಿದ್ದಾರೆ. ಇದನ್ನು ಪರಿಗಣಿಸಬೇಕೆಂದು ಕೇಂದ್ರ ಸರಕಾರವನ್ನು ಒತ್ತಾಯಿಸುವುದಾಗಿ ತಿಳಿಸಿದರು.

ಬಿಜೆಪಿ ಸಾಮಾಜಿಕ ನ್ಯಾಯದ ಪರ ಎಂದಿಗೂ ಇಲ್ಲ

ಕೇವಲ ಘೋಷಣೆ ಮಾಡಿದರೆ ಸಾಲದು, ಅದನ್ನು ಜಾರಿಗೆ ತರಬೇಕು. 73-74 ರ ತಿದ್ದುಪಡಿಗಳನ್ನು ಬಿಜೆಪಿ ವಿರೋಧಿಸಿತ್ತು. ಇತಿಹಾಸ ನೋಡಿದರೆ ಬಿಜೆಪಿ ಸಾಮಾಜಿಕ ನ್ಯಾಯದ ಪರ ಎಂದಿಗೂ ಇಲ್ಲ. ಕೂಡಲೇ ಯಾವ ದಿನಾಂಕದಿಂದ ಜನಗಣತಿ, ಜಾರಿ ಗಣತಿ ಮಾಡುತ್ತಾರೆ ಎಂದು ತಿಳಿಸಬೇಕು. ಜಾತಿ ಗಣತಿ ಮಾಡುವಾಗ ಸಾಮಾಜಿಕ ಆರ್ಥಿಕ ಸಮೀಕ್ಷೆ ಕೂಡ ಆಗಬೇಕು. ಇಲ್ಲಿಯವರೆಗೂ ಇದನ್ನು ವಿರೋಧಿಸುತ್ತಿದ್ದವರು ಈಗ ಸಮೀಕ್ಷೆ ನಡೆಸುವ ಘೋಷಣೆ ಮಾಡಿದ್ದಾರೆ ಎಂದರು. ಕೇಂದ್ರ ಸಚಿವ ಎಚ್.ಡಿ.ಕುಮಾರ ಸ್ವಾಮಿಯವರು ಜಾತಿ ಗಣತಿ ಹಾಗೂ ಜನಗಣತಿ ನಡೆಸುವ ಕೇಂದ್ರ ಸರಕಾರದ ನಿರ್ಧಾರವನ್ನು ಹಾಡಿ ಹೊಗಳಿದ್ದು, ರಾಜ್ಯ ಸರಕಾರದ ಸಮೀಕ್ಷೆಗೆ ಯಾವುದೇ ಪಾವಿತ್ರ್ಯತೆವಿಲ್ಲ ಎಂದಿದ್ದಾರೆ. ಸಮ್ಮಿಶ್ರ ಸರಕಾರದ ಅವಧಿಯಲ್ಲಿ ಪುಟ್ಟರಂಗಶೆಟ್ಟಿ ಹಿಂದುಳಿದ ವರ್ಗಗಳ ಸಚಿವರಾಗಿದ್ದಾಗ ಜಾತಿ ಗಣತಿ ವರದಿ ಪಡೆಯಲು ದಿನಾಂಕ ನಿಗದಿ ಮಾಡಿದಾಗ ಅವರನ್ನು ಅಮಾನತು ಮಾಡುವುದಾಗಿ ಹೆದರಿಸಿ ವರದಿಯನ್ನು ಪಡೆಯಲಿಲ್ಲ ಎಂದು ಆರೋಪಿಸಿದರು.

> **ನಮ್ಮನ್ನು ಫಾಲೋ ಮಾಡುತ್ತಾರೆ**
> **ಈ ಹಿಂದೆ ನಾವು ಗ್ಯಾರಂಟಿ ಯೋಜನೆಗಳನ್ನು ಘೋಷಿಸಿದಾಗ ಬಿಜೆಪಿಗರು ನಮ್ಮನ್ನು ನಕಲು ಮಾಡಿದರು. ಇದೀಗ ನಾವು ಮಾಡಿರುವ ಜಾತಿ ಗಣತಿಯನ್ನು ನಕಲು ಮಾಡಲು ಹೊರಟಿದ್ದಾರೆ. ಇನ್ನು ನಮ್ಮ ಜಾತಿಗಣತಿಯನ್ನು ಅವೈಜ್ಞಾನಿಕ ಎಂದು ಟೀಕಿಸಿರುವ ಕೇಂದ್ರ ಸಚಿವ ಅಶ್ವಿನ್ ವೈಷ್ಣವ್ ಹಾಗೂ ಧರ್ಮೇಂದ್ರ ಪ್ರಧಾನ್ ಅವರು ಬಿಹಾರದಲ್ಲಿ ನಡೆಸಿರುವ ಸಮೀಕ್ಷೆ ಬಗ್ಗೆ ಅವರು ಏನು ಹೇಳುತ್ತಾರೆ ಎಂದು ಪ್ರಶ್ನಿಸಿದರು. ರಾಜ್ಯ ಸರಕಾರಗಳಿಗೆ ಜಾತಿ ಅಥವಾ ಜನಗಣತಿ ಮಾಡಲು ಹಕ್ಕಿಲ್ಲ ಎಂದು ಸಂವಿಧಾನದಲ್ಲಿ ಹೇಳಿದೆಯೇ ಎಂದು ಸಿಎಂ ಸಿದ್ದರಾಮಯ್ಯ ಪ್ರಶ್ನಿಸಿದರು.**

ಮಂತ್ರಾಲಯಕ್ಕೆ ಮಾಜಿ ಸಿಎಂ ಬಿಎಸ್‌ವೈ ಕುಟುಂಬ ಸಮೇತ ಭೇಟಿ

ಮಂತ್ರಾಲಯದ ಶ್ರೀರಾಘವೇಂದ್ರ ಸ್ವಾಮಿ ಮಠಕ್ಕೆ ಮಾಜಿ ಮುಖ್ಯಮಂತ್ರಿ ಬಿ. ಎಸ್. ಯಡಿಯೂರಪ್ಪ ಅವರು ತಮ್ಮ ಕುಟುಂಬಸ್ಥರೊಂದಿಗೆ ಭೇಟಿ ನೀಡಿ ದರ್ಶನ ಪಡೆದರು.

ರಾಯಚೂರು: ಮಂತ್ರಾಲಯದ ಶ್ರೀರಾಘವೇಂದ್ರ ಸ್ವಾಮಿ ಮಠಕ್ಕೆ ಮಾಜಿ ಮುಖ್ಯಮಂತ್ರಿ ಬಿ. ಎಸ್. ಯಡಿಯೂರಪ್ಪ ಅವರು ತಮ್ಮ ಕುಟುಂಬಸ್ಥರೊಂದಿಗೆ ಭೇಟಿ ನೀಡಿ ದರ್ಶನ ಪಡೆದರು.

ರಾಯರ ಭಕ್ತರಾಗಿರುವ ಬಿ. ಎಸ್. ಯಡಿಯೂರಪ್ಪ ಹಾಗೂ ಪುತ್ರ ಸಂಸದ ಬಿ. ವೈ. ರಾಘವೇಂದ್ರ, ದಂಪತಿ ಹಾಗೂ ಕುಟುಂಬ ಸ್ಥರು ಗುರುವಾರ ಮಠಕ್ಕೆ ಭೇಟಿ ನೀಡಿದ್ದರು. ಶ್ರೀಮಠಕ್ಕೆ ಆಗಮಿಸುತ್ತಿದ್ದಂತೆ ಮಠದ ಶಿಷ್ಠಾಚಾರದಂತೆ ಬಿ.ಎಸ್. ಯಡಿಯೂರಪ್ಪನ ವರನ್ನು ಬರ ಮಾಡಿಕೊಂಡರು. ಆರಂಭದಲ್ಲಿ ಗ್ರಾಮದ ಆದಿ ದೇವಿ ಶ್ರೀಮಾಂಚಲಮ್ಮ ದೇವಿ ದರ್ಶನ ಪಡೆದುಕೊಂಡ ಕುಟುಂಬ, ಬಳಿಕ ಶ್ರೀರಾಘವೇಂದ್ರ ಸ್ವಾಮಿಗಳ ಮೂಲ ಬೃಂದಾವನ ದರ್ಶನ ಪಡೆದುಕೊಂಡು ವಿಶೇಷ ಪೂಜೆ ನೆರವೇರಿಸಿದರು. ಬಳಿಕ ಮಠದ ಪೀಠಾಧಿಪತಿ ಶ್ರೀ ಸುಭುದೇಂದ್ರ ತೀರ್ಥರನ್ನು ಭೇಟಿಯಾಗಿ ಉಭಯ ಕುಶಲೋಪರಿ ವಿಚಾರಿಸಿದರು. ಈ ವೇಳೆ ಶ್ರೀಗಳು ಬಿ.ಎಸ್. ಯಡಿಯೂರಪ್ಪ ನವರಿಗೆ ಸನ್ಮಾನಿಸಿ ಗೌರವಿಸಿ, ಮಂತ್ರಾಕ್ಷತೆ ಯನ್ನು ನೀಡಿ, ಆಶೀರ್ವದಿಸಿದರು. ಈ ವೇಳೆ ಮಗ ಬಿ.ವೈ. ರಾಘವೇಂದ್ರ ಹಾಗೂ ಪತ್ನಿ, ಕುಟುಂಬಸ್ಥರು ಇದ್ದರು. ಬಿ. ವೈ. ರಾಘವೇಂದ್ರ ಪುತ್ರನ ವಿವಾಹ ಹಿನ್ನೆಲೆ ಶ್ರೀಗಳಿಗೆ ಲಗ್ನಪತ್ರವನ್ನು ನೀಡಿ ಆಹ್ವಾನಿಸಲು ಆಗಮಿಸಿದ್ದರು ಎಂದು ಮೂಲಗಳು ತಿಳಿಸಿವೆ. ಇತ್ತೀಚೆಗೆ ನಿಶ್ಚಿತಾರ್ಥ ಸಮಾರಂಭ ನಡೆದಿತ್ತು.

ಗುಂಪು ಹಲ್ಲೆ: ಮೂವರು ಪೊಲೀಸರು ಅಮಾನತು

ಮಂಗಳೂರು: ಕುಡುಪು ಬಳಿ ನಡೆದಿದ್ದ ಕೇರಳ ಮೂಲದ ಮುಸ್ಲಿಂ ಯುವಕನ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಮಂಗಳೂರು ಗ್ರಾಮಾಂತರ

ಠಾಣೆ ಇನ್ಸ್‌ಪೆಕ್ಟರ್ ಸೇರಿ ಮೂವರು ಪೊಲೀಸರನ್ನು ಅಮಾನತು ಮಾಡಲಾಗಿದೆ.

ಕರ್ತವ್ಯ ಲೋಪ ಆರೋಪದಡಿ ಇನ್ಸ್ ಪೆಕ್ಟರ್ ಶಿವಕುಮಾರ್, ಹೆಡ್ ಕಾನ್ ಸ್ಟೇಬಲ್ ಚಂದ್ರ.ಪಿ ಮತ್ತು ಕಾನ್‌ಸ್ಟೇಬಲ್ ಯಲ್ಲಾಲಿಂಗ ಅವರನ್ನು ಅಮಾನತು ಮಾಡಲಾಗಿದೆ. ಮೂವರ ವಿರುದ್ಧ ಪ್ರಕರಣ ಮುಚ್ಚಿ ಹಾಕಲು ಯತ್ನಿಸಿದ್ದ ಆರೋಪ ಕೇಳಿ ಬಂದಿತ್ತು. ಶಿವಕುಮಾರ್ ಆರಂಭದಲ್ಲಿ ಅಸಹಜ ಸಾವು ಪ್ರಕರಣ ದಾಖಲಿಸಿದ್ದರು. ವಿವಾದ ದೊಡ್ಡದಾದ ಮೇಲೆ ಕೊಲೆ ಪ್ರಕರಣ ದಾಖಲಿಸಿದ್ದರು. ಇದಾದ ಬಳಿಕ ಶಿವಕುಮಾರ್ ಅವರನ್ನು ಅಮಾನತು ಮಾಡುವಂತೆ ಗೃಹ ಸಚಿವರಿಗೆ ದಕ್ಷಿಣ ಕನ್ನಡ ಜಿಲ್ಲಾ ಉಸ್ತುವಾರಿ ಸಚಿವ ದಿನೇಶ್ ಗುಂಡೂರಾವ್ ಪತ್ರ ಬರೆದಿದ್ದರು.

ಮತ್ತೊಬ್ಬ ಆರೋಪಿ ಬಂಧನ

ಕುಡುಪು ಪ್ರಕರಣಕ್ಕೆ ಸಂಬಂಧಿಸಿದಂತೆ ಮತ್ತೊಬ್ಬ ಆರೋಪಿಯನ್ನು ಪೊಲೀಸರು ಬಂಧಿಸಿದ್ದಾರೆ. ಘಟನೆಯ ಬಳಿಕ ತಲೆಮರೆಸಿಕೊಂಡಿದ್ದ ಅನಿಲ್ ಎಂಬಾತನನ್ನು ಗೋಕಾಕದಿಂದ ವಶಕ್ಕೆ ಪಡೆಯಲಾಗಿದೆ. ಇದರೊಂದಿಗೆ ಬಂಧಿತ ಆರೋಪಿಗಳ ಸಂಖ್ಯೆ 21ಕ್ಕೆ ಏರಿಕೆಯಾಗಿದೆ. ಹಲ್ಲೆ ನಡೆಸಿದ ಬಳಿಕ ತಲೆ ಮರೆಸಿಕೊಂಡವರಿಗಾಗಿ ಪೊಲೀಸರ ತಂಡ ಹುಡುಕಾಟ ನಡೆಸುತ್ತಿದೆ. ಆ ದಿನ ಸ್ಥಳದಲ್ಲಿದ್ದ ಸುಮಾರು 15 ಮಂದಿಗೆ ನೋಟಿಸ್ ನೀಡಿ ವಿಚಾರಣೆಗೆ ಬರಲು ತಿಳಿಸಲಾಗಿದ್ದು, ಕೆಲವರ ವಿಚಾರಣೆ ನಡೆಯುತ್ತಿದೆ. ಕುಡುಪು ವ್ಯಾಪ್ತಿಯ ಲ್ಲಿರುವ ಸಿಸಿ ಕೆಮರಾ ಪರಿಶೀಲಿಸಲಾಗುತ್ತಿದ್ದು, ಪ್ರತ್ಯಕ್ಷದರ್ಶಿಗಳ ಸಹಕಾರವನ್ನೂ ಪಡೆಯಲಾ ಗುತ್ತದೆ ಎಂದು ಪೊಲೀಸ್ ಆಯುಕ್ತರು ತಿಳಿಸಿದ್ದಾರೆ. ಘಟನೆ ನಡೆಯಲು ನಿರ್ದಿಷ್ಟವಾಗಿ ಕಾರಣ ಇನ್ನೂ ಸ್ಪಷ್ಟವಾಗಿಲ್ಲ. ಘೋಷಣೆ ಬಗ್ಗೆ ದೃಢ ಪಡಿಸುವ ನಿರ್ದಿಷ್ಟವಾಗಿ ಸಾಕ್ಷಿಗಳು ಇನ್ನೂ ಸಿಕ್ಕಿಲ್ಲ ಎಂದು ಆಯುಕ್ತರು ಮಾಧ್ಯಮಗಳಿಗೆ ಹೇಳಿಕೆ ನೀಡಿದ್ದಾರೆ.

ಅಮಾಯಕರ ಬಂಧಿಸಿದರೆ ಪೊಲೀಸ್ ಠಾಣೆಗೆ ಮುತ್ತಿಗೆ

ಮಂಗಳೂರು: ನಗರ ಹೊರವಲಯದ ಕುಡುಪುವಿನಲ್ಲಿ ನಡೆದ ಗುಂಪು ಹಲ್ಲೆ ಮತ್ತು ಹತ್ಯೆಯ ರಾಜಕೀಯ ಲಾಭ ಪಡೆಯಲು ಕಾಂಗ್ರೆಸ್ ಹಾಗೂ ಎಸ್‌ಡಿಪಿಐ ಪ್ರಯತ್ನಿಸುತ್ತಿದ್ದು ತಮಗೆ ಆಗದವರನ್ನು ಬೊಟ್ಟು ಮಾಡಿ ಆರೋಪಿಗಳೆಂದು ಬಿಂಬಿಸುತ್ತಿದ್ದಾರೆ. ಇದಕ್ಕೆ ಮಣಿದು ಅಮಾಯಕರನ್ನು ಬಂಧಿಸುವುದನ್ನು ನಿಲ್ಲಿಸದಿದ್ದರೆ ಪೊಲೀಸ್ ಠಾಣೆಗೆ ಮುತ್ತಿಗೆ ಹಾಕಲಾಗುವುದು ಎಂದು ಶಾಸಕ ಡಾ.ವೈ.ಭರತ್ ಶೆಟ್ಟಿ ಎಚ್ಚರಿಕೆ ನೀಡಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪಹಲ್ಗಾಮ್ ಘಟನೆ ನಡೆದ ನಂತರ ದೇಶದಲ್ಲಿ ಪ್ರಕ್ಷುಬ್ದ ವಾತಾವರಣ ನಿರ್ಮಾಣವಾಗಿದ್ದು ದೇಶವಿರೋಧಿ ಚಟುವಟಿಕೆ ಕಂಡುಬಂದರೆ ಜನರು ಆಕ್ರೋಶಗೊಳ್ಳುವ ಪರಿಸ್ಥಿತಿ ಇದೆ. ನನ್ನ ಕ್ಷೇತ್ರದಲ್ಲಿ ಆಗಿರುವ ಗುಂಪು ಹಲ್ಲೆ ಮತ್ತು ಕೊಲೆ ಕೂಡ ಇದೇ ರೀತಿ ಉದ್ವೇಗದಿಂದ ಆಗಿರುವ ಸಾಧ್ಯತೆ ಇದೆ. ಅದನ್ನು ಅಪರಾಧ ಪ್ರಕರಣವಾಗಿ ನೋಡಬೇಕೇ ಹೊರತು ಧರ್ಮ ಮತ್ತು ರಾಜಕೀಯ ಬಣ್ಣ ಕೊಡುವುದು ಸರಿಯಲ್ಲ ಎಂದರು. ಕುಡುಪುವಿನಲ್ಲಿ ಪಾಕಿಸ್ತಾನದ ಪರ ಘೋಷಣೆ ಕೂಗಿದ್ದಕ್ಕೆ ಆಕ್ರೋಶಗೊಂಡ ಗುಂಪು ಯುವಕನನ್ನು ಕೊಂದಿದೆ ಎಂದು ಎಫ್‌ಐಆರ್‌ನಲ್ಲೇ ದಾಖಲಾಗಿದೆ. ಆದರೆ ಘೋಷಣೆ ಕೂಗಿದವ ಮಾನಸಿಕ ಅಸ್ವಸ್ಥ ಎಂದು ಹೇಳುವುದು ನೆಪ ಎಂದರು.

ಬೈಕೆರೆ ಗ್ರಾಮದ ರೈತನ ಮೇಲೆ ದಾಳಿ ಮಾಡಿದ್ದ ಆನೆ

ಹಲಸುಲಿಗೆಯಲ್ಲಿ ಒಂಟಿ ಕಾಡಾನೆ ಸೆರೆ

ಸಕಲೇಶಪುರ: ಇತ್ತೀಚೆಗೆ ತಾಲೂಕಿನ ಬೈಕೆರೆ ಗ್ರಾಮದಲ್ಲಿ ರೈತ ಷಣ್ಮುಖ ಅವರ ಮೇಲೆ ದಾಳಿ ಮಾಡಿ ಕೊಂದು ಹಾಕಿದ್ದ ಕಾಡಾನೆಯನ್ನು ಗುರುವಾರ ತಾಲ್ಲೂಕಿನ ಹಲಸುಲಿಗೆ ಗ್ರಾಮದ ಮಾಗಡಿ ಎಸ್ಟೇಟ್‌ನಲ್ಲಿ ಅರಣ್ಯ ಅಧಿಕಾರಿಗಳು ಸೆರೆ ಹಿಡಿದಿದ್ದಾರೆ.

ಇಲಾಖೆಯ ಮೊದಲ ದಿನದ ಕಾರ್ಯಾಚರಣೆ ಯಶಸ್ವಿಯಾಗಿದೆ. ವೈದ್ಯರಾದ ಮುಜೀಬ್ ಮತ್ತು ವಾಸಿಂ ಅವರು ಕಾಡಾನೆಗೆ ಅರಿವಳಿಕೆ ಚುಚ್ಚುಮದ್ದು ನೀಡಿದರು. ಇಂಜೆಕ್ಷನ್ ಪಡೆದ ಕೂಡಲೇ ಗಂಡಾನೆ ಓಡಲಾರಂಭಿಸಿತು. ಆದರೆ, ಸ್ವಲ್ಪ ದೂರ ಓಡಿದ ನಂತರ ಪ್ರಜ್ಞೆ ತಪ್ಪಿ ಬಿದ್ದಿತು. ವೈದ್ಯರು ಕಾಡಾನೆಗೆ ನೀರು ಹಾಕಿ ಆರೈಕೆ ಮಾಡಿದ ನಂತರ, ಕಾಲಿಗೆ ಹಗ್ಗ ಕಟ್ಟಿ ರಿವರ್ಸಲ್ ಇಂಜೆಕ್ಷನ್ ನೀಡಿದರು. ನಂತರ ಆರು ಸಾಕಾನೆಗಳ ಸಹಾಯದಿಂದ ಕಾಡಾನೆಯನ್ನು ರಸ್ತೆಗೆ ಎಳೆದು ತರಲಾಯಿತು.

ಅರಣ್ಯ ಇಲಾಖೆ ಈ ಕಾಡಾನೆಯನ್ನು ಸ್ಥಳಾಂತರಿಸಲು ಯೋಜನೆ ರೂಪಿಸಿದೆ. ಡಿಎಫ್‌ಒ ಸೌರಭ್‌ಕುಮಾರ್ ನೇತೃತ್ವದಲ್ಲಿ ನಡೆದ ಕಾರ್ಯಾಚರಣೆಯಲ್ಲಿ ಸಿಸಿಎಫ್ ಏಡುಕೊಂಡಲು, ಇಟಿಎಫ್ ಸಿಸಿಎಫ್ ಮಹದೇವ್, ಎಸಿಎಫ್ ಮಧುಸೂದನ್, ವಲಯ ಅರಣ್ಯ ಅಧಿಕಾರಿ ಎಚ್.ಆರ್. ಹೇಮಂತ್ ಕುಮಾರ್ ಹಾಗೂ ಇತರರು ಇದ್ದರು.

ಸಕಲೇಶಪುರ ತಾಲೂಕಿನ ಹಲಸುಲಿಗೆ ಗ್ರಾಮದಲ್ಲಿ ಗುರುವಾರ ಸೆರೆ ಹಿಡಿದ ಒಂಟಿ ಕಾಡಾನೆಯನ್ನು ಸಾಕಾನೆಗಳ ನೆರವಿನಿಂದ ರಸ್ತೆಯವರೆಗೆ ಕರೆತರಲಾಯಿತು.

> **ಹಲವು ದಿನಗಳಿಂದ ಭಯ ಹುಟ್ಟಿಸಿದ್ದ ಆನೆ**
> **ಹಲವು ದಿನಗಳಿಂದ ಹಲಸುಲಿಗೆ, ಮಾಗಡಿ, ಬೈಕೆರೆ, ನಾಗರ ಸುತ್ತಲಿನ ಗ್ರಾಮಗಳಲ್ಲಿ ಈ ಒಂಟಿ ಸಲಗ ಅಡ್ಡಾಡುತ್ತಾ, ಜೀವ ಹಾಗೂ ಬೆಳೆ ಹಾನಿ ಮಾಡಿತ್ತು. ಹೆಬ್ಬನಹಳ್ಳಿ ಗ್ರಾಮದ ರಾಜು ಎಂಬುವವರ ಮೇಲೆ ದಾಳಿ ನಡೆಸಿ ಗಂಭೀರವಾಗಿ ಗಾಯಗೊಳಿಸಿತ್ತು. ಸಕಲೇಶಪುರ ಭಾಗದ ಕಾಫಿ ಬೆಳೆಗಾರರು ಮತ್ತು ಕಾರ್ಮಿಕರಲ್ಲಿ ಭಯ ಹುಟ್ಟಿಸಿತ್ತು.**

ಪಾಕಿಸ್ತಾನಕ್ಕೆ ಹೋಗಿ ನುಗ್ಗಿ ಹೊಡೆಯಬೇಕು

ಮೋದಿಯವರು ಯಾವುದೇ ನಿರ್ಧಾರ ತೆಗೆದುಕೊಂಡರೂ ನನ್ನ ಸ್ವಾಗತ: ಲಾಡ್

ಮೈಸೂರು: ಪಾಕಿಸ್ತಾನಕ್ಕೆ ಹೋಗಿ ನುಗ್ಗಿ ಹೊಡೆಯಬೇಕು. ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರಿಗೂ ಇದನ್ನೇ ಹೇಳಿದ್ದೇನೆ ಎಂದು ಕಾರ್ಮಿಕ ಸಚಿವ ಸಂತೋಷ್ ಲಾಡ್ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಕಾಶ್ಮೀರ ಘಟನೆಯನ ಬಗ್ಗೆ ಕೇಂದ್ರದ ಸರ್ವಪಕ್ಷಗಳ ಸಭೆಯಲ್ಲಿ ತೆಗೆದುಕೊಂಡ ನಿರ್ಣಯಕ್ಕೆ ನಾವೆಲ್ಲ ಬದ್ಧರಾಗಬೇಕು. ಪಾಕಿಸ್ತಾನದ ವಿರುದ್ಧ ಪ್ರಧಾನಿ ನರೇಂದ್ರ ಮೋದಿಯವರು ಯಾವುದೇ ನಿರ್ಧಾರ ತೆಗೆದುಕೊಂಡರೂ ಸ್ವಾಗತ. ನನ್ನ ಅಭಿಪ್ರಾಯದಲ್ಲಿ ಪಾಕಿಸ್ತಾನಕ್ಕೆ ಹೋಗಿ ನುಗ್ಗಿ ಹೊಡೆಯಬೇಕು. ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರಿಗೂ ಇದೇ ಹೇಳಿದ್ದೇನೆ ಎಂದರು.

ಯಾವುದೇ ಕಾರಣಕ್ಕೂ ಇವರನ್ನು ಬಿಡಬಾರದು, ಮನೆ ತೂರಿಯಾದರೂ ಸರಿ, ಪಾಕಿಸ್ತಾನದ ಒಳಗಡೆ ಹೋಗಿ ಹೊಡಿಬೇಕು ಎನ್ನುವಂತದ್ದು ನನ್ನ ಅಭಿಪ್ರಾಯ, ಎಲ್ಲರ ನಿರ್ಣಯ ಕೂಡ. ಈ ಹಿಂದೆ 1971ರ ದಶಕದಲ್ಲಿ ಇಂದಿರಾ ಗಾಂಧಿ ಅವರು ಪಾಕಿಸ್ತಾನಿಯರನ್ನು ಮಂಡಿಯೂರಿ ಕೂರುವಂತೆ ಮಾಡಿದ್ದರು. ಈಗಲೂ ಹಾಗೇ ಮಾಡಬೇಕು ಎಂದು ಸಚಿವರು ಉತ್ತರಿಸಿದರು.

> **ಪಾಕ್ ಪರ ಘೋಷಣೆ ಕೂಗಿದರೆ ಕ್ರಮ**
> **ಮಂಗಳೂರಿನಲ್ಲಿ ಪಾಕ್ ಪರ ಘೋಷಣೆ ವಿಚಾರ ಬಗ್ಗೆ ಪ್ರತಿಕ್ರಿಯಿಸಿ, ಆ ಘಟನೆಗೆ ಕಾನೂನು ಪ್ರಕಾರ ಕ್ರಮ ಆಗುತ್ತದೆ. ಯಾರೇ ಪಾಕ್ ಪರ ಘೋಷಣೆ ಕೂಗಿದರೂ ಅವರ ಮೇಲೆ ಕಾನೂನು ಕ್ರಮ ತೆಗೆದುಕೊಳ್ಳುತ್ತೇವೆ. ನನ್ನ ಅಣ್ಣ, ತಮ್ಮನಾಗಲಿ ಯಾರೇ ಆಗಲಿ ಶಿಕ್ಷೆ ಆಗಬೇಕು. ಇಂತಹ ಘಟನೆಗಳು ಯಾಕೆ ಜಾಸ್ತಿಯಾಗುತ್ತಿವೆ. ಯಾಕೆ ಘೋಷಣೆ ಕೂಗುತ್ತಿದ್ದಾರೆ ಗೊತ್ತಿಲ್ಲ. ನಾವಂತೂ ಘೋಷಣೆ ಕೂಗುವವರ ಪರವಿಲ್ಲ ಎಂದು ಸಚಿವ ಸಂತೋಷ್ ಲಾಡ್ ತಿಳಿಸಿದರು.**

ಫಾಜಿಲ್ ಹತ್ಯೆಯ ಆರೋಪಿ ಸುಹಾಸ್ ಶೆಟ್ಟಿ ಕೊಲೆ

ಹಿಂದೂ ಕಾರ್ಯಕರ್ತನ ಹತ್ಯೆ

ಮಂಗಳೂರು: ಬಜಪೆ ಕಿನ್ನಿಪದವು ಬಳಿ ಹಿಂದೂ ಕಾರ್ಯಕರ್ತನ ಬರ್ಬರ ಹತ್ಯೆ ನಡೆದಿದೆ. ಸುಹಾಸ್ ಶೆಟ್ಟಿ ಕೊಲೆಯಾದ ಕಾರ್ಯಕರ್ತ. ಸುರತ್ಕಲ್‌ನ ಫಾಜಿಲ್ ಕೊಲೆ ಪ್ರಕರಣದ ಪ್ರಮುಖ ಆರೋಪಿ ಸುಹಾಸ್



ಶೆಟ್ಟಿಯನ್ನು ಗುರುವಾರ ರಾತ್ರಿ ಹೊಂಚು ಹಾಕಿ ನಾಲ್ವರು ತಲವಾರಿನಿಂದ ಹತ್ಯೆ ಮಾಡಿದ್ದಾರೆ. ಬಿಜೆಪಿ ಕಾರ್ಯಕರ್ತ ಪ್ರವೀಣ್ ನೆಟ್ಟಾರು ಹತ್ಯೆಗೆ ಪ್ರತೀಕಾರವಾಗಿ 2022ರ ಜುಲೈ 28ರಂದು ಸುರತ್ಕಲ್ನಲ್ಲಿ ಫಾಜಿಲ್ ಹತ್ಯೆ ನಡೆದಿತ್ತು. ಈ ಹತ್ಯೆ ಪ್ರಕರಣದಲ್ಲಿ ಸುಹಾಸ್ ಶೆಟ್ಟಿ ಮತ್ತು ಇತರ ಆರೋಪಿಗಳನ್ನು ಪೊಲೀಸರು ಬಂಧಿಸಿದ್ದರು.

ಈ ಹಿಂದೆ ಬಜರಂಗದಳದ ಗೋರಕ್ಷಾ ವಿಭಾಗದ ಸದಸ್ಯನಾಗಿದ್ದ ಸುಹಾಸ್ ಶೆಟ್ಟಿಗೆ ಜೈಲಿನಿಂದ ಹೊರ ಬಂದ ನಂತರ ಯಾವುದೇ ಜವಾಬ್ದಾರಿ ಇರಲಿಲ್ಲ. ದಾಳಿಯಿಂದ ಗಂಭೀರ ಗಾಯಗೊಂಡಿದ್ದ ಸುಹಾಸ್ ಶೆಟ್ಟಿಯನ್ನು ಸ್ಥಳೀಯರು ಮಂಗಳೂರಿನ ಎಜೆ ಆಸ್ಪತ್ರೆಗೆ ದಾಖಲಿಸಿದ್ದರು. ಚಿಕಿತ್ಸೆ ಫಲಕಾರಿಯಾಗದೇ ಸುಹಾಸ್ ಶೆಟ್ಟಿ ಮೃತಪಟ್ಟಿದ್ದು ಆಸ್ಪತ್ರೆ ಎದುರು ಭಾರೀ ಸಂಖ್ಯೆಯಲ್ಲಿ ಹಿಂದೂ ಕಾರ್ಯಕರ್ತರು ಸೇರಿದ್ದಾರೆ.

ಮುನ್ನೆಚ್ಚರಿಕಾ ಕ್ರಮವಾಗಿ ಆಸ್ಪತ್ರೆ ಎದುರು ಬಿಗು ಪೊಲೀಸ್ ಬಂದೋಬಸ್ತ್ ಏರ್ಪಡಿಸಲಾಗಿದೆ. ಆಸ್ಪತ್ರೆಗೆ ಆಗಮಿಸಿದ ಮಾಜಿ ಸಂಸದ ನಳಿನ್ ಕುಮಾರ್ ಕಟೀಲು, ಶಾಸಕ ಡಾ.ವೈ. ಭರತ್ ಶೆಟ್ಟಿ ಆಗಮಿಸಿದ್ದಾರೆ. ಹತ್ಯೆ ಮಾಡುತ್ತಿರುವ ದೃಶ್ಯ ಮೊಬೈಲ್‌ನಲ್ಲಿ ಸೆರೆಯಾಗಿದೆ. ಪೊಲೀಸರು ಆರೋಪಿಗಳ ಬಂಧನಕ್ಕೆ ಬಲೆ ಬೀಸಿದ್ದಾರೆ.

ಪಾಕ್‌ಗೆ ಅಮೆರಿಕ ತಾಕೀತು

← ಮೊದಲಪುಟದಿಂದ

ಬಾಂಗ್ಲಾ ಗಡಿಯಲ್ಲೂ ಕಟ್ಟೆಚ್ಚರ: ಪಾಕಿಸ್ತಾನ ಗಡಿಯಲ್ಲಿನ ಉದ್ವಿಗ್ನತೆಯ ಮಧ್ಯೆ, ಬಾಂಗ್ಲಾದೇಶ ಮತ್ತು ಮ್ಯಾನ್ಮಾರ್ ಗಡಿಗಳಲ್ಲಿ ಹೆಚ್ಚಿನ ಎಚ್ಚರಿಕೆ ವಹಿಸುವಂತೆ ಗುಪ್ತಚರ ಸಂಸ್ಥೆಗಳು ಮತ್ತು ಭದ್ರತಾ ಪಡೆಗಳಿಗೆ ಸೂಚಿಸಲಾಗಿದೆ. ಬಾಂಗ್ಲಾದಲ್ಲಿ ಮುಹಮ್ಮದ್ ಯೂನುಸ್ ನೇತೃತ್ವದ ಸರ್ಕಾರದ ಕ್ರಮಗಳು ಮತ್ತು ಪಾಕಿಸ್ತಾನದ ಐಎಸ್‌ಐ ಮತ್ತು ಪಾಕಿಸ್ತಾನದ ಮಿಲಿಟರಿ ಅಧಿಕಾರಿಗಳ ಹೆಚ್ಚುತ್ತಿರುವ ಉಪಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಬಾಂಗ್ಲಾ ಗಡಿಯುದ್ದಕ್ಕೂ ಹೆಚ್ಚು ಜಾಗರೂಕರಾಗಿರಲು ಭದ್ರತಾ ಸಂಸ್ಥೆಗಳಿಗೆ ತಿಳಿಸಲಾಗಿದೆ. ಪಾಕಿಸ್ತಾನವು ಭಾರತಕ್ಕೆ ತೊಂದರೆ ನೀಡಲು ಬಾಂಗ್ಲಾದ ಇಸ್ಲಾಮಿಕ್ ಗುಂಪುಗಳನ್ನು ಬಳಸಿಕೊಳ್ಳುವ ಸಾಧ್ಯತೆ ಇದೆ ಎಂದು ಗುಪ್ತಚರ ಪಡೆಗಳಿಲು ಎಚ್ಚರಿಕೆ ನೀಡಿವೆ.

ನ್ಯಾಯಾಂಗ ತನಿಖೆಗೆ ಸುಪ್ರೀಂ ನಕಾರ

ದೆಹಲಿ: ಪಹಲ್ಗಾಮ್ ಭಯೋತ್ಪಾದಕ ದಾಳಿಯ ನ್ಯಾಯಾಂಗ ತನಿಖೆ ಕೋರಿ ಸಲ್ಲಿಸಲಾದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯ ವಿಚಾರಣೆಗೆ ಸ್ವೀಕರಿಸಲು ಸುಪ್ರೀಂ ಕೋರ್ಟ್ ನಿರಾಕರಿಸಿದೆ. ಈ ರೀತಿಯ ಕ್ರಮಗಳು ಸಶಸ್ತ್ರ ಪಡೆಗಳ ಸ್ಥೈರ್ಯ ಕುಗ್ಗಿಸುತ್ತವೆ ಎಂದು ಅರ್ಜಿದಾರರನ್ನು ತರಾಟೆಗೆ ತೆಗೆದುಕೊಂಡ ಸುಪ್ರೀಂ ಕೋರ್ಟ್, ಅರ್ಜಿಯನ್ನು ಹಿಂಪಡೆಯಲು ಅವಕಾಶ ನೀಡಿದೆ.

ಈ ದೇಶದ ಪ್ರತಿಯೊಬ್ಬ ನಾಗರಿಕ ಭಯೋತ್ಪಾದನೆಯ ವಿರುದ್ಧ ಹೋರಾಡಲು ಕೈಜೋಡಿಸಿದ ನಿರ್ಣಾಯಕ ಸಮಯವಿದು. ಯೋಧರ ಸ್ಥೈರ್ಯ ಕುಗ್ಗಿಸುವ ಯಾವುದೇ ಪ್ರಾರ್ಥನೆಯನ್ನು ಮಾಡಬೇಡಿ. ಸಮಸ್ಯೆಯ ಸೂಕ್ಷ್ಮತೆಯನ್ನು ನೋಡಿ ಎಂದು ನ್ಯಾಯ ಮೂರ್ತಿಗಳಾದ ಸೂರ್ಯ ಕಾಂತ್ ಮತ್ತು ಎನ್. ಕೋಟಿಶ್ವರ್ ಸಿಂಗ್ ಅವರ ಪೀಠ ಹೇಳಿದೆ.

"ಜವಾಬ್ದಾರಿಯಿಂದಿರಿ. ನೀವು ದೇಶದೆಡೆಗೆ ಸ್ವಲ್ಪ ಕರ್ತವ್ಯ ಪ್ರಜ್ಞೆ ಹೊಂದಿರಬೇಕು. ಇದುವೇ ದಾರಿ, ದಯವಿಟ್ಟು ಪಿಐಎಲ್ ಸಲ್ಲಿಸಬೇಡಿ. ನಿವೃತ್ತ ಹೈಕೋರ್ಟ್ ಅಥವಾ ಸುಪ್ರೀಂ ಕೋರ್ಟ್ ನ್ಯಾಯಾಧೀಶರು ಯಾವಾಗಿನಿಂದ ಇಂತಹ ವಿಷಯಗಳನ್ನು (ಭಯೋತ್ಪಾದನೆ) ತನಿಖೆ ಮಾಡಲು ಪರಿಣಿತರಾದರು? ನಾವು ಏನನ್ನೂ ಸ್ವೀಕರಿಸುತ್ತಿಲ್ಲ. ದಯವಿಟ್ಟು ನೀವು ಎಲ್ಲಿಗೆ ಹೋಗಬೇಕೆಂದರೂ ಹೋಗಿ ಎಂದು ಪೀಠ ಖಾರವಾಗಿ ಹೇಳಿದೆ. ಅರ್ಜಿದಾರರಾದ ಫತೇಶ್ ಕುಮಾರ್ ಸಾಹು ಅವರಿಗೆ ವೈಯಕ್ತಿಕವಾಗಿ ಅರ್ಜಿಯನ್ನು ಹಿಂಪಡೆಯಲು ಕೋರ್ಟ್ ಇದೇ ವೇಳೆ ಅವಕಾಶ ನೀಡಿತು.

ಕೇಂದ್ರ ಸರಕಾರದ ವಿರುದ್ಧ ನಡೆದ ಪ್ರತಿಭಟನಾ ಸಮಾವೇಶದಲ್ಲಿ ಪಾಕ್‌ಗೆ ಎಐಸಿಸಿ ಅಧ್ಯಕ್ಷರ ವಾರ್ನಿಂಗ್

ನಮ್ಮನ್ನು ಕೆಣಕಿದರೆ ನಿಮ್ಮ ಅಡ್ರೆಸ್ ಸಿಗಲ್ಲ: ಮಲ್ಲಿಕಾರ್ಜುನ ಖರ್ಗೆ

ಹುಬ್ಬಳ್ಳಿ: ಭಾರತೀಯರಾದ ನಮ್ಮನ್ನು ಕೆಣಕಿದರೆ, ನಿಮ್ಮ ಅಡ್ರೆಸ್ ಸಹ ಸಿಗಲ್ಲ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಪಾಕಿಸ್ತಾನಕ್ಕೆ ಗುಡುಗಿ ಎಚ್ಚರಿಕೆ ಕೊಟ್ಟರು.

ಹುಬ್ಬಳ್ಳಿಯಲ್ಲಿ ಎಐಸಿಸಿ ಹಾಗೂ ಕೆಪಿಸಿಸಿ ಘಟಕದಿಂದ ಆಯೋಜಿಸಿದ್ದ ಕೇಂದ್ರ ಸರಕಾರ ಬೆಲೆ ಏರಿಕೆ ವಿರುದ್ಧ ನಡೆದ ಬೃಹತ್ ಪ್ರತಿಭಟನಾ ಸಮಾವೇಶದಲ್ಲಿ ಮಾತನಾಡಿ, ಪಹಲ್ಗಾಮ್ ಕುರಿತು ವಿಶೇಷ ಅಧಿವೇಶನ ಕರೆಯಿರಿ ಎಂದು ಪ್ರಧಾನಿಗೆ ಒತ್ತಾಯಿಸಿದರು.

ದೇಶಕ್ಕಾಗಿ ನಾವೆಲ್ಲರೂ ಒಂದಾಗೋಣ. ಪ್ರಸಂಗ ಬಂದಾಗ ಜೀವ ಕೊಡೋಣ. ಕಾಂಗ್ರೆಸ್‌ನವರು ಎಂದೂ ಹೆದರಲ್ಲ. ಸಣ್ಣಪುಟ್ಟ ವ್ಯತ್ಯಾಸ ಬದಿಗಿಟ್ಟು ದೇಶಕ್ಕಾಗಿ ಶ್ರಮಿಸಲಿದ್ದೇವೆ. ಲೋಪದೋಷ ಯಾರದ್ದು, ಇದಕ್ಕೆ ಕಾರಣರಾದವರು ಯಾರು? ಮೂರು ಕಡೆ ಸೆಕ್ಯೂರಿಟಿ ಇದ್ದರೂ ಹೇಗೆ ದಾಳಿ ನಡೀತು ? ಸರ್ವ ಪಕ್ಷ ಸಭೆಗೆ ಪ್ರಧಾನಿಯೇ ಬರಲಿಲ್ಲ ಅಂದ್ರೆ ಹೇಗೆ? ಎಂದು ಪ್ರಶ್ನಿಸಿದರು.

140 ಕೋಟಿ ಜನ ದೇಶದ ದ್ರೋಹಿಗಳಾ? ಬಿಜೆಪಿಯವರು ಮಾತ್ರ ದೇಶ ಭಕ್ತರಾ? ಬ್ರಿಟಿಷರು ದೇಶದಲ್ಲಿದ್ದಾಗ ಇವರು ಮಲಗಿಕೊಂಡಿದ್ದರು. ಇವರೆಲ್ಲರೂ ಬ್ರಿಟಿಷರ ಕೈ ಕೆಳಗೆ ಕೆಲಸ ಮಾಡಿದವರು. ಈಗ ನಮಗೆ ದೇಶ ಭಕ್ತಿ ಬಗ್ಗೆ ಹೇಳ್ತಾರೆ. ನಾನು ಮೋದಿಗೆ ಹೆದರಲ್ಲ, ಅಮಿತ್ ಶಾಗೂ ಹೆದರಲ್ಲ. ನಾನು ಯಾರಿಗೂ ಹೆದರಲ್ಲ.ಈ ರಾಲಿ ಕೇವಲ ಕರ್ನಾಟಕಕ್ಕೆ ಸೀಮಿತವಲ್ಲ. ಕೇಂದ್ರದ ವಿರುದ್ಧ ಎಚ್ಚರಿಕೆ ಗಂಟೆ ಕೊಡುವ ಕೆಲಸ ಇಲ್ಲಿಂದ ನಡೀತಿದೆ. ಕಾಂಗ್ರೆಸ್ ಪ್ರತಿಭಟನಾ ಸಮಾವೇಶದಲ್ಲಿ ಸಂವಿಧಾನ ಇದೆ, ಅದಕ್ಕಾಗಿ ನಮಗೆ ಸ್ವತಂತ್ರವಾಗಿ ಮಾತನಾಡೋ ಶಕ್ತಿ ಇದೆ ಎಂದರು.

ಹುಬ್ಬಳ್ಳಿಯಲ್ಲಿ ಎಐಸಿಸಿ ಹಾಗೂ ಕೆಪಿಸಿಸಿ ಘಟಕದಿಂದ ಆಯೋಜಿಸಿದ್ದ ಕೇಂದ್ರ ಸರಕಾರ ಬೆಲೆ ಏರಿಕೆ ವಿರುದ್ಧ ನಡೆದ ಬೃಹತ್ ಪ್ರತಿಭಟನಾ ಸಮಾವೇಶವನ್ನು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಮುಖ್ಯಮಂತ್ರಿ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ, ಸಚಿವ ಎಚ್.ಕೆ.ಪಾಟೀಲ ಅವರು ಖಾಲಿ ಸಿಲಿಂಡರ್‌ಗಳಿಗೆ ಮಾಲೆ ಹಾಕಿ ವಿನೂತನವಾಗಿಉದ್ಘಾಟಿಸಿದರು.

ಬೆಲೆ ಏರಿಕೆಗೆ ಮೋದಿಯೇ ಕಾರಣ

ಕೇಂದ್ರದ ಬೆಲೆ ಏರಿಕೆ ವಿರುದ್ಧ ಮಾತನಾಡಿದ ಸಿಎಂ ಸಿದ್ದರಾಮಯ್ಯ, ತಮ್ಮ ತಪ್ಪು ಮುಚ್ಚಿಕೊಳ್ಳಲು ಬಿಜೆಪಿಯಿಂದ ಜನಾಕ್ರೋಶ ಯಾತ್ರೆ ನಡೆಯುತ್ತಿದೆ. ಮೋದಿ ಪ್ರಧಾನಿ ಆದ ಮೇಲೆ ಎಲ್ಲ ರಾಜ್ಯಗಳಲ್ಲಿಯೂ ಬೆಲೆ ಏರಿಕೆ ಆಗಿದೆ. ಅಚ್ಛೇ ದಿನ್ ಆಯೇಗಾ ಅಂದಿದ್ದರು, ಆದ್ರೆ ಒಳ್ಳೆಯ ದಿನಗಳು ಬಂದವಾ ಅನ್ನೋದನ್ನ ಮೋದಿ ಜನತೆಗೆ ಉತ್ತರಿಸಲಿ. ಈಗ ಬೆಲೆ ಏರಿಕೆಗೆ ಮೋದಿಯೇ ಕಾರಣ . ಡಾಲರ್ ನ್ನು ರೂಪಾಯಿ ಸಮಕ್ಕೆ ತರೋದಾಗಿ ಹೇಳಿದ್ದರು .ಮೋದಿ ಅಧಿಕಾರಕ್ಕೆ ಬಂದ ನಂತರ ದರ ಏರಿಕೆಗೆ ಯಾರು ಕಾರಣ? ಮೋದಿ ಅವರಿಗೆ ಮಾನ ಮರ್ಯಾದೆ ಏನಾದ್ರು ಇದೆಯಾ ?. ರಾಜ್ಯದಲ್ಲಿ ಹಾಲಿನ ದರ ಏರಿಕೆ ಮಾಡಿದ್ದು ನಿಜ. ಏರಿಸಿದ ದರವನ್ನು ನೇರವಾಗಿ ರೈತರಿಗೆ ವರ್ಗಾವಣೆ ಮಾಡಿದ್ದೇವೆ . ಬೇರೆ ರಾಜ್ಯಕ್ಕೆ ಹೋಲಿಕೆ ಮಾಡಿದರೆ ಕರ್ನಾಟಕದಲ್ಲಿ ಹಾಲು, ಬಸ್ ಟಿಕೆಟ್ ದರ ಕಡಿಮೆ ಇದೆ ನೀವು ನಮಗೇನು ಹೇಳ್ತಿರಿ ? ಎಂದು ಪ್ರಶ್ನಿಸಿದರು.

> **ಕೇಂದ್ರದಿಂದ ಜನರ ಪಿಕ್ ಪಾಕೆಟ್**
> **ಉಪಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಮಾತನಾಡಿ, ಬೆಲೆ ಏರಿಕೆ ಮೂಲಕ ಕೇಂದ್ರ ಸರಕಾರ ಜನರ ಪಿಕ್ ಪಾಕೆಟ್ ಮಾಡ್ತಿದೆ. ಬೆಲೆ ಏರಿಕೆಗೆ ಮುಕ್ತಿ ಹಾಡಲು ಗ್ಯಾರಂಟಿ ನೀಡಿದ್ದೇವೆ. ಐದು ಗ್ಯಾರಂಟಿ ಕೊಟ್ಟು ಶಕ್ತಿ ನೀಡುತ್ತಿದ್ದೇವೆ. ಆದರೂ ಬಿಜೆಪಿ ಜನಾಕ್ರೋಶ ಯಾತ್ರೆ ಮಾಡ್ತಿದೆ. ಈ ವೇಳೆ ಕೇಂದ್ರ ಡೀಸೆಲ್ ದರ ಏರಿಸಿತು.ಅದರ ವಿರುದ್ಧ ಬಿಜೆಪಿ ಏಕೆ ಹೋರಾಟ ಮಾಡ್ತಿಲ್ಲ? ಎಂದು ಆಕ್ರೋಶ ವ್ಯಕ್ತಪಡಿಸಿದರು.**

> **ಜಾತಿ ಜನಗಣತಿ ಮಾಡಬಹುದು ಅಂತ ಕೇಂದ್ರ ನಿರ್ಣಯ ಕೈಗೊಂಡಿದೆ. ಇದಕ್ಕಾಗಿ ನಾವು ಸಾಕಷ್ಟು ಪ್ರಯತ್ನ ಮಾಡಿದ್ದೆವು .ನಾವು ಹೇಳಿದಾಗ ಅವರು ಕೇಳಲಿಲ್ಲ .ಜನರ ಒತ್ತಡ ಹೆಚ್ಚಾದ ಮೇಲೆ ಈಗ ಸರಕಾರ ಬಗ್ಗಿದೆ .ಜಾತಿ ಜನಗಣತಿ ಮಾಡ್ತೇವೆ ಅಂತ ಹೇಳಿದ್ದಾರೆ. ಈಗ ಅವರದೇ ಸರಕಾರ ಜಾತಿ ಜನಗಣತಿ ಮಾಡ್ತಿದೆ. ಟೀಕೆ ಮಾಡಿದ್ರೆ ನೀವೇ ಅದರ ಪರಿಣಾಮ ಎದುರಿಸಬೇಕಾಗುತ್ತೆ. ಶೇ 50 ರಷ್ಟು ಮೀಸಲಾತಿಗೆ ಮಿತಿ ಇದೆ. ಈ ಮಿತಿ ತೆಗೆದು ಮೀಸಲಾತಿ ಪ್ರಮಾಣ ಹೆಚ್ಚಿಸಬೇಕು.ನಮ್ಮ ರಾಜ್ಯದ ಸಿಎಂ ಮತ್ತು ಮಂತ್ರಿಗಳು ತಯಾರಿದ್ದಾರೆ. ಆದರೆ ಕೇಂದ್ರ ಅದಕ್ಕೆ ಅವಕಾಶ ಕೊಡ್ತಿಲ್ಲ.**
> -ಮಲ್ಲಿಕಾರ್ಜುನ ಖರ್ಗೆ , ಎಐಸಿಸಿ ಅಧ್ಯಕ್ಷ

ಟ್ವೀಟೂ-ಖಾರಾ

ಕರ್ನಾಟಕ ಕಾಂಗ್ರೆಸ್

ದೇಶದಲ್ಲಿ ಎರಡು ಮಾದರಿಗಳಿವೆ. ಒಂದು, ಬಡವರಿಗೆ ಸಹಾಯ ಮಾಡುವ ಕರ್ನಾಟಕದ ಗ್ಯಾರಂಟಿ ಮಾಡೆಲ್, ಮತ್ತೊಂದು, ಬಿಜೆಪಿ ಸರಕಾರದ ಲೂಟಿ ಮತ್ತು ಬೆಲೆ ಏರಿಕೆಯ ಮಾಡೆಲ್. ಈ ಎರಡು ಮಾದರಿಗಳ ನಡುವೆ ಸಂಘರ್ಷ ನಡೆಯುತ್ತಿದೆ.

ಸಿದ್ದೇಶ್ ಕೆ.ಆರ್

ದೇಶದಲ್ಲಿ ಎರಡು ರಾಷ್ಟ್ರೀಯ ಪಕ್ಷಗಳಿವೆ. ಒಂದೂ ದೇಶಕ್ಕಾಗಿ ವಿರೋಧಿಗಳ ವಿರುದ್ಧ ಹೊರಡೋ ಬಿಜೆಪಿ ಇನ್ನೊಂದು ದೇಶ ಹಾಳಾದ್ರು ಪರವಾಗಿಲ್ಲ ಅಧಿಕಾರ ಮುಖ್ಯ ಅಂತ ಓಲೈಕೆ ರಾಜಕಾರಣ ಮಾಡೊ ಕಾಂಗ್ರೆಸ್

ವಿಶ್ವವಾಣಿ ಕ್ಲಬ್ ಹೌಸ್
02.05.2025
ಸಂಜೆ: 06.55 ರಿಂದ 08.05 ರವರೆಗೆ

ಶುಕ್ರವಾರದ ಅತಿಥಿ
ಶ್ರೀ ಪಿ.ಕೆ.ನಂದೀಶ
ವಿಷಯ
ಕುವೆಂಪು ರಾಮಾಯಣ ದರ್ಶನಂ - 43

vishwavani.news

ಸಮಾಚಾರ ಸಣ್ಣದಲ್ಲ

ಪಾಕಿಸ್ತಾನಕ್ಕೆ ಜೈ ಎಂದವರಿಗೆ ಗುಂಡಿಕ್ಕಿ

ಮೈಸೂರು: ಕೆಲವರು ಇಲ್ಲಿನ ಅನ್ನ ತಿಂದು, ಪಾಕಿಸ್ತಾನಕ್ಕೆ ಜೈ ಎನ್ನುತ್ತಾರೆ. ನಮ್ಮ ದೇಶದಲ್ಲಿದ್ದು ಪಾಕಿಸ್ತಾನಕ್ಕೆ ಜೈ ಅನ್ನೋರು ದೇಶದ್ರೋಹಿಗಳು. ಇವರನ್ನು ಗುಂಡಿಕ್ಕಿ ಕೊಲ್ಲಬೇಕು.



ಈ ಬಗ್ಗೆ ಹೊಸ ಕಾನೂನು ತರಬೇಕು ಎಂದು ವಿಧಾನ ಪರಿಷತ್ ಸದಸ್ಯ ಎಚ್. ವಿಶ್ವನಾಥ್ ಆಗ್ರಹಿಸಿದರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಇಡೀ ದೇಶ ಪ್ರಧಾನಿ ನರೇಂದ್ರ ಮೋದಿ ಅವರ ಜತೆ ಇದೆ. 1971ರಲ್ಲಿ ಇಂದಿರಾಗಾಂಧಿ ಪಾಕಿಸ್ತಾನವನ್ನು ಬಗ್ಗು ಬಡಿದರು. ಅದೇ ಕೆಲಸ ಈಗಲೂ ಮಾಡಬೇಕು. ಇಡೀ ದೇಶ ಅವರ ಪರವಾಗಿ ಇತ್ತು. ಈಗಲೂ ದೇಶದ ಜನತೆ ಅದೇ ಕೆಲಸವನ್ನು ಮಾಡಬೇಕಿದೆ ಎಂದು ಹೇಳಿದರು. ಕೇಂದ್ರ ಸರಕಾರದ ಜಾತಿ ಗಣತಿಯನ್ನು ದೇಶದ ಎಲ್ಲಾ ಜನರು ಸ್ವಾಗತ ಮಾಡುತ್ತಾರೆ. ನಾನೂ ಕೂಡ ಕೇಂದ್ರದ ಜಾತಿಗಣತಿಯನ್ನು ಸ್ವಾಗತಿಸುತ್ತೇನೆ. ಸಿಎಂ ಸಿದ್ದರಾಮಯ್ಯ ಅವರು ಜಾತಿ ಗಣತಿಯ ಗಂಭೀರತೆಯನ್ನು ಅರಿತಿಲ್ಲ. ಸಿದ್ದರಾಮಯ್ಯ ಸುಖಾ ಸುಮ್ಮನೆ ಏನೇನೋ ಮಾತನಾಡುತ್ತಾರೆ ಎಂದರು.

ಬಸ್ ನಿಲ್ಲಿಸಿ ನಮಾಜ್: ಡ್ರೈವರ್ ಅಮಾನತು

ಹಾವೇರಿ: ರಸ್ತೆ ಮಧ್ಯೆ ಬಸ್ ನಿಲ್ಲಿಸಿ ನಮಾಜ್ ಮಾಡಿದ ಪ್ರಕರಣಕ್ಕೆ ಸಂಬಂಧಿಸಿದಂತೆ ನಮಾಜ್ ಮಾಡಿದ ಡ್ರೈವರ್ ಕಂ ಕಂಡಕ್ಟರ್‌ನನ್ನು ಅಮಾನತು ಮಾಡಲಾಗಿದೆ. ಎಆರ್ ಮುಲ್ಲಾ ಅಮಾನತುಗೊಂಡ ಡ್ರೈವರ್. ವಿಶಾಲಗಡದಿಂದ ಹಾನಗಲ್‌ಗೆ ಬರುವ ರಸ್ತೆ ಮಧ್ಯೆ ಬಸ್ ನಿಲ್ಲಿಸಿ ಎಆರ್ ಮುಲ್ಲಾ ನಮಾಜ್ ಮಾಡಿದ್ದರು. ಬಸ್ಸಿನಲ್ಲಿಯೇ ನಮಾಜ್ ಮಾಡಿದ ದೃಶ್ಯವನ್ನು ಪ್ರಯಾಣಿಕರೊಬ್ಬರು ಮೊಬೈಲ್‌ನಲ್ಲಿ ಸೆರೆಹಿಡಿದಿದ್ದರು. ಈ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದ್ದು, ಈತನ ಮೇಲೆ ಕ್ರಮಕೈಗೊಳ್ಳುವಂತೆ ನೆಟ್ಟಿಗರು ಆಕ್ರೋಶ ವ್ಯಕ್ತಪಡಿಸಿದ್ದರು. ವೀಡಿಯೊ ವೈರಲ್ ಆದ ಬೆನ್ನಲ್ಲೇ ಸಾರಿಗೆ ಸಚಿವ ರಾಮಲಿಂಗಾ ರೆಡ್ಡಿ, ಬಸ್‌ನಲ್ಲಿ ನಮಾಜ್ ಮಾಡಿದ್ದ ಡ್ರೈವರ್ ಮೇಲೆ ತನಿಖೆಗೆ ಸೂಚಿಸಿದ್ದರು. ಸಾರಿಗೆ ಸಚಿವರ ಸೂಚನೆ ಹಿನ್ನೆಲೆ ಕೆಎಸ್‌ಆರ್‌ಟಿಸಿ ಅಧಿಕಾರಿಗಳು ತನಿಖೆ ನಡೆಸಿ ಚಾಲಕ ಎರ್ಆ ಮುಲ್ಲಾ ಅವರನ್ನು ಅಮಾನತು ಮಾಡಿ ಆದೇಶ ಹೊರಡಿಸಿದ್ದಾರೆ.

ನೇಣು ಬಿಗಿದುಕೊಂಡು ತಾಯಿ ಆತ್ಮಹತ್ಯೆ

ಚಿಕ್ಕಬಳ್ಳಾಪುರ: ಒಂದು ವರ್ಷದ ಮಗುವಿನ ಎದುರೇ ಮಹಿಳೆಯೊಬ್ಬಳು ಜೋಲಿಗೆ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವುದು

ಚಿಕ್ಕಬಳ್ಳಾಪುರ ನಗರದ ಸಿಎಂಸಿ ಬಡಾವಣೆಯಲ್ಲಿ ನಡೆದಿದೆ. ಆತ್ಮಹತ್ಯೆಗೆ ಶರಣಾದ ಮಹಿಳೆಯನ್ನು ಝಾನ್ಸಿ (23) ಎಂದು ಗುರುತಿಸಲಾಗಿದೆ. ಮಹಿಳೆಯ ಪತಿ ಈಶ್ವರ್, ಕ್ರೈನ್ ಅಪರೇಟರ್ ಆಗಿದ್ದು, ಮನೆಗೆ ಊಟಕ್ಕೆ ಬಂದಾಗ ಪತ್ನಿ ಆತ್ಮಹತ್ಯೆ ಮಾಡಿ ಕೊಂಡಿರುವುದು ಬೆಳಕಿಗೆ ಬಂದಿದೆ. ತಾಯಿಯ ನೇಣು ಬಿಗಿದ ಸ್ಥಿತಿಯಲ್ಲಿ ಸಾವನ್ನಪ್ಪಿದ್ದರೆ, ಮಗು ತಾಯಿಯ ಕಾಲುಗಳ ಬಳಿ ಮಲಗಿತ್ತಂತೆ. ಆತ್ಮಹತ್ಯೆಗೆ ನಿಖರ ಕಾರಣ ತಿಳಿದು ಬಂದಿಲ್ಲ. ಸ್ಥಳಕ್ಕೆ ಚಿಕ್ಕಬಳ್ಳಾಪುರ ಠಾಣೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಈ ಸಂಬಂಧ ಚಿಕ್ಕಬ ಳ್ಳಾಪುರ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪೌರಕಾರ್ಮಿಕರ ದಿನಾಚರಣೆಯಲ್ಲಿ 12,692 ಪೌರ ಕಾರ್ಮಿಕರಿಗೆ ಕಾಯಂ ನೇಮಕ ಪತ್ರ ವಿತರಣೆ

ಪೌರಕಾರ್ಮಿಕರ ಅಭಿವೃದ್ಧಿಗೆ ಸರಕಾರ ಬದ್ಧ: ಸಿಎಂ

ಪೌರಕಾರ್ಮಿಕರ ದಿನಾಚರಣೆಯಲ್ಲಿ ಪೌರ ಕಾರ್ಮಿಕರಿಗೆ ನೇಮಕ ಪತ್ರವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ವಿತರಣೆ ಮಾಡಿದರು. ಈ ವೇಳೆ ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸುರ್ಜೇವಾಲ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ, ಸಚಿವ ಕೆ.ಎಚ್.ಮುನಿಯಪ್ಪ ಇದ್ದರು.

ಅರಮನೆ ಮೈದಾನದಲ್ಲಿ ಬಿಬಿಎಂಪಿ ವತಿಯಿಂದ ಆಯೋಜಿಸಲಾದ ಪೌರಕಾರ್ಮಿಕರ ದಿನಾಚರಣೆ ಹಾಗೂ 12,692 ಪೌರ ಕಾರ್ಮಿಕರಿಗೆ ನೇಮಕ ಪತ್ರ ವಿತರಣೆ ಕಾರ್ಯಕ್ರಮವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ, ಪ್ರಧಾನ ಕಾರ್ಯದರ್ಶಿ ರಣದೀಪ್ ಸುರ್ಜೇವಾಲ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ಉದ್ಘಾಟಿಸಿದರು.

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಗುತ್ತಿಗೆದಾರರಿಂದ ನಿತ್ಯ ಕಿರುಕುಳ ಅನುಭವಿಸುತ್ತಿದ್ದ ಪೌರಕಾರ್ಮಿಕರಿಗೆ ಮಧ್ಯವರ್ತಿಗಳ ಕಾಟದಿಂದ ಮುಕ್ತಗೊಳಿಸುವ ನಿಟ್ಟಿನಲ್ಲಿ ನಮ್ಮ ಸರಕಾರ ಮಹತ್ವದ ತೀರ್ಮಾನ ಕೈಗೊಂಡಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ.

ಅರಮನೆ ಮೈದಾನದಲ್ಲಿ ಬಿಬಿಎಂಪಿ ವತಿಯಿಂದ ಆಯೋಜಿಸಲಾದ ಪೌರಕಾರ್ಮಿಕರ ದಿನಾಚರಣೆ ಹಾಗೂ 12,692 ಪೌರ ಕಾರ್ಮಿಕರಿಗೆ ನೇಮಕ ಪತ್ರ ವಿತರಣೆ ಮಾಡಿ ಮಾತನಾಡಿ, ಈ ಹಿಂದೆ ಮುಖ್ಯಮಂತ್ರಿಯಾಗಿದ್ದಾಗ ಪೌರಕಾರ್ಮಿಕರನ್ನು ಗುತ್ತಿಗೆದಾರರು ಶೋಷಣೆ ಮಾಡುತ್ತಿದ್ದು, ನ್ಯಾಯಯುತವಾದ ಸಂಬಳ ಕೊಡದಿರುವುದನ್ನು ಗಮನಿಸಿದ್ದೆ. ಅದಕ್ಕಾಗಿ ಶೋಷಣೆಗೊಳಗಾದ ಪೌರಕಾರ್ಮಿಕರ ಸಹಾಯಕ್ಕಾಗಿ ಕನಿಷ್ಟ ವೇತನ ಕಾಯಿದೆ ಪ್ರಕಾರ ದೊರೆಯಬೇಕಾದ ಕನಿಷ್ಠ ವೇತನವನ್ನು ಕಡ್ಡಾಯವಾಗಿ ದೊರೆಯುವ ವ್ಯವಸ್ಥೆಯನ್ನು ಮಾಡಿದೆ. ಏಳು ಸಾವಿರವಿದ್ದ ಸಂಬಳವನ್ನು 17000 ಕ್ಕೆ ಹೆಚ್ಚಿಸಿ, ನೇರವಾಗಿ ಬ್ಯಾಂಕ್ ಖಾತೆಗೆ ಪಾವತಿಯಾಗುವ ವ್ಯವಸ್ಥೆಯನ್ನು ಮಾಡಲಾಯಿತು. ಈ ರೀತಿ ಪೌರಕಾರ್ಮಿಕರಿಗೆ ಮಧ್ಯವರ್ತಿಗಳ ಹಾವಳಿಯಿಂದ ಮುಕ್ತಗೊಳಿಸಲಾಯಿತು ಎಂದರು. ಪ್ರತಿಪಕ್ಷದ ನಾಯಕನಾಗಿದ್ದ ಸಂದರ್ಭದಲ್ಲಿ ಪೌರಕಾರ್ಮಿಕರ ಬಹುದಿನಗಳ ಬೇಡಿಕೆಯಾಗಿದ್ದ ಕಾಯಂ ನೇಮಕಾತಿಯನ್ನು ಬೆಂಬಲಿಸಿದೆ. ಒಂದು ವೇಳೆ ಬಿಜೆಪಿ ಸರಕಾರ ಈ ಕ್ರಮ ಕೈಗೊಳ್ಳದಿದ್ದರೆ ನಾವು ಅಧಿಕಾರಕ್ಕೆ ಬಂದಾಗ ಬೇಡಿಕೆ ಪೂರೈಸುವುದಾಗಿ ಭರವಸೆ ನೀಡಿದ್ದೆ. ಇದೀಗ ಈ ಭರವಸೆಯನ್ನು ಈಡೇರಿಸಲಾಗಿದೆ. ಮುಂದಿನ ದಿನದಲ್ಲಿ ಪೌರಕಾರ್ಮಿಕರು ಎದುರಿಸುತ್ತಿರುವ ಇನ್ನುಳಿದ ಸಮಸ್ಯೆಗಳ ಬಗ್ಗೆಯೂ ಗಮನಹರಿಸಲಾಗುವುದು ಎಂದು ಸ್ಪಷ್ಟಪಡಿಸಿದರು.

ಹಲವು ಕಲ್ಯಾಣ ಯೋಜನೆ: ಪೌರ ಕಾರ್ಮಿಕರನ್ನು ಕಾಯಂಗೊಳಿಸುವ ಮೂಲಕ ನಾಲ್ಕನೇ ದರ್ಜೆಯ ಪೌರಕಾರ್ಮಿಕನ ವೇತನ, ಅವರ ಖಾತೆಗೆ ನೇರವಾಗಿ 39000 ರು.ಗಳು ಪಾವತಿಯಾಗಲಿದೆ. 1000 ಪೌರಕಾರ್ಮಿಕರನ್ನು ವಿದೇಶಕ್ಕೆ ಕಳಿಸುವ ಯೋಜನೆ ಸೇರಿದಂತೆ ಹಲವಾರು ಕಲ್ಯಾಣ ಯೋಜನೆಗಳನ್ನು ಪೌರಕಾರ್ಮಿಕರಿಗಾಗಿ ಹಮ್ಮಿಕೊಳ್ಳಲಾಗಿದೆ. ಪೌರಕಾರ್ಮಿಕರು, ಅವರ ಕುಟುಂಬದವರೂ ಮುಖ್ಯವಾಹಿನಿಗೆ ಬರಬೇಕು. ತನ್ಮೂಲಕ ಸಮ ಸಮಾಜವನ್ನು ನಿರ್ಮಿಸುವ ಉದ್ದೇಶ ಸರಕಾರದ್ದಾಗಿದೆ. ರಾಜ್ಯದ ಎಲ್ಲಾ ವರ್ಗದ ಜನರಿಗೆ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಸಮಾನತೆ ದೊರೆಯುವಂತಾಗಬೇಕು. ಪೌರಕಾರ್ಮಿಕ ವರ್ಗದ ಕಲ್ಯಾಣಕ್ಕಾಗಿ ಶ್ರಮಿಸುತ್ತಿರುವ ಸರಕಾರಕ್ಕೆ ಬೆಂಬಲವಾಗಿ ನಿಲ್ಲಬೇಕು. ಪೌರಕಾರ್ಮಿಕರ ಮಕ್ಕಳು ವಿದ್ಯಾವಂತರಾಗಿ ಸಮಾಜದ ಮುಖ್ಯವಾಹಿನಿಗೆ ಬರುವಂತಾಬೇಕು. ಸಾರ್ವಜನಿಕರೂ ತಮ್ಮ ಪರಿಸರದ ಸ್ವಚ್ಛತೆ ಬಗ್ಗೆ ಸ್ವಯಂಪ್ರೇರಣೆಯಿಂದ ಗಮನಹರಿಸಬೇಕು ಎಂದು ತಿಳಿಸಿದರು.

ಸಮಾಜದ ಆರೋಗ್ಯಕ್ಕೆ ಕಾರ್ಮಿಕರು ಆಧಾರ: ಕಾರ್ಯಕ್ರಮದಲ್ಲಿ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮಾತನಾಡಿ, ಸಮಾಜ ಸುಭದ್ರವಾಗಿರಲು ನಾಲ್ಕು ಆಧಾರ ಸ್ತಂಭಗಳಿರಬೇಕು. ಕಾರ್ಮಿಕರು ಈ ಸಮಾಜದ ಆಧಾರಸ್ತಂಭ. ನಮ್ಮ ಸರಕಾರ ಪೌರಕಾರ್ಮಿಕರನ್ನು ದೇವರ ಮಕ್ಕಳು, ಸ್ವಚ್ಛತಾ ರಾಯಭಾರಿಗಳು ಎಂದು ಭಾವಿಸುತ್ತಿದೆ. ನೀವು ಸಮಾಜದ ಆರೋಗ್ಯ ಕಾಪಾಡುತ್ತಿರುವ ವೈದ್ಯರು, ನೀವು ಬೆಂಗಳೂರು ನಗರವನ್ನು ಸುಂದರವಾಗಿಟ್ಟು ಸೇವೆ ಮಾಡಿರುವುದಕ್ಕೆ ಈ ನಗರಕ್ಕೆ ವಿಶ್ವ ಮಟ್ಟದ ಹೆಸರು ಬಂದಿದೆ. ಇಡೀ ವಿಶ್ವಕ್ಕೆ ದೊಡ್ಡ ಸೇವೆ ಮಾಡುವ ಕಾರ್ಮಿಕರ ದಿನವಿಂದು ಎಂದು ಶ್ಲಾಘಿಸಿದರು.

ಈ ಹಿಂದೆ ಪ್ರತಿಪಕ್ಷ ಸ್ಥಾನದಲ್ಲಿದ್ದಾಗ ನಾವು ಕೊಟ್ಟಿರುವ ಮಾತನ್ನು ಉಳಿಸಿಕೊಂಡಿದ್ದೇವೆ. ಪೌರ ಕಾರ್ಮಿಕರ ಮಕ್ಕಳೇ ಈ ಕಾರ್ಯಕ್ರಮವನ್ನು ನಡೆಸುತ್ತಿದ್ದಾರೆ. ನಿಮ್ಮ ಮಕ್ಕಳನ್ನು ವಿದ್ಯಾವಂತರನ್ನಾಗಿ, ಬುದ್ಧಿವಂತರಾಗಿ ದೊಡ್ಡ ಹುದ್ದೆ ಅಲಂಕರಿಸುವಂತೆ ಮಾಡಬೇಕು ಎಂಬುದು ನಮ್ಮ ಸರಕಾರದ ಉದ್ದೇಶ. ಪೌರ ಕಾರ್ಮಿಕರ ಅಭಿವೃದ್ಧಿಗಾಗಿ ಪಾಲಿಕೆ ಬಜೆಟ್‌ನಲ್ಲಿ 600 ಕೋಟಿ ರು. ಹಣ ಮೀಸಲಿಡಲಾಗಿದ್ದು, ಒಂದೇ ಒಂದು ರುಪಾಯಿ ಲಂಚ ಪಡೆಯದೇ ನಿಮ್ಮನ್ನು ಕಾಯಂ ಮಾಡಲಾಗಿದೆ. ಸಿಂಧುತ್ವ ವಿಚಾರದಲ್ಲಿ ಕೆಲವು ಗೊಂದಲಗಳಿರುವ ಕಾರಣಕ್ಕೆ ಕೆಲವರ ಕೆಲಸ ಕಾಯಂ ಆಗಿಲ್ಲ. ಈ ಬಗ್ಗೆ ಪ್ರತ್ಯೇಕವಾಗಿ ಬೂತ್ ಆರಂಭಿಸಿ, ನಿಮ್ಮ ದಾಖಲೆಗಳನ್ನು ಪರಿಶೀಲನೆ ಮಾಡಿಸಿ ನಿಮ್ಮೆಲ್ಲರಿಗೂ ನ್ಯಾಯ ಒದಗಿಸಲಾಗುವುದು ಎಂದು ಭರವಸೆ ನೀಡಿದರು.

ಪೌರಕಾರ್ಮಿಕರು ನಿವೃತ್ತಿಯಾದಾಗ 10 ಲಕ್ಷ ಹಣವನ್ನು ಡೆಪಾಸಿಟ್ ಮಾಡಿ ಆರು ಸಾವಿರ ಪಿಂಚಣಿ ದೊರೆಯುವಂತೆ ಯೋಜನೆ ರೂಪಿಸಿದ್ದೇವೆ. ನಿಮಗೆ ಆರೋಗ್ಯ, ಮಕ್ಕಳ ಶಿಕ್ಷಣ, ಕೌಶಲ್ಯಾಭಿವೃದ್ಧಿಗೆ ಆದ್ಯತೆ ನೀಡಲಾಗಿದೆ. 2017ರಲ್ಲಿ ಸಿದ್ದರಾಮಯ್ಯ ಅವರ ಸರಕಾರ 10 ಸಾವಿರ ಪೌರ ಕಾರ್ಮಿಕರನ್ನು ನೇರ ನೇಮಕ ಮಾಡಿತ್ತು. ರಾಜ್ಯಾದ್ಯಂತ 7.70 ಲಕ್ಷ ಮನೆ ನಿರ್ಮಿಸಲಾಗಿತ್ತು. 1 ಸಾವಿರ ಪೌರ ಕಾರ್ಮಿಕರನ್ನು ವಿದೇಶ ಪ್ರವಾಸಕ್ಕೆ ಕಳುಹಿಸಲಾಗಿದೆ. 2024-25ನೇ ಸಾಲಿನ ಬಜೆಟ್‌ನಲ್ಲಿ ಆರೋಗ್ಯ ವಿಮೆ ಘೋಷಿಸಿದ್ದಾರೆ ಎಂದು ಸರಕಾರದ ಕಾರ್ಯಕ್ರಮಗಳನ್ನು ವಿವರಿಸಿದರು.

ಪೌರಕಾರ್ಮಿಕ ಕಾಯಂ ನೇಮಕ ಆದೇಶವನ್ನು ಕೆಲವರಿಗೆ ಸಾಂಕೇತಿಕವಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ವಿತರಿಸಿದರು. ಈ ವೇಳೆ ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸುರ್ಜೇವಾಲ, ಸಚಿವರಾದ ರಾಮಲಿಂಗಾರೆಡ್ಡಿ, ಎಚ್.ಸಿ.ಮಹದೇವಪ್ಪ, ಬೈರತಿ ಸುರೇಶ್, ಕೃಷ್ಣಬೈರೇಗೌಡ, ರಹೀಂಖಾನ್, ಸಂಸದರಾದ ರಾಧಾಕೃಷ್ಣ, ನಾಸೀರ್ ಹುಸೇನ್, ಶಾಸಕರಾದ ಎಸ್.ಟಿ.ಸೋಮಶೇಖರ್, ರಿಜ್ವಾನ್ ಅರ್ಷದ್, ಶ್ರೀನಿವಾಸ್, ಮಾಜಿ ಮೇಯರ್ ನಾರಾಯಣ್, ವಿಧಾನ ಪರಿಷತ್ ಸದಸ್ಯರಾದ ರವಿ, ಯು.ಬಿ ವೆಂಕಟೇಶ್, ಬಿಬಿಎಂಪಿ ಆಡಳಿತಾಧಿಕಾರಿ ತುಷಾರ್ ಗಿರಿನಾಥ್, ಮುಖ್ಯ ಆಯುಕ್ತ ಮಹೇಶ್ವರ ರಾವ್ ಇದ್ದರು.

> ಪೌರಕಾರ್ಮಿಕರು ಪ್ರಸ್ತುತ ಕಾಯಂ ಮಾಡಲಾಗಿದ್ದು, ಮುಂದಿನ ದಿನದಲ್ಲಿ ಸುಮಾರು ಒಂಬತ್ತು ಸಾವಿರಕ್ಕೂ ಹೆಚ್ಚು ಸಂಖ್ಯೆಯಲ್ಲಿರುವ ಸರಕಾರಿ ವಾಹನ ಚಾಲಕರು, ಸಹಾಯಕರು ಹಾಗೂ ಆಪರೇಟರ್ಸ್‌ಗಳನ್ನೂ ಕಾಯಂ ಮಾಡಲಾಗುವುದು. ಶುಚಿತ್ವದ ಕಾಯಕದಲ್ಲಿ ತೊಡಗಿರುವವರನ್ನು ಕಾಯಂ ನೇಮಕಾತಿ ಮಾಡಲು ಸರಕಾರ ಬದ್ಧವಾಗಿದೆ.
>
> – ಸಿದ್ದರಾಮಯ್ಯ, ಮುಖ್ಯಮಂತ್ರಿ

> ರಾಜ್ಯ ಸರಕಾರ 13 ಸಾವಿರ ಪೌರ ಕಾರ್ಮಿಕರನ್ನು ಕಾಯಂ ಮಾಡಿರುವುದು ಅಭಿನಂದನಾರ್ಹ. ದೇಶದ ಇತಿಹಾಸದಲ್ಲಿಯೇ ಇಷ್ಟೊಂದು ಪೌರಕಾರ್ಮಿಕರನ್ನು ಕಾಯಂಗೊಳಿಸಿರುವುದು ಹೆಮ್ಮೆಯ ವಿಷಯ. ಪೌರ ಕಾರ್ಮಿಕರಿಗೆ ಸಿಗಬೇಕಾದ ಹಕ್ಕುಗಳು ಸರಿಯಾಗಿ ಸಿಗುತ್ತಿಲ್ಲ. 13 ಸಾವಿರ ಮಂದಿಯ ಜತೆಗೆ ರಾಜ್ಯದ ಉಳಿದ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಕೆಲಸ ಮಾಡುತ್ತಿರುವ ಪೌರ ಕಾರ್ಮಿಕರನ್ನು ಕಾಯಂ ಮಾಡಬೇಕು.
>
> – ಮಲ್ಲಿಕಾರ್ಜುನ ಖರ್ಗೆ, ಅಧ್ಯಕ್ಷ ಎಐಸಿಸಿ

> ಕೋವಿಡ್ ಸಂದರ್ಭದಲ್ಲಿ ನಿಮ್ಮ ಪ್ರಾಣವನ್ನು ಪಣಕ್ಕಿಟ್ಟು ವಾರಿಯರ್‌ನಂತೆ ಇಡೀ ರಾಜ್ಯವನ್ನು ಕಾಪಾಡಿದ್ದನ್ನು ನಾವು ಮರೆಯಲು ಸಾಧ್ಯವಿಲ್ಲ. ಪೌರ ಕಾರ್ಮಿಕರನ್ನು ಯಾರೂ ಕೀಳಾಗಿ ಕಾಣುವಂತಿಲ್ಲ. ನಾವು ಆಯುಕ್ತರಿಗೆ ನೀಡುವ ಗೌರವವನ್ನು ಪೌರಕಾರ್ಮಿಕರಿಗೂ ನೀಡಬೇಕು.
>
> – ಡಿ.ಕೆ.ಶಿವಕುಮಾರ್, ಉಪಮುಖ್ಯಮಂತ್ರಿ

ಖರ್ಗೆ ಸಿಎಂ ಆಗಲಿಲ್ಲ; ಮುನಿಯಪ್ಪ ವಿಷಾದ

ಆಹಾರ ಮತ್ತು ನಾಗರಿಕ ಸಚಿವ ಮುನಿಯಪ್ಪ ಮಾತನಾಡಿ, ಶೋಷಿತ ವರ್ಗದವರು ಎಷ್ಟೇ ಒಳ್ಳೆಯ ಕೆಲಸ ಮಾಡಿದರೂ ಅದು ಗಣನೆಗೆ ಬರುತ್ತಿಲ್ಲ. ಬಾಬು ಜಗಜೀವನರಾಮ್ ಎಂಟು ಬಾರಿ ಸೋಲಿಲ್ಲದ ಸಂಸದರಾಗಿ, ಕಾರ್ಮಿಕರಾಗಿ ಬಹಳಷ್ಟು ಒಳ್ಳೆಯ ಕೆಲಸಗಳನ್ನು ಮಾಡಿದ್ದಾರೆ. ಆದರೆ ಪ್ರಧಾನಿಯಾಗಲು ಸಾಧ್ಯವಾಗಲಿಲ್ಲ. ಕರ್ನಾಟಕಕ್ಕೆ ಮಲ್ಲಿಕಾರ್ಜುನ ಖರ್ಗೆ ಅವರು ಸಾಕಷ್ಟು ಕೆಲಸ ಮಾಡಿದರೂ, ಮುಖ್ಯಮಂತ್ರಿಯಾಗಲಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಕೊಟ್ಟ ಭರವಸೆ ಈಡೇರಿಸಿದ್ದೇವೆ: ಮಲ್ಲಿಕಾರ್ಜುನ ಖರ್ಗೆ

ಕಾರ್ಯಕ್ರಮದಲ್ಲಿ ಮಾತನಾಡಿದ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ರಾಜ್ಯದಲ್ಲಿ ಕಾಂಗ್ರೆಸ್

ಚುನಾವಣಾ ಸಮಯದಲ್ಲಿ ನೀಡಿರುವ ಎಲ್ಲ ಭರವಸೆಯನ್ನು ಈಡೇರಿಸಿದ್ದೇವೆ. ನಮ್ಮ ವಿರುದ್ಧ ವಿರೋಧಿಗಳು ಅನಗತ್ಯ ಟೀಕೆ ಮಾಡಬಹುದು. ಆದರೆ ಸರಕಾರ ಮಾಡಿದ ಒಳ್ಳೆಯ ಕೆಲಸಗಳನ್ನು ಗುರುತಿಸಿ ಮೆಚ್ಚುಗೆ ವ್ಯಕ್ತ ಪಡಿಸಬೇಕು ಎಂದು ಅಭಿಪ್ರಾಯಪಟ್ಟರು. ಅಂಬೇಡ್ಕರ್ ಸಂವಿಧಾನ ಬರೆದಿರುವುದಷ್ಟೆ ಅಲ್ಲ, ಬ್ರಿಟಿಷರ ಆಳ್ವಿಕೆಯಲ್ಲೆ ವೈಸ್‌ರಾಯ್ ಕೌನ್ಸಿಲ್‌ನ ಸದಸ್ಯರಾಗಿ ಹೋರಾಟ ಮಾಡಿ, ಕಾರ್ಮಿಕರಿಗಾಗಿ ಹಲವು ಸೌಲಭ್ಯಗಳನ್ನು ಕೊಡಿಸಿದರು. ಸ್ವಾತಂತ್ರ್ಯ ಪೂರ್ವದಲ್ಲಿ ಕೋಲ್ ಮೈನ್ಸ್ ಸೇಫ್ಟಿ ಬಿಲ್, ಫ್ಯಾಕ್ಟರಿ ಬಿಲ್, ವರ್ಕ್‌ಮನ್ ಕಂಪೆನ್ಸೇಷನ್ ಬಿಲ್, ಹೆಲ್ತ್ ಬಿಲ್, ಸಾಮಾಜಿಕ ಭದ್ರತೆ, ವಿಮಾ ಸೌಲಭ್ಯ ಸೇರಿದಂತೆ 10ಕ್ಕೂ ಹೆಚ್ಚು ಬಿಲ್‌ಗಳನ್ನು ಕಾರ್ಮಿಕರಿಗಾಗಿ ರೂಪಿಸಿದ್ದರು ಎಂದರು. ಬ್ರಿಟಿಷರು ಭಾರತೀಯರನ್ನು 13-14 ಗಂಟೆ ಕಾರ್ಮಿಕರನ್ನು ದುಡಿಸಿಕೊಳ್ಳುತ್ತಿದ್ದರು. ಬ್ರಿಟಿಷ್ ನೌಕರರಿಂದ 8 ಗಂಟೆ ಮಾತ್ರ ಕೆಲಸ ಮಾಡಿಸಲಾಗುತ್ತಿತ್ತು. ಈ ತಾರತಮ್ಯವನ್ನು ಅಂಬೇಡ್ಕರ್ ಪ್ರತಿಭಟಿಸಿದರು. ಆ ಬಳಿಕ 8 ಗಂಟೆ ದುಡಿಮೆಯ ಅವಧಿ ಕಾನೂನು ಜಾರಿಯಾಯಿತು. ಮೋದಿ ಸರಕಾರ ಕಾರ್ಮಿಕರಿಗಾಗಿ ಇದ್ದ 44 ಕಾನೂನುಗಳನ್ನು ರದ್ದು ಮಾಡಿ, ತಮಗೆ ಬೇಕಾದಂತೆ ಮೂರ್ನಾಲ್ಕು ಕಾನೂನುಗಳನ್ನು ಮಾತ್ರ ಉಳಿಸಿದ್ದಾರೆ. ಈಗ ದುಡಿಮೆ ಅವಧಿಯನ್ನು 10 ಗಂಟೆ ಮಾಡಿದ್ದಾರೆ. ಬಂಡವಾಳಶಾಹಿಗಳು ಎಲ್ಲೆಡೆ ಕಾಯಂ ನೌಕರರನ್ನು ತೆಗೆದು, ಗುತ್ತಿಗೆ ಪದ್ಧತಿ ಜಾರಿಗೆ ಮಾಡಲಾಗಿದೆ. ಅದಕ್ಕೆ ಮೋದಿ ಬೆಂಬಲ ನೀಡುತ್ತಿದ್ದಾರೆ ಎಂದು ಆರೋಪಿಸಿದರು. ಕಾರ್ಮಿಕರಿಗೆ ಅಂಬೇಡ್ಕರ್ ನೀಡಿರುವ ಅನೇಕ ಕೊಡುಗೆಯನ್ನು ಮೋದಿ ಸರಕಾರ ಅದನ್ನು ಹಾಳು ಮಾಡುತ್ತಿದೆ. ಖಾಸಗಿಯಲ್ಲಿ ಪರಿಶಿಷ್ಟರು ಹಾಗೂ ಹಿಂದುಳಿದ ವರ್ಗಗಳಿಗೆ ನೌಕರಿ ನೀಡುವುದಿಲ್ಲ. ಆದಕ್ಕಾಗಿಯೇ ನೆಹರು ಸರಕಾರಿ ಸಹಭಾಗಿತ್ವದ ಸಂಸ್ಥೆಗಳನ್ನು ಮಾಡಿದ್ದರು, ಈಗ ಮೋದಿ ಸರಕಾರ ಸಾರ್ವಜನಿಕ ಉದ್ದಿಮೆಗಳನ್ನು ಹಂತ ಹಂತವಾಗಿ ಮುಚ್ಚುತ್ತಿದೆ. ಈಗಲೂ ಅಸ್ಪೃಶ್ಯತೆ ಜಾರಿಯಲ್ಲಿದೆ ಎಂದು ಆರೋಪಿಸಿದರು.

ಜಾತಿಗಣತಿ ದತ್ತಾಂಶ ಸರಿ ಆಗದಿದ್ದರೆ ಕೋರ್ಟ್ ಮೊರೆ

ಚಿತ್ರದುರ್ಗ: ಒಳ ಮೀಸಲು ಜಾರಿಗೆ ರಾಜ್ಯ ಸರಕಾರದ ದತ್ತಾಂಶ ಸರಿಯಿಲ್ಲ. ಈಗ ಜಾತಿ ಗಣತಿ ನಡೆಸುವಲ್ಲಿ ಭೋವಿ ಸಮಾಜದ ಕುಲ ಕಸಬು ಸರಿಯಾಗಿ ನಮೂದು ಮಾಡಿಲ್ಲ. ಇದನ್ನು ಸರಿಪಡಿಸಿ ಗಣತಿ ನಡೆಸಬೇಕು. ಇಲ್ಲವಾದರೆ ನ್ಯಾಯಾಲಯದ ಮೊರೆ

ಹೋಗುವುದಾಗಿ ಭೋವಿ ಗುರುಪೀಠದ ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ ಎಚ್ಚರಿಕೆ ನೀಡಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಶ್ರೀಗಳು, ಸುಪ್ರೀಂ ಕೋರ್ಟ್ ಒಳ ಮೀಸಲಾತಿ ಜಾರಿ ಮಾಡಲು ಆಯಾ ರಾಜ್ಯ ಸರಕಾರಗಳಿಗೆ ಅಧಿಕಾರವನ್ನು ನೀಡಿದೆ. ಆದರೆ ಇದನ್ನು ಜಾರಿ ಮಾಡಲು ಸರಿಯಾದ ದತ್ತಾಂಶವನ್ನು ಹೊಂದಿರಬೇಕು ಎಂದು ಸೂಚನೆ ನೀಡಿದೆ. ಇದರ ಅನ್ವಯ ನಮ್ಮ ಭೋವಿ ಸಮುದಾಯಕ್ಕೆ ಸಂಬಂಧಪಟ್ಟಂತೆ ಕೇವಲ ಮೂರು ಕುಲ ಕಸಬು ಮಾತ್ರವೇ ನಮೂದು ಮಾಡಲಾಗಿದೆ. ಆದರೆ ನಮ್ಮಲ್ಲಿ ಕಲ್ಲು ಒಡೆಯುವವರು, ಕೆರೆಗಳನ್ನು ಕಟ್ಟುವವರು, ಕಟ್ಟಡ ಕಟ್ಟುವವರು, ಬಾವಿ ಮಾಡುವವರು ಈ ರೀತಿ ಕಸಬು ಮಾಡುವವರು ಇದ್ದಾರೆ. ಆದರೆ ಜಾತಿಗಣತಿಯಲ್ಲಿ ಇದಾವುದನ್ನು ನಮೂದು ಮಾಡಿಲ್ಲ. ಇದು ಸರಿಯಾಗುವುದಿಲ್ಲ ಎಂದು ಆರೋಪಿಸಿದರು.

ನಮ್ಮ ಸಮುದಾಯಕ್ಕೆ ಆಗಿರುವ ತಪ್ಪನ್ನು ಸರಿಪಡಿಸಿ: ಪರಿಶಿಷ್ಟ ಜಾತಿಯಲ್ಲಿನ 101 ಜಾತಿಗಳ ಸಮೀಕ್ಷೆಯನ್ನು ಮಾಡುವುದಾದರೆ ನಮ್ಮ ಭೋವಿ ಸಮುದಾಯಕ್ಕೆ ಆಗಿರುವ ತಪ್ಪನ್ನು ಸರಿಪಡಿಸಿ ಜಾತಿ ಗಣತಿ ನಡೆಸಬೇಕಿದೆ. ಇಲ್ಲವಾದಲ್ಲಿ ಭೋವಿ ಸಮಾಜಕ್ಕೆ ಅನ್ಯಾಯವಾಗುತ್ತದೆ. ಮುಂದಿನ ದಿನದಲ್ಲಿ ಯಾವುದೇ ಯೋಜನೆ ರೂಪಿಸಬೇಕಾದರೆ ಈ ದತ್ತಾಂಶ ಅಗತ್ಯ. ಹಾಗಾಗಿ ಸರಿಯಾಗಿ ಜಾತಿಗಣತಿ ಮಾಡಬೇಕಿದೆ. ನಮ್ಮ ಮನವಿಯನ್ನು ಪರಿಗಣಿಸದೇ ಜಾತಿಗಣತಿ ಪ್ರಾರಂಭ ಮಾಡಿದರೆ ನಾವು ನ್ಯಾಯಕ್ಕಾಗಿ ನ್ಯಾಯಾಲಯದ ಮೊರೆ ಹೋಗಬೇಕಾಗುತ್ತದೆ ಎಂದು ಎಂದು ಶ್ರೀಗಳು ಎಚ್ಚರಿಸಿದರು.

ಪೊಲೀಸ್ ಅಧಿಕಾರಿ ಮೇಲೆ ಸಿಎಂ ಕೈಎತ್ತಿಲ್ಲ: ರಾಜಣ್ಣ

ಕಾಂಗ್ರೆಸ್ ಶಾಲು ಧರಿಸಿ ಧಿಕ್ಕಾರ ಕೂಗಿದವರು ಹೇಡಿಗಳು

ದಾವಣಗೆರೆ: ಮುಖ್ಯಮಂತ್ರಿ ಸಿದ್ದರಾಮಯ್ಯನವರು ಮಾನಸಿಕ ಸ್ಥಿಮಿತ ಕಳೆದುಕೊಂಡಿದ್ದಾರೆ

ಎಂದವರ ಸ್ಥಿಮಿತವೇ ಸರಿ ಇಲ್ಲ. ಕಾಂಗ್ರೆಸ್ ಶಾಲು ಹಾಕಿಕೊಂಡು ನಮ್ಮ ಕಾರ್ಯಕ್ರಮದಲ್ಲಿ ಧಿಕ್ಕಾರ ಕೂಗಿದವರನ್ನು ಹೇಡಿಗಳು ಎನ್ನಬೇಕು ಎಂದು ಸಹಕಾರ ಸಚಿವ ಕೆ.ಎನ್. ರಾಜಣ್ಣ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಪೊಲೀಸ್ ಅಧಿಕಾರಿ ಮೇಲೆ ಸಿದ್ದರಾಮಯ್ಯ ಅವರು ಕೈಎತ್ತಿಲ್ಲ. ಏಕವಚನದಲ್ಲೂ ಕರೆದಿಲ್ಲ. ಪ್ರೀತಿಯಿಂದ ಕರೆದಿರುವುದು. ಕೈ ಎತ್ತಿದ್ದಾರೆ, ಏಕವಚನದಲ್ಲಿ ನಿಂದಿಸಿದ್ದಾರೆ ಎನ್ನುವುದು ಮಾಧ್ಯಮಗಳ ಸೃಷ್ಟಿ ಎಂದರು. ಸಿದ್ದರಾಮಯ್ಯ ಅವರ ಮಾತು, ಸ್ವಭಾವವೇ ಹಾಗೆ. ಅವರದ್ದು ಶ್ರೀಮಂತ, ಬಡವ ಸೇರಿದಂತೆ ಎಲ್ಲರಿಗೂ ಸ್ಪಂದಿಸುವ ಹೃದಯ. ವಿರೋಧ ಪಕ್ಷಗಳಿಗೆ ಕೆಲಸವೇ ಇಲ್ಲ. ಚುನಾವಣೆಯಲ್ಲಿ ಸೋತಿದ್ದರಿಂದ ಈ ರೀತಿ ಮಾಡುತ್ತಿದ್ದಾರೆ. ಜನರ ಭಾವನೆಗಳನ್ನು ಕೆರಳಿಸುವ ಕೆಲಸ ಮಾಡುತ್ತಿದ್ದಾರೆ ಎಂದು ಟೀಕಿಸಿದರು. ಪಹಲ್ಗಾಮ್ ದಾಳಿಗೆ ಪ್ರತೀಕಾರವಾಗಿ ಯಾರು ತಪ್ಪು ಮಾಡಿದ್ದಾರೋ ಅವರಿಗೆ ಶಿಕ್ಷೆ ಆಗಲೇಬೇಕು ಎನ್ನುವುದು ದೇಶದ ಜನರ ಭಾವನೆ. ನಾನು ಕೂಡ ದೇಶದ ಪ್ರಜೆಗಳಲ್ಲಿ ಒಬ್ಬ. ನನ್ನ ಭಾವನೆ ಕೂಡ ಅದೇ ಆಗಿದೆ. ಪ್ರಧಾನಿಗಳು ಕಾಣೆಯಾಗಿದ್ದಾರೆ ಎಂದು ಪೋಸ್ಟ್ ಮಾಡಿದ್ದಾರೆ. ಪ್ರಧಾನಿಗಳು ಇಲ್ಲೇ ಇದ್ದಾರಲ್ಲ, ಅವರು ಎಲ್ಲಿಗೆ ಹೋಗಿದ್ದಾರೆ ಎಂದರು.

ಕೇಂದ್ರದ ಜಾತಿಗಣತಿ ಯಾವ ಸ್ವಾರ್ಥಕ್ಕೆ?

ರಾಜ್ಯದಲ್ಲಿ ಸ್ವಾರ್ಥ ಮತ್ತು ಮತಬ್ಯಾಂಕ್‌ಗಾಗಿ ಜಾತಿಗಣತಿ ಮಾಡುತ್ತಿದ್ದಾರೆ ಎಂದು ಬಿಜೆಪಿಯವರು ಹೇಳಿಕೆ ನೀಡಿದ್ದಾರೆ. ಹಾಗಿದ್ದರೆ ಕೇಂದ್ರದವರು ಯಾವ ಸ್ವಾರ್ಥಕ್ಕಾಗಿ ಈಗ ಜಾತಿಗಣತಿ ಮಾಡಲು ಹೊರಟಿದ್ದಾರೆ. ಕೇಂದ್ರ ಸರಕಾರದ ನಿರ್ಣಯವನ್ನು ಸ್ವಾಗತಿಸುತ್ತೇವೆ. ರಾಜ್ಯದಲ್ಲಿ ಸಮಾಜದ ಕಟ್ಟಕಡೆಯ ವ್ಯಕ್ತಿ ಕೂಡ ಸಾಮಾಜಿಕ ಹಾಗೂ ಶೈಕ್ಷಣಿಕವಾಗಿ ಮುಂದೆ ಬರಲು ಜಾತಿಗಣತಿ ಮಾಡಿಸಿದ್ದೇವೆ. ಸ್ವಾರ್ಥ ವೋಟ್ ಬ್ಯಾಂಕ್‌ಗಾಗಿ ಜಾತಿ ಗಣತಿ ಮಾಡಿಸಲಾಗಿದೆ ಎಂದರೆ ಒಪ್ಪುವುದಿಲ್ಲ ಎಂದು ಸಹಕಾರ ಸಚಿವ ಕೆ.ಎನ್.ರಾಜಣ್ಣ ಹೇಳಿದರು.

ಮಂಗಳೂರಿನಲ್ಲಿ ಎನ್‌ಐಎ ಸ್ಥಾಪನೆ ಬೇಡ

ಅಂಡರ್‌ವರ್ಲ್ಡ್ ಸೇರಿ ಹಲವು ಕಡೆಯಿಂದ ಜೀವ ಬೆದರಿಕೆ

ಬೀದರ್: ಈ ಹಿಂದೆ ಕೆಲವು ಬಾರಿ ಅಂಡರ್‌ವರ್ಲ್ಡ್ ಸೇರಿದಂತೆ ಹಲವು ಕಡೆಗಳಿಂದ ಜೀವ ಬೆದರಿಕೆ ಕರೆಗಳು ಬಂದಿವೆ ಎಂದು ವಿಧಾನಸಭೆ ಸ್ಪೀಕರ್ ಯುಟಿ ಖಾದರ್ ಹೇಳಿದ್ದಾರೆ.

ಪಿಎಫ್‌ಐನಿಂದ ಯುಟಿ ಖಾದರ್‌ಗೆ ಜೀವ ಬೆದರಿಕೆ ಬಂದಿದೆ ಎಂಬ ಅನುಪಮಾ ಶೆಣೈ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, ನನಗಾಗಿ ಮಂಗಳೂರಿನಲ್ಲಿ ಎನ್‌ಐಎ ಸ್ಥಾಪನೆ ಮಾಡುವುದು ಬೇಡ, ಜಿಲ್ಲೆಯ ಜನಕ್ಕಾಗಿ ಮಾಡುವುದಾದರೆ ಮಾಡಲಿ. ಎಲ್ಲಿ ಹುಟ್ಟಬೇಕು? ಎಲ್ಲಿ ಸಾಯಬೇಕು? ಅದನ್ನ ದೇವರು ಬರೆದಿದ್ದಾನೆ. ನೆಮ್ಮದಿಯಾಗಿ ಸಾಯುವ ಪರಿಸ್ಥಿತಿ ದೇವರು ಮಾಡಿಕೊಡಲಿ ಎಂದು ಪ್ರಾರ್ಥನೆ ಮಾಡುತ್ತೇನೆ. ದೇವರು ಇಟ್ಟಂತೆ ಇರಲಿ, ನಮ್ಮ ಕೈಯಲ್ಲಿ ಏನು ಇಲ್ಲ ಎಂದು ಹೇಳಿದರು.

ಪಹಲ್ಗಾಮ್ ದಾಳಿ ಖಂಡಿಸಿ ಮಾತನಾಡಿದ ಅವರು, ಕೃತ್ಯವನ್ನು ಈಗಾಗಲೇ ಎಲ್ಲರೂ ಖಂಡಿಸಿದ್ದಾರೆ. ದಾಳಿಕೋರರನ್ನು ಪತ್ತೆ ಹಚ್ಚಿ ಕಠಿಣ ಕ್ರಮ ಕೈಗೊಳ್ಳುವದರ ಜತೆಗೆ ಅದರ ಹಿಂದೆ ಯಾರಿದ್ದಾರೋ ಅವರನ್ನು ಮಟ್ಟ ಹಾಕುವ ಕೆಲಸ ಕೇಂದ್ರ ಸರಕಾರ ಮಾಡಬೇಕು. ದೇಶದ ಜನರು ಮೋದಿಯವರಿಂದ ಇದನ್ನೇ ಅಪೇಕ್ಷೆ ಪಡುತ್ತಾರೆ. ದಾಳಿಗೊಳಗಾದ ಜನರಿಗೆ ಮಾತ್ರವಲ್ಲ, ಇಡಿ ದೇಶದ ಜನರಿಗೆ ನ್ಯಾಯಕೊಡುವ ಕೆಲಸ ಕೇಂದ್ರ ಸರಕಾರ ಮಾಡಬೇಕು ಎಂದರು.

ಕೇಂದ್ರದಿಂದ ಜನಗಣತಿ ಜತೆಗೆ ಜಾತಿಗಣತಿ ವಿಚಾರಕ್ಕೆ ಪ್ರತಿಕ್ರಿಯೆ ನೀಡಿದ ಅವರು, ಅದು ಕೇಂದ್ರ ಮತ್ತು ರಾಜ್ಯಕ್ಕೆ ಬಿಟ್ಟಿದ್ದು, ಆಡಳಿತ ಪಕ್ಷ, ಪ್ರತಿಪಕ್ಷಗಳಿಗೆ ಮಿತ್ರನಾಗಿ ನಾನು ಸ್ಪೀಕರ್ ಆಗಿದ್ದೇನೆ. ನನ್ನ ಬಾಯಿಗೆ ಈಗ ಬೀಗ ಹಾಕಿದ್ದು, ನನ್ನ ಪ್ರಕಾರ ನಾನೂ ಮಾತನಾಡಿದ್ದೇನೆ ಎಂದು ಹೇಳಿದರು.

> ದೇಶದ ಸೌಹಾರ್ದತೆಯನ್ನು ಕದಡುವುದು ಭಯೋತ್ಪಾದಕ ಕೃತ್ಯದ ಉದ್ದೇಶವಾಗಿದ್ದು, ಜಾತ್ಯಾತೀತತೆಯನ್ನ ಹಾಳು ಮಾಡಿ, ದೇಶವನ್ನು ದುರ್ಬಲಗೊಳಿಸುವುದು ಅವರ ಗುರಿಯಾಗಿದೆ. ಈ ಕೃತ್ಯದ ವಿರುದ್ಧ ಏನು ಕ್ರಮ ಕೈಗೊಳ್ಳಬೇಕು ಅದನ್ನೆಲ್ಲ ಕೇಂದ್ರ ಸರಕಾರ ತೆಗೆದುಕೊಳ್ಳಬೇಕು. ಯುದ್ಧ ಮಾಡಬೇಕಾ ಅಥವಾ ಬೇಡವಾ? ಎನ್ನುವುದು ಮೋದಿ ಹಾಗೂ ಸರ್ವಪಕ್ಷಗಳಿಗೆ ಬಿಟ್ಟಿದ್ದು.
>
> – ಯುಟಿ ಖಾದರ್, ವಿಧಾನಸಭೆ ಸ್ಪೀಕರ್

ಶೃಂಗೇರಿ ಮಠದಿಂದ 2 ಲಕ್ಷ ಪರಿಹಾರ

ಹಿಂದೂ ಜತೆ ಹಿಂದೂಗಳೇ ನಿಲ್ಲಬೇಕು: ಶೃಂಗೇರಿ ಶ್ರೀ

ಚಿಕ್ಕಮಗಳೂರು: ಕಾಶ್ಮೀರದ ಪಹಲ್ಗಾಮ್ ಬಳಿ ನಡೆದ ಭಯೋತ್ಪಾದಕ ದಾಳಿಯನ್ನ ಚಿಕ್ಕಮಗಳೂರು ಜಿಲ್ಲೆ ಶೃಂ

ಗೇರಿ ಶಾರದಾ ಮಠ ಕಿರಿಯ ಶ್ರೀ ವಿಧುಶೇಖರ ಶ್ರೀಗಳು ಖಂಡಿಸಿದ್ದು, ಮೃತಪಟ್ಟಿರುವ 26 ಕುಟುಂಬಗಳಿಗೆ ಶೃಂಗೇರಿ ಮಠದಿಂದ ತಲಾ 2 ಲಕ್ಷ ರು. ಪರಿಹಾರವನ್ನು ಪ್ರಸಾದ ರೂಪದಲ್ಲಿ ನೀಡಲಾಗುವುದು ಎಂದು ಪ್ರಕಟಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಉಗ್ರರ ದಾಳಿಗೆ ತಮ್ಮ ಮನೆಯವರನ್ನು ಕಳೆದುಕೊಂಡ ನೋವಿನಲ್ಲಿ 26 ಕುಟುಂಬಸ್ಥರು ಇದ್ದಾರೆ. ಹಿಂದೂಗಳ ಜತೆ ಹಿಂದೂಗಳೇ ನಿಲ್ಲಬೇಕು. ಹಾಗಾಗಿ ಶೃಂಗೇರಿ ಶಾರದಾ ಪೀಠದ ವತಿಯಿಂದ ಪ್ರತಿ ಕುಟುಂಬಕ್ಕೆ 2 ಲಕ್ಷ ರು. ಹಣವನ್ನು ಪ್ರಸಾದದ ರೂಪದಲ್ಲಿ ನೀಡುತ್ತಿದ್ದೇವೆ ಎಂದು ತಿಳಿಸಿದ್ದಾರೆ. ದುಃಖದಲ್ಲಿರುವ ಕುಟುಂಬದಲ್ಲಿ ಸಂತೋಷ, ಶ್ರೇಯಸ್ಸು ವೃದ್ಧಿಸಲಿ ಎಂದು ಶ್ರೀಗಳು ತಿಳಿಸಿದ್ದಾರೆ. ಈಗಾಗಲೇ ಪಹಲ್ಗಾಮ್ ದಾಳಿಯಲ್ಲಿ ಮೃತಪಟ್ಟ ಕರ್ನಾಟಕದ ನಾಗರೀಕರ ಕುಟುಂಬಗಳಿಗೆ ತಲಾ 10 ಲಕ್ಷ ರು.ಗಳ ಪರಿಹಾರ ನೀಡುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಘೋಷಣೆ ಮಾಡಿದ್ದಾರೆ. ಮಠದ ವತಿಯಿಂದಲೂ 26 ಕುಟುಂಬಗಳಿಗೆ ತಲಾ 2 ಲಕ್ಷ ರು.ಗಳನ್ನು ಪ್ರಸಾದದ ರೂಪದಲ್ಲಿ ನೀಡಲಾಗುವುದು. ಮಠದ ಆಡಳಿತಾಧಿಕಾರಿ ಅದನ್ನ ನೋಡಿಕೊಂಡು ಆ ಕುಟುಂಬಗಳಿಗೆ ತಲುಪಿಸುತ್ತಾರೆ ಎಂದು ತಿಳಿಸಿದರು.

ಹಾಸನದಲ್ಲಿ ಬಿಜೆಪಿಯನ್ನು ಅಡ ಇಟ್ಟಿದ್ದಾರೆ

ನನಗೆ ಯಾವುದೇ ರೀತಿಯ ಮುಖಭಂಗ ಆಗಿಲ್ಲ

ಹಾಸನ: ನಗರಸಭೆ ಅಧ್ಯಕ್ಷರ ವಿರುದ್ಧದ ಅವಿಶ್ವಾಸ ನಿರ್ಣಯ ವಿಚಾರದಲ್ಲಿ ನನಗೆ ಯಾವುದೇ ರೀತಿಯಲ್ಲೂ ಮುಖಭಂಗ

ಆಗಿಲ್ಲ, ಆಗಿರುವುದು ಬಿಜೆಪಿ ರಾಜ್ಯಾಧ್ಯಕ್ಷರಿಗೆ, ಹಾಸನ ಜಿಲ್ಲೆಯಲ್ಲಿ ಬಿಜೆಪಿಯನ್ನು ಕಾಂಗ್ರೆಸ್‌ಗೆ ಅಡ ಇಟ್ಟಿದ್ದಾರೆ ಎಂದು ಮಾಜಿ ಸಚಿವ ಎಚ್.ಡಿ.ರೇವಣ್ಣ ಅಸಮಾಧಾನ ಹೊರಹಾಕಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಮ್ಮ ಸದಸ್ಯರು ಒಗ್ಗಟ್ಟಾಗಿ ಮತ ಹಾಕಿದ್ದಾರೆ, ಅವರಿಗೆ ಧನ್ಯವಾದ ಹೇಳುವೆ, ಅಧ್ಯಕ್ಷರ ವಿರುದ್ಧ ಮುಂದಿನ ದಿನಗಳಲ್ಲಿ ಕಾನೂನು ಹೋರಾಟ ಮಾಡುತ್ತೇವೆ. ಅವಿಶ್ವಾಸ ನಿರ್ಣಯವನ್ನು ಯಾವ ಉದ್ದೇಶಕ್ಕಾಗಿ ತಂದಿದ್ದೆವು ಎಂಬುದು ಎಲ್ಲರಿಗೂ ಗೊತ್ತು. ಶಾಸಕರು ಸೇರಿ ಎಲ್ಲ ಕುಳಿತು ಚರ್ಚಿಸಿ ತೀರ್ಮಾನ ಮಾಡಿದ್ದೆವು. ಈಗಿನ ಅಧ್ಯಕ್ಷರು ನನಗೆ ಮೂರೇ ತಿಂಗಳು ಸಾಕು, ಮೊದಲ ಅವಧಿಗೆ ಕೊಡಿ ಎಂದಿದ್ದರು. ಇಲ್ಲ ಎಂದರೆ ಹಾಸನಾಂಬೆ ಎದುರು ಆಣೆ ಮಾಡಲಿ, ಆದರೆ 6 ತಿಂಗಳು ಕಳೆದರೂ ಅಧಿಕಾರ ಬಿಡಲಿಲ್ಲ. ನಾವು ಮುಸಲ್ಮಾನ್ ಸದಸ್ಯರಿಗೆ ಅವಕಾಶ ಕೊಡಲು ನಿರ್ಧರಿಸಿದ್ದೆವು ಎಂದರು. ಅವಿಶ್ವಾಸ ವಿಷಯದ ಬಗ್ಗೆ ಬಿಜೆಪಿ ರಾಜ್ಯಾಧ್ಯಕ್ಷರಿಗೆ ತಿಳಿಸಿದ್ದೆ. ಅವರು ವೀಕ್ಷಕರನ್ನು ಕಳಿಸುವುದಾಗಿ ತಿಳಿಸಿದ್ದರು. ಆದರೆ ಕಾಂಗ್ರೆಸ್-ಬಿಜೆಪಿ ಒಟ್ಟಾಗಿ ನಡೆದುಕೊಂಡಿವೆ. ಹೀಗಾಗಿ ಮುಖಭಂಗ ಆಗಿರುವುದು ಅವರಿಗೆ ಎಂದು ಪುನರುಚ್ಚರಿಸಿದರು.

ಕೇಂದ್ರಕ್ಕೆ ಮಾತ್ರ ಜಾತಿಗಣತಿ ಅಧಿಕಾರ

ರಾಜ್ಯ ಸರಕಾರದ ಜಾತಿ ಗಣತಿಗೆ ಬೆಲೆ ಇಲ್ಲ: ಸಚಿವ

ತುಮಕೂರು: ದೇಶದಲ್ಲಿ ಜಾತಿ ಗಣತಿ ಮಾಡುವ ಅಧಿಕಾರ ಇರುವುದು ಕೇಂದ್ರ ಸರಕಾರಕ್ಕೆ ಮಾತ್ರ. ಹಾಗಾಗಿ ರಾಜ್ಯ

ಸರಕಾರದ ಜಾತಿ ಗಣತಿಗೆ ಬೆಲೆ ಇಲ್ಲ. ಈ ಜಾತಿ ಗಣತಿ ವರದಿ ತನ್ನಿಂದ ತಾನಾಗಿಯೇ ನಿಷ್ಕ್ರಿಯವಾಗುತ್ತದೆ ಎಂದು ಕೇಂದ್ರ ರೈಲ್ವೆ ಖಾತೆ ಸಚಿವ ವಿ. ಸೋಮಣ್ಣ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯ ಸರಕಾರ ನಡೆಸಿರುವ ಜಾತಿ ಗಣತಿಗೆ ಯಾವುದೇ ಕಿಮ್ಮತ್ತಿಲ್ಲ. ಹಾಗಾಗಿ ಈ ಸರಕಾರದ ಜಾತಿ ಗಣತಿ ಹೊರಟು ಹೋಗಿದೆ. ದೇಶದ ಜಾತಿ ಗಣತಿಯನ್ನು ಕೇಂದ್ರ ಸರಕಾರವೇ ಮಾಡಲಿದೆ ಎಂದು ತಿಳಿಸಿದರು. ಒಂದು ದೇಶ, ಒಂದು ಚುನಾವಣೆ, ಮಹಿಳಾ ಮೀಸಲಾತಿ ಬಿಲ್, ಜಾತಿ ಗಣತಿ ಇವೆಲ್ಲಾ ಪ್ರಧಾನಿ ನರೇಂದ್ರ ಮೋದಿಯವರ ದೂರದೃಷ್ಟಿಯ ಚಿಂತನೆ. ರಾಜ್ಯ ಸರಕಾರ ವಿನಾ ಕಾರಣ ಗಾಳಿಯಲ್ಲಿ ಗುಂಡು ಹೊಡೆಯುವುದನ್ನು ಬಿಟ್ಟು ರಾಜ್ಯದ ಅಭಿವೃದ್ಧಿಗೆ ಶ್ರಮಿಸುವುದು ಉತ್ತಮ ಎಂದರು. ಕಾಂಗ್ರೆಸ್‌ನವರು ಕೇಂದ್ರದಲ್ಲಿ ಇಷ್ಟು ವರ್ಷ ಅಧಿಕಾರದಲ್ಲಿದ್ದರಲ್ಲಾ ಅವರು ಏಕೆ ಜಾತಿ ಗಣತಿ ಮಾಡಲಿಲ್ಲ ಎಂದು ಪ್ರಶ್ನಿಸಿದರು. ಪ್ರಧಾನಿ ನರೇಂದ್ರ ಮೋದಿಯವರು ಕೇವಲ 10 ವರ್ಷದಲ್ಲಿ ದೇಶವನ್ನು 50 ವರ್ಷ ಮುಂದಕ್ಕೆ ಕೊಂಡೊಯ್ದಿದ್ದಾರೆ. 7 ದಶಕಗಳಿಗೂ ಹೆಚ್ಚು ಕಾಲ ದೇಶವನ್ನಾಳಿದ ಕಾಂಗ್ರೆಸ್‌ನವರು ಏನು ಮಾಡಿದ್ದಾರೆ ಎಂದು ಅವರು ಖಾರವಾಗಿ ಪ್ರಶ್ನಿಸಿದರು.

ವಿಶ್ವವಾಣಿ

ಸಂಪಾದಕೀಯ

ಪೋಸ್ಟರ್ ವಾರ್ ನಿಲ್ಲಲಿ

ರಾಜಕೀಯ ಪಕ್ಷಗಳು ಎಂದಾಕ್ಷಣ ಪರಸ್ಪರ ಟೀಕೆ-ಟಿಪ್ಪಣಿ, ಕಾಲೆಳೆಯುವಿಕೆ ಇರುವಂಥದ್ದೇ. ಪಕ್ಷಗಳು ಇನ್ನೂ ಜೀವಂತವಾಗಿವೆ ಎಂಬ ಭಾವನೆ ಮೂಡುವುದೇ ಇಂಥ ಏಟು-ಎದುರೇಟುಗಳು ಚಾಲ್ತಿಯಲ್ಲಿದ್ದಾಗ. ಆಡಳಿತಾರೂಢರನ್ನು ಕಾಲಾನುಕಾಲಕ್ಕೆ ಕಿವಿಹಿಂಡಿ ಸರಿದಾರಿಗೆ ತರುವ ನಿಷ್ಠುರ ವಿಪಕ್ಷಗಳು ಸದನದಲ್ಲಿ ಇರಬೇಕಾದ್ದು ಕೂಡ ಅತ್ಯವಶ್ಯ. ಇದು ನಮ್ಮ ಪ್ರಜಾಪ್ರಭುತ್ವದ ಸೊಬಗೂ ಹೌದು. ಆದರೆ, ಟೀಕೆ-ಟಿಪ್ಪಣಿಗಳು ಸಭ್ಯತೆಯ ಎಲ್ಲೆಯನ್ನು ಮೀರಿದರೆ ಸಹಿಸಲು ಅಸಾಧ್ಯ. ಅದರಲ್ಲೂ, ಪರದೇಶದವರು ನಮ್ಮ ರಾಜಕೀಯ ವ್ಯವಸ್ಥೆಯನ್ನು ಆಡಿಕೊಳ್ಳುವಷ್ಟರ ಮಟ್ಟಿಗೆ ಮತ್ತು ಪರದೇಶದವರ ಗಮನಕ್ಕೆ ಬರುವ ರೀತಿಯಲ್ಲಿ ರಾಜಕೀಯ ಪಕ್ಷಗಳು ಪರಸ್ಪರ ಕೆಸರೆರಚಾಟ ಮಾಡಿಕೊಂಡರೆ ಅದನ್ನು ಯಾರು ತಾನೇ ಸಹಿಸಿಯಾರು? ಮೊನ್ನಿನ ನಿದರ್ಶನವನ್ನೇ ತೆಗೆದುಕೊಳ್ಳಿ. ಪಹಲ್ಗಾಮ್ ದಾಳಿಯ ತರುವಾಯದಲ್ಲಿ 'ಪ್ರಧಾನಿ ನರೇಂದ್ರ ಮೋದಿ ಕಾಣೆಯಾಗಿದ್ದರೆ' ಎಂದು ಬಿಂಬಿಸುವ ರೀತಿಯಲ್ಲಿ ಕಾಂಗ್ರೆಸ್ ಪಕ್ಷದ ವತಿಯಿಂದ 'ಗಾಯಬ್' ಎಂಬ ಶೀರ್ಷಿಕೆಯುಳ್ಳ ಪೋಸ್ಟರ್ ಒಂದು ಬಿಡುಗಡೆಯಾಯಿತು. ಇದರಲ್ಲಿ, ಮುಖಭಾಗವನ್ನು ಮರೆಮಾಚಿ, ಕುರ್ತಾ-ಪೈಜಾಮಾ-ಶೂ ಕಾಣುವ ರೀತಿಯಲ್ಲಿ ಬಿಂಬಿಸಲಾಗಿತ್ತು. ಇದನ್ನು ಕಂಡ ಪಾಕಿಸ್ತಾನದ ರಾಜಕಾರಣಿಯೊಬ್ಬರು Naughty Congress ಎಂಬ ಪ್ರತಿಕ್ರಿಯೆ ನೀಡಿದ್ದೂ ಆಯಿತು. ದೇಶದೊಳಗೆ ಮಾತ್ರವೇ ಪ್ರಯೋಗವಾಗಬೇಕಾದ ಟೀಕಾಸ್ತ್ರಗಳು ಹೀಗೆ ಗಡಿಯಾಚೆಯವರ ಗಮನವನ್ನೂ ಸೆಳೆದಾಗ ಹಾಗೂ ಅವರು ಅದನ್ನು ಆಡಿಕೊಳ್ಳುವಂತಾದಾಗ ಆಗುವ ವ್ಯತಿರಿಕ್ತ ಬೆಳವಣಿಗೆಯಿದು. ಇದರಿಂದಾಗಿ ದೇಶಭಕ್ತ ಭಾರತೀಯರಿಗೆ ಸಹಿಸಲು ಅಸಾಧ್ಯವಾದ ಮುಜುಗರವಾಗುತ್ತದೆ ಎಂಬುದನ್ನು ಬಿಡಿಸಿ ಹೇಳಬೇಕಿಲ್ಲ; ಆದರೆ ಇಂಥ ಸೂಕ್ಷ್ಮವು ನಮ್ಮ ರಾಜಕೀಯ ಪ್ರಭೃತಿಗಳಿಗೆ ಅರ್ಥವಾಗದಿರುವುದು ವಿಷಾದನೀಯ. ಪರದೇಶಗಳ ವೇದಿಕೆಯಲ್ಲಿ ಕುಳಿತು ಭಾರತದ ಬಗ್ಗೆ ಹಗುರವಾಗಿ ಮಾತನಾಡುವ ತಥಾಕಥಿತ ಜನನಾಯಕರಿಗೂ ಈ ಮಾತು ಅನ್ವಯ. ಪ್ರಜಾಪ್ರತಿನಿಧಿಗಳು ಇನ್ನಾದರೂ ಪ್ರಬುದ್ಧರಾಗಲಿ ಎಂಬುದು ಸಹೃದಯಿ ನಾಗರಿಕರ ಆಶಯ ಮತ್ತು ನಿರೀಕ್ಷೆ.

ಸೊಂಪಾದಕೀಯ

ನಾನೂ ನಿಮ್ ಜಾತಿನೇ ಕಣ್ರೀ..

ನಮ್ ದೇಶದಲ್ಲಿ ಅದೇನೇ ಜಾತ್ಯತೀತತೆಯ ಮಾತುಗಳು ಚಲಾವಣೆಯಾಗಲಿ, ಚುನಾವಣೆಯಲ್ಲಿ ಮಾತ್ರ ಜಾತಿಗಳೇ ಮುಖ್ಯ ಆಗೋದು. ಹಾಗಾಗಿ ಯಾರಿಗೆ ಬೇಕಿಲ್ಲದಿದ್ದರೂ ಈ ಜಾತಿಗಳು ರಾಜಕಾರಣಿಗಳಿಗೆ ಬೇಕು. ಇನ್ನು ನಮ್ಮ ಜನ ಏನೂ ಕಮ್ಮಿ ಇಲ್ಲ. ಇಬ್ಬರು ವ್ಯಕ್ತಿಗಳು ಆತ್ಮೀಯರಾಗಲು ಇರೋ ಕಾರಣಗಳಲ್ಲಿ ನಾನು ನಿಮ್ಮವನು, ನೀನು ನಮ್ಮೋನು ಅನ್ನೋ ಜಾತಿ ಕಾರಣ ಪ್ರಮುಖವಾದುದು. ಹಾಗಾಗಿ ಜಾತಿ ಅನ್ನೋದಕ್ಕೆ ಭಾರತ ದೇಶದಲ್ಲಿ ತುಂಬಾ ಪ್ರಾಮುಖ್ಯವಿದೆ. ಬಸವಣ್ಣರಂಥ ದಾರ್ಶನಿಕರು ಜಾತಿಯನ್ನು ಲೆಕ್ಕಕ್ಕೆ ಇಡಬೇಡಿ ಅಂತ ಎಷ್ಟೋ ಹೇಳಿದರೂ ಈಗ ರಾಷ್ಟ್ರ ರಾಜಕಾರಣದ ಮಟ್ಟದಲ್ಲಿ ಜಾತಿ ಲೆಕ್ಕ ಮಾಡುವ ಅಂದ್ರೆ ಜಾತಿಗಣತಿ ಮಾಡುವ ಬಗ್ಗೆ ಬಿಸಿಬಿಸಿ ಚರ್ಚೆ ನಡೆಯುತ್ತಿದೆ. ಮೊದಲು ಕಾಂಗ್ರೆಸ್ ಪಕ್ಷ ಜಾತಿಗಣತಿ ಮಾಡಬೇಕು ಅಂದಾಗ ಅದಕ್ಕೆ ಬಿಜೆಪಿ ಮತ್ತು ಅದರ ಬೆಂಬಲಿಗರಿಂದ ವಿರೋಧ ವ್ಯಕ್ತವಾಗಿತ್ತು. ರಾಜ್ಯದಲ್ಲಿ ಸಿದ್ದರಾಮಯ್ಯ ಜಾತಿಗಣತಿ ಮಾಡುತ್ತೇವೆ ಅಂದಾಗಲೂ ಅದನ್ನ ವಿರೋಧಿಸಿದವರೇ ಎಲ್ಲ. ಈಗ ನರೇಂದ್ರ ಮೋದಿ ಅವರ ಸಾರಥ್ಯದ ಕೇಂದ್ರ ಸರಕಾರವೇ ಜಾತಿಗಣತಿ ಮಾಡುತ್ತೇವೆ ಅಂತ ಘೋಷಣೆ ಮಾಡಿದೆ. ಅಂದ ಹಾಗೆ ಜಾತಿ ಹೆಸರಲ್ಲಿ ಹೆಚ್ಚು ಶೋಷಣೆಯೇ ನಡೆಯುವ ನಮ್ಮ ದೇಶದಲ್ಲಿ ಈ ಘೋಷಣೆಗೆ ಕಾರಣ ಏನು ಅಂದ್ರೆ, ಅದು ಚುನಾವಣೆ, ವೋಟುಗಳು ಅಂತ ಮತ್ತೆ ಹೇಳಬೇಕಿಲ್ಲ. ಜನರೇ ಒಕ್ಕೊರಲಿನಿಂದ ನಮಗೆ ಜಾತಿ ಬೇಕು ಅಂತ ಹೇಳುವಾಗ ಅದನ್ನ ವಿರೋಧಿಸಿದರೆ ಅದು ನಮ್ಮ ಕೊರಳಿಗೆ ಉರುಳಾಗಬಹುದು ಅನ್ನೋ ದೂರಾಲೋಚನೆಯಿಂದ ಈಗ ಕಾಂಗ್ರೆಸ್ ಪಕ್ಷ ಆಡುತ್ತಿದ್ದ ಮಾತುಗಳಿಗೆ ಬಿಜೆಪಿ ಕೂಡಾ ನಾವೂ ನಿಮ್ ಜಾತಿನೇ ಕಣ್ರೀ ಅಂತ ದನಿಗೂಡಿಸಿದೆ. ಆದರೆ ಈಗ ಸಮಸ್ಯೆ ಆಗಿರೋದು ಸಾಮಾನ್ಯ ಜನರಿಗೆ. ಇಷ್ಟು ದಿನ ಬಿಜೆಪಿ ಬೆಂಬಲಿಗರು, ಜಾತಿಗಣತಿ ವಿರೋಧಿಸಿ ಬಿಜೆಪಿಗೆ ಜೈ ಅಂತಿದ್ರು. ಆದರೆ ಈಗ ಅವರೇ ಜಾತಿಗಣತಿಗೆ ಬೆಂಬಲ ಕೊಡಬೇಕಾಗಿ ಬಂದಿದೆ. ಹಾಗಾಗಿ ಅವರಿಗೆ ಕೊಂಚ ಇರಿಸುಮುರಿಸಾಗಿದೆ. ಯಾಕಂದ್ರೆ ಪಾಪ ಅವರು ಸಾಮಾನ್ಯ ಜನ. ರಾಜಕಾರಣಿಗಳಿಗೆ ಇದೆಲ್ಲ ಲೆಕ್ಕ ಇಲ್ಲ ಬಿಡಿ. ಕುಮಾರಸ್ವಾಮಿ, ತೇಜಸ್ವಿ ಸೂರ್ಯ ಅವರಂಥ ಅನೇಕ ರಾಜಕಾರಣಿಗಳು ತಾವೇ ಹಿಂದೆ ಜಾತಿಗಣತಿ ವಿರೋಧಿಸಿ, ಟೀಕಿಸಿ ಮಾತಾಡಿದ್ದನ್ನು ಮರೆತು ಈಗ ಘಂಟಾಘೋಷವಾಗಿ ಮೋದಿ ನಡೆದಿದ್ದೇ ಹಾದಿ ಅಂತ ಜಾತಿಗಣತಿಗೆ ಸೈ ಎನ್ನುತ್ತಿರೋದು ಮಾತ್ರ ಹಾಸ್ಯಾಸ್ಪದವಾಗಿ ಕಾಣುತ್ತಿದೆ.

ಸಂಪಾದಕರ ಸದ್ಯಶೋಧನೆ

ಜಪಾನಿನ ದೈನಿಕಗಳು

ಪ್ರಪಂಚದಲ್ಲಿ ಯಾವ ದಿನಪತ್ರಿಕೆ ಅತಿ ಹೆಚ್ಚು ಪ್ರಸರಣವನ್ನು ಹೊಂದಿದೆ ಎಂದು ನೀವು ಯಾವುದೇ ಅಮೆರಿಕನ್ ಪ್ರಜೆಯನ್ನು ಕೇಳಿದರೆ, 'ಯುಎಸ್‌ಎ ಟುಡೇ, ವಾಲ್ ಸ್ಟ್ರೀಟ್ ಜರ್ನಲ್ ಅಥವಾ ನ್ಯೂಯಾರ್ಕ್ ಟೈಮ್ಸ್' ಎಂಬ ಉತ್ತರ ಬರಬಹುದು. ಇವು ಅತಿ ಹೆಚ್ಚು ಪ್ರಸರಣವನ್ನು ಹೊಂದಿರುವ ಅಮೆರಿಕದ 3 ಪತ್ರಿಕೆಗಳು. ಆದರೆ ಜಪಾನಿನ ದೈನಿಕಗಳ ಪ್ರಸಾರಕ್ಕೆ ಹೋಲಿಸಿದರೆ, ಅಮೆರಿಕದ ದೈನಿಕಗಳು ಹತ್ತಿರಕ್ಕೂ ಬರುವುದಿಲ್ಲ. ನಿಜ, ಜಪಾನಿನ ಸುದ್ದಿಪತ್ರಿಕೆಗಳ ಪ್ರಸರಣ ಮಟ್ಟವು ದಿಗ್ಭ್ರಮೆಗೊಳಿಸುವಂತಿದೆ. ಪೂರ್ಣಗಾತ್ರದ 'ಯುಎಸ್‌ಎ ಟುಡೇ' ಮತ್ತು ಟ್ಯಾಬ್ಲಾಯ್ಡ್ ಟೈಮ್ಸ್ ದೈನಂದಿನ ಪ್ರಸರಣ ಎಂಟು ಲಕ್ಷ ಅಥವಾ ಹತ್ತು ಲಕ್ಷಕ್ಕಿಂತ ಹೆಚ್ಚು ಇದ್ದರೆ, ಜಪಾನಿನ ಜನಪ್ರಿಯ 'ಯೊಮಿಯುರಿ ಶಿಂಬುನ್' ದೈನಿಕವೊಂದೇ ಸುಮಾರು ಹತ್ತು ಮಿಲಿಯನ್ ಅಂದರೆ ಒಂದು ಕೋಟಿಯಷ್ಟಿದೆ. 'ಯೊಮಿಯುರಿ ಶಿಂಬುನ್' ಜಪಾನಿನ ಅತಿ ದೊಡ್ಡ ದಿನಪತ್ರಿಕೆಗಳಲ್ಲಿ ಒಂದು. ಇದು ಪ್ರತಿದಿನ 2 ಆವೃತ್ತಿಗಳನ್ನು ಪ್ರಕಟಿಸುತ್ತಿದ್ದು, ವಿವಿಧ ಪ್ರಾದೇಶಿಕ ಆವೃತ್ತಿಗಳೊಂದಿಗೆ ದೇಶಾದ್ಯಂತ ವ್ಯಾಪಿಸಿದೆ. ಇದು ಯೊಮಿಯುರಿ ಗ್ರೂಪ್‌ನ ಭಾಗವಾಗಿದ್ದು, ಆ ದೇಶದ ಅತಿ ದೊಡ್ಡ ಮಾಧ್ಯಮ ಸಮೂಹಗಳಲ್ಲಿ ಒಂದಾಗಿದೆ. 'ಅಸಾಹಿ ಶಿಂಬುನ್' ಎಂಬ ಇನ್ನೊಂದು ಪ್ರಮುಖ ದೈನಿಕ ಸುಮಾರು 80 ಲಕ್ಷಕ್ಕಿಂತ ಹೆಚ್ಚು ಪ್ರಸಾರವನ್ನು ಹೊಂದಿದೆ. ಇದು 2ನೇ ಅತಿ ದೊಡ್ಡ ದಿನಪತ್ರಿಕೆ. ಇದು ತನ್ನ ಪ್ರಗತಿಪರ ನಿಲುವು, ರಾಜಕೀಯ ಭ್ರಷ್ಟಾಚಾರದ ವಿರುದ್ಧದ ವರದಿ ಮತ್ತು ಸಾಮಾಜಿಕ ನ್ಯಾಯದ ಪರವಾದ ಲೇಖನಗಳಿಗಾಗಿ ಪ್ರಸಿದ್ಧವಾಗಿದೆ. ಮತ್ತೊಂದು ಪ್ರಮುಖ ದೈನಿಕ 'ಮೈನಿಚಿ ಶಿಂಬುನ್' 40 ಲಕ್ಷಕ್ಕೂ ಅಧಿಕ ಪ್ರಸಾರವನ್ನು ಹೊಂದಿವೆ. ಇದೂ ಜಪಾನಿನ ಪ್ರಮುಖ ದಿನಪತ್ರಿಕೆಗಳಲ್ಲಿ ಒಂದು. 1872ರಲ್ಲಿ ಸ್ಥಾಪಿತವಾದ 'ಟೋಕಿಯೋ ನಿಚಿ ಶಿಂಬುನ್' ಮತ್ತು 1876ರಲ್ಲಿ ಸ್ಥಾಪಿತವಾದ 'ಒಸಾಕಾ ಮೈನಿಚಿ ಶಿಂಬುನ್' ಎಂಬ 2 ಪತ್ರಿಕೆಗಳ ಸಂಯೋಜನೆಯಿಂದ 1911ರಲ್ಲಿ 'ಮೈನಿಚಿ ಶಿಂಬುನ್' ಆಗಿ ರೂಪುಗೊಂಡಿತು. ಈ ಮೂರೂ ದೈನಿಕಗಳು ಮತ್ತು ಇದರ ಜತೆಯಲ್ಲಿ ಇನ್ನೆರಡು ದೈನಿಕಗಳಾದ 'ಸ್ಯಾಂಕಿ ಶಿಂಬುನ್ ಮತ್ತು ನಿಹೋನ್ ಕೀಜೈ ಶಿಂಬುನ್'ಗಳ ಪ್ರಸಾರವನ್ನು ಸೇರಿಸಿದರೆ, ಎರಡು ಕೋಟಿ ಅರವತ್ತು ಲಕ್ಷ ಪ್ರತಿಗಳನ್ನು ದಾಟುತ್ತವೆ. ಬಹುಶಃ ಜಪಾನಿನ ಪ್ರಮುಖ ದಿನಪತ್ರಿಕೆಗಳ ಬೃಹತ್ ಮಾರಾಟಕ್ಕೆ ಪ್ರಾಥಮಿಕ ಕಾರಣವೆಂದರೆ ದೇಶದ ಭೂಗಾತ್ರ ಮತ್ತು ಜನಸಂಖ್ಯಾ ಸಾಂದ್ರತೆ. ಈ ದೈನಿಕಗಳ ಜತೆಗೆ, ಚುನಿಚಿ ಶಿಂಬುನ್, ಟೋಕಿಯೋ ಶಿಂಬುನ್, ನಿಶಿನಿಪ್ಪೋನ್ ಶಿಂಬುನ್, ಹೋಕ್ಕೈಡೋ ಶಿಂಬುನ್, ಒಕಿನಾವಾ ಟೈಮ್ಸ್ ಕೂಡ ಗಣನೀಯ ಪ್ರಸಾರ ಮತ್ತು ಪ್ರಭಾವವನ್ನು ಹೊಂದಿವೆ. 'ಚುನಿಚಿ ಶಿಂಬುನ್' ಜಪಾನಿನ ಪ್ರಮುಖ ಪ್ರಾದೇಶಿಕ ದಿನಪತ್ರಿಕೆಗಳಲ್ಲಿ ಒಂದು. ಇದು ಆಯಿಚಿ ಪ್ರದೇಶದಲ್ಲಿ ಹೆಚ್ಚು ಪ್ರಸಿದ್ಧವಾಗಿದ್ದು, ಶೇ.60 ಜನ ಈ ಪತ್ರಿಕೆಯನ್ನು ಓದುತ್ತಾರೆ. ಈ ಪತ್ರಿಕೆಯು ಪ್ರಗತಿಪರ ನಿಲುವು ಹೊಂದಿದ್ದು, ಸಾಮಾಜಿಕ ನ್ಯಾಯ ಮತ್ತು ಪರಿಸರ ಸಂರಕ್ಷಣೆಯ ವಿಷಯಗಳಲ್ಲಿ ಹೆಚ್ಚು ಗಮನ ಹರಿಸುತ್ತದೆ. ಟೋಕಿಯೋ ಶಿಂಬುನ್, ಚುಬು-ನಿಪ್ಪೋನ್ ಶಿಂಬುನ್ ಕಂಪನಿಯ ಅಂಗಸಂಸ್ಥೆಯಾಗಿದ್ದು, ಟೋಕಿಯೋ ಪ್ರದೇಶದಲ್ಲಿ ಹೆಚ್ಚು ಪ್ರಸಿದ್ಧವಾಗಿದೆ. ನಿಶಿನಿಪ್ಪೋನ್ ಶಿಂಬುನ್, ಕ್ಯೂಶು ಪ್ರದೇಶದಲ್ಲಿ ಪ್ರಮುಖ ದಿನಪತ್ರಿಕೆ. ಹೋಕ್ಕೈಡೋ ಶಿಂಬುನ್, ಹೊಕ್ಕೈಡೋ ಪ್ರದೇಶದಲ್ಲಿ ಪ್ರಮುಖ ದಿನಪತ್ರಿಕೆ. ಇದು ಪ್ರಾದೇಶಿಕ ಸುದ್ದಿಗಳು, ಕೃಷಿ ಮತ್ತು ಪರಿಸರ ಸಂರಕ್ಷಣೆಯ ವಿಷಯಗಳಲ್ಲಿ ಹೆಚ್ಚು ಗಮನ ಹರಿಸುತ್ತದೆ. ಒಕಿನಾವಾ ಟೈಮ್ಸ್, ಒಕಿನಾವಾ ಪ್ರದೇಶದಲ್ಲಿ ಪ್ರಮುಖ ದಿನಪತ್ರಿಕೆ. ಅಮೆರಿಕ ಮತ್ತು ಜಪಾನ್ ಅತಿ ಹೆಚ್ಚು ಸಾಕ್ಷರರನ್ನು ಹೊಂದಿವೆ. ಈ ಎರಡೂ ದೇಶಗಳಲ್ಲಿ ದೈನಿಕಗಳು ಟಿವಿಗಳಿಂದ ಸಮಪ್ರಮಾಣದ ಪೈಪೋಟಿಯನ್ನು ಎದುರಿಸುತ್ತಿವೆ. ಆದರೆ ಜಪಾನಿನ ಪತ್ರಿಕಾ ಓದುಗರು ಸುಮಾರು ಮೂರು ಮುಕ್ಕಾಲು ಲಕ್ಷ ಚದರ ಕಿಮೀಗೆ ಸೀಮಿತವಾಗಿದ್ದರೆ, ಅಮೆರಿಕದ ಓದುಗರು ಅದಕ್ಕಿಂತ 25 ಪಟ್ಟು ಹೆಚ್ಚಿನ ಭೂಭಾಗಗಳಲ್ಲಿ ಹಂಚಿ ಹೋಗಿದ್ದಾರೆ. ಜಪಾನಿನಲ್ಲಿ ಪತ್ರಿಕೆಗಳ ಪ್ರಸಾರವನ್ನು ಹೆಚ್ಚಿಸುವುದು ಸುಲಭ. ಆದರೆ ಅಮೆರಿಕದಂಥ ವಿಶಾಲ ದೇಶದಲ್ಲಿ ಅದೊಂದು ಸವಾಲು. ಆದರೆ ಜಪಾನಿನ ಪತ್ರಿಕೆಗಳಿಗಿಂತ ಅಮೆರಿಕದ ಪತ್ರಿಕೆಗಳ ಪುಟಗಳ ಸಂಖ್ಯೆ ಹೆಚ್ಚು.

ಊರವರೆಲ್ಲ ಉಗ್ರಗಾಮಿಗಳಾದರೆ ಏನು ಮಾಡಬೇಕು?

ಶಿಶಿರಕಾಲ
ಶಿಶಿರ್ ಹೆಗಡೆ
shishirh@gmail.com

ಕಾಶ್ಮೀರದಲ್ಲಿ ಹಿಂದಿನವಾರ ನಡೆದ ಇಸ್ಲಾಮಿಕ್ ಉಗ್ರಗಾಮಿಗಳ ದಾಳಿಯ ಸುದ್ದಿ ಮನಸ್ಸನ್ನು ಕದಡಿದೆ. ಸತ್ತವರು ಸಂಬಂಧಿಯೇನಲ್ಲ. ಅವರೆಲ್ಲ ಬದುಕಿದ್ದರೆ ಜೀವಮಾನದಲ್ಲಿ ಸಂಧಿಸುವ ಸಾಧ್ಯತೆಯೂ ಇರಲಿಲ್ಲ. ಆದರೂ ಮಣಭಾರ ಭಾವ. ಕಳೆದ ಐದಾರು ವರ್ಷದಿಂದ ಸಾಂಕ್ರಾಮಿಕ ರೋಗ, ಯುದ್ಧ, ಭಯೋತ್ಪಾದನೆ, ವಾತಾವರಣ ವೈಪರೀತ್ಯ ಏನೇನೆಲ್ಲ ಸುದ್ದಿ ಕೇಳುತ್ತಲೇ ಇದ್ದೇವೆ. ಸಾವನ್ನು ಸಾವಿರದ ಲೆಕ್ಕದಲ್ಲಿ ಎಣಿಸುವ ಹಲವು ಸುದ್ದಿಗಳ ನಡುವೆಯೂ, 26 ಸಣ್ಣ ಸಂಖ್ಯೆಯಂತೆ ಕಾಣಿಸುತ್ತಿಲ್ಲ.

ಕಾಶ್ಮೀರದಿಂದ ಬಂದ ವಿಡಿಯೊಗಳಲ್ಲಿ ಒಂದು ಮಾತ್ರ ನನ್ನನ್ನು ಎಲ್ಲಿಲ್ಲದಂತೆ ನಿರಂತರ ಕಾಡುತ್ತಿದೆ. ಅದು ಅಲ್ಲಿನ 'ಜಿಪ್‌ಲೈನ್' ನಿಭಾಯಿಸುತ್ತಿದ್ದ ಕಾಶ್ಮೀರಿಯೊಬ್ಬನದು. ಗುಂಡಿನ ಶಬ್ದಗಳನ್ನು ಕೇಳಿದ ನಂತರವೂ ಪ್ರವಾಸಿಯನ್ನು ದೂಡಿಬಿಡುವ ಸನ್ನಿವೇಶ. ಮೊಬೈಲ್ ವಿಡಿಯೋದಲ್ಲಿಯೇ ಗುಂಡಿನ ಶಬ್ದ ಅಷ್ಟು ಸ್ಪಷ್ಟ ಕೇಳುವಾಗ ಅವನಿಗೆ ಕೇಳದಿರಲು ಸಾಧ್ಯವೇ? 'ಅಲ್ಲಾಹು ಅಕ್ಬರ್' ಎಂದು ಆತ ಹೇಳಿದ್ದು 'ಮೂರು' ಬಾರಿ. ಆನಂತರದಲ್ಲಿ ಕೂಡ ಒಂಚೂರೂ ವಿಚಲಿತನಾಗದೆ, ಹಿಂದಕ್ಕೆ ತಿರುಗುವ ದೃಶ್ಯ. ಅವನಿಗೆ ಗುಂಡಿನ ಶಬ್ದ ಕೇಳಿದ್ದೇ ಆದಲ್ಲಿ, ಆತನಿಗೆ ಇದೆಲ್ಲ ತಿಳಿದಿದ್ದದ್ದೇ ಆದಲ್ಲಿ ಆತನೂ ಉಗ್ರಗಾಮಿಯೇ. ಹಾಗಂತ ನ್ಯಾಯಾಲಯದಲ್ಲಿ ಆತನಿಗೆ ಶಿಕ್ಷೆಯಾಗಲಿಕ್ಕಿಲ್ಲ. ಕೇಳಿ ಮಾಡಿದ್ದೇ ಆದರೂ 'ತನಗೆ ಕೇಳಿಲ್ಲ' ಎಂದು ಹೇಳಿದರೆ ಸುಲಭದಲ್ಲಿ ಖುಲಾಸೆ.

ಒಂದಂತೂ ಸಾರ್ವಕಾಲಿಕ ಸತ್ಯ- ಯಾವುದೇ ದೇಶವಿರಲಿ, ನೆಲವಿರಲಿ, ವ್ಯವಸ್ಥೆಯಿರಲಿ, ಅಲ್ಲಿನ ಜೈಲಿನ ಒಳಗಿರುವ ಕ್ರಿಮಿನಲ್‌ಗಳಿಗಿಂತ ಹೊರಗಿರುವವರ ಸಂಖ್ಯೆಯೇ ಜಾಸ್ತಿ ಇರುತ್ತದೆ. ಕಾಶ್ಮೀರದ ಉಗ್ರಗಾಮಿಗಳ ಮಟ್ಟಿಗೂ ಇದೇ ವಾಕ್ಯ ಲಾಗುವಾಗುತ್ತದೆ. ಕಾಶ್ಮೀರದಲ್ಲಿ ಗುರುತಿಸಲಾಗದ ಉಗ್ರಗಾಮಿಗಳೇ ಊರಿಡೀ ತುಂಬಿಕೊಂಡಂತೆ ಅನಿಸುವುದು ಸುಳ್ಳಲ್ಲ. ಕಾಶ್ಮೀರದ್ದು ಇಸ್ಲಾಮಿಕ್ ಭಯೋತ್ಪಾದನೆ. ಕಾಶ್ಮೀರಿ ಮುಸಲ್ಮಾನರು- ನಾವು ಕಾಶ್ಮೀರಿಗಳು ನೀವು ಭಾರತೀಯರು ಎನ್ನುವುದನ್ನೂ ಸಹಿಸಬಹುದು. ಆದರೆ ಇಂಥ ಸನ್ನಿವೇಶಗಳಲ್ಲಿ ಅವರ ನಡವಳಿಕೆ, ಹೇಳಿಕೆಗಳು? ಕ್ರಿಯೆಗೆ ಶಿಕ್ಷಿಸಬಹುದು, ಆದರೆ ಸಾರ್ವಜನಿಕ ದೇಶದ್ರೋಹಿ, ಉಗ್ರಗಾಮಿ ಮನೋಭಾವಕ್ಕೆ?

ಕಾನೂನಿನ ಪ್ರಕಾರ ಎಲ್ಲದನ್ನೂ ಶಿಕ್ಷಿಸಿ ಸಮಾಜವನ್ನೇ ಸರಿಮಾಡಲು ಸಾಧ್ಯವೇ? ಕಾನೂನಿಗೆ ಆ ಶಕ್ತಿ ಇದೆಯೇ? ಎಲ್ಲೋ ಒಂದೆರಡು ಮಂದಿ ಹೀಗೆ ದೇಶದ್ರೋಹಿಗಳಾದರೆ ಕಾನೂನು, ಶಿಕ್ಷೆ ಇವೆಲ್ಲ ಸಾಧ್ಯ. ಆದರೆ ಸಮಾಜದ ಬಹುತೇಕರು ಕ್ರಿಮಿನಲ್ ಅಥವಾ ಉಗ್ರಗಾಮಿಗಳಾಗಿ ಬಿಟ್ಟರೆ? ಇಸ್ಲಾಮಿಕ್ ಭಯೋತ್ಪಾದನೆಯೇ ಬೇರೆ- ಉಳಿದೆಲ್ಲಾ ಅಪರಾಧಗಳೇ ಬೇರೆ. ಉಗ್ರಗಾಮಿಗಳೇ ಬೇರೆ, ಕಳ್ಳ, ಸುಳ್ಳ, ದರೋಡೆಕೋರ, ಅತ್ಯಾಚಾರಿ, ಕೊಲೆಗಾರರೇ ಬೇರೆ. ಆದರೆ ಇಡೀ ಸಮಾಜದ ಬಹುಪಾಲು ಮಂದಿ ಉಗ್ರಗಾಮಿಗಳ ಜತೆ ಅಥವಾ ಮಾಫಿಯಾಗಳ ಜತೆ ಸೇರಿಕೊಂಡು ಬಿಟ್ಟರೆ? ಎಷ್ಟೆಂದು ಬಂಧಿಸುವುದು- ಎಷ್ಟು ಜನರನ್ನು ಜೈಲಿಗೆ ಹಾಕುವುದು? ಅಂತಲ್ಲಿ ಸಭ್ಯ ದೇಶ ಕಟ್ಟಿಕೊಂಡ ಸರಕಾರಿ ಆಡಳಿತ ವ್ಯವಸ್ಥೆ ಗೆಲ್ಲಲು ಸಾಧ್ಯವೇ?

ಈ ಕಥೆ ಶುರುವಾಗುವುದು 'ಎಲ್ ಸೆಲ್ವಾಡೋರ್' ಎಂಬ ಚಿಕ್ಕ ದೇಶದಿಂದ. ಅದಿರುವುದು ಅಮೆರಿಕದಿಂದ ದಕ್ಷಿಣಕ್ಕೆ. ಅಮೆರಿಕ ಮತ್ತು ಎಲ್ ಸೆಲ್ವಾಡೋರ್ ನಡುವೆ ಎರಡು ದೇಶಗಳಿವೆ. ವಿಸ್ತಾರ ಮೆಕ್ಸಿಕೋ, ಅದನ್ನು ದಾಟಿದರೆ ಗ್ವಾಟೆಮಾಲ- ಅಲ್ಲಿಂದ ದಕ್ಷಿಣಕ್ಕೆ ಎಲ್ ಸೆಲ್ವಾಡೋರ್. ಈ ದೇಶದ ಹೆಸರು ಸೆಲ್ವಾಡೋರ್, ಸ್ಪ್ಯಾನಿಷ್ ಭಾಷೆಯಲ್ಲಿ 'ಎಲ್' ಎಂದರೆ ಇಂಗ್ಲಿಷಿನ The. ಹಾಗಾಗಿ ಇದು ದಿ ಸೆಲ್ವಾಡೋರ್- ಅಥವಾ ಸುಲಭದಲ್ಲಿ ಹೇಳುವುದಾದರೆ ಸೆಲ್ವಾಡೋರ್.

ಸೆಲ್ವಾಡೋರ್ ಒಂದು ಬಡ, ಶಾಪಗ್ರಸ್ತ ದೇಶ. ಹೆಚ್ಚು ದೊಡ್ಡದೇನಲ್ಲ, ಉತ್ತರ ಕನ್ನಡ ಮತ್ತು ಬೆಳಗಾವಿ ಎರಡು ಜಿಲ್ಲೆ ಸೇರಿಸಿದಷ್ಟು ಅಳತೆ. ಜನಸಂಖ್ಯೆ ಈಗ 60-65 ಲಕ್ಷ ಜನಸಂಖ್ಯೆ. ಶಾಪಗ್ರಸ್ತ ಎನ್ನಲು ಕಾರಣವಿದೆ. 1821ರಲ್ಲಿಯೇ ಸ್ಪೇನ್‌ನಿಂದ ಸ್ವಾತಂತ್ರ್ಯ ಪಡೆದ ದೇಶ ಅಲ್ಲಿಂದ ಮುಂದೆ ಕಂಡದ್ದು ಬೇಕಾಬಿಟ್ಟಿ ದುರಾಡಳಿತ. 1930ರಿಂದ 1970ರವರೆಗೂ ಈ ದೇಶವನ್ನು ಆಳಿದ್ದು ಪರಮನೀಚ ಶ್ರೀಮಂತರು ಮತ್ತು ಮಿಲಿಟರಿ ಜನರಲ್‌ಗಳು. ತರುವಾಯ 70ರ ದಶಕದಲ್ಲಿ ದುರಾಡಳಿತದ ವಿರುದ್ಧ ಜನರು ಬಂಡೆದ್ದರು.

1980ರ ಆಸುಪಾಸಿನಲ್ಲಿ ಅಲ್ಲಿನ ಆಂತರಿಕ ಯುದ್ಧ ತಾರಕ ಸ್ಥಿತಿ ಮುಟ್ಟಿತ್ತು. ಕೊಲೆ, ಅತ್ಯಾಚಾರ, ಸುಲಿಗೆ- ಬದುಕಬೇಕೆಂದರೆ ದೇಶ ಬಿಡಬೇಕು.

ಅಂಥ ಸ್ಥಿತಿಯ ನಿರಾಶ್ರಿತರಿಗೆ ಅಮೆರಿಕ ಬಾಗಿಲು ತೆರೆಯಿತು. ಸೆಲ್ವಾಡೋರ್‌ನಲ್ಲಿ ಆಗ ಇದ್ದ ಜನಸಂಖ್ಯೆ 45 ಲಕ್ಷ. ಅದರಲ್ಲಿ ಶೇ.10, ಸುಮಾರು 5 ಲಕ್ಷ ಮಂದಿ ಎರಡು ದೇಶ ದಾಟಿ ಅಮೆರಿಕದಲ್ಲಿ ಆಶ್ರಯ ಪಡೆದರು. ಅವರಲ್ಲಿ ಅರ್ಧಕ್ಕರ್ಧ ಜನ ಕ್ಯಾಲಿಫೋರ್ನಿಯಾದ ಲಾಸ್ ಏಂಜಲೀಸ್‌ನಲ್ಲೇ ನೆಲೆಯಾದರೆ ಇನ್ನರ್ಧದಷ್ಟು ಮಂದಿ ಅಮೆರಿಕದಾದ್ಯಂತ ಹರಡಿಕೊಂಡರು. ಅಂದು ಹಾಗೆ ಅಮೆರಿಕದೊಳಕ್ಕೆ ಬಂದವರಲ್ಲಿ ಎಲ್ಲರೂ ಸಂಭಾವಿತರಿರಲಿಲ್ಲ. ಜನಸಾಮಾನ್ಯರ ಜತೆ ಗ್ಯಾಂಗ್‌ಸ್ಟರ್, ಅಪರಾಧಿಗಳು, ಮಾಫಿಯಾದವರು ಹೀಗೆ ಎಲ್ಲರೂ ಇದ್ದರು.

ಈ ಪ್ರಮಾಣದಲ್ಲಿ ಸೆಲ್ವಾಡೋರ್‌ನಿಂದ ಅಮೆರಿಕದೊಳಕ್ಕೆ ಹೊಕ್ಕವರ ಬದುಕು ಸುಲಭದ್ದಿರಲಿಲ್ಲ. ಆಶ್ರಯ, ಉದ್ಯೋಗ ಎಲ್ಲದಕ್ಕೂ ಕಷ್ಟ. ಅಷ್ಟೇ ಅಲ್ಲ, ಅಮೆರಿಕನ್ನರು ಅವರನ್ನು ಹೊರಗಿನವರಾಗಿಯೇ ಕಂಡರು. ಅವರನ್ನು ಲಾಸ್ ಏಂಜಲೀಸ್‌ನ ಒಂದಿಷ್ಟು ಕಡುಬಡವ ಜಾಗಕ್ಕಷ್ಟೇ ಸೀಮಿತಗೊಳಿಸಿದರು. ಹೀಗೆ ನಿರಾಶ್ರಿತರಾಗಿ ಅಮೆರಿಕದೊಳಕ್ಕೆ ಬಂದ ಸೆಲ್ವಾಡೋರಿಯನ್ನರ ಬದುಕು ದುಸ್ತರವೇ ಇತ್ತು. ಬಡ ದೇಶದಲ್ಲಿ ಬಡವರಾಗಿರುವುದಕ್ಕಿಂತ ಶ್ರೀಮಂತರ ದೇಶದಲ್ಲಿ ಬಡವರಾಗುವುದು ಇನ್ನಷ್ಟು ಭೀಕರ.

ಸೆಲ್ವಾಡೋರ್ ನಿರಾಶ್ರಿತರು ಅಮೆರಿಕದಲ್ಲಿ ಶೋಷಣೆಗೊಳಗಾದರೂ. ಆಗ ರಕ್ಷಣೆಗೆಂದು ತಮ್ಮಲ್ಲೇ ಗುಂಪುಕಟ್ಟಿಕೊಂಡರು. ಆ ಗುಂಪು ಮೊದಮೊದಲು ಸೆಲ್ವಾಡೋರ್ ವಲಸಿಗರ ರಕ್ಷಣೆಯನ್ನೇನೋ ಮಾಡಿತು. ಆದರೆ ಕ್ರಮೇಣ ಬಡತನ ಇತ್ಯಾದಿಯಿಂದಾಗಿ ಕ್ರಿಮಿನಲ್ ವ್ಯವಹಾರಕ್ಕೆ ಇಳಿಯಿತು. ಈ ರಕ್ಷಕ ಗುಂಪು ಅಮೆರಿಕದಲ್ಲಿ ನೋಡನೋಡುತ್ತಲೇ ಕೊಲೆ, ಸುಲಿಗೆ, ದಬ್ಬಾಳಿಕೆ, ಅತ್ಯಾಚಾರ ಇತ್ಯಾದಿ ಶುರುವಿಟ್ಟುಕೊಂಡುಬಿಟ್ಟಿತು.

ಹೀಗೆ ಅಮೆರಿಕಕ್ಕೆ ಬಂದ ಹತ್ತೇ ವರ್ಷದೊಳಗೆ, 1990ರ ವೇಳೆ ಸೆಲ್ವಾಡೋರ್ ಗ್ಯಾಂಗ್‌ಗಳ ಕ್ರೌರ್ಯ, ಅಪರಾಧಗಳು ಅಮೆರಿಕದಲ್ಲಿ ಮಿತಿಮೀರಿಬಿಟ್ಟಿದ್ದವು. ಅಮೆರಿಕನ್ ಪೊಲೀಸ್ ವ್ಯವಸ್ಥೆಗೇ ಸವಾಲಾಗುವಷ್ಟು. ಆ ಗ್ಯಾಂಗ್‌ಗಳಲ್ಲಿ ಅತ್ಯಂತ ಬಲಿಷ್ಠವಾಗಿ ಬೆಳೆದ ಗ್ಯಾಂಗ್ Mara Salvatrucha (MS-13). ಎಂಎಸ್-13 ಎಂದೇ ಕುಖ್ಯಾತ. ಈ ಗ್ಯಾಂಗಿನ ಹೆಸರಿನ ರಚನೆಯ ಬಗ್ಗೆ ಸ್ವಲ್ಪ ಹೇಳಿ ಮುಂದುವರಿಯುತ್ತೇನೆ. Mara- ಎಂದರೆ 'ಮಾರಾಬುಂಟಾ' ಒಂದು ಜಾತಿಯ ಆಕ್ರಮಣಕಾರಿ ಇರುವೆ. Salva ಎಂದರೆ ಸೆಲ್ವಾಡೋರ್. Trucha ಎಂದರೆ Street Smart ಬುದ್ಧಿವಂತ. ಅದೆಲ್ಲ ಸರಿ Mara Salvatrucha. ಈ ಗ್ಯಾಂಗ್ ಅಮೆರಿಕದೊಳಕ್ಕೆ ಬೆಳೆದದ್ದಷ್ಟೇ ಅಲ್ಲ, ಪಕ್ಕದ ದೇಶ ಮೆಕ್ಸಿಕೋ- ಅಲ್ಲಿನ ಮಾಫಿಯಾ, ಡ್ರಗ್ ಜಾಲದ ಜತೆ ಒಡಂಬಡಿಕೆ ಮಾಡಿಕೊಂಡಿತು. ಸ್ನೇಹವೂ ಬೆಳೆಯಿತು. ಆ ಗ್ಯಾಂಗ್‌ನ ಸ್ನೇಹದ ಗುರುತಾಗಿ ಮೆಕ್ಸಿಕ್ ಮಾಫಿಯಾದಿಂದ 'M' ತೆಗೆದುಕೊಂಡು ಇವರ ಹೆಸರಿನ ಜತೆ ಸೇರಿಸಿಕೊಂಡರು. M ಇಂಗ್ಲಿಷಿನ 13ನೇ ಶಬ್ದ. ಆ ನಂಬರ್ ಅನ್ನು ಮುಂದಕ್ಕೆ ಸೇರಿಸಿಕೊಂಡು ಈ ಗ್ಯಾಂಗ್ Mara Salvatrucha (MS-13). ನಾನಂತೂ ಒಂದು ಮಾಫಿಯಾ ಇಷ್ಟು ಕ್ರಿಯಾತ್ಮಕವಾಗಿ ಹೆಸರಿಟ್ಟುಕೊಂಡದ್ದು ಬೇರೆಡೆ ಕಂಡಿಲ್ಲ. ಇರಲಿ, ಇದೆಲ್ಲ ನಡೆದದ್ದು ಏಳೆಂಟು ವರ್ಷದಲ್ಲಿ- ಅಮೆರಿಕದಲ್ಲಿ.

1990. ಈಗ ಅಮೆರಿಕ ಜಾಗೃತವಾಯಿತು. ತನ್ನ ನೆಲದಲ್ಲಿ ಇಂಥ ಉಪಟಳಕ್ಕೆ ಕಾರಣವಾದ ಆ ಗ್ಯಾಂಗಿನ ಸದಸ್ಯರನ್ನು ಬಂಧಿಸಿ ಎಲ್ ಸೆಲ್ವಾಡೋರ್‌ಗೆ ಗಡಿಪಾರು ಮಾಡಿತು. ಹೀಗೆ ಒಂದು ಸುವವಸ್ಥಿತ ಗ್ಯಾಂಗ್ ಸರಕಾರಿ ವ್ಯವಸ್ಥೆಯಡಿಯಲ್ಲಿ ರಿಲೋಕೇಶನ್- ಸೆಲ್ವಾಡೋರ್‌ಗೆ ಸ್ಥಳಾಂತರವಾಯಿತು. ಈ ರೀತಿ ಗಡಿಪಾರು ಮಾಡುವಾಗ ಕೆಲವರು ತಪ್ಪಿಸಿಕೊಂಡು ಅಮೆರಿಕದಲ್ಲಿಯೇ ಉಳಿದರು. ಹೀಗೆ ಒಂದರ್ಧ ಗ್ಯಾಂಗ್ ಇಲ್ಲಿ ಉಳಿಯಿತು, ಇನ್ನೊಂದರ್ಧ ಗ್ಯಾಂಗ್ ಸೆಲ್ವಾಡೋರ್‌ಗೆ ಮರಳಿತು.

ಆ ರೀತಿ ಸೆಲ್ವಾಡೋರ್ ತಲುಪಿದ MS-13 ಗ್ಯಾಂಗಿನವರು ಅಲ್ಲಿಯೂ ತಮ್ಮ ವಿಪರೀತ ಕ್ರೌರ್ಯ ಶುರುಮಾಡಿಕೊಂಡರು. ಬೇರೆ ದೇಶದಲ್ಲಿ ಹೋಗಿ ಕಂಪನಿ ಸ್ಥಾಪಿಸಿದಂತೆ ಸುಲಿಗೆ, ಕೊಲೆ, ಅತ್ಯಾಚಾರ. ಮೊದಲೇ ಆಂತರಿಕ ಕಲಹದಿಂದ ಮೂರಾಬಟ್ಟೆಯಾಗಿದ್ದ ದೇಶ ಸೆಲ್ವಾಡೋರ್. ಅಷ್ಟು ಪುಟ್ಟ ದೇಶದಲ್ಲಿ ಆಂತರಿಕ ಕಲಹದಲ್ಲಿ ಸತ್ತವರ ಸಂಖ್ಯೆಯೇ ಲಕ್ಷದ ಆಸುಪಾಸು. 45 ಲಕ್ಷ ಜನಸಂಖ್ಯೆಯಲ್ಲಿ ಒಂದು ಲಕ್ಷ ಸಾಯುವುದೆಂದರೆ ಭೀಕರತೆಯನ್ನು ಊಹಿಸಿಕೊಳ್ಳಬೇಕು. ದೇಶದ ಶೇ.99ಕ್ಕೂ ಮೀರಿದವರು ಕಡುಬಡವರು. ಸೆಲ್ವಾಡೋರ್‌ನ ಸರಕಾರ, ಸೇನೆ, ಪೊಲೀಸ್ ವ್ಯವಸ್ಥೆ ಎಲ್ಲವನ್ನೂ ನಪುಂಸಕವಾಗಿಸುವಷ್ಟು ಈ MS-13 ಬೆಳೆಯಿತು. ಈ ಗ್ಯಾಂಗಿನವರು ಬರೀ ಸುಲಿಗೆಯನ್ನಷ್ಟೇ ಮಾಡಿ ಸುಮ್ಮನಾಗಲಿಲ್ಲ. ಬದಲಿಗೆ ಒಂದು ಊರು ಗುರುತು ಮಾಡುವುದು, ಅಲ್ಲಿಗೆ ದಾಳಿಯಿಡುವುದು ಮತ್ತು ಅಲ್ಲಿ 12-13 ಮೀರಿದ ಗಂಡುಮಕ್ಕಳಿದ್ದರೆ ಗ್ಯಾಂಗಿಗೆ ಸೇರಿಸಿಕೊಳ್ಳುವುದು, ಹೆಣ್ಣುಮಕ್ಕಳಾದರೆ ಗ್ಯಾಂಗ್ ಸೇರಬೇಕು ಅಥವಾ ಗ್ಯಾಂಗ್ ರೇಪ್! 1995ರಲ್ಲಿ ಸುಮಾರು ಒಂದೆರಡು ಸಾವಿರದಷ್ಟು ದುರುಳರಿದ್ದ ಗ್ಯಾಂಗ್ 2000ನೇ ಇಸವಿ ತಲುಪುವಾಗ 10 ಸಾವಿರವಾಯಿತು. MS-13 ನಿಂದ ಹೊರಬಂದವರು ಇನ್ನೊಂದಿಷ್ಟು ಗ್ಯಾಂಗ್ ಆರಂಭಿಸಿದರು.

MS-13ಗೆ ಪ್ರಬಲ ವಿರೋಧಿಯಾಗಿ Barrio 18 ಎಂಬ ಇನ್ನೊಂದು ಗ್ಯಾಂಗ್ ಸಮಾನಾಂತರವಾಗಿ ಬೆಳೆಯಿತು. ಒಟ್ಟಾರೆ 2019ರ ವೇಳೆಗೆ ಎಲ್ ಸೆಲ್ವಾಡೋರ್‌ನಲ್ಲಿದ್ದದ್ದು ಒಂದು ಲಕ್ಷ ಮಾಫಿಯಾ ಸದಸ್ಯರು! ಅಲ್ಲಿನ ಜನಸಂಖ್ಯೆ ಆಗ ಎಷ್ಟು ಹೇಳಿ? 50 ಲಕ್ಷ. ಐವತ್ತರಲ್ಲಿ ಒಬ್ಬ ಮಾಫಿಯಾ. ಜನಸಂಖ್ಯೆಯ ಶೇ.10ರಷ್ಟು ಮಂದಿ ಒಂದಲ್ಲಾ ಒಂದು ಮಾಫಿಯಾದ ಭಾಗವಾಗಿದ್ದರು ಎಂದರೆ ವ್ಯವಸ್ಥೆಯ ಅವ್ಯವಸ್ಥೆ ಹೇಗಿರಬೇಕು ಊಹಿಸಿ!

ಈ ರೀತಿ ಎಳವೆಯಲ್ಲಿಯೇ ಗ್ಯಾಂಗ್ ಸೇರಿದ ಹುಡುಗ ಹುಡುಗಿಯರ ಕ್ರೌರ್ಯಕ್ಕೆ ಮಿತಿಯೇ ಇರಲಿಲ್ಲ. ಅವರೆಲ್ಲ ಅದೆಷ್ಟು ಅಮಾನವೀಯವಾಗಿಬಿಟ್ಟರು ಎಂದರೆ ಒಬ್ಬೊಬ್ಬರು ಏನಿಲ್ಲವೆಂದರೂ 15-20 ಮಂದಿಯನ್ನು ಕೊಂದವರು. ಯಾರು ಎಷ್ಟು ಜನರನ್ನು ಕೊಂದಿದ್ದಾರೆ ಎಂಬುದರ ಆಧಾರದ ಮೇಲೆ ಅವರ ಮುಖದ ಮೇಲೆ ಟ್ಯಾಟೂ- ಹಚ್ಚೆ.

ಆದರೆ ಇದೆಲ್ಲ ಬದಲಾಗಲು ಶುರುವಾದದ್ದು ಇತ್ತೀಚೆಗೆ. 2019ರಲ್ಲಿ 37 ವಯಸ್ಸಿನ 'ನಿಯಾಬ್ ಬುಕೇಲಿ' ಎಲ್ ಸೆಲ್ವಾಡೋರ್‌ನ ಅಲ್ಲಿನ ಅಧ್ಯಕ್ಷನಾದ. ಅದಾದ ಮೇಲೆ ಕೋವಿಡ್ ಸಾಂಕ್ರಾಮಿಕ ಎಲ್ಲ ಕಳೆಯಿತು. 2022ರ ಮಾರ್ಚ್. ಒಂದೇ ದಿನ 62 ಜನರನ್ನು ಈ ಗ್ಯಾಂಗ್ ಕೊಂದಿತು. ಮುಂದಿನ ಮೂರು ದಿನದಲ್ಲಿ 87 ಜನರ ಕೊಲೆಯಾಯಿತು. ಅದೊಂದು ಘಟನೆ. ನಿಯಾಬ್ ಬುಕೇಲಿ ಸುಮ್ಮನೆ ಕೂರಲಿಲ್ಲ. ತನಗಿದ್ದ ಎಲ್ಲ ಸಂಕೋಲೆಗಳ ನಡುವೆ ಈ ಗ್ಯಾಂಗುಗಳ ಮೇಲೆ ಸಮರ ಸಾರಿಬಿಟ್ಟ. ಅಲ್ಲಿನ ಪೊಲೀಸ್ ವ್ಯವಸ್ಥೆ ಗ್ಯಾಂಗ್‌ನ ಭಾಗವೇ ಆಗಿದ್ದರಿಂದ ಮಿಲಿಟರಿಗೆ ಈ ಕೆಲಸವನ್ನು ವಹಿಸಿದ. ಯಾವುದೇ ದೇಶ ತನ್ನದೇ ನೆಲದಲ್ಲಿ ತನ್ನದೇ ಜನರ ಮೇಲೆ ಮಿಲಿಟರಿ ಬಳಸುವಾಗ ಲಕ್ಷ ಬಾರಿ ಯೋಚಿಸುತ್ತದೆ. ಅದು ಸಾಮಾನ್ಯವಲ್ಲ. ಆದರೆ ಅದೆಲ್ಲ ನಿಯಮಗಳನ್ನು 'ನಿಯಾಬ್ ಬುಕೇಲಿ' ಮೀರಲೇ ಬೇಕಿತ್ತು. ಏಕೆಂದರೆ ಆತ ಯುದ್ಧಕ್ಕೆ ನಿಂತದ್ದು ತನ್ನದೇ ನೆಲದಲ್ಲಿ ತುಂಬಿರುವ ಒಂದು ಲಕ್ಷ ದುರುಳರ ವಿರುದ್ಧ.

ಈಗ ಆ ಗ್ಯಾಂಗ್‌ನ ಹೆಡೆಮುರಿದಾಗಿದೆ- ಮುಗಿದಿಲ್ಲ. ಬರೋಬ್ಬರಿ 85 ಸಾವಿರದಷ್ಟು ಗ್ಯಾಂಗ್ ಸದಸ್ಯರನ್ನು ಬಂಧಿಸಲಾಗಿದೆ. ಆದರೆ ಅಷ್ಟೊಂದು ಮಂದಿಯನ್ನು ಇಡುವುದೆಲ್ಲಿ? ನಿಯಾಬ್ ಬುಕೇಲಿ ಅವರಿಗೆಂದೇ ವಿಶೇಷ ಜೈಲ್ ನಿರ್ಮಿಸಿದ. ವಿಶೇಷ ಜೈಲು ಅಂದದ್ದೇಕೆ ಎಂದರೆ CECOT ಹೆಸರಿನ ಈ ಜೈಲಿಗೆ ಸದ್ಯ ಜಗತ್ತಿನ ಅತ್ಯಂತ ಅಭೇದ್ಯ ಜೈಲುಗಳ ಸಾಲಿನಲ್ಲಿ ಮೊದಲಸ್ಥಾನ. ಒಂದೊಂದು ಜಾಲಿನಲ್ಲಿ 40 ಸಾವಿರ ಖೈದಿಗಳು. ಹೋಲಿಕೆಗೆ ಹೇಳುವುದಾದರೆ ಕರ್ನಾಟಕದಲ್ಲಿ ಎಲ್ಲಾ ಜೈಲಿನಲ್ಲಿರುವ ಖೈದಿಗಳನ್ನು ಸೇರಿಸಿದರೆ 16-17 ಸಾವಿರವಾಗುತ್ತದೆ (ಭಾರತದಲ್ಲಿ ಅಜಮಾಸು 1400 ಜೈಲುಗಳಿವೆ ಮತ್ತು 7 ಲಕ್ಷ ಕೈದಿಗಳಿದ್ದಾರೆ). ಸೆಲ್ವಾಡೋರ್‌ನಲ್ಲಿ ಒಂದೊಂದು ಜೈಲಿನಲ್ಲಿ 40 ಸಾವಿರ ಖೈದಿಗಳು. ಅಂತಿಂಥಾ ಖೈದಿಗಳಲ್ಲ, ನೀಚರಲ್ಲೇ ಪರಮನೀಚರು, ಉಗ್ರಗಾಮಿಗಳು.

ಇಷ್ಟೆಲ್ಲಾ ಆಗುವಾಗ ಇತ್ತ ಅಮೆರಿಕದಲ್ಲಿಯೂ ಈ ಗ್ಯಾಂಗಿನವರಿದ್ದರಲ್ಲ, ಅವರ ಉಪಟಳ ಅಮೆರಿಕದಲ್ಲಿ ಮುಂದುವರಿಯಿತು. ಈಗ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರನ್ನೆಲ್ಲ ಬಂಧಿಸಿ, ತಲೆ ಬೋಳಿಸಿ ಮಿಲಿಟರಿ ವಿಮಾನದಲ್ಲಿ ಎಲ್ ಸೆಲ್ವಾಡೋರ್‌ಗೆ ಕಳುಹಿಸಿಕೊಡುತ್ತಿದ್ದಾನೆ. ಅಷ್ಟೇ ಅಲ್ಲ, ಅವರನ್ನೆಲ್ಲ ಇರಿಸಲು ಅಮೆರಿಕ ಇನ್ನೊಂದೆರಡು ಈ ಪ್ರಮಾಣದ ಜೈಲು ನಿರ್ಮಿಸಲು ಎಲ್ ಸೆಲ್ವಾಡೋರ್‌ಗೆ ಸಹಾಯಮಾಡಲಿಕ್ಕಿದೆ.

ಹೇಳಬೇಕಿರುವುದಿಷ್ಟು. ಒಂದು ಸರಕಾರಿ ವ್ಯವಸ್ಥೆ ಸ್ವಲ್ಪವೇ ಎಡವಿದರೂ ಉಗ್ರಗಾಮಿ ಗುಂಪೊಂದು ಕೆಲವೇ ವರ್ಷದಲ್ಲಿ ಎಷ್ಟು ಬೆಳೆಯಬಹುದು ಎಂಬುದಕ್ಕೆ ಇದು ನಿದರ್ಶನ. ಜತೆಯಲ್ಲಿ ಸಮಾಜದ ಬಹುಭಾಗ ಉಗ್ರಗಾಮಿಗಳ ಜತೆ ಸೇರಿದಲ್ಲಿ ಏನಾಗಬಹುದು ಎಂಬುದಕ್ಕೂ ಇದು ಒಳ್ಳೆಯ ಹೋಲಿಕೆ. ಜತೆಯಲ್ಲಿ ಸರಕಾರ ದುರ್ಬಲವಿದ್ದರೂ ಎಷ್ಟು ಗಟ್ಟಿ ನಿಲುವು ತಾಳಬಹುದು ಎಂಬುದಕ್ಕೂ ಎಲ್ ಸೆಲ್ವಾಡೋರ್ ಮಾದರಿ. ಆ ದೇಶ ಇಂದಿಗೂ ಬಡದೇಶವೇ. ಆದರೂ ತಾನು ಬದಲಾಗಬೇಕು ಎಂದು ಮೈಕೊಡವಿ ನಿಂತಿತಲ್ಲ, ಅಲ್ಲಿನ ಅಧ್ಯಕ್ಷ ದಿಟ್ಟ ಹೆಜ್ಜೆ ತೆಗೆದುಕೊಂಡನಲ್ಲ, ಅದೆಲ್ಲದಕ್ಕಿಂತ ಹೆಚ್ಚಾಗಿ ಅವನ ಜತೆ ದೇಶವೇ ನಿಂತಿತಲ್ಲ. ಸರಕಾರ-ಸಭ್ಯ ಜನಸಾಮಾನ್ಯರು ನಿರ್ಧರಿಸಿದಲ್ಲಿ ಏನನ್ನೂ ಬದಲಿಸಬಹುದು. ಕಾಶ್ಮೀರವನ್ನು ಕೂಡ.

ದುರ್ಬಲವಾಗಿರುವ ಪಾಕಿಸ್ತಾನ ಯುದ್ಧ ಭರಿಸಬಲ್ಲದೇ?

ಪಾಕಿಸ್ತಾನ ಎಂಥ ದುರ್ಭರ ಪರಿಸ್ಥಿತಿಯನ್ನು ಎದುರಿಸುತ್ತಿದೆ ಎಂದರೆ, ಒಂದು ಕಡೆ ಅಂತಾರಾಷ್ಟ್ರೀಯ ಹಣಕಾಸು ಸಂಸ್ಥೆ ಐಎಂಎಫ್ ಅದರ ಆರ್ಥಿಕ ಬೆಳವಣಿಗೆಯನ್ನು ಡೌನ್‌ಗ್ರೇಡ್ ಮಾಡಿದೆ. ಮತ್ತೊಂದು ಕಡೆ ಭಾರತವು ಕಾಶ್ಮೀರದ ಪಹಲ್ಗಾಮ್‌ನಲ್ಲಿ ಉಗ್ರರ ದಾಳಿಯ ಬಳಿಕ ಸಿಂಧೂ ನದಿ ಜಲ ಹಂಚಿಕೆ ಒಪ್ಪಂದವನ್ನು ಅಮಾನತಿನಲ್ಲಿಟ್ಟಿದೆ. ಇದರಿಂದಾಗಿ ಪಾಕಿಸ್ತಾನದ ಕೃಷಿ ಅಧಾರಿತ ಆರ್ಥಿಕತೆ ಮತ್ತಷ್ಟು ದುರ್ಬಲವಾಗಲಿದೆ.

ಮನಿ ಮೈಂಡೆಡ್
ಕೇಶವ ಪ್ರಸಾದ್ ಬಿ.
vveditoped@gmail.com

ಪಾಕಿಸ್ತಾನವನ್ನು 'ಭಿಕಾರಿಗಳ ದೇಶ' ಎಂದರೆ ಕೆಲವರಿಗೆ ಸಿಟ್ಟು ಬರುತ್ತೆ. ''ಅಲ್ಲಿಯೂ ನುಣುಪಾದ ಹೈವೇಗಳು, ಸೆವೆನ್ ಸ್ಟಾರ್ ಹೋಟೆಲ್, ರೆಸ್ಟೋರೆಂಟ್‌ಗಳೂ, ಲಕ್ಸುರಿ ಬ್ರ್ಯಾಂಡ್‌ಗಳ ಕಾರುಗಳೂ ಇವೆ ಗೊತ್ತಾ..'' ಎನ್ನುತ್ತಾರೆ. ಆದರೆ ಜಗತ್ತಿನಲ್ಲೇ ಬಡರಾಷ್ಟ್ರ ಎನ್ನಿಸಿಕೊಂಡಿರುವ ದಕ್ಷಿಣ ಸುಡಾನ್‌ನಲ್ಲೂ ಪಂಚತಾರಾ ಹೋಟೆಲ್ ಇದೆಯಂತೆ. ಆದ್ದರಿಂದ ದೇಶದ ಆರ್ಥಿಕತೆಯನ್ನು ಅಳೆಯುವಾಗ ಬಳಸಬೇಕಾದ ಮಾನದಂಡವೇ ಬೇರೆಯಾಗಿರುತ್ತದೆ.

ನಿಮಗೆ ನೆನಪಿರಬಹುದು. ಇತ್ತೀಚೆಗೆ ಸೌದಿ ಅರೇಬಿಯಾದಿಂದ 5 ಸಾವಿರ ಮಂದಿ ಭಿಕ್ಷುಕರನ್ನು ಗಡಿಪಾರು ಮಾಡಲಾಯಿತು. ಇವರೆಲ್ಲರೂ ಒಂದೇ ದೇಶಕ್ಕೆ ಸೇರಿದವರಾಗಿದ್ದರು. ಅದುವೇ ಪಾಕಿಸ್ತಾನ! ಭಿಕ್ಷುಕರನ್ನು ಕಳಿಸದಂತೆ ಪಾಕಿಸ್ತಾನಕ್ಕೆ ಸೌದಿ ಅರೇಬಿಯಾ, ಯುಎಇ, ಕತಾರ್ ತಿಳಿಸಿದ್ದವು.

ಸಂದೇಹವೇ ಬೇಡ. ಇದೊಂದೇ ಘಟನೆಯಿಂದ ಪಾಕಿಸ್ತಾನದ ಇಕಾನಮಿಯನ್ನು ಅಳೆಯೋದೂ ಬೇಡ ಅನ್ನೋಣ. ಈಗಿನ ಸನ್ನಿವೇಶದಲ್ಲಿ ಪ್ರಬಲ ಭಾರತದ ಎದುರಿನ ಯುದ್ಧದ ಆಲೋಚನೆಯೇ ಪಾಕಿಸ್ತಾನಕ್ಕೆ ನಡುಕ ಹುಟ್ಟಿಸಬಲ್ಲದು. ಏಕೆಂದರೆ ಆರ್ಥಿಕವಾಗಿ, ವ್ಯೂಹಾತ್ಮಕವಾಗಿ, ರಾಜತಾಂತ್ರಿಕವಾಗಿ ಕೂಡ ಯುದ್ಧವನ್ನು ಗೆಲ್ಲುವ ತಾಕತ್ತನ್ನು ಪಾಕ್ ಕಳೆದುಕೊಂಡಿದೆ. ಜಗತ್ತಿನಲ್ಲೇ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಆರ್ಥಿಕತೆಯಾಗಿ ಹೊರಹೊಮ್ಮಿರುವ ಭಾರತವೆಲ್ಲಿ, ಜಿಡಿಪಿ ಬೆಳವಣಿಗೆಯಲ್ಲಿ 30ನೇ ಸ್ಥಾನಕ್ಕೆ ಕುಸಿದಿರುವ ಪಾಕಿಸ್ತಾನವೆಲ್ಲಿ? ಕಳೆದ ಹದಿನೈದು ವರ್ಷಗಳಿಂದ ಪಾಕಿಸ್ತಾನದ ಆರ್ಥಿಕತೆ ಬಡವಾಗಿದೆ. ಸಾಲದ ಸುಳಿಯಲ್ಲಿ ಮುಳುಗಿದೆ. ಹಣದುಬ್ಬರ ಕಾಡುತ್ತಿದೆ. ನಿರುದ್ಯೋಗ ಪ್ರಮಾಣ ಶೇ.7ನ್ನು ದಾಟಿದೆ. 45 ಲಕ್ಷ ಮಂದಿ ನಿರುದ್ಯೋಗಿಗಳಿದ್ದಾರೆ. ಐಎಂಎಫ್ ಕೊಟ್ಟಿರುವ ಸಾಲದ ಹೊರೆ ಇದೆ. ಪಾಕಿಸ್ತಾನದ ಆರ್ಥಿಕತೆ ತೀವ್ರ ಹದಗೆಟ್ಟಿದೆ ಎಂಬುದನ್ನು ಅಲ್ಲಿನ 'ಡಾನ್' ಪತ್ರಿಕೆಯೇ ಸಾಕಷ್ಟು ಸಲ ವರದಿ ಮಾಡಿದೆ.

ಯುದ್ಧದ ಕಾರ್ಮೋಡ ಕವಿದಿದ್ದರೂ, ಕೋಟ್ಯಂತರ ಭಾರತೀಯರು ಇವತ್ತು ನಿಶ್ಚಿಂತೆಯಲ್ಲಿದ್ದಾರೆ. ಏಕೆಂದರೆ ಮಿಲಿಟರಿ, ರಾಜತಾಂತ್ರಿಕ ಮತ್ತು ಆರ್ಥಿಕ ನೆಲೆಯಲ್ಲಿ ಇವತ್ತು ಭಾರತವು ಬಲಾಢ್ಯ ರಾಷ್ಟ್ರವಾಗಿದೆ. ಜತೆಗೆ ಪ್ರಧಾನಿ ನರೇಂದ್ರ ಮೋದಿಯವರು ದೇಶದ ಚುಕ್ಕಾಣಿ ಹಿಡಿದಿದ್ದಾರೆ. ಅವರಿರುವ ತನಕ ಯಾವುದಕ್ಕೂ ಅಂಜಬೇಕಿಲ್ಲ ಎಂಬ ವಿಶ್ವಾಸ ಜನರಲ್ಲಿದೆ. ಎಲ್ಲ ಸಮಸ್ಯೆಗಳನ್ನೂ ಹಣದಿಂದಲೇ ಪರಿಹರಿಸಲು ಸಾಧ್ಯವಿರದಿದ್ದರೂ, ಅದರ ಪ್ರಭಾವ ಎಲ್ಲದರ ಮೇಲೆಯೂ ಇರುತ್ತದೆ. ಸಂಪತ್ತು ಕೊಡುವ ಆತ್ಮವಿಶ್ವಾಸವೇ ಚೈತನ್ಯದಾಯಕ. ಅದೇ ರೀತಿ ದೇಶ ಕೂಡ ಆರ್ಥಿಕವಾಗಿ ಸದೃಢ ಸ್ಥಿತಿಯಲ್ಲಿದ್ದಾಗ, ಸವಾಲುಗಳನ್ನು ಎದುರಿಸುವ ಸಾಮರ್ಥ್ಯವೂ ಹೆಚ್ಚುತ್ತದೆ. ಇವತ್ತು ಭಾರತಕ್ಕೆ ಅಂಥ ಆರ್ಥಿಕ ಶಕ್ತಿ ಇದೆ ಎಂಬುದು ಹೆಮ್ಮೆಯ ಸಂಗತಿ. ಇದು ದೇಶವಾಸಿಗಳು ಹಾಗೂ ಅನಿವಾಸಿ ಭಾರತೀಯರ ಪರಿಶ್ರಮಕ್ಕೆ ಸಂದ ಫಲವೂ ಹೌದು. ಭಾರತದ ಜಿಡಿಪಿ ಈಗ 4.2 ಲಕ್ಷ ಕೋಟಿ ಡಾಲರ್‌ಗೆ ಏರಿದ್ದು, ಈ ವರ್ಷ ಜಪಾನನ್ನು ಹಿಂದಿಕ್ಕಿ 4ನೇ ಅತಿ ದೊಡ್ಡ ಆರ್ಥಿಕತೆಯಾಗಲಿದೆ. 2027ರಲ್ಲಿ ಜರ್ಮನಿಯನ್ನೂ ಹಿಂದಿಕ್ಕಿ ವಿಶ್ವದ ಮೂರನೇ ಅತಿ ದೊಡ್ಡ ಆರ್ಥಿಕತೆಯಾಗುವುದು ನಿಶ್ಚಿತವಾಗಿದೆ. ಪಾಕಿಸ್ತಾನದ ಜಿಡಿಪಿ 349 ಶತಕೋಟಿ ಡಾಲರ್ ಆಗಿದೆ. ಭಾರತದ ಇಕಾನಮಿಯ ಗಾತ್ರ ಪಾಕ್‌ಗಿಂತ ಹತ್ತು ಪಟ್ಟು ಹೆಚ್ಚು. ಉಭಯ ರಾಷ್ಟ್ರಗಳಲ್ಲಿ ಬಡವರು ಇದ್ದರೂ, ಬಡತನದ ರೇಖೆಗಿಂತ ಕೆಳಗಿರುವವರನ್ನು ಮೇಲಕ್ಕೆತ್ತುವ ನಿಟ್ಟಿನಲ್ಲಿ ಭಾರತ ಗಣನೀಯವಾದ ಪ್ರಗತಿಯನ್ನು ಕಳೆದ ಹತ್ತಾರು ವರ್ಷಗಳಲ್ಲಿ ಸಾಧಿಸಿದೆ.

ಪಾಕಿಸ್ತಾನ ಎಂಥ ದುರ್ಭರ ಪರಿಸ್ಥಿತಿಯನ್ನು ಎದುರಿಸುತ್ತಿದೆ ಎಂದರೆ, ಒಂದು ಕಡೆ ಅಂತಾರಾಷ್ಟ್ರೀಯ ಹಣಕಾಸು ಸಂಸ್ಥೆ ಐಎಂಎಫ್ ಅದರ ಆರ್ಥಿಕ ಬೆಳವಣಿಗೆಯನ್ನು ಡೌನ್‌ಗ್ರೇಡ್ ಮಾಡಿದೆ. ಮತ್ತೊಂದು ಕಡೆ ಭಾರತವು ಕಾಶ್ಮೀರದ ಪಹಲ್ಗಾಮ್‌ನಲ್ಲಿ ಉಗ್ರರ ದಾಳಿಯ ಬಳಿಕ ಸಿಂಧೂ ನದಿ ಜಲ ಹಂಚಿಕೆ ಒಪ್ಪಂದವನ್ನು ಅಮಾನತಿನಲ್ಲಿಟ್ಟಿದೆ. ಇದರಿಂದಾಗಿ ಪಾಕಿಸ್ತಾನದ ಕೃಷಿ ಆಧಾರಿತ ಆರ್ಥಿಕತೆ ಮತ್ತಷ್ಟು ದುರ್ಬಲವಾಗಲಿದೆ. ಏಷ್ಯನ್ ಡೆವಲಪ್ಮೆಂಟ್ ಬ್ಯಾಂಕ್ ಕೂಡ 2025ರಲ್ಲಿ ಪಾಕಿಸ್ತಾನದ ಜಿಡಿಪಿ ಬೆಳವಣಿಗೆಯ ಮುನ್ನೋಟವನ್ನು ಶೇ.2.5ಕ್ಕೆ ಇಳಿಸಿದೆ. 2024ರಲ್ಲಿ ಅದು ಶೇ.3ರಷ್ಟಿತ್ತು. ಪಾಕಿಸ್ತಾನದ ಜಿಡಿಪಿಗೆ ಅಲ್ಲಿನ ಕೃಷಿಯ ಪಾಲು ಶೇ.23ರಷ್ಟಿದೆ. ಶೇ.37ರಷ್ಟು ಜನರಿಗೆ ಕೃಷಿಯಿಂದಲೇ ಜೀವನೋಪಾಯ. ಗೋಧಿ, ಅಕ್ಕಿ ಮತ್ತು ಹತ್ತಿ ಪಾಕ್‌ನ ಪ್ರಮುಖ ಬೆಳೆಗಳು. ಇವುಗಳ ರಫ್ತಿನ ಮೂಲಕ 2022ರಲ್ಲಿ 408 ಕೋಟಿ ಡಾಲರ್ ಸಂಪಾದಿಸಿತ್ತು. ಇನ್ನು ಮುಂದೆ ನೀರಾವರಿಗೆ ಕೊರತೆಯಾದಾಗ ಆರ್ಥಿಕತೆಗೂ ಹೊಡೆತ ಬೀಳಲಿದೆ.

ದೇಶ ವಿಭಜನೆಯಾದ ಸಂದರ್ಭದಲ್ಲಿ ಪಾಕಿಸ್ತಾನದ ನೆಲ ಫಲವತ್ತಾಗಿಯೇ ಇತ್ತು. ಮುಖ್ಯವಾಗಿ ಸಿಂಧೂ ನದಿ ಜಲಾನಯನ ಪ್ರದೇಶವು ಬಹಳ ವಿಶಾಲವಾಗಿತ್ತು. ಕೃಷಿಗೆ ಬೇಕಾದ ಫಲವತ್ತತೆಯನ್ನು, ನೀರಾವರಿಯನ್ನು ಒದಗಿಸಿತ್ತು. ಆ ನೆಲವಾದರೂ ಯಾವುದು ಎನ್ನುವಿರಾ. ಸಿಂಧೂ ನದಿ ನಾಗರಿಕತೆ ಬೆಳಗಿದ್ದ, ನೀರಿನ ನಿರ್ವಹಣೆ, ಬಳಕೆಯಲ್ಲಿ ಮುಂಚೂಣಿಯಲ್ಲಿದ್ದ ಐತಿಹಾಸಿಕ ಸ್ಥಳ. ಅಂಥ ವಿಶೇಷ ಜಾಗ ಸಿಕ್ಕಿದರೂ, ಉಳಿಸಿಕೊಳ್ಳುವ ಯೋಗ್ಯತೆ ಇಲ್ಲದವರು ಪಾಕಿಗಳು. ಕೆಟ್ಟ ಆಡಳಿತ, ಮಿಲಿಟರಿ ಸರ್ವಾಧಿಕಾರ, ರಾಜಕೀಯ ಅಸ್ಥಿರತೆ, ಮತಾಂಧತೆ, ಗಡಿಯಾಚೆಗಿನ ಭಯೋತ್ಪಾದನೆಗೆ ಕುಮ್ಮಕ್ಕು, ಅಂತಃಕಲಹಗಳು ಪಾಕಿಸ್ತಾನವನ್ನು ದಿವಾಳಿಯ ಅಂಚಿಗೆ ತಂದು ನಿಲ್ಲಿಸಿವೆ. ಹೀಗಾಗಿ ಇದೆಲ್ಲವೂ ಆ ದೇಶದ ಸ್ವಯಂಕೃತಾಪರಾಧ. ಏಕೆಂದರೆ ಭಾರತದ ವಿರುದ್ಧ ಭಯೋತ್ಪಾದನೆಗೆ ಪೋಷಣೆ ನೀಡಿದ್ದಕ್ಕಾಗಿ ಸಿಂಧೂ ನದಿ ನೀರಿನ ತೀವ್ರ ಕೊರತೆಯನ್ನು ಭವಿಷ್ಯದ ದಿನಗಳಲ್ಲಿ ಎದುರಿಸಬೇಕಾಗಿದೆ. ಇದು ನೀರಾವರಿಗೆ ಮಾತ್ರವಲ್ಲದೆ ಅಲ್ಲಿನ ಆರ್ಥಿಕತೆಯನ್ನೂ ಬುಡಮೇಲು ಮಾಡಬಲ್ಲದು. ಜವಳಿ, ಉತ್ಪಾದನೆ ವಲಯದ ಉದ್ದಿಮೆಗೂ ಇದರಿಂದ ಹೊಡೆತ ಬೀಳಲಿದೆ.

ಪಾಕಿಸ್ತಾನದ ಅನೇಕ ಮಂದಿ ಸೌದಿ ಅರೇಬಿಯಾ, ಯುಎಇ, ಒಮಾನ್, ಬಹರೇನ್‌ನಲ್ಲಿ ದುಡಿಯುತ್ತಾರೆ. ಕಟ್ಟಡ ನಿರ್ಮಾಣ, ಹೋಟೆಲ್, ರೆಸ್ಟೋರೆಂಟ್, ಮನೆಗೆಲಸ, ವಾಹನಗಳ ಚಾಲಕರಾಗಿ ಜೀವನೋಪಾಯ ಕಂಡುಕೊಳ್ಳುತ್ತಾರೆ. ಅವರು ರವಾನಿಸುವ ದುಡ್ಡು ಪಾಕಿಸ್ತಾನಕ್ಕೆ ಆದಾಯದ ಮೂಲವಾಗಿದೆ. ಪಾಕಿಸ್ತಾನವು ಭಾರತದಿಂದ ಔಷಧ, ಸಕ್ಕರೆ, ಕೆಮಿಕಲ್ಸ್, ಆಟೊಮೊಬೈಲ್ ಬಿಡಿಭಾಗಗಳನ್ನು ಆಮದು ಮಾಡಿಕೊಳ್ಳುತ್ತಿದೆ. ಭಾರತವು ಪಾಕಿಸ್ತಾನದಿಂದ ತರಿಸಿಕೊಳ್ಳುವಂಥದ್ದು ಅತ್ಯಲ್ಪ. ಆದ್ದರಿಂದ ಇವೆಲ್ಲಕ್ಕೂ ಪಾಕ್ ಬೇರೆ ದಾರಿಯನ್ನು ಕಂಡುಕೊಳ್ಳಬೇಕಾಗುತ್ತದೆ. ಅದು ದುಬಾರಿಯೂ ಆಗಬಹುದು. ಭಾರತದ ವಿರುದ್ಧದ ಭಯೋತ್ಪಾದನೆಗೆ ನೀರೆರೆಯುತ್ತಿರುವ ಪಾಕಿಸ್ತಾನ ಅದಕ್ಕೆ ತೆರಬೇಕಾಗಿರುವ ಬೆಲೆ ತನ್ನದೇ ವಿನಾಶ. ಈ ವರ್ಷ ಒಂದು ಕೋಟಿಗೂ ಹೆಚ್ಚು ಪಾಕಿಸ್ತಾನೀಯರಿಗೆ ತುತ್ತಿಗೂ ಪರದಾಡುವ ಸ್ಥಿತಿ ನಿರ್ಮಾಣವಾಗಲಿದೆ ಎಂದು ವಿಶ್ವಬ್ಯಾಂಕ್ ತಿಳಿಸಿದೆ. ಭಾರತದ ಔಷಧಿ, ತರಕಾರಿ, ಹಣ್ಣುಗಳ ರಫ್ತು ಕೂಡ ಸ್ಥಗಿತವಾಗಿರುವುದರಿಂದ ಸಮಸ್ಯೆ ಉಲ್ಬಣಿಸಲಿದೆ.

ಮತ್ತೊಂದು ಕಡೆ ಭಾರತ ಇನ್ನೊಂದೇ ವರ್ಷದಲ್ಲಿ ಜಗತ್ತಿನ ಮೂರನೇ ಅತಿ ದೊಡ್ಡ ಆರ್ಥಿಕತೆಯಾಗುವತ್ತ ದಾಪುಗಾಲಿಡುತ್ತಿದೆ. ಜಾಗತಿಕ ಆರ್ಥಿಕತೆಯ ಬೆಳವಣಿಗೆ ಶೇ.2.5-3ರ ಮಂದಗತಿಯಲ್ಲಿದ್ದರೂ, ಭಾರತವು ನಿರಂತರವಾಗಿ ಶೇ.6.5-8ರ ದರದಲ್ಲಿ ಬೆಳೆಯುತ್ತಿದೆ. ವಿಶ್ವಬ್ಯಾಂಕ್, ಐಎಂಎಫ್, ಒಇಸಿಡಿಯಂಥ ಅಂತಾರಾಷ್ಟ್ರೀಯ ಸಂಸ್ಥೆಗಳು ಭಾರತವು ವಿಶ್ವ ಅರ್ಥವ್ಯವಸ್ಥೆಯಲ್ಲಿ ಮಹತ್ವದ ಛಾಪು ಮೂಡಿಸುತ್ತಿದೆ ಎಂದು ಪ್ರಶಂಸಿಸಿವೆ. ಜಾಗತಿಕ ಆರ್ಥಿಕತೆಯ ಬೆಳವಣಿಗೆಯಲ್ಲಿ ಶೇ.17ರಷ್ಟು ಕೊಡುಗೆ ಭಾರತದಿಂದ ಲಭಿಸುತ್ತಿದೆ. 63 ಸಾವಿರ ಕೋಟಿ ರುಪಾಯಿ ಕೊಟ್ಟು ರಫೆಲ್‌ನಂಥ ಆಧುನಿಕ ಯುದ್ಧ ವಿಮಾನಗಳನ್ನು ಖರೀದಿಸುವ ಸಾಮರ್ಥ್ಯ ಭಾರತಕ್ಕಿರುವುದರಿಂದಲೇ ರಕ್ಷಣೆಯ ವಿಚಾರದಲ್ಲಿ ತನ್ನನ್ನು ತಾನೇ ನೋಡಿಕೊಳ್ಳಬಲ್ಲ ಸಾಮರ್ಥ್ಯ ಭಾರತಕ್ಕಿದೆ. ಭಾರತದ ಅರ್ಥವ್ಯವಸ್ಥೆಯ ಅಗಾಧತೆಯನ್ನು ಕೇವಲ ಷೇರು ಮಾರುಕಟ್ಟೆಯಿಂದ ಅರಿತುಕೊಳ್ಳಲಾಗದು, ಅದು ಒಂದು ಮಿನಿಯೇಚರ್ ಅಷ್ಟೇ. ದೇಶದಲ್ಲಿ 28 ಲಕ್ಷ ಕಂಪನಿಗಳು ಇವೆ. ಈ ಪೈಕಿ 18 ಲಕ್ಷ ಕಂಪನಿಗಳು ಸಕ್ರಿಯವಾಗಿವೆ. ಇದರಲ್ಲಿ ಒಂದಷ್ಟು ಕಂಪನಿಗಳು ಮಾತ್ರ ಸ್ಟಾಕ್ ಮಾರ್ಕೆಟ್‌ನಲ್ಲಿ ನೋಂದಣಿಯಾಗಿವೆ. ಸ್ಟಾಕ್ ಮಾರ್ಕೆಟ್‌ನಲ್ಲೂ ನೋಂದಣಿಯಾಗಿರುವ ಸಾವಿರಾರು ಕಂಪನಿಗಳಲ್ಲಿ 'ಟಾಪ್ 100' ಅಥವಾ 'ಟಾಪ್ 500' ಕಂಪನಿಗಳು ಮಾತ್ರ ಸುದ್ದಿಯಲ್ಲಿರುತ್ತವೆ, ಷೇರು ಹೂಡಿಕೆದಾರರ ಗಮನ ಸೆಳೆಯುತ್ತವೆ. ತಲಾ ಆದಾಯದ ಲೆಕ್ಕದಲ್ಲಿ ಭಾರತ ಕ್ರಮಿಸಬೇಕಿರುವ ಹಾದಿ ದೀರ್ಘವಾಗಿದೆ. ಏಕೆಂದರೆ 143 ಕೋಟಿ ಜನಸಂಖ್ಯೆ. ವಿಶ್ವದ 5ನೇ ಅತಿ ದೊಡ್ಡ ಆರ್ಥಿಕತೆಯಾದ ಭಾರತದ ತಲಾ ಆದಾಯ 2,900 ಡಾಲರ್. ಆದರೆ 6ನೇ ದೊಡ್ಡ ಆರ್ಥಿಕತೆಯಾದ ಬ್ರಿಟನ್‌ನ ತಲಾ ಆದಾಯ 40,000 ಡಾಲರ್. ಆದರೆ ಏಕೆ ಹೀಗಾಗಿದೆ ಎಂಬುದು ಸರಳ. ಬ್ರಿಟನ್ನಿನ ಜನಸಂಖ್ಯೆ 7 ಕೋಟಿಗಿಂತಲೂ ಕಡಿಮೆ. ಭಾರತದ ಜನಸಂಖ್ಯೆ ಬ್ರಿಟನ್‌ಗಿಂತ 20 ಪಟ್ಟು ಹೆಚ್ಚು! ಆದ್ದರಿಂದಲೇ ತಲಾ ಆದಾಯ ಕಡಿಮೆ ಮತ್ತು ಜಿಡಿಪಿ ಬೆಳವಣಿಗೆಯಲ್ಲಿ ಉಂಟಾಗಿರುವ ಸಾಧನೆ ಜನಸಾಮಾನ್ಯರ ಗಾಢ ಅನುಭವಕ್ಕೆ ಬರುತ್ತಿಲ್ಲ. ಅದಕ್ಕೆ ತಲಾ ಆದಾಯವೂ ಹೆಚ್ಚುವ ತನಕ ಕಾಯಲೇಬೇಕು. ಆದರೆ ಅರ್ಥ ಶಾಸ್ತ್ರಜ್ಞರು, ವಿತ್ತಲೋಕದ ಪ್ರತಿಷ್ಠಿತ ಸಂಶೋಧನಾ ಸಂಸ್ಥೆಗಳು, ಜಾಗತಿಕ ಬ್ಯಾಂಕುಗಳಿಗೆ ಭಾರತದ ಆರ್ಥಿಕ ಬೆಳವಣಿಗೆಯ ಮಹತ್ವ ಈಗಾಗಲೇ ಸ್ಪಷ್ಟವಾಗಿ ಗೊತ್ತಾಗಿದೆ. ಆದ್ದರಿಂದಲೇ ವಿಶ್ವ ಸಮುದಾಯದಲ್ಲಿ ಇವತ್ತು ಭಾರತ ಪ್ರಭಾವಿ ರಾಷ್ಟ್ರವಾಗಿ ಹೊರಹೊಮ್ಮಿದೆ. ಪಾಕಿಸ್ತಾನವನ್ನು ದಂಡಿಸಲು ಭಾರತಕ್ಕೆ ನಾನಾ ಬಗೆಯ ರಾಜತಾಂತ್ರಿಕ, ವ್ಯೂಹಾತ್ಮಕ ಮತ್ತು ಆರ್ಥಿಕ ಅಸ್ತ್ರಗಳೂ ಇವೆ. ಅದನ್ನು ಈಗಾಗಲೇ ಪ್ರಯೋಗಿಸಲಾಗುತ್ತಿದೆ.

ಪಹಲ್ಗಾಮ್ ಉಗ್ರರ ದಾಳಿಯ ಬಳಿಕ ಸರ್ಜಿಕಲ್ ಸ್ಟ್ರೈಕ್‌ಗಿಂತಲೂ ದೊಡ್ಡ ಮಟ್ಟದ ಪ್ರತೀಕಾರಕ್ಕೆ ಭಾರತ ಪರಿಶೀಲಿಸುತ್ತಿದೆ. ಅದು ಪರಮಾಣು ಸಮರವಾಗದಂತೆಯೂ ನೋಡಿಕೊಳ್ಳಬೇಕಾಗಿದೆ. ಈ ನಿಟ್ಟಿನಲ್ಲಿ ಕೋಲ್ಡ್ ಸ್ಟಾರ್ಟ್ (Cold start) ಎಂಬ ರಣ ತಂತ್ರವನ್ನೂ ಭಾರತ ಅನುಸರಿಸುವ ಸಾಧ್ಯತೆ ಇದೆ ಎನ್ನಲಾಗುತ್ತಿದೆ. ಏನಿದು? ಪೂರ್ಣ ಪ್ರಮಾಣದ ಯುದ್ಧವನ್ನು ಮಾಡದೆಯೇ, ಅಣ್ವಸ್ತ್ರವನ್ನೂ ಪ್ರಯೋಗಿಸದೆಯೇ ನಡೆಸುವ ದಾಳಿ. ಪ್ರತಿಯಾಗಿ ಪಾಕಿಸ್ತಾನ 125-250 ಗ್ರಾಮ್ ಪರಮಾಣು ಬಾಂಬ್‌ಗಳನ್ನು ಬಳಸಬಹುದು. ಆದರೂ ಇವೆಲ್ಲವನ್ನೂ ಎದುರಿಸಬಲ್ಲ ಛಾತಿ, ಆರ್ಥಿಕ ಸಾಮರ್ಥ್ಯ ಭಾರತಕ್ಕಿದೆಯೇ ಹೊರತು ಪಾಕಿಸ್ತಾನಕ್ಕಲ್ಲ. ಒಂದು ಕಡೆ ಅಣ್ವಸ್ತ್ರ ಬಳಸಲೂ ಅದಕ್ಕೆ ಸಾಧ್ಯವಾಗುವುದಿಲ್ಲ, ಆರ್ಥಿಕವಾಗಿಯೂ ಚೇತರಿಸಿಕೊಳ್ಳಲಾಗದಂಥ ಹೊಡೆತ ಉಂಟಾಗುತ್ತದೆ. ಭಯೋತ್ಪಾದನೆಯನ್ನು ಪೋಷಿಸಿದ ಅಪರಾಧಕ್ಕೆ ಪಾಕಿಸ್ತಾನ ಈ ಅವಳಿ ದಂಡನೆಗೆ ಗುರಿಯಾಗಲಿದೆ.

ಭಟ್ಟರ್ ಸ್ಕಾಚ್

- **ಕಲಮಂಗಿ ಆಚಾರ್ಯ, ಬೆಂಗಳೂರು**
ಭಟ್ರೇ, ನೀವು ದೇಶ ಬಿಟ್ಟು ಹೋದಾಗಲೆಲ್ಲ ದೇಶದಲ್ಲಿ ಏನಾದರೂ ಗಂಡಾಂತರ ಸಂಭವಿಸುತ್ತಲ್ಲಾ?
– **ಇದ್ದರೆ ಇನ್ನೂ ಗಂಡಾಂತರ ಎಂದು ಹೇಳುವವರಿದ್ದಾರೆ!**

- **ಪಲ್ಲಕ್ಕಿ ರಾಘು, ಮಲ್ಲೇಶ್ವರ**
ಭಟ್ರೇ, ನಿಮಗೆ ಹೂವು ಅಂದರೆ ಪಂಚಪ್ರಾಣವಂತೆ ನಿಜವೇ?
– **ಹೌದು, ಹೂವು ಮುಡಿದವರ ಪಕ್ಷಪಾತಿಯಲ್ಲವೇ?!**

- **ವಿನಾಯಕ, ಮೈಸೂರು**
ಭಟ್ರೇ, ರಷ್ಯಾ 'ವಿಶ್ವವಾಣಿ' ಸಮಾರಂಭ ನೋಡಿದ ನಿಮ್ಮ ವಿರೋಧಿಗಳು ಏನೆಂದುಕೊಂಡಿದ್ದಾರೆ?
– **ಕಡೆಗೂ ಭಟ್ಟರನ್ನು ಜಪಾನ್‌ನಿಂದ ಒಕ್ಕಲೆಬ್ಬಿಸಿದ ತೃಪ್ತಿ!**

- **ಸರ್ಪಭೂಷಣ ಶಾಸ್ತ್ರೀ, ನಂಜನಗೂಡು**
ಮಾಸ್ಕೋಗೆ ಹೋಗಿದ್ದ ಭಟ್ಟರು ಪುಟಿನ್‌ಗೆ ಕಿವಿ ಊದಿದರೋ ಇಲ್ಲ ಕಿವಿ ಹಿಂಡಿದರೋ?
– **ಎರಡೂ ಅಲ್ಲ, ಕಿವಿ ಕಚ್ಚಿದರು!**

- **ಚಂಚಲ ಚಿಟಗುಪ್ಪಿ, ಮೈಸೂರು**
ಭಟ್ರೇ, ನೀವು ವಿದೇಶಕ್ಕೆ ಹದಿನೈದು ದಿನ ಹೋದರೆ ಇಲ್ಲಿರುವ ನಿಮ್ಮ ಅಭಿಮಾನಿಗಳ, ಪ್ರೇಯಸಿಯರ ಗತಿಯೇನು?
– **ಅದಕ್ಕೆ ಇತ್ತೀಚೆಗೆ ತಿಂಗಳಲ್ಲಿ ಎರಡು ಬಾರಿ ಮಾತ್ರ ವಿದೇಶಕ್ಕೆ ಹೋಗುತ್ತಿದ್ದೇನಲ್ಲ?!**

- **ಸಂದೀಪ ನಾಯಕ, ಬೆಂಗಳೂರು**
ಭಟ್ರೇ, ನೀವು ವಿದೇಶದಿಂದ ಬರುತ್ತಿರುವಂತೆ ಬೆಂಗಳೂರಿನಲ್ಲಿ ಮಳೆಯಂತೆ?
– **ಸದ್ಯ ಅತಿ ಮಳೆಯಾಗಿ ಅವಾಂತರ ಆಗಲಿಲ್ಲವಲ್ಲ?!**

- **ಗುರುನಾರಾಯಣ ಪಾತಪಲ್ಲಿ, (ಇಮೇಲ್ ಮೂಲಕ)**
ಭಟ್ರೇ, ಕೈ ಸಮಾವೇಶದಲ್ಲಿ ಕೈ ಎತ್ತಲೇಬೇಕಾ?
– **ಹಾಗಾದ್ರೆ ಜೆಡಿಎಸ್ ಸಮಾವೇಶದಲ್ಲಿ ಏನು ಮಾಡಬೇಕು ಅಂತ ಹೇಳಬೇಕಿತ್ತು!**

- **ಶಶಿಕಾಂತ್ ಎನ್.ಆರ್., ಬೆಂಗಳೂರು**
ಅಬಕಾರಿ ಸಚಿವರಾದ್ರೆ, ಎಣ್ಣೆ ಹಾಕಿಯೇ ಹೇಳಿಕೆ ಕೊಡಬೇಕಾ ಭಟ್ರೇ?
– **ಮಹಿಳಾ ಕಲ್ಯಾಣ ಸಚಿವರು ಏನು ಮಾಡಬೇಕು!?**

- **ಎಂ.ಪರಮೇಶ್ವರ, ಮದ್ದಿಹಳ್ಳಿ**
ಭಟ್ರೇ, ಭಟ್ಟರು ವಿದೇಶಗಳಿಗೆ ಹೋದರೆ ಯಾರೂ ತಪ್ಪು ತಿಳಿಯುವುದಿಲ್ಲವಂತೆ?
– **ಜತೆಯಲ್ಲಿ ಸ್ವಾಮೀಜಿಗಳು ಇರ್ತಾರೆ ಅಂತ ನನ್ನ ವಿರೋಧಿಗಳೇ ಹೇಳ್ತಿದ್ದಾರೆ!**

ಪ್ರಶಸ್ತಿಗಳ ಆಯ್ಕೆಯಲ್ಲಿ ವಶೀಲಿ ರಾಜಕಾರಣ!

ಶಶಾಂಕಣ

ಶಶಿಧರ ಹಾಲಾಡಿ
vveditoped@gmail.com

ಭಾರತ ಸರಕಾರವು 1990ರಲ್ಲಿ ಒಂದು ಸಣ್ಣ ಬಿಕ್ಕಟ್ಟಿನ ಪರಿಸ್ಥಿತಿಗೆ ಸಿಕ್ಕಿಹಾಕಿಕೊಂಡಿತು. ಅದು ತಾನೇ ಮಾಡಿಕೊಂಡ ಎಡವಟ್ಟು ಅಲ್ಲ, ಬದಲಿಗೆ ಪಕ್ಕದವರು ನಡೆಸಿದ ಕೀಟಲೆ. ನಮ್ಮ ನೆರೆಯ ದೇಶವಾದ ಪಾಕಿಸ್ತಾನದ ಒಂದು ಆಶ್ಚರ್ಯ ಹುಟ್ಟಿಸುವ ನಡೆಯೇ ಈ ಬಿಕ್ಕಟ್ಟಿಗೆ ಕಾರಣ. 1977ರಿಂದ 1979ರ ತನಕ ನಮ್ಮ ದೇಶದ ಪ್ರಧಾನಿಯಾಗಿದ್ದ, ಸ್ವತಂತ್ರ ಭಾರತದ ಮೊತ್ತ ಮೊದಲ ಕಾಂಗ್ರೆಸ್ಸೇತರ ಸರಕಾರದ ಪ್ರಧಾನಿಯೂ ಆಗಿದ್ದ ಮೊರಾರ್ಜಿ ದೇಸಾಯಿ ಅವರಿಗೆ ಪಾಕಿಸ್ತಾನ ಸರಕಾರ ನೀಡುವ ಅತ್ಯುನ್ನತ ಪ್ರಶಸ್ತಿಯಾದ 'ನಿಶಾನ್-ಎ-ಪಾಕಿಸ್ತಾನ್' ಪ್ರಶಸ್ತಿಯನ್ನು ದಯಪಾಲಿಸಲಾಗಿತ್ತು. ಆಗಾಗ ನಮ್ಮ ದೇಶದ ವಿರುದ್ಧ ಯುದ್ಧ ಮಾಡುತ್ತಿದ್ದ ಪಾಕಿಸ್ತಾನವು, ನಮ್ಮ ದೇಶದ ಮಾಜಿ ಪ್ರಧಾನಿಯವರಿಗೆ ತಾನು ನೀಡುವ ಅತ್ಯುನ್ನತ ಪ್ರಶಸ್ತಿಯನ್ನು ನೀಡುವುದು ಎಂದರೆ ಏನು ಸಾಮಾನ್ಯವೆ? ನೆಹರು ಅವರಿಗೆ ನೀಡಲಿಲ್ಲ, ಇಂದಿರಾ ಗಾಂಧಿಯವರಿಗೆ ನೀಡಲಿಲ್ಲ, ರಾಜೀವ್ ಗಾಂಧಿಯವರಿಗೆ ಕೊಡಲಿಲ್ಲ, ಶಾಸ್ತ್ರಿಯವರಿಗೆ ಕೊಡಲಿಲ್ಲ, ಮೊರಾರ್ಜಿಯವರಿಗೆ ಕೊಟ್ಟರು! ಈ ಸುದ್ದಿಯು ಬಿತ್ತರವಾದಾಗ ನಮ್ಮ ದೇಶದ ಜನಸಾಮಾನ್ಯರಿಗೆ ಆದ ದಿಗ್ಭ್ರಮೆ ಇಂದಿಗೂ ನೆನಪಿದೆ. ತಮ್ಮ ಜೀವನದುದ್ದಕ್ಕೂ ಕಾಂಗ್ರೆಸ್ ಪಕ್ಷದಲ್ಲಿದ್ದರೂ, ರಾಜಕಾರಣದ ಭಾಗವಾಗಿ, ಪಕ್ಷ ಬದಲಿಸಿ, 1977ರ ಜನತಾ ಪಕ್ಷದ ನೇತೃತ್ವದ ಸಮ್ಮಿಶ್ರ ಸರಕಾರದ ಪ್ರಧಾನಿ ಹುದ್ದೆ ಸ್ವೀಕರಿಸಿದ್ದ ಮೊರಾರ್ಜಿ ದೇಸಾಯಿಯವರಿಗೆ, ಪಕ್ಕದ ದೇಶದವರು ಅದೇಕೆ 'ನಿಶಾನ್-ಎ-ಪಾಕಿಸ್ತಾನ್' ನೀಡಿದರು ಎಂಬುದೇ ಆ ದಿಗ್ಭ್ರಮೆಗೆ ಕಾರಣ.

ಆ ಕ್ಷಣದಲ್ಲಿ ಭಾರತ ಸರಕಾರಕ್ಕೆ ಎದುರಾದ ಬಿಕ್ಕಟ್ಟು ಎಂದರೆ- ನಾವಿನ್ನೂ ಮೊರಾರ್ಜಿ ಅವರಿಗೆ 'ಭಾರತ ರತ್ನ' ನೀಡಿಲ್ಲ, ಪಾಕ್‌ನವರು ಅವರ ದೇಶದ ಅತ್ಯುನ್ನತ ಪ್ರಶಸ್ತಿ ನೀಡಿದ್ದಾರೆ, ಇದನ್ನು ಹೇಗೆ ನಿಭಾಯಿಸುವುದು- ಎಂಬುದು. ಅದಕ್ಕೊಂದು ಸರಳ ಉತ್ತರ ಕಂಡುಕೊಳ್ಳಲಾಯಿತು: 1991ರಲ್ಲಿ ಮೊರಾರ್ಜಿಯವರಿಗೆ 'ಭಾರತ ರತ್ನ' ನೀಡಿ, ಕೈತೊಳೆದುಕೊಳ್ಳಲಾಯಿತು. ಅದೇ ವರ್ಷ ರಾಜೀವ್ ಗಾಂಧಿ ಮತ್ತು ಪಟೇಲ್ ಅವರಿಗೂ ಭಾರತ ರತ್ನ ಪ್ರಶಸ್ತಿ (ಮರಣೋತ್ತರ) ನೀಡಿದ್ದು ಬೇರೆ ವಿಚಾರ.

ಸಾಮಾನ್ಯವಾಗಿ ಪಾಕಿಸ್ತಾನಕ್ಕೆ ಸಹಾಯ ಮಾಡಿದವರಿಗೆ, ಆ ದೇಶದ ಪ್ರಗತಿಗೆ ಸಹಕರಿಸಿದವರಿಗೆ 'ನಿಶಾನ್-ಎ-ಪಾಕಿಸ್ತಾನ್' ಪ್ರಶಸ್ತಿಯನ್ನು ನೀಡಲಾಗುತ್ತದೆ. ಆ ಪ್ರಶಸ್ತಿ ಪಡೆದವರ ಪಟ್ಟಿಯಲ್ಲಿ ಬ್ರಿಟನ್ನಿನ ರಾಣಿ, ಇರಾನಿನ ಶಾ, ಜೋರ್ಡಾನಿನ ರಾಜ, ಅಮೆರಿಕದ ಅಧ್ಯಕ್ಷ, ಇಂಡೋನೇಷ್ಯಾದ ಅಧ್ಯಕ್ಷ, ಒಮಾನ್‌ನ ಸುಲ್ತಾನ್, ಕತಾರ್‌ನ ಅಮೀರ್, ಸೌದಿ ಅರೇಬಿಯಾದ ರಾಜ ಸೇರಿದ್ದಾರೆ. ಮೊರಾರ್ಜಿಯವರಿಗೆ 1990ರಲ್ಲಿ ಪ್ರಶಸ್ತಿ ಪ್ರದಾನ ಮಾಡಿದರೂ, 1988ರಲ್ಲೇ ಅದನ್ನು ಘೋಷಣೆ ಮಾಡಲಾಗಿತ್ತು.

ಮೊರಾರ್ಜಿಯವರಿಗೆ ಅದೇಕೆ ಆ ಅತ್ಯುನ್ನತ ಪ್ರಶಸ್ತಿಯನ್ನು ಪಾಕಿಸ್ತಾನ ದಯಪಾಲಿಸಿತು ಎಂಬುದಕ್ಕೆ ಹಲವು ವಿಶ್ಲೇಷಣೆಗಳನ್ನು ಮಾಡಲಾಗಿದೆ. ಅದರಲ್ಲಿ ಒಂದು ಎಂದರೆ, 1978ರಲ್ಲಿ ಮೊರಾರ್ಜಿಯವರು ಪ್ರಧಾನಿಯಾಗಿದ್ದಾಗ, ಪಾಕಿಸ್ತಾನದ ಅಧ್ಯಕ್ಷ ಜಿಯಾ ಉಲ್ ಹಕ್‌ನೊಂದಿಗೆ ಸ್ನೇಹದಿಂದಿದ್ದರು ಮತ್ತು ಆಗಾಗ ಫೋನ್‌ನಲ್ಲಿ ಪರಸ್ಪರ ಮಾತಾಡುತ್ತಿದ್ದರು ಮತ್ತು ಅದೊಂದು ಸಂದರ್ಭದಲ್ಲಿ ನಮ್ಮ ದೇಶದ 'ರಾ' ಸಂಸ್ಥೆಯು ಪಾಕಿಸ್ತಾನದಲ್ಲಿ ನಡೆಸುತ್ತಿರುವ ಗುಪ್ತಚರ ಚಟುವಟಿಕೆಗಳ ವಿವರಗಳನ್ನು ಹೇಳಿಬಿಟ್ಟರು! ಇಂಥ ಒಂದು ವಿಶ್ಲೇಷಣೆಗೆ ದೃಢವಾದ ಲಿಖಿತ ಆಧಾರ ಇಲ್ಲದೇ ಇದ್ದರೂ, ಸಾಂದರ್ಭಿಕ ಸಾಕ್ಷ್ಯಗಳನ್ನು ಹುಡುಕಲಾಗಿದೆ. ನಮ್ಮ ದೇಶದ ಗುಪ್ತಚರ ಸಂಸ್ಥೆಯಾದ 'ರಾ' (ಆರ್‌ಎಡಬ್ಲ್ಯು) ಅಧಿಕಾರಿಯಾಗಿದ್ದ ಬಿ.ರಾಮನ್ ಅವರು ತಮ್ಮ ಪುಸ್ತಕದಲ್ಲಿ ಹೀಗೆ ಬರೆದಿದ್ದಾರೆ: ''...ಮೊರಾರ್ಜಿ ಅವರು ಪ್ರಯೋಗಿಸುತ್ತಿದ್ದ ನಾಟಿ ಚಿಕಿತ್ಸೆ ಮತ್ತು ಸ್ವಮೂತ್ರ ಚಿಕಿತ್ಸೆಯ ವಿವರ ತಿಳಿಯುವ ನೆಪದಿಂದ ಜಿಯಾ ಉಲ್ ಹಕ್, ಮೊರಾರ್ಜಿಯವರಿಗೆ ಆಗಾಗ ಫೋನ್ ಮಾಡುತ್ತಿದ್ದರು. ಮೊರಾರ್ಜಿಗೆ ಇದರ ಕುರಿತು ಮಾತನಾಡುವುದಕ್ಕಿಂತ ಖುಷಿ ಇನ್ನೊಂದಿಲ್ಲ. ಕುತೂಹಲಭರಿತ ಧ್ವನಿಯಲ್ಲಿ ಜಿಯಾ ಕೇಳುತ್ತಿದ್ದರು- 'ಎಕ್ಸಲೆನ್ಸಿ, ಒಂದು ದಿನದಲ್ಲಿ ಎಷ್ಟು ಬಾರಿ ಸ್ವಮೂತ್ರ ಕುಡಿಯಬೇಕು? ಬೆಳಗಿನ ಮೊದಲ ಮೂತ್ರವನ್ನೋ ಅಥವಾ ದಿನದ ಬೇರೆ ಸಮಯದ ಮೂತ್ರವನ್ನೋ?'. ಅದೊಂದು ದಿನ, ಇಂಥ ಮಾತುಗಳ ನಡುವೆ ಎಚ್ಚರಿಕೆ ಮರೆತ ಮೊರಾರ್ಜಿಯವರು ಬಾಯ್ತಪ್ಪಿ, 'ಪಾಕಿಸ್ತಾನವು ಮಿಲಿಟರಿ ಉದ್ದೇಶಕ್ಕೆ ರಹಸ್ಯವಾಗಿ ಅಣು ಶಕ್ತಿಯನ್ನು ಬಳಸುವ ತಂತ್ರಜ್ಞಾನವನ್ನು ಅಭಿವೃದ್ಧಿ ಪಡಿಸುತ್ತಿರುವ ವಿಚಾರ ತನಗೆ ಗೊತ್ತು ಎಂದುಬಿಟ್ಟರು..'. ಇದರ ಸುಳಿವು ದೊರೆತ ಜಿಯಾ ಉಲ್ ಹಕ್, ಪಾಕಿಸ್ತಾನದಲ್ಲಿದ್ದ 'ರಾ' ಪರವಾದ ಗುಪ್ತಚಾರರ ಕತೆ ಮುಗಿಸಿದ! ಕುತೂಹಕಾರಿ ಸಂಗತಿ ಎಂದರೆ, ಜಿಯಾ ಮತ್ತು ಮೊರಾರ್ಜಿಯವರು ಆಗಾಗ ಫೋನ್‌ನಲ್ಲಿ ಮಾತನಾಡುತ್ತಿದ್ದರೂ, ಭೇಟಿಯಾಗಿದ್ದು ಒಂದೇ ಸಲ: ಕೆನ್ಯಾ ಅಧ್ಯಕ್ಷನ ಅಂತ್ಯಕ್ರಿಯೆಯಲ್ಲಿ, 1978ರಲ್ಲಿ...''.

ಕೇವಲ ಎರಡು ವರ್ಷ ನಮ್ಮ ದೇಶದ ಪ್ರಧಾನಿಯಾಗಿದ್ದ ಮೊರಾರ್ಜಿ ದೇಸಾಯಿಯವರು, ಹಲವು ದಾಖಲೆಗಳನ್ನು ಮಾಡಿದ್ದಾರೆ. ತುರ್ತು ಪರಿಸ್ಥಿತಿಯ ಪರಿಣಾಮವಾಗಿ, ಸ್ವತಂತ್ರ ಭಾರತದಲ್ಲಿ ಮೊತ್ತ ಮೊದಲ ಬಾರಿ ಕಾಂಗ್ರೆಸ್ ಪಕ್ಷವು ಲೋಕಸಭಾ ಚುನಾವಣೆಯಲ್ಲಿ ಸೋತು ಹೋದಾಗ, ಜನತಾ ಪಕ್ಷದ ನೇತೃತ್ವದಲ್ಲಿ ಸಮ್ಮಿಶ್ರ ಸರಕಾರವು ದೆಹಲಿಯಲ್ಲಿ ಅಧಿಕಾರಕ್ಕೆ ಬಂತು ಮತ್ತು ಮೊರಾರ್ಜಿಯವರು ಮೊದಲ ಪ್ರಧಾನಿಯಾದರು. ಆದರೆ, ಸ್ವಾತಂತ್ರ್ಯ ಹೋರಾಟಗಾರರಾಗಿದ್ದ ಅವರು, ಮೊದಲಿನಿಂದಲೂ ಕಾಂಗ್ರೆಸ್ ಪಕ್ಷದಲ್ಲೇ ಇದ್ದವರು, 1960ರ ದಶಕದಲ್ಲಿ ಪ್ರಧಾನಿ ಹುದ್ದೆಯನ್ನು ಅಲಂಕರಿಸಲು ಆಸೆಪಟ್ಟವರು. ಅವರು 1967ರಿಂದ 1969ರ ತನಕ ಇಂದಿರಾಗಾಂಧಿಯವರ ನೇತೃತ್ವದ ಸರಕಾರದಲ್ಲಿ ಉಪ ಪ್ರಧಾನಿಯೂ ಆಗಿದ್ದರು! ತಮ್ಮ ಜೀವಮಾನದುದ್ದಕ್ಕೂ ಕಾಂಗ್ರೆಸ್ ಪಕ್ಷದ ನಿಷ್ಠಾವಂತ ರಾಜಕಾರಣಿಯಾಗಿದ್ದ ಮೊರಾರ್ಜಿಯವರು, ಕೊನೆಗೂ ದೇಶದ ಪ್ರಧಾನಿಯಾಗಲು, ಜನತಾ ಪಕ್ಷಕ್ಕೆ ಸೇರಬೇಕಾಗಿದ್ದು ಒಂದು ವಿಪರ್ಯಾಸ; ಅದಕ್ಕೆ ತುರ್ತುಪರಿಸ್ಥಿತಿಯೂ ಕಾರಣ ಎನ್ನಬಹುದು. ಅವರು 1977ರಲ್ಲಿ ಪ್ರಧಾನಿಯಾಗುವ ಮೂಲಕ, ನಮ್ಮ ದೇಶದ ಮೊತ್ತ ಮೊದಲ ಕಾಂಗ್ರೆಸ್ಸೇತರ ಸರಕಾರದ ನೇತೃತ್ವ ವಹಿಸಿದರು. ಬ್ರಿಟಿಷರ ಕಾಲದಲ್ಲೇ ಅವರು ಮುಂಬಯಿ ಸರಕಾರದ ಗೃಹ ಮಂತ್ರಿಯಾಗಿದ್ದರು ಮತ್ತು 1952ರಲ್ಲಿ ಮುಂಬಯಿ ರಾಜ್ಯದ ಮುಖ್ಯಮಂತ್ರಿಯೂ ಆಗಿದ್ದರು. ಇವೆಲ್ಲವೂ ಅವರು ಕಾಂಗ್ರೆಸ್‌ನಲ್ಲಿದ್ದಾಗಲೇ ನಡೆದದ್ದು. ಅದಕ್ಕೂ ಮುಂಚೆ ಮಹಾತ್ಮ ಗಾಂಧಿಯವರ ಜತೆ ಕೈಜೋಡಿಸಿ, ಬ್ರಿಟಿಷರ ವಿರುದ್ಧ ನಿರಂತರವಾಗಿ ಅಹಿಂಸಾತ್ಮಕ ಹೋರಾಟವನ್ನು ನಡೆಸಿದ್ದರು. ಪಾಕಿಸ್ತಾನವು 1990ರಲ್ಲಿ ತಮಗೆ ನಿಶಾನ್-ಎ-ಪಾಕಿಸ್ತಾನ್ ಪ್ರಶಸ್ತಿ ನೀಡಿದಾಗ, ಮೊರಾರ್ಜಿಯವರು ಅದನ್ನು ಹೆಮ್ಮೆಯಿಂದಲೇ ಸ್ವೀಕರಿಸಿದರು, ಮತ್ತು ತಾವು ಪ್ರಧಾನಿಯಾಗಿದ್ದಾಗ ನೆರೆ ದೇಶದೊಂದಿಗೆ ಶಾಂತಿಯುತವಾಗಿ ವ್ಯವಹರಿಸಿದ್ದಕ್ಕಾಗಿ ಈ ಪ್ರಶಸ್ತಿ ಬಂದಿದೆ ಎಂದೇ ತಿಳಿದಿದ್ದರು; ಆದರೆ, ಅದು ಅವರ ಸುದೀರ್ಘ ರಾಜಕೀಯ ಜೀವನದಲ್ಲಿ ಒಂದು ಕಪ್ಪುಚುಕ್ಕಿ ಎಂದೇ ಇತರ ಹಲವು ರಾಜಕೀಯ ಪಂಡಿತರು ಪರಿಗಣಿಸಿದ್ದಾರೆ.

ನಮ್ಮ ದೇಶಕ್ಕೆ ಸ್ವಾತಂತ್ರ್ಯ ದೊರಕಿದ ನಂತರ ಸ್ಥಾಪಿಸಲಾದ 'ಭಾರತ ರತ್ನ' ಪ್ರಶಸ್ತಿಯು, ನಮ್ಮ ದೇಶದ ಅತ್ಯುನ್ನತ ಪ್ರಶಸ್ತಿಯಾಗಿದೆ ಮತ್ತು ಮೊರಾರ್ಜಿಯವರಿಗೆ ಅನಿವಾರ್ಯವಾಗಿ 1991ರಲ್ಲಿ ಅದನ್ನು ನೀಡಬೇಕಾಯಿತು. ಈ ಪ್ರಶಸ್ತಿಯು ನಮ್ಮ ದೇಶದ ಪ್ರಧಾನಿಗಳಾಗಿದ್ದ ನೆಹರು, ಇಂದಿರಾಗಾಂಧಿ, ರಾಜೀವ್ ಗಾಂಧಿ, ಮೊರಾರ್ಜಿ, ಲಾಲ್ ಬಹಾದುರ್ ಶಾಸ್ತ್ರಿ, ವಾಜಪೇಯಿ, ಪಿ.ವಿ.ನರಸಿಂಹ ರಾವ್ ಅವರಿಗೆ ಮತ್ತು ಇತರ ಹಲವು ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಗಣ್ಯರಿಗೆ ದೊರಕಿದೆ. ಮಹಾತ್ಮ ಗಾಂಧೀಜಿಗೆ ಭಾರತ ರತ್ನ (ಮರಣೋತ್ತರ) ದೊರಕಿಲ್ಲ ಎಂದು ಕೆಲವರು ಒಮ್ಮೊಮ್ಮೆ ಹೇಳುವುದುಂಟು, ಆದರೆ ಗಾಂಧೀಜಿ ಇವೆಲ್ಲ ಪ್ರಶಸ್ತಿಗಿಂತ ಮೇಲೆ ನಿಲ್ಲುತ್ತಾರೆ ಎಂಬುದು ಸರಳ ಸತ್ಯ. ಭಾರತ ರತ್ನ ಪ್ರಶಸ್ತಿಗೆ ಹೋಲಿಸಬಹುದಾದ ಒಂದು ಪ್ರಶಸ್ತಿಯನ್ನು ಮಹಾತ್ಮ ಗಾಂಧಿಯವರು ಸ್ವೀಕರಿಸಿದ ಕಥೆ ಸ್ವಾರಸ್ಯಕರವಾಗಿದೆ.

ಭಾರತ ರತ್ನ ಪ್ರಶಸ್ತಿಯು ಸ್ಥಾಪನೆಯಾಗುವ ಮೊದಲು, ನಮ್ಮ ದೇಶದ ಅತ್ಯುನ್ನತ ಪ್ರಶಸ್ತಿಯೆಂದರೆ, ಕೈಸರ್-ಎ-ಹಿಂದ್. ಇದನ್ನು ಬ್ರಿಟಿಷರು 1900ರಿಂದ 1947ರ ತನಕ ನೀಡುತ್ತಿದ್ದರು. 'ಭಾರತ ದೇಶದ (ಬ್ರಿಟಿಷ್ ರಾಜ್) ಹಿತಾಸಕ್ತಿಗಾಗಿ ಅತ್ಯುತ್ತಮ ಸೇವೆ ನೀಡಿದವರಿಗೆ' ಇದನ್ನು ನೀಡುತ್ತಿರುವುದಾಗಿ ಬ್ರಿಟಿಷ್ ಸರಕಾರ ಘೋಷಿಸಿಕೊಂಡಿತ್ತು. ಕೈಸರ್-ಎ-ಹಿಂದ್ ಎಂದರೆ 'ಭಾರತದ ಸಾಮ್ರಾಟ' ಎಂಬ ಅರ್ಥ! ಇದನ್ನು ನೀಡುತ್ತಿದ್ದು ಮಾತ್ರ ಬ್ರಿಟನ್‌ನ ರಾಣಿ/ರಾಜ! ಬ್ರಿಟಿಷರು ಮಹಾತ್ಮ ಗಾಂಧಿಯವರಿಗೆ 'ಕೈಸರ್-ಎ-ಹಿಂದ್' ಪ್ರಶಸ್ತಿಯನ್ನು ನೀಡಿದ್ದು 1915ರಲ್ಲಿ. ಅದಕ್ಕೆ ಅವರು ನೀಡಿದ ಕಾರಣ- ದಕ್ಷಿಣ ಆಫ್ರಿಕಾದಲ್ಲಿ ಯುದ್ಧದ ಸಮಯದಲ್ಲಿ ಬ್ರಿಟಿಷ್ ಸೈನಿಕರಿಗೆ ಆ್ಯಂಬುಲೆನ್ಸ್ ಸೇವೆಯನ್ನು ನೀಡಿದ್ದಕ್ಕಾಗಿ.

ವಿಶೇಷವೆಂದರೆ, 1915ರ ಇಸವಿಯು ಗಾಂಧೀಜಿ ದಕ್ಷಿಣ ಆಫ್ರಿಕಾ ತೊರೆದು ಭಾರತಕ್ಕೆ ಬಂದ ವರ್ಷ. ಆ ವರ್ಷವೇ, ಅಂದಿನ ವೈಸ್‌ರಾಯ್ ಲಾರ್ಡ್ ಹರ್ಡಿಂಜ್‌ನು ದೆಹಲಿಯಿಂದ ಮುಂಬಯಿಗೆ ಬಂದು, ಅಲ್ಲಿ ನಡೆದ ಸಮಾರಂಭದಲ್ಲಿ ಮಹಾತ್ಮ ಗಾಂಧಿಯವರಿಗೆ ಈ ಪ್ರಶಸ್ತಿಯನ್ನು ನೀಡಿದನು. ಅದನ್ನು ಗಾಂಧೀಜಿಯವರು ಸ್ವೀಕರಿಸಿದರು. ಆದರೆ, 1920ರಲ್ಲಿ ಈ ಪ್ರಶಸ್ತಿಯನ್ನು ಮತ್ತು ಇನ್ನಿತರ ಎರಡು ಮೆಡಲ್‌ಗಳನ್ನು ಬ್ರಿಟಿಷ್ ಸರಕಾರಕ್ಕೆ ವಾಪಸು ಮಾಡಿದರು. 'ಖಿಲಾಫತ್ ಚಳವಳಿಯ ಭಾಗವಾಗಿ ಆರಂಭಿಸಿದ ಅಸಹಕಾರ ಚಳವಳಿಯ ಭಾಗವಾಗಿ ಈ ಪ್ರಶಸ್ತಿಗಳನ್ನು ಹಿಂದಿರುಗಿಸುತ್ತಿದ್ದೇನೆ' ಎಂದು ಅವರು ಬ್ರಿಟಿಷ್ ಸರಕಾರಕ್ಕೆ ಪತ್ರ ಬರೆದು ತಮ್ಮ ಪ್ರತಿಭಟನೆಯನ್ನು ದಾಖಲಿಸಿದರು. 1919ರಲ್ಲಿ ಬ್ರಿಟಿಷರು ಅಮೃತಸರದಲ್ಲಿ ನಡೆಸಿದ ಜಲಿಯನ್ ವಾಲಾಬಾಗ್ ಹತ್ಯಾಕಾಂಡವೂ ಇಲ್ಲಿ ನೆನಪಿಗೆ ಬರುತ್ತದೆ. ಮಹಾತ್ಮ ಗಾಂಧಿಯವರ ಕುರಿತು ಇನ್ನೊಂದು ವಿಚಾರವನ್ನು ಪ್ರಸ್ತಾಪಿಸಲೇಬೇಕು: ಅವರು ಎಂದಿಗೂ ಪ್ರಶಸ್ತಿಗಳ ಆಸೆಗೆ ಹೋರಾಟ ನಡೆಸಲಿಲ್ಲ, ಪ್ರಶಸ್ತಿ ಪಡೆಯಲೆಂದು ಲಾಬಿ ಮಾಡಿದವರೂ ಅಲ್ಲ. ಅವರು ಎಲ್ಲಾ ಪ್ರಶಸ್ತಿಗಳನ್ನು ಮೀರಿದ ಮಹಾತ್ಮ. ನೊಬೆಲ್ ಪ್ರಶಸ್ತಿಯ ಆಯ್ಕೆ ಪಟ್ಟಿಯಲ್ಲಿ ಮಹಾತ್ಮ ಗಾಂಧಿಯವರ ಹೆಸರು 5 ಬಾರಿ ನಮೂದಾಗಿದ್ದರೂ, ಅವರಿಗೆ ಪ್ರಶಸ್ತಿ ದೊರಕಲಿಲ್ಲ; ಕೊನೆಗೆ 1948ರಲ್ಲಿ ಅವರಿಗೆ ನೊಬೆಲ್ ಶಾಂತಿ ಪ್ರಶಸ್ತಿ ನೀಡುವ ಯೋಚನೆಯಿತ್ತು. ಆದರೆ, ಅಷ್ಟರಲ್ಲಿ ಅವರ ಹತ್ಯೆಯಾಯಿತು, ಆದ್ದರಿಂದ, ನೊಬೆಲ್ ಪ್ರಶಸ್ತಿ ಅವರಿಗೆ ದೊರಕಲಿಲ್ಲ, ನೊಬೆಲ್‌ನ ಮಹತ್ವ ಅಷ್ಟರ ಮಟ್ಟಿಗೆ ಕಡಿಮೆಯಾಯಿತು ಎಂಬ ವಿಚಾರವೂ ಹಲವು ಕಡೆ ಚರ್ಚೆಗೆ ಒಳಗಾಗಿದೆ.ಸ್ವಾತಂತ್ರ್ಯ ಹೋರಾಟಗಾರರ ಪೈಕಿ ಸರೋಜಿನಿ ನಾಯ್ಡು ಸಹಾ, 'ಕೈಸರ್-ಎ-ಹಿಂದ್' ಪ್ರಶಸ್ತಿಗೆ (1911) ಭಾಜನರಾಗಿದ್ದರು ಮತ್ತು ಅವರು, ಜಲಿಯನ್‌ವಾಲಾಬಾಗ್ ಹತ್ಯಾಕಾಂಡವನ್ನು ವಿರೋಧಿಸಿ ಆ ಪ್ರಶಸ್ತಿಯನ್ನು ಬ್ರಿಟಿಷ್ ಸರಕಾರಕ್ಕೆ ಹಿಂದಿರುಗಿಸಿದರು.

ಪ್ರಶಸ್ತಿ ಮತ್ತು ಪ್ರಶಸ್ತಿ ನೀಡುವ ರಾಜಕಾರಣದ ಕುರಿತು ಬರೆಯುತ್ತಾ ಹೋದರೆ ಅದು ಎಂದಿಗೂ ಮುಗಿಯದ ಬರಹವಾದೀತು. ಜಗತ್ತಿನ ಪ್ರಖ್ಯಾತ ಪ್ರಶಸ್ತಿಯಾದ ನೊಬೆಲ್, ಚಲನಚಿತ್ರ ಕ್ಷೇತ್ರದ ಆಸ್ಕರ್ ಪ್ರಶಸ್ತಿ ಎಲ್ಲವೂ ಹಲವು ವಿವಾದಗಳಿಗೆ ಒಳಗಾಗಿವೆ. ಅಂಥ ಪ್ರಶಸ್ತಿಗಳಿಗೆ ಆಯ್ಕೆ ಮಾಡುವಾಗ ಸಾಕಷ್ಟು ರಾಜಕಾರಣ, ವಶೀಲಿ, ಲಾಬಿ, ಪಕ್ಷಪಾತನೀತಿ, ಸ್ಪಷ್ಟವಾಗಿ ವಿವರಿಸಲಾಗದ ವಿದ್ಯಮಾನಗಳು ನಡೆಯುತ್ತವೆ ಎಂಬುದು ಸ್ಪಷ್ಟ. ನಮ್ಮ ದೇಶದ ಅತ್ಯುನ್ನತ ಪ್ರಶಸ್ತಿಯಾದ ಭಾರತ ರತ್ನ ಮತ್ತು ಪದ್ಮ ಪ್ರಶಸ್ತಿಗಳನ್ನು ನೀಡುವಾಗಲೂ, ಕೆಲವು ವಿಶಿಷ್ಟ ವಿದ್ಯಮಾನಗಳನ್ನು ಗಮನಿಸಬಹುದು. ಇಂಥ ಪ್ರಶಸ್ತಿಗಳ ಘೋಷಣೆಯಾದಾಗ, ಬೇರೆ ಬೇರೆ ರಾಜಕೀಯ ಪಕ್ಷಗಳು ಒಂದಲ್ಲಾ ಒಂದು ರೀತಿಯಲ್ಲಿ ಟೀಕೆಗಳ ಸುರಿಮಳೆಯನ್ನೇ ಸುರಿಸುತ್ತವೆ. ಭಾರತ ರತ್ನ ಪ್ರಶಸ್ತಿಯ ಕುರಿತು ಹೇಳುವುದಾದರೆ, ನಮ್ಮ ದೇಶದ ಮೊದಲ ಪ್ರಧಾನಿ ನೆಹರು ಅವರು ತಾವೇ ಪ್ರಶಸ್ತಿಯನ್ನು ಕೊಟ್ಟುಕೊಂಡರು ಮತ್ತು ಅವರ ಮಗಳು ಇಂದಿರಾ ಗಾಂಧಿಯವರು ಸಹ ತಾವೇ ಪ್ರಶಸ್ತಿಯನ್ನು ಕೊಟ್ಟುಕೊಂಡರು ಎಂದು ಹೇಳುವುದುಂಟು. ಏಕೆಂದರೆ, ಪ್ರಶಸ್ತಿ ಸ್ವೀಕರಿಸಿದಾಗ ಅವರಿನ್ನೂ ಪ್ರಧಾನ ಮಂತ್ರಿ ಸ್ಥಾನದಲ್ಲಿದ್ದರು. ಈ ಪ್ರಶಸ್ತಿ 1954ರಲ್ಲಿ ಆರಂಭವಾದಾಗ, 'ಪ್ರಧಾನ ಮಂತ್ರಿಯವರು ರಾಷ್ಟ್ರಪತಿಗಳಿಗೆ ಶಿಫಾರಸು ಮಾಡಿದವರಿಗೆ' ನೀಡುವ ಪ್ರಶಸ್ತಿ ಎಂದೇ ರೂಪಿಸಲಾಗಿದ್ದರಿಂದ, ಅವರಿಬ್ಬರು ಪಡೆದ ಪ್ರಶಸ್ತಿಯು ಇಂಥ ಒಂದು ಟೀಕೆಗೆ ಗುರಿಯಾಗಿದೆ. ನೆಹರು ಅವರು ಭಾರತ ರತ್ನ ಪಡೆದ ವರ್ಷವೇ, ನಮ್ಮ ರಾಜ್ಯದ ಸರ್ ಎಂ. ವಿಶ್ವೇಶ್ವರಯ್ಯನವರಿಗೂ ಆ ಪ್ರಶಸ್ತಿಯನ್ನು ನೀಡಿದ್ದರು ಎಂಬುದು ವಿಶೇಷ.

ರಾಮಾನುಜ ಸ್ಮರಣೆ

ನಂ.ಶ್ರೀಕಂಠ ಕುಮಾರ್

ಭಕ್ತಿ, ಶರಣಾಗತಿಗಳನ್ನು ಬೋಧಿಸಿದ ಶ್ರೀ ರಾಮಾನುಜಾಚಾರ್ಯರು

ಯತಿಶ್ರೇಷ್ಠ ಶ್ರೀರಾಮಾನುಜರು ಅವತರಿಸಿದ್ದು ಕ್ರಿ.ಶ. 1017ರಲ್ಲಿ. ತಂದೆ ಕೇಶವ ದೀಕ್ಷಿತರು, ತಾಯಿ ಕಾಂತಿಮತಿದೇವಿ. ಮಗುವಿಗೆ 'ಇಳೈ ಆಳ್ವಾರ್' ಎಂದು ನಾಮಕರಿಸಲಾಯಿತು. ಕಾಲಕ್ರಮೇಣ ಚೌಲೋಪನಯನವಾಯಿತು. ತಂದೆಯವರೇ ವೇದಾಧ್ಯಯನ, ನಿತ್ಯಾನುಸಂಧಾನಗಳನ್ನು ಅಭ್ಯಾಸ ಮಾಡಿಸಿದರು. ಮಗುವು ಆದಿಶೇಷನ ಅವತಾರವೆಂದರಿತ ಸೋದರಮಾವ ಶ್ರೀಶೈಲಪೂರ್ಣರು, ಲಕ್ಷ್ಮಣಸ್ವಾಮಿಯ ಪುನರವತಾರಿ 'ರಾಮಾನುಜ' ಎಂದು ಕರೆದರು. ಬಾಲಕನನ್ನು ಮುಂದೆ ಶಾಸ್ತ್ರಾಭ್ಯಾಸಕ್ಕಾಗಿ ಕಾಂಚೀಪುರದಲ್ಲಿನ ಯಾದವ ಪ್ರಕಾಶರೆಂಬ ಪಂಡಿತರಲ್ಲಿ ಸೇರಿಸಿದರು.

ರಾಮಾನುಜರು ಆಶ್ರಮವಾಸಿಯಾಗಿರುವಾಗಲೇ ರಾಜಕುಮಾರಿಗೆ ಹಿಡಿದಿದ್ದ ಬ್ರಹ್ಮರಾಕ್ಷಸನಿಗೆ ಮೋಕ್ಷವನ್ನು ಪ್ರಸಾದಿಸಿದವರು. ಕಂಚಿಯಲ್ಲಿ ಶ್ರೀ ವರದರಾಜ ಸ್ವಾಮಿಯ ಸೇವೆ ಮಾಡುತ್ತಾ, ತಮ್ಮನ್ನು ಬಾಧಿಸುತ್ತಿದ್ದ ಹಲವಾರು ಸಂದೇಹಗಳನ್ನು ದೇವರಾಜಸ್ವಾಮಿ ಕಾಂಚಿಪೂರ್ಣರೆಂಬ ಭಕ್ತಾಗ್ರೇಸರರ ಮೂಲಕ ಪರಿಹರಿಸಿಕೊಂಡವರು. ಸ್ವಾಮಿಯ ತಿರುಮಂಜನಕ್ಕೆ ತೀರ್ಥವನ್ನು ತಂದುಕೊಡುವ ಕೈಂಕರ್ಯದಲ್ಲಿ ನಿರತರಾದ ರಾಮಾನುಜರು, ನಂತರ ಸಂಸಾರದಲ್ಲಿ ಜುಗುಪ್ಸೆ ಹೊಂದಿ, ಮಡದಿಯನ್ನು ತವರುಮನೆಗೆ ಕಳಿಸಿ, ಶ್ರೀ ವರದರಾಜನ ಸನ್ನಿಧಾನದಲ್ಲಿ ಸನ್ಯಾಸ ಸ್ವೀಕರಿಸಿದರು. ಮುಂದೆ ಗುರುಮುಖೇನ ತತ್ವನಿಷ್ಕರ್ಷೆಯನ್ನು ಮಾಡಿದ ರಾಮಾನುಜರಿಗೆ, ಪರಮಗುರು ಯಮುನಾಚಾರ್ಯರ ಅಂತಿಮ ಸಂದೇಶವು ಮನವರಿಕೆಯಾಗಿ, ಇತರ ಪ್ರಾಚೀನ ಮಹರ್ಷಿಗಳ ವ್ಯಾಖ್ಯಾನಗಳನ್ನು, ಪರಂಪರೆಗಳನ್ನು ಪರಿಶೀಲಿಸಿ ಶಾರೀರಕ ಮೀಮಾಂಸಾ ಭಾಷ್ಯವನ್ನು ರಚಿಸಿದರು. ನಂತರ ಶ್ರೀರಂಗಕ್ಕೆ ತೆರಳಿ ಅಲ್ಲಿನ ದೇಗುಲದ ಕಾರ್ಯನಿರ್ವಾಹವನ್ನು ಹೊತ್ತರು. ಶ್ರೀವರದರಾಜಸ್ವಾಮಿಯ ಪರಮಭಕ್ತರಾಗಿ ಉನ್ನತ ವಿದ್ಯೆಯನ್ನು ಪಡೆದು 'ವಿಶಿಷ್ಟಾದ್ವೈತ' ಸಿದ್ಧಾಂತವನ್ನು ಪ್ರತಿಪಾದಿಸಿದರು. ಹಿಂದುಳಿದವರಿಗೂ ಭಕ್ತಿಮಾರ್ಗದ ಆಚರಣೆಯನ್ನು ಬೋಧಿಸಿ 'ಶ್ರೀರಾಮಾನುಜಾಚಾರ್ಯ'ರಾಗಿ ಖ್ಯಾತಿ ಪಡೆದರು. ನಂತರ ಬ್ರಹ್ಮಸೂತ್ರಕ್ಕೆ ವಿಶಿಷ್ಟಾದ್ವೈತಾನುಸಾರ ಭಾಷ್ಯವನ್ನು ರಚಿಸಿ ಅದಕ್ಕೆ 'ಶ್ರೀಭಾಷ್ಯ' ಎಂದು ಕರೆದುದರಿಂದ ಇವರಿಗೆ 'ಶ್ರೀಭಾಷ್ಯಕಾರ'ರೆಂದು ಹೆಸರಾಯಿತು. ರಾಮಾನುಜರು ಶ್ರೀಭಾಷ್ಯವೇ ಅಲ್ಲದೇ, ವೇದಾಂತಸಾರ, ವೇದಾಂತದೀಪ, ವೇದಾರ್ಥಸಂಗ್ರಹ, ಗೀತಾ ಭಾಷ್ಯಗಳನ್ನು ರಚಿಸಿದ್ದಾರೆ.

ಇಂದು ಶ್ರೀ ರಾಮಾನುಜ ಜಯಂತಿ

ರಾಮಾನುಜರು ಎಲ್ಲೆಡೆ ಧರ್ಮಪ್ರಸಾರ ಮಾಡಿ, ತಿರುಮಲೆಗೆ ಹೋಗಿ ಶ್ರೀ ಶ್ರೀನಿವಾಸ ದೇವರಿಗೆ ಶಂಖ-ಚಕ್ರ ಧಾರಣೆ ಮಾಡಿಸಿದ ಕೀರ್ತಿವಂತರು. ರಾಮಾನುಜರು, ಸ್ವಾಮಿಯ ವಕ್ಷಸ್ಥಳಕ್ಕೆ ಅಲಮೇಲ್‌ಮಂಗ ತಾಯಾರ್ ಅವರನ್ನೂ, ಭೂದೇವಿಯನ್ನೂ ಪ್ರತಿಷ್ಠಾಪಿಸಿ ತಿರುಮಲ ಶ್ರೀನಿವಾಸನಿಗೆ ಮಾವನವರಾದರು ಮತ್ತು ದೆಹಲಿಯ ಸುಲ್ತಾನನ ಮನೆಯಲ್ಲಿ ನೆಲೆಸಿದ್ದ ರಾಮಪ್ರಿಯಮೂರ್ತಿಯನ್ನು 'ಶೆಲ್ವಪಿಳ್ಳೈ ಬಾ' ಎಂದು ಕರೆದು, ಮೇಲುಕೋಟೆಯಲ್ಲಿನ ಶ್ರೀಚೆಲುವನಾರಾಯಣಸ್ವಾಮಿಯ ಸನ್ನಿಧಿಯಲ್ಲಿ ಉತ್ಸವಮೂರ್ತಿಯಾಗಿ ಸ್ಥಾಪಿಸಿ ತಂದೆಗೆ ತಂದೆಯಾದರು ಎಂಬುದಾಗಿ ಪ್ರತೀತಿಯಿದೆ. ರಾಮಾನುಜರ ವಿಶಿಷ್ಟಾದ್ವೈತ ಸಿದ್ಧಾಂತವು ವೈದಿಕ ದರ್ಶನ, ಉಪನಿಷತ್ತುಗಳು, ಬ್ರಹ್ಮಸೂತ್ರ ಮತ್ತು ಭಗವದ್ಗೀತೆಗಳಿಂದ ಉದ್ಧೃತವಾದದ್ದು. ತತ್ವಹಿತ ಪುರುಷಾರ್ಥಗಳ ಮೇಲೆ ಮಹಾಮತಿಗಳು ಬೀರುವ ಒಂದು ನೋಟ, ತೋರುವ ಮಾರ್ಗವು ಈ ದರ್ಶನದಲ್ಲಿದೆ.

ರಾಮಾನುಜರು ತಮಿಳುನಾಡಿನ ಪ್ರಾಂತ್ಯದಿಂದ ಇಬ್ಬರು ಶಿಷ್ಯರೊಂದಿಗೆ ಕಾವೇರಿ ನದಿತೀರದ ಜಾಡನ್ನೇ ಹಿಡಿದು ಕರ್ನಾಟಕವನ್ನು ಪ್ರವೇಶಿಸಿ ರಾಮನಾಥಪುರ ಗ್ರಾಮಕ್ಕೆ ಬಂದು, ಅಲ್ಲಿಂದ ಮಿರ್ಲೆ, ಸಾಲಿಗ್ರಾಮ ಗ್ರಾಮಗಳ ಮೂಲಕ ಮೇಲುಕೋಟೆಯ ಮಾರ್ಗದಲ್ಲಿನ ತೊಂಡನೂರಿಗೆ ಆಗಮಿಸಿದರು. ಇದು ಹೊಯ್ಸಳರಾಜರ ಉತ್ತರಗಡಿಯ ರಾಜಧಾನಿಯಾಗಿತ್ತು. ಅಲ್ಲಿ ರಾಮಾನುಜರು ಹೊಯ್ಸಳ ರಾಜ ಬಿಟ್ಟಿದೇವನನ್ನು ಸಂಧಿಸಿ, ಅವನ ಮಗಳ ಮನೋವ್ಯಾಧಿಯನ್ನು ಪರಿಹರಿಸಿ, ಆತನನ್ನು ಶಿಷ್ಯನನ್ನಾಗಿ ಪರಿಗ್ರಹಿಸಿ 'ವಿಷ್ಣುವರ್ಧನ' ಎಂದು ಮರುನಾಮಕರಣ ಮಾಡಿ, ನಂತರ ಮೇಲುಕೋಟೆಗೆ ತೆರಳಿದರು. ಕನ್ನಡನಾಡಿನಲ್ಲಿ ವಿಶಿಷ್ಟಾದ್ವೈತ ಸಿದ್ಧಾಂತವನ್ನು ಬೆಳೆಸಿದ ಕೀರ್ತಿ ವಿಷ್ಣುವರ್ಧನನಿಗೆ ಸಲ್ಲುತ್ತದೆ.

ಮೇಲುಕೋಟೆಯಲ್ಲಿ, ಶಿಥಿಲವಾಗಿದ್ದ ಚೆಲುವನಾರಾಯಣಸ್ವಾಮಿಯ ಉತ್ಸವ ಮೂರ್ತಿಯನ್ನು ಪುನರ್‌ಪ್ರತಿಷ್ಠಾಪಿಸಿದ ರಾಮಾನುಜರು, 12 ವರ್ಷಗಳ ಕಾಲ ಶ್ರೀಭಾಷ್ಯದ ಉಪದೇಶವನ್ನು ಮಾಡುತ್ತಾ, ಸ್ವಾಮಿಯ ಸನ್ನಿಧಿಯಲ್ಲಿ ಪಂಚರಾತ್ರಾಗಮ ರೀತಿಯಲ್ಲಿ ಪೂಜಾ ಕೈಂಕರ್ಯವು ನಡೆಯಲು ಸೂಕ್ತ ವ್ಯವಸ್ಥೆ ಮಾಡಿ, ಉಪಪತ್ತಿಗಳನ್ನು ಕಲ್ಪಿಸಿ ಐವತ್ತಾರು ಶಿಷ್ಯರಿಗೆ ವಹಿಸಿಕೊಟ್ಟರು. ಅಂದಿನಿಂದ ಮೇಲುಕೋಟೆ ಕ್ಷೇತ್ರವು ಶ್ರೀವೈಷ್ಣವರ ಪಾಲಿಗೆ ಶ್ರೀರಂಗ, ಕಾಂಚೀಪುರ, ತಿರುಪತಿಗಳ ಜತೆಗೆ ನಿತ್ಯಸ್ಮರಣೀಯ ದಿವ್ಯಕ್ಷೇತ್ರವಾಗಿದೆ.

ಹೊಯ್ಸಳ ರಾಜ್ಯದಲ್ಲಿ ರಾಜಾಶ್ರಯ ಪಡೆದು ಧರ್ಮಪ್ರಸಾರಗೊಳಿಸಿದ ರಾಮಾನುಜರು, ಬೇಲೂರಿನಲ್ಲಿ ಶ್ರೀ ಚೆನ್ನಕೇಶವ ದೇಗುಲ ಮಾತ್ರವಲ್ಲದೆ ಹಲವು ಸ್ಥಳಗಳಲ್ಲಿ ಕೇಶವ-ಜನಾರ್ದನ ಗುಡಿಗಳನ್ನೂ ನಿರ್ಮಿಸಿದರು. ಅಂತೆಯೇ ಸಾಲಿಗ್ರಾಮದಲ್ಲಿ 'ವಡಗುನಂಬಿ' ಎಂಬುವವರಿಗೆ ತಮ್ಮ ಪಾದುಕೆಗಳನ್ನು ಹಾಗೂ ಶ್ರೀಪಾದತೀರ್ಥವನ್ನು ಕರುಣಿಸಿದರು ಎನ್ನಲಾಗುತ್ತದೆ. ತಮ್ಮ ಪ್ರತೀಕವಾದ ಮೂರ್ತಿಯನ್ನು ನಿರ್ಮಿಸಿ ತಮ್ಮ ಶಕ್ತಿಯನ್ನೆಲ್ಲಾ ಅದಕ್ಕೆ ಧಾರೆಯೆರೆದ ರಾಮಾನುಜರು ಶಿಷ್ಯರೊಡನೆ ಆ ವಿಗ್ರಹದಿಂದ ಮಾತನಾಡಿಸಿ ಪ್ರತಿಷ್ಠಾಪಿಸಿದ್ದು, ಇಂದಿಗೂ ಮೇಲುಕೋಟೆಯಲ್ಲಿ ನೆಲೆಸಿದ್ದಾರೆ ಎಂಬುದೊಂದು ಪ್ರತೀತಿ. ಹೀಗೆ ಕರ್ನಾಟಕದಲ್ಲಿ ಕ್ರಿ.ಶ.1096ರಿಂದ 1118ರವರೆಗೆ ನೆಲೆಸಿ ಧರ್ಮಾನುಷ್ಠಾನ ಮಾಡಿ, ವಿಶಿಷ್ಟಾದ್ವೈತವನ್ನು ಪ್ರತಿಪಾದಿಸಿದ ರಾಮಾನುಜರು ನಂತರ ಶ್ರೀರಂಗಕ್ಕೆ ತೆರಳಿದರು.

ಕರ್ನಾಟಕವನ್ನು ಆಳಿದ ವಿಜಯನಗರ ಸಾಮ್ರಾಜ್ಯದ ಚಕ್ರವರ್ತಿ ಶ್ರೀಕೃಷ್ಣದೇವರಾಯ, ಮೈಸೂರು ಸಂಸ್ಥಾನದ ಯದುವಂಶಜರಾದ ರಾಜ ಒಡೆಯರ್, ಮಹಾರಾಜ ಕಂಠೀರವ ನರಸರಾಜ ಒಡೆಯರ್ ಅವರುಗಳು ಮೇಲುಕೋಟೆಯನ್ನು ಅಭಿವೃದ್ಧಿಪಡಿಸಿ ಶ್ರೀ ಚೆಲುವನಾರಾಯಣಸ್ವಾಮಿಗೆ ಅನರ್ಘ್ಯ ಆಭರಣಗಳನ್ನಿತ್ತು ಉತ್ಸವಾದಿಗಳನ್ನು ಏರ್ಪಡಿಸಿದರು. ನಂತರ, ಮುಮ್ಮಡಿ ಕೃಷ್ಣರಾಜ ಒಡೆಯರ್ ಕಾಲದಲ್ಲಿ ಶ್ರೀಕ್ಷೇತ್ರವನ್ನು ಸಮೃದ್ಧಿಗೊಳಿಸಿ 'ಕೃಷ್ಣರಾಜಮುಡಿ' ಎಂಬ ರತ್ನಕಿರೀಟ, ಪಚ್ಚೆಯ ಹಾರದಂಥ ಆಭರಣಗಳನ್ನು ಸಮರ್ಪಿಸಿ ಬ್ರಹ್ಮೋತ್ಸವವನ್ನು ಏರ್ಪಡಿಸಿದರು. ಇದು ಅನೂಚಾನವಾಗಿ ನಡೆದುಕೊಂಡು ಬಂದಿದ್ದು ಇಂದಿಗೂ ಜಗದ್ವಿಖ್ಯಾತವಾಗಿದೆ. ಸುಮಾರು 120 ವರ್ಷಗಳ ಕಾಲ ಭೂಲೋಕದಲ್ಲಿ ವಾಸವಾಗಿದ್ದು, ವಿಶಿಷ್ಟಾದ್ವೈತ ಸಿದ್ಧಾಂತವನ್ನು ಪ್ರಚುರಪಡಿಸಿ, ಶ್ರೀವೈಷ್ಣವ ಪಂಥವನ್ನು ಉದ್ಧಾರಮಾಡಿ, ಭಕ್ತಿ-ಶರಣಾಗತಿಗಳನ್ನು ಬೋಧಿಸಿದವರು ರಾಮಾನುಜರು. ಅಂದು, ಕ್ರಿ.ಶ. 1137ರ ಮಾಘ ಶುದ್ಧ ನವಮಿ, ಇಲ್ಲಿಗೆ ತಮ್ಮ ಇಹಲೋಕದ ಜೀವನ ಸಾಕೆಂದರಿತು ಶ್ರೀರಂಗನಾಥನ ಗುಡಿಯೆಡೆಗೆ ತಲೆಯ ಭಾಗ ಬರುವಂತೆ, ತಮ್ಮ ಶಿರಸ್ಸನ್ನು ಶಿಷ್ಯರಾದ ಎಂಬಾರರ ಮಡಿಲಿನಲ್ಲಿಯೂ, ಪಾದಗಳನ್ನು ವಡಗನಂಬಿಗಳವರ ಮಡಿಲಿನಲ್ಲಿಯೂ ಇರಿಸಿದರು. ತಮ್ಮ ಗುರುಗಳಾದ ಆಳವಂದಾರರ ದಿವ್ಯಮೂರ್ತಿಯನ್ನು ಧ್ಯಾನಿಸುತ್ತಾ, ಪೆರಿಯನಂಬಿ ಗಳ ಪಾದುಕೆಗಳನ್ನು ಮುಂದಿರಿಸಿಕೊಂಡು ಪರವಾಸುದೇವನನ್ನು ಅವರು ಸ್ಮರಿಸುತ್ತಿರಲು ಆತ್ಮವು ಶಿರಃಕಪಾಲವನ್ನು ಭೇದಿಸಿ ದೇಹತ್ಯಾಗ ಮಾಡಿ ವೈಕುಂಠವನ್ನು ಸೇರಿತು.

ಧರ್ಮವೃದ್ಧಿಯನ್ನು ಸಹಿಸದ 'ಕಲಿ'ಯನ್ನು ನಿವಾರಿಸಿದಂಥ ಪ್ರಭಾವಶೀಲರಾದ 'ರಾಮಾನುಜ' ಎಂಬ ಚತುರಕ್ಷರ ಮಂತ್ರವನ್ನು ಅನುಸಂಧಾನ ಮಾಡುವವರಿಗೆ ಜ್ಞಾನ-ಭಕ್ತಿ-ವೈರಾಗ್ಯಗಳು ದೊರಕಿ ಅಭಿವೃದ್ಧಿ ಹೊಂದುವರು. ಅಂಥ ತಿರುನಾಮವನ್ನು ನಿತ್ಯಾನುಸಂಧಾನ ಮಾಡಲು ಪ್ರಾರಂಭಿಸಿದೊಡನೆಯೇ ಬಾಳಿನಲ್ಲಿ ಅಮೃತವು ತುಂಬಿಕೊಳ್ಳುವುದು, ಬ್ರಹ್ಮಹತ್ಯವೇ ಮೊದಲಾದ ಪಂಚಪಾತಕಗಳು ಸಮೂಲವಾಗಿ ನಾಶವಾಗುವುವು ಎಂಬುದು ಅನುಯಾಯಿಗಳ ನಂಬಿಕೆ. ಇಂಥ ಪರಮಯತಿ ಶ್ರೀ ರಾಮಾನುಜಾಚಾರ್ಯರ ಜಯಂತಿಯನ್ನು ಇಂದು (ಮೇ 2) ಎಲ್ಲೆಡೆ ಆಚರಿಸುತ್ತಿರುವುದು ಸಂತೋಷದ ವಿಷಯ.

(ಲೇಖಕರು ಹವ್ಯಾಸಿ ಬರಹಗಾರರು)

ಭಾರತೀಯ ದರ್ಶನದ ವಾದಿ ಮತ್ತು ಪ್ರತಿವಾದಿ

ಶಂಕರ ಸ್ಮರಣೆ

ನಾರಾಯಣ ಯಾಜಿ
vveditoped@gmail.com

ಭಾರತೀಯ ದರ್ಶನ ಶಾಸ್ತ್ರದಲ್ಲಿ ಬರುವ ಮುಖ್ಯವಾದ ಹೆಸರುಗಳು: ಬುದ್ಧ ಮತ್ತು ಶಂಕರ. ಬುದ್ಧನ ಶೂನ್ಯವಾದ ಮತ್ತು ಶಂಕರರ ಮಾಯಾವಾದ ಎರಡೂ ಒಂದೇ ಎಂದು ಕಾಣಿಸುತ್ತದೆ, ವಿಮರ್ಶಿಸ ಹೊರಟಾಗ ಈ ಎರಡರಲ್ಲಿಯೂ ಭಿನ್ನತೆಯೂ ಅಷ್ಟೇ ತೀವ್ರವಾಗಿ ಎದುರಾಗುತ್ತದೆ. ಬುದ್ಧನಲ್ಲಿಗೆ ಬರುವ ವಚ್ಚಗೋಟ್ಟನೆನ್ನುವ ಬ್ರಾಹ್ಮಣ ''ಆತ್ಮ ಇದೆಯೇ?'' ಎಂದು ಪ್ರಶ್ನಿಸಿದಾಗ ಆತ ಮೌನವಾಗುತ್ತಾನೆ. ''ಆತ್ಮ ಇಲ್ಲವೋ?'' ಎನ್ನುವ ಪ್ರಶ್ನೆಗೂ ಮೌನವೇ ಆತನ ಉತ್ತರವಾಗುತ್ತದೆ. ನಂತರದಲ್ಲಿ ಆತನ ಶಿಷ್ಯ ಆನಂದ ''ಎರಡೂ ಪ್ರಶ್ನೆಗೆ ಯಾವ ಉತ್ತರವನ್ನೂ ಕೊಡದೆ ಮೌನವಾಗಿದ್ದುದರ ಕಾರಣವೇನು?'' ಎಂದು ಕೇಳಿದರೆ ''ನಾನೇನಾದರೂ ಆತ್ಮವಿದೆ ಎಂದು ಸಾರಿದ್ದರೆ ಅನಿತ್ಯಕ್ಕೇ ನಿತ್ಯವೆಂದು ಆತನ ಶಿಷ್ಯರು ಪರಿಗಣಿಸಬಹುದು, ಇಲ್ಲವೆಂದರೆ ಉಚ್ಛೇದವಾದ (ವಿನಾಶವಾದ)ವನ್ನು ಉಪದೇಶಿಸುವ ದಾರ್ಶನಿಕರು ಹೇಳಿದ್ದು ಸತ್ಯವೆಂದು ಅವರು ನಂಬುತ್ತಾರೆ'' ಎಂದುತ್ತರಿಸಿದ. ಇದರ ಅರ್ಥವಿಷ್ಟೇ: ಬುದ್ಧ ಅಸ್ತಿತ್ವವಾದಿಯಾಗಿದ್ದ. ತನ್ನ ಶಿಷ್ಯರಿಗೆ ''ನಿಮಗೆ ನೀವೇ ಬೆಳಕಾಗಿರಿ'' ಎಂದು ಉಪದೇಶವನ್ನು ಮಾಡಿದ್ದ. ಈ 'ಬೆಳಕಾಗಿರಿ' ಎನ್ನುವಾಗ ಶಂಕರಾಚಾರ್ಯರೂ ಇದನ್ನು ವಿವರಿಸಿದ 'ಏಕೀ ಶ್ಲೋಕ'ವೆಂದು ಪ್ರಸಿದ್ಧವಾದ ವಿವರವೂ ಬರುತ್ತದೆ- 'ಕಿಂ ಜ್ಯೋತಿಸ್ತವ ಭಾನುಮಾನಹನಿ ಮೇ ರಾತ್ರೌ ಪ್ರದೀಪಾದಿಕಂ । ಸ್ಯಾದೇವಂ ರವಿದೀಪದರ್ಶನವಿಧೌ ಕಿಂ ಜ್ಯೋತಿರಾಖ್ಯಾಹಿ ಮೇ । ಚಕ್ಷುಸ್ತಸ್ಯ ನಿಮೀಲನಾದಿಸಮಯೇ ಕಿಂ ಧೀರ್ಧಿಯೋ ದರ್ಶನೇ । ಕಿಂ ತತ್ರಾಹಮತೋ ಭವಾನ್ ಪರಮಕಂ ಜ್ಯೋತಿಸ್ತದಸ್ಮಿ ಪ್ರಭೋ ॥'- ಆತ್ಮಜ್ಞಾನ ಬಯಸಿಬಂದ ಶಿಷ್ಯನಿಗೆ ಗುರು ಕೇಳುವ ಪ್ರಶ್ನೆಯನ್ನು ಒಳಗೊಂಡ ತುಂಬಾ ಸುಂದರವಾದ ಶ್ಲೋಕ ಇದು. ''ಹಗಲಿನಲ್ಲಿ ನೀನು ಯಾವ ಬೆಳಕಿನ ಸಹಾಯದಿಂದ ನೋಡುವೆ?'' ಎಂದರೆ ಶಿಷ್ಯ, ''ಹಗಲಿನಲ್ಲಿ ಸೂರ್ಯನ ಸಹಾಯದಿಂದ'' ಎನ್ನುತ್ತಾನೆ. ಮುಂದಿನ ಪ್ರಶ್ನೆ ''ರಾತ್ರಿ ಹೇಗೆ ನೋಡುವೆ?''. ಉತ್ತರ- ''ದೀಪಗಳ ಮುಖಾಂತರ ನೋಡುವೆ''. ಗುರು ಕೇಳುತ್ತಾನೆ ''ಈ ಸೂರ್ಯ ಮತ್ತು ದೀಪಗಳನ್ನು ನೋಡುವ ಬೆಳಕು ಯಾವುದದು?''. ಶಿಷ್ಯನ ಉತ್ತರ- ''ನನ್ನ ಕಣ್ಣಿನಿಂದ ನಾನು ಅದನ್ನು ನೋಡುತ್ತೇನೆ''. ಆಗ ಗುರು, ''ನಿನ್ನ ಕಣ್ಣುಮುಚ್ಚಿಕೊಂಡಾಗ ನೀನು ಹೇಗೆ ಗುರುತಿಸುವೆ?'' ಎಂದು ಕೇಳುತ್ತಾನೆ. ''ಆಗ ನನ್ನ ಬುದ್ಧಿಯೇ ನನಗೆ ಬೆಳಕು ಗುರುವೇ'' ಎನ್ನುತ್ತಾನೆ ಶಿಷ್ಯ. ''ಸರಿ, ಆ ಬುದ್ಧಿಯನ್ನು ನೋಡುವ ಬೆಳಕು ಯಾವುದು?'' ಎಂಬ ಪ್ರಶ್ನೆ ಹೊಮ್ಮಿದಾಗ, ಶಿಷ್ಯ ಹೇಳುವ ಮಾತು ''ನಾನೇ ಆ ಬುದ್ಧಿಯನ್ನು ನೋಡುವ ಬೆಳಕು''. ಗುರು ನಗುತ್ತಾ ಶಿಷ್ಯನಿಗೆ ಹೇಳುವುದು- ''ನೋಡಿದೆಯಾ, ನೀನೇ ಬೆಳಕಿಗೂ ಬೆಳಕು, ಪರಂಜ್ಯೋತಿ''. ಶಿಷ್ಯನಿಗೆ ತಾನು ಯಾರೆನ್ನುವುದು ಅರಿವಾಗಿ ''ನಿಜ ಗುರುಗಳೇ, ನಾನೇ ಬೆಳಕು, ಎಲ್ಲವನ್ನು ಅರಿಯುವವನು ನಾನೇ'' ಎನ್ನುತ್ತಾನೆ.

ಭಾರತದ ರಾಷ್ಟ್ರಪತಿಗಳಾಗಿದ್ದ ಡಾ. ಎಸ್. ರಾಧಾಕೃಷ್ಣನ್ ಅವರು ಶಂಕರಾಚಾರ್ಯರು ಪ್ರತಿಪಾದಿಸಿದ ಅದ್ವೈತ ಸಿದ್ಧಾಂತದ ಕುರಿತು ಹೇಳಿದ ಪ್ರಸಿದ್ಧ ಮಾತು ಹೀಗಿದೆ: ''ಶಂಕರರ ತತ್ವಶಾಸ್ತ್ರದಲ್ಲಿ ಈಶ್ವರನೆನ್ನುವ ಸತ್ವವು ಸ್ವಯಂವೇದ್ಯ ಪ್ರಮಾಣವಲ್ಲ, ತಾರ್ಕಿಕವಾದ ಸತ್ಯವೂ ಅಲ್ಲ, ಬದಲಾಗಿ ಪ್ರಾಯೋಗಿಕವಾಗಿ ಉಪಯುಕ್ತವಾದ ಒಂದು ಅವಶ್ಯಕ ಲಕ್ಷಣವಾಗಿದೆ''. ಈ ಕಾರಣಕ್ಕಾಗಿಯೇ ಭಾರತೀಯ ತತ್ವಶಾಸ್ತ್ರವನ್ನು ಅಭ್ಯಸಿಸುವಾಗ ಎಲ್ಲ ಸಿದ್ಧಾಂತಗಳೂ, ವೈದಿಕ ಮತ್ತು ಅವೈದಿಕ ದರ್ಶನಗಳೂ ಉದಾಹರಿಸುವುದು ಮತ್ತು ಖಂಡಿಸುವುದು ಶಂಕರಾಚಾರ್ಯರು ಪ್ರತಿಪಾದಿಸಿದ ಅದ್ವೈತವಾದವನ್ನು. ವೇದಕಾಲದ ಋಷಿಗಳಿಂದ ತೊಡಗಿ ಇತ್ತೀಚಿನ ಜಿಡ್ಡು ಕೃಷ್ಣಮೂರ್ತಿಯವರನ್ನೂ ಸೇರಿಸಿ, ಯಾವುದೇ ವಿಚಾರಧಾರೆಗಳನ್ನು ಅಭ್ಯಸಿಸುವಾಗ ಅಥವಾ ವಿರೋಧಿಸುವಾಗ ಅದಕ್ಕೊಂದು ಮಾಪಕವಾಗಿ ಶಂಕರಾಚಾ



ರ್ಯರಿಂದಾಗಿ ಬೆಳಕಿಗೆ ಬಂದ ಅದ್ವೈತ ಸಿದ್ಧಾಂತವನ್ನು ಉದಾಹರಿಸುವುದನ್ನು ಗಮನಿಸಬಹುದು. ಈ ಸಿದ್ಧಾಂತದ ಹರಹು ಎಷ್ಟರಮಟ್ಟಿಗೆ ವ್ಯಾಪಕವಾಗಿದೆಯೆಂದರೆ ಭೌತಶಾಸ್ತ್ರದ ಕ್ವಾಂಟಂ ಥಿಯರಿಯನ್ನು ಮತ್ತು ಪಾಶ್ಚಾತ್ಯ ಚಿಂತಕರುಗಳನ್ನು ಶಾಂಕರ ಸಿದ್ಧಾಂತದೊಟ್ಟಿಗೆ ತೌಲನಿಕ ಅಧ್ಯಯನವನ್ನೂ ಮಾಡುತ್ತಾರೆ. ಶಂಕರರ ವಿಚಾರಧಾರೆಗಳು ವ್ಯಾಸರಿಂದ ತೊಡಗಿ ಆಧುನಿಕರು ಎನಿಸಿಕೊಳ್ಳುವ ಇಂದಿನ ಚಿಂತಕರಿಂದ ಈ ಪರ ಮತ್ತು ವಿರೋಧಗಳಾಗಿ ವಿಮರ್ಶಿಸಲ್ಪಟ್ಟಿವೆ. ಈ ರೀತಿ ವಿಮರ್ಶೆಗೊಳಗಾದ ಮತ್ತೊಂದು ವಿಚಾರಧಾರೆ ಜಗತ್ತಿನಲ್ಲಿ ಇದ್ದರೆ ಅದು ಭಗವದ್ಗೀತೆ ಮಾತ್ರ. ಆದರೆ ಭಗವದ್ಗೀತೆ ಆರಾಧನೆಯಾಗಿ ಬಳಸಲ್ಪಟ್ಟಿರುವುದರಿಂದ ಅದನ್ನು ವಿಮರ್ಶೆಗೊಳಪಡಿಸುವುದಕ್ಕಿಂತ ಪ್ರಮಾಣೀಕೃತ ಗ್ರಂಥವೆಂದು ಒಪ್ಪಿದವರೇ ಹೆಚ್ಚು.

ಶಾಂಕರರ ತತ್ವದಷ್ಟೇ ಅವರ ಜೀವನ ಚರಿತ್ರೆ ಸಹ ಅನೇಕ ಊಹಾತ್ಮಕ ವಿಷಯಗಳಿಂದ ತುಂಬಿದೆ. ಅವರ ಬಾಲ್ಯ ಮತ್ತು ಸನ್ಯಾಸಾಶ್ರಮಕ್ಕೆ ಸಂಬಂಧಿಸಿದಂತೆ 'ಶಂಕರವಿಜಯ'ವೆನ್ನುವ ಸುಮಾರು 22ಕ್ಕೂ ಮಿಕ್ಕಿದ ಗ್ರಂಥಗಳಿವೆ. ಅದರಲ್ಲಿ ಮಾಧವೀಯ ಶಂಕರ ವಿಜಯ, ವ್ಯಾಸಾಚಲೀಯ, ಚಿದ್ವಿಲಾಸೀಯ ಶಂಕರವಿಜಯ ವಿಲಾಸ, ಅನಂತಾನಂದಗಿರೀಯಗಳು ಪ್ರಸಿದ್ಧವಾದವುಗಳು. ಕೂರ್ಮಪುರಾಣ ಸಹಿತವಾಗಿ ಅನೇಕ ಪುರಾಣಗಳಲ್ಲಿ ಶಂಕರವಿಜಯದ ಪ್ರಸ್ತಾಪವಿದೆ.

ಶಂಕರಾಚಾರ್ಯರ ತಂದೆ ಶಿವಗುರು ಮತ್ತು ತಾಯಿ ಆರ್ಯಾಂಬೆ. ಕೇರಳದ ಕಾಲಟಿಯಲ್ಲಿ ಜನಿಸಿದ ಇವರು ಬಾಲ್ಯದಿಂದಲೇ ವೇದವೇದಾಂಗಗಳನ್ನು ಅಭ್ಯಸಿಸಿ ಮಹಾಪ್ರತಿಭಾಶಾಲಿಯಾಗಿದ್ದರಂತೆ. ಈ ವ್ಯಕ್ತಿಯ ಬದುಕಿನ ಮೂಲವಿರುವುದು ಅವರ ಚಿಂತನಾಕ್ರಮಗಳು ಮತ್ತು ಅವರು ರಚಿಸಿದ ಕೃತಿಗಳಿಂದ. ಶಂಕರಾಚಾರ್ಯರ ಬದುಕಿನ ಮಹತ್ವದ ಘಟನೆಗಳಿಗಿಂತ ಅವರ ತತ್ವಚಿಂತನೆಗಳ ಅಧ್ಯಯನದ ಮೂಲಕವೇ ಅವರನ್ನು ಅವಲೋಕಿಸುವುದು ಯುಕ್ತ. ಈ ಕಾರಣದಿಂದಲೇ ಶಂಕರರ ಜನ್ಮದಿನವನ್ನು 'ರಾಷ್ಟ್ರೀಯ ತತ್ವಜ್ಞಾನಿಗಳ ದಿನ'ವನ್ನಾಗಿ ನಮ್ಮ ದೇಶದಲ್ಲಿ ಆಚರಿಸಲಾಗುತ್ತದೆ.

ಮಾಯಾವಾದವೆಂದರೇನು?: ಶಂಕರ ದರ್ಶನದೊಟ್ಟಿಗೆ ಇಲ್ಲಿ ಭಾರತೀಯ ಷಡ್ದರ್ಶನಗಳ ಕುರಿತೂ ಪ್ರಾಥಮಿಕ ಪರಿಚಯ ತುಂಬಾ ಮುಖ್ಯವಾಗುತ್ತದೆ. ದರ್ಶನವೆನ್ನುವುದಕ್ಕೆ ಶಂಕರಾಚಾರ್ಯರು ಮೂರು ವಿಚಾರಗಳನ್ನು ಪ್ರಸ್ತಾಪಿಸುತ್ತಾರೆ. ಒಂದು ಜಗತ್ತು, ಮತ್ತೊಂದು ಜೀವ, ಮೂರನೆಯದು ಜಗತ್ಕಾರಣ. ಯಾವುದೇ ದರ್ಶನದ ಚಿಂತನೆ ಈ ಮೂರು ವಿಚಾರಗಳ ಕುರಿತು ಆಗಬೇಕಾಗುತ್ತದೆ. ''ಬ್ರಹ್ಮ ಸತ್ಯಂ ಜಗನ್ಮಿಥ್ಯಾ ಜೀವೋ ಬ್ರಹ್ಮೈವ ನಾಪರಃ'' ಎನ್ನುವ ಅವರ ಪ್ರಸಿದ್ಧ ವಾಕ್ಯದ ಕುರಿತು ನಿರಂತರವಾಗಿ ಚರ್ಚೆಗಳಾಗುತ್ತಲೇ ಇವೆ. ಇಲ್ಲಿ ಜಗತ್ತನ್ನು ಮಿಥ್ಯೆ ಎಂದರೆ ಇಲ್ಲದ್ದು ಎಂಬ ಅರ್ಥದಲ್ಲಿ ಹೇಳಿರುವುದಲ್ಲ. ಸತ್ಯದಲ್ಲಿ ವ್ಯಾವಹಾರಿಕ ಸತ್ಯ ಮತ್ತು ಪ್ರಾತಿಭಾಷಿಕ ಸತ್ಯಗಳೆಂಬ ಎರಡು ವಿಧಗಳಿವೆ. ಇವೆರಡಕ್ಕೂ ಕಾರ್ಯ ಮತ್ತು ಕಾರಣಗಳ ಸಂಬಂಧಗಳಿವೆ. 'ಮಿಥ್ಯಾ' ಎಂದರೆ ಕಾರ್ಯ, 'ಸತ್ಯ'ವೆನ್ನುವದು ಕಾರಣ. ನಾವು ಹಾಕಿಕೊಳ್ಳುವ ಬಟ್ಟೆ ಮಿಥ್ಯಾ, ಅದಕ್ಕೆ ಕಾರಣವಾದ ನೂಲು ಸತ್ಯ. ತೊಡುವ ಆಭರಣ ಮಿಥ್ಯ, ಅದರೊಳಗಿನ ಬಂಗಾರ ಸತ್ಯ. ನೂಲನ್ನು ವಿಭಜಿಸಿದಾಗ ನೂಲು ಮಿಥ್ಯ, ಹತ್ತಿಯ ಗಿಡ ಸತ್ಯ. ಇದನ್ನು ಮತ್ತೂ ವಿಭಜಿಸಿದಾಗ ಗಿಡ ಮಿಥ್ಯವಾಗಿ ಬೀಜ ಸತ್ಯ, ಬೀಜವನ್ನು ವಿಭಾಜಿಸುತ್ತಾ ಇದಕ್ಕೆ ಕಾರಣವಾದ ಭೂಮಿ, ಭೂಮಿಗೆ ಕಾರಣವಾದದ್ದು ಪಂಚಭೂತಗಳು, ಪಂಚಭೂತಗಳನ್ನು ವಿಭಜಿಸಿದರೆ ಅದು ಆತ್ಮನಿಗೆ ಹೋಗುತ್ತದೆ. ಆತ್ಮನು ಬಂದದ್ದೆಲ್ಲಿಂದ ಎಂದು ಮೂಲವನ್ನು ಹುಡುಕುತ್ತಾ ಹೋದಾಗ ಅಲ್ಲಿ ಬರುವ ''ಯತೋ ವಾಚೇ ನಿವರ್ತಂತೆ ಅಪ್ರಾಪ್ಯ ಮನಸಾ ಸಹ'' ಎನ್ನುವಲ್ಲಿ ಬಂದು ನಿಲ್ಲುತ್ತದೆ. ಅದನ್ನು ಮಾತಿನಿಂದಾಗಲಿ, ಮನಸ್ಸಿನಿಂದಾಗಲೀ ವಿವರಿಸಲು ಸಾಧ್ಯವಿಲ್ಲ. ಅದೇ ಬ್ರಹ್ಮವು. ಅದು ಇದ್ದೇ ಇದೆ. ಇದನ್ನು ಪಾರಮಾರ್ಥಿಕ ಸತ್ಯವೆನ್ನುತ್ತಾರೆ. ಜಗತ್ತು ಬ್ರಹ್ಮದಂತೆ ಪಾರಮಾರ್ಥಿಕ ಸತ್ಯವಲ್ಲ, ಅಂದರೆ ಬದಲಾಗದ ಸತ್ಯವಲ್ಲ.

ಸ್ವಪ್ನ ಮತ್ತು ವಾಸ್ತವ ಜಗತ್ತನ್ನು ಮಾಯಾವಾದಕ್ಕೆ ಉದಾಹರಣೆಯಾಗಿ ವಿವರಿಸಬಹುದು. ಸ್ವಪ್ನದಲ್ಲಿ ನಾವು ನೋವು ನಲಿವು ಮುಂತಾದ ಭಾವವನ್ನು ಅನುಭವಿಸುತ್ತೇವೆ. ನಮಗೆ ಬೇಕಾದವರ ಅಗಲುವಿಕೆಯ ನೋವನ್ನು ಅನುಭವಿಸಿ ನಮ್ಮ ಮನಸ್ಸು ದುಃಖದಿಂದ ಗೋಳಿಡುತ್ತದೆ. ಎಚ್ಚರಾದಾಗಲೂ ಈ ಮಂಕು ನಮ್ಮನ್ನು ಕೆಲ ಸಮಯದವರೆಗೆ ಕಾಡುತ್ತಿರುತ್ತದೆ. ಸ್ವಲ್ಪ ಸಮಯ ಕಳೆದಮೇಲೆ ಆ ಭಾವ ನಿಜವಲ್ಲ ಎನ್ನುವುದು ಅನುಭವಕ್ಕೆ ಬರುತ್ತದೆ. ಅವಸರದಲ್ಲಿ ಇರುವಾಗ ಎದುರಲ್ಲಿ ಅಸ್ತವ್ಯಸ್ತವಾಗಿ ಬಿದ್ದಿರುವ ಹಗ್ಗವೇ ಹಾವಾಗಿ ಕಾಣಿಸುವುದುಂಟು. ಅರಿವು ಎಂಬುದು ಬಂದಮೇಲೆ ಸ್ವಪ್ನದಲ್ಲಿ ಕಾಡಿದ ದುಃಖ, ಹಗ್ಗ ಹಾವಾಗಿ ಬೆದರಿಸಿದ್ದು ಎಲ್ಲ ಮಿಥ್ಯೆ. ಆದರೆ ಅದು ಮಿಥ್ಯೆ ಎಂದು ಗೊತ್ತಾಗುವವರೆಗೆ ನಮಗೆ ಸತ್ಯವೆಂದೇ ತೋರುತ್ತದೆ. ಇದನ್ನು ಪ್ರಾತಿಭಾಷಿಕ ಸತ್ಯವೆನ್ನುತ್ತಾರೆ. ಆದರೆ ಬ್ರಹ್ಮವೆನ್ನುವುದು ಇಲ್ಲವೆಂದು ಆಗುವುದೇ ಇಲ್ಲ. ಅದು ನಿನ್ನೆ, ಇಂದು, ನಾಳೆ ಎಲ್ಲಾ ಕಾಲಗಳಲ್ಲೂ ಏಕರೂಪವಾಗಿ ಇರುವಂಥದ್ದು. ಇದೇ ಪಾರಮಾರ್ಥಿಕ ಸತ್ಯ. ಉಳಿದುದೆಲ್ಲವೂ ಮಾಯೆ. ಹಾಗಾಗಿ ಇಲ್ಲಿ ಮಾಯೆಯನ್ನು 'ತತ್-ತ್ವ' ಎನ್ನುವ ಶಬ್ದ ಆಯ್ದುಕೊಂಡು ಮುಂದುವರಿಯುತ್ತಾರೆ.

ಇನ್ನೊಂದು ಉದಾಹರಣೆ ಸೂರ್ಯ. ಆತನನ್ನು ಜಗತ್ತಿನ ಸಾಕ್ಷಿ ಎನ್ನುತ್ತೇವೆ. ಸೂರ್ಯನು ಮುಂಜಾನೆ ಮತ್ತು ಸಾಯಂಕಾಲ ಕಿತ್ತಳೆ ಬಣ್ಣದಿಂದ ಮನಸ್ಸನ್ನು ಅಪಹರಿಸುತ್ತಾನೆ. ಮಧ್ಯಾಹ್ನದ ಬಿಸಿಲಾಗಿ ತಾಪವನ್ನುಂಟುಮಾಡುತ್ತಾನೆ. ಕ್ಷಣಕ್ಕೂ ಬದಲಾಗುವ ಈ ಸೂರ್ಯ ವ್ಯಾವಹಾರಿಕ ಸತ್ಯ; ಅದನ್ನೇ ಮಿಥ್ಯೆ ಎಂದು ಆಚಾರ್ಯರು ಹೇಳಿದ್ದು. ಮಿಥ್ಯೆ ಎಂದರೆ ಅದು ಮೊಲದ ಕೋಡಿನಂತೆ, ಬಂಜೆಯ ಮಗನಂತೆ ಅಸತ್ತೂ ಅಲ್ಲ.

ಬ್ರಹ್ಮವೆಂದರೇನು?: ಶಂಕರರ ''ಸತ್ಯವೇ ಬ್ರಹ್ಮ, ಜ್ಞಾನವೇ ಬ್ರಹ್ಮ, ಅನಂತವೇ ಬ್ರಹ್ಮ'' ಎನ್ನುವ ಮಾತನ್ನು ಒಪ್ಪದೇ ''ನಿರ್ಗುಣ ಬ್ರಹ್ಮನಿಗೆ ಈ ಗುಣಗಳನ್ನೂ ಹೇಗೆ ಆರೋಪಿಸುತ್ತೀರಿ. ಹಾಗಾಗಿ ಬ್ರಹ್ಮ ಸಗುಣ'' ಎನ್ನುವ ಟೀಕೆಗಳಿವೆ. ವಸ್ತು ಇದೆ ಎಂದಾದರೆ ಅದಕ್ಕೊಂದು ಲಕ್ಷಣವಿರಬೇಕಾಗುತ್ತದೆ. ಶಂಕರರು ಇಲ್ಲಿ 'ಸ್ವರೂಪ ಲಕ್ಷಣ' ಮತ್ತು 'ತಟಸ್ಥ ಲಕ್ಷಣ'ವೆನ್ನುವ ಎರಡು ವಿಭಾಗವನ್ನು ಹೇಳುತ್ತಾರೆ. ಧ್ರುವ ನಕ್ಷತ್ರವೆಲ್ಲಿದೆ ಎಂದು ಕೇಳಿದರೆ ''ಅದೋ ಆ ಗಿಡದ ತುದಿಯನ್ನು ನೋಡು ಅಲ್ಲಿದೆ'' ಎಂದು ಎದುರು ಕಾಣುವ ಮರವನ್ನು ತೋರಿಸಿ ಪರಿಚಯಿಸುವುದುಂಟು. ಆ ಮರದ ತುದಿಯಿಂದ ಮೇಲೆ ನೋಡಿದರೆ ಧ್ರುವ ನಕ್ಷತ್ರವನ್ನು ಗುರುತಿಸಬಹುದಾಗಿದೆ. ಧ್ರುವ ನಕ್ಷತ್ರ ಯಾವತ್ತೂ ಸ್ಥಿರ. ಮರದ ತುದಿಯಲ್ಲಿರುವುದು ಎನ್ನುವುದು ಧ್ರುವ ನಕ್ಷತ್ರದ ತಟಸ್ಥ ಲಕ್ಷಣ. ಬ್ರಹ್ಮವೂ ಹಾಗೇ, ಅದು 'ಸತ್' ಎಂದರೆ ಸದಾ ಇರುವುದು, 'ಚಿತ್' ಎಂದರೆ ನಿತ್ಯಜ್ಞಾನವೇ ಬ್ರಹ್ಮ ಮತ್ತು ಈ ಬ್ರಹ್ಮವೇ ಆನಂದ. ಹೀಗಾಗಿ ಸಚ್ಚಿದಾನಂದವೇ ಬ್ರಹ್ಮದ ಸ್ವರೂಪ ಲಕ್ಷಣ; ಜಗತ್ತಿನ ಸೃಷ್ಟಿ, ಸ್ಥಿತಿ, ಲಯಕರ್ತ ಎಂದರೆ ಅದು ತಟಸ್ಥ ಲಕ್ಷಣ. ಈ ಸಚ್ಚಿದಾನಂದ ಸ್ವರೂಪವನ್ನು ಶುದ್ಧ ಬ್ರಹ್ಮವೆಂತಲೂ ಮಾಯೆಯಿಂದ ಕೂಡಿದ ಬ್ರಹ್ಮನನ್ನು ಸಗುಣ ಬ್ರಹ್ಮನೆಂತಲೂ ಆಚಾರ್ಯರು ಸ್ಪಷ್ಟನೆ ನಿಡುತ್ತಾರೆ. ಮಾಯೆಯೂ ಈಶ್ವರನಂತೆ ನಿತ್ಯವಾದುದು. ಮಾಯೆ ಮತ್ತು ಅವಿದ್ಯೆ ಬೇರೆ ಬೇರೆಯಾಗಿವೆ. ಮಾಯೆ ಈಶ್ವರನಲ್ಲಿದ್ದರೆ, ಅವಿದ್ಯೆ ಜೀವನಲ್ಲಿದೆ. ಮಾಯೆಯಿಂದಾದ ಜಗತ್ತಿನ ಮೂಲಕ ಜೀವರುಗಳು ತಮ್ಮ ಕರ್ಮಫಲವನ್ನು ಅನುಭವಿಸುತ್ತಾರೆ. ಜೀವನು ಬ್ರಹ್ಮನಿಗಿಂತಲೂ ಭಿನ್ನನಲ್ಲ, ಆತನೇ ಬ್ರಹ್ಮ, ಆ ಸ್ವರೂಪ ಮರೆಯಾಗಿರುವುದು ಅವಿದ್ಯೆಯಿಂದ. ಈ ಅವಿದ್ಯೆಯ ನಿವೃತ್ತಿಯೇ ಮೋಕ್ಷವಾಗಿದೆ.

(ಲೇಖಕರು ಸಾಹಿತಿ ಮತ್ತು ಚಿಂತಕರು)

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Edited & Published by : VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942, Printed at M/s Digantha Mudhrana Ltd. NT Road, Shivamogga - 577 201
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:10, Issue:108

ಸಮಾಚಾರ ಸಣ್ಣದಲ್ಲಿ

ನಿಷೇಧಿತ ಸಂಘಟನೆ ಸಂಪರ್ಕ: ಎಚ್ಚರಿಕೆ

ಶ್ರೀನಗರ: ಪಹಲ್ಗಾಮ್ ಭಯೋತ್ಪಾದಕ ದಾಳಿ ಬಳಿಕ ಜಮ್ಮು-ಕಾಶ್ಮೀರದಲ್ಲಿ ಉಗ್ರರ ದಮನ ಕಾರ್ಯಾಚರಣೆ ವೇಗಪಡೆದಿದೆ. ಉಗ್ರರಿಗೆ ಆಶ್ರಯ ನೀಡಿದವರು, ಬೆಂಬಲವಾಗಿ ನಿಂತ ವರನ್ನೂ ಬಂಧಿಸಲಾಗಿದೆ. ಅಲ್ಲದೇ, ಕಾನೂನು ವಿರೋಧಿ ಕೃತ್ಯಗಳ ತಡೆ ಕಾಯಿದೆ (ಯುಎಪಿಎ) ಯಡಿ ನಿಷೇಧಕ್ಕೊಳಗಾಗಿರುವ ಸಂಘಟನೆಗಳಿಂದ ಜನರು ದೂರ ಇರಬೇಕು. ಇಲ್ಲವಾದರೆ ಕಾನೂನು ಕ್ರಮಕ್ಕೆ ಒಳಗಾಗಬೇಕಾಗುತ್ತದೆ ಎಂದು ಕಾಶ್ಮೀರ ಪೊಲೀಸರು ಗುರುವಾರ ಎಚ್ಚರಿಕೆ ಸಂದೇಶ ರವಾನಿಸಿದ್ದಾರೆ. ಜೆ-ಕೆ ಅವಾಮಿ ಆಕ್ಷನ್ ಕಮಿಟಿ(ಜೆಕೆ ಎಎಸಿ) ಮತ್ತು ಜಮ್ಮು-ಕಾಶ್ಮೀರ(ಜೆಕೆ) ಇತ್ತೆಹಾ ದುಲ್-ಮುಸ್ಲಿಮೀನ್(ಜೆಕೆಐಎಂ) ನಿಷೇಧಿತ ಸಂಘ ಟನೆಗಳು ಎಂದು ಕೇಂದ್ರ ಸರಕಾರ ಮಾ.11ರಂದು ಘೋಷಿಸಿದೆ. ಈ ಸಂಘಟನೆ ಜತೆ ಸಂಬಂಧ ಇಟ್ಟುಕೊಂಡವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗು ವುದು ಎಂದು ಸಾರ್ವಜನಿಕ ಪ್ರಕಟಣೆ ಹೊರಡಿಸಿ ದ್ದಾರೆ. ಶ್ರೀನಗರದ ಹಲವೆಡೆ ನೋಟಿಸ್‌ಗಳನ್ನು ಅಂಟಿಸಿದ್ದಾರೆ.

ಉ.ಕರ್ನಾಟಕ, ಭಾರತ ಅಧಿಕ ಉಷ್ಣ, ಬಿಸಿಗಾಳಿ

ದೆಹಲಿ: ಉತ್ತರ ಕರ್ನಾಟಕದ ಕೆಲವು ಭಾಗ ಸೇರಿದಂತೆ ಪಶ್ಚಿಮ ಮತ್ತು ಉತ್ತರ ಭಾರತದ ಹಲವು ರಾಜ್ಯಗಳಲ್ಲಿ ಮೇ ತಿಂಗಳಲ್ಲಿ ಸಾಮಾನ್ಯಕ್ಕಿಂತ ಹೆಚ್ಚಿನ ಶಾಖದ ಅಲೆಗಳು ಅಪ್ಪಳಿಸಲಿವೆ. ಗರಿಷ್ಠ-ಕನಿಷ್ಠ ತಾಪಮಾನ ವಾಡಿಕೆಗಿಂತ ಬಹಳ ಹೆಚ್ಚಾಗಿರಲಿದೆ. ಬಿಸಿಗಾಳಿ ಬೀಸಲಿದೆ. ಉತ್ತರ ಕರ್ನಾಟಕದ ಕೆಲವು ಪ್ರದೇಶಗಳು ಸಾಮಾನ್ಯಕ್ಕಿಂತ ಹೆಚ್ಚಿನ ಶಾಖದ ಅಲೆಗಳನ್ನು ಕಾಣುವ ನಿರೀಕ್ಷೆಯಿದೆ. ಮುಖ್ಯವಾಗಿ ರಾಜಸ್ಥಾನ, ಹರಿಯಾಣ, ಪಂಜಾಬ್, ಮಧ್ಯ ಪ್ರದೇಶ, ಉತ್ತರ ಪ್ರದೇಶ, ಬಿಹಾರ, ಜಾರ್ಖಂಡ್ ಮತ್ತು ಪಶ್ಚಿಮ ಬಂಗಾಳದಲ್ಲಿ ಮೇ ಮಾಸದಲ್ಲಿ 4 ದಿನ ಶಾಖದ ಅಲೆಗಳು ಹೆಚ್ಚಿರಲಿವೆ. ಗುಜರಾತ್, ಒಡಿಶಾ, ಛತ್ತೀಸ್‌ಗಢ, ಮಹಾರಾಷ್ಟ್ರ, ತೆಲಂಗಾಣ ಮೇ ತಿಂಗಳಲ್ಲಿ 3 ದಿನ ಬಿಸಿ ಗಾಳಿಯ ಅಲೆ ಕಾಣಲಿವೆ ಎಂದು ಭಾರತೀಯ ಹವಾಮಾನ ಇಲಾಖೆ (ಐಎಂಡಿ) ಗುರುವಾರ ಮುನ್ಸೂಚನೆ ನೀಡಿದೆ.

ಪಂಜಾಬ್ ಗಡಿ: ದಾಳಿ ಸಂಚು ಪತ್ತೆ, ಶಸ್ತ್ರ ವಶ

ಅಮೃತಸರ: ಜಮ್ಮು-ಕಾಶ್ಮೀರದ ಅನಂತನಾಗ್ ಜಿಲ್ಲೆಯ ಪಹಲ್ಗಾಮ್‌ನಲ್ಲಿ ಏ.22ರಂದು ಭಯೋತ್ಪಾದಕ ದಾಳಿ ನಡೆಸಿದ್ದ ಪಾಕಿಸ್ತಾನ ಮೂಲದ ಉಗ್ರರು, ನೆರೆಯ ಪಂಜಾಬ್ ರಾಜ್ಯದ ಅಮೃತಸರ ಗಡಿಯಲ್ಲಿಯೂ ದೊಡ್ಡ ಮಟ್ಟದಲ್ಲಿ ಭಯೋತ್ಪದನಾ ದಾಳಿಗೆ ಸಂಚು ನಡೆಸಿದ್ದರು. ಅದನ್ನು ಗಡಿ ಭದ್ರತಾ ಪಡೆ ವಿಫಲಗೊಳಿಸಿದೆ. ಅಮೃತಸರ ಜಿಲ್ಲೆಯ ಭರೋಪಾಲ್ ಗ್ರಾಮದ ಬಳಿ ಭಯೋತ್ಪಾದಕ ದಾಳಿ ಸಂಚನ್ನು ವಿಫಲಗೊಳಿಸಿರುವ ಗಡಿ ಭದ್ರತಾ ಪಡೆ (ಬಿಎಸ್‌ಎಫ್), ಅಪಾರ ಪ್ರಮಾಣದ ಶಸ್ತ್ರಾಸ್ತ್ರ ಮತ್ತು ಮದ್ದು ಗುಂಡುಗಳ ಸಂಗ್ರಹವನ್ನು ಉಗ್ರರ ಅಡಗುತಾಣದಿಂದ ವಶಪಡಿಸಿಕೊಂಡಿದೆ. ಈ ಶೋಧ ಕಾರ್ಯದಲ್ಲಿ ಪಂಜಾಬ್ ಪೊಲೀಸ್ ಕೂಡಾ ಭಾಗಿಯಾಗಿದೆ. ಬಿಎಸ್‌ಎಫ್‌ನ ಇಂಟಲಿಜೆನ್ಸ್ ವಿಭಾಗ ನೀಡಿದ ಮಾಹಿತಿ ಮೇರೆಗೆ ಭದ್ರತಾ ಪಡೆಗಳು ಬುಧವಾರ ಸಂಜೆ ಜಂಟಿ ಶೋಧ ಕಾರ್ಯಾಚರಣೆ ನಡೆಸಿತು. ಎರಡು ಹ್ಯಾಂಡ್ ಗ್ರನೇಡ್‌ಗಳು, ಮೂರು ಪಿಸ್ತೂಲ್‌ಗಳು, ಆರು ಮ್ಯಾಗಜಿನ್ಸ್ ಮತ್ತು 50 ಸುತ್ತು ಗುಂಡುಗಳನ್ನು ಹಾಗೂ ಸ್ಫೋಟಕಗಳನ್ನು ವಶಪಡಿಸಿಕೊಳ್ಳಲಾಗಿದೆ.

ಭಾರತದ ಈಶಾನ್ಯದತ್ತ ದುಷ್ಟ ಬಾಂಗ್ಲಾ ನೋಟ

ಢಾಕಾ: ಬಾಂಗ್ಲಾದೇಶದ ನಿವೃತ್ತ ಮೇಜರ್ ಜನರಲ್ ಭಾರತದ ಈಶಾನ್ಯ ರಾಜ್ಯಗಳ ಬಗ್ಗೆ ವಿವಾದಾತ್ಮಕ ಹೇಳಿಕೆ ನೀಡಿ ವಿವಾದದ ಕಿಡಿ ಹೊತ್ತಿಸಲೆತ್ನಿಸಿದ್ದಾರೆ. ಭಾರತವೇನಾದರೂ ಪಾಕಿಸ್ತಾನದ ಮೇಲೆ ದಾಳಿ ಮಾಡಿದರೆ ಭಾರತದ ಏಳು ಈಶಾನ್ಯ ರಾಜ್ಯಗಳನ್ನು ಬಾಂಗ್ಲಾದೇಶ ಆಕ್ರಮಿಸಿಕೊಳ್ಳಬೇಕು ಎಂದು ನಿವೃತ್ತ ಮೇ.ಜ. ಎಎಲ್‌ಎಂ ಫಜ್ಲುರ್ ರೆಹಮಾನ್, ಮಧ್ಯಂತರ ಸರಕಾರಕ್ಕೆ ಸಲಹೆ ನೀಡಿದ್ದಾರೆ. ಆ ಮೂಲಕ ಭಾರತದ ಸಿಟ್ಟಿಗೆ ಕಾರಣವಾಗಿದ್ದಾರೆ. ರಾಷ್ಟ್ರೀಯ ಸ್ವತಂತ್ರ ತನಿಖಾ ಆಯೋಗದ ಅಧ್ಯಕ್ಷರಾಗಿ ಮೊಹಮ್ಮದ್ ಯೂನುಸ್ ನೇತೃತ್ವದ ಮಧ್ಯಂತರ ಸರಕಾರದಿಂದ ನೇಮಕಗೊಂಡಿರುವ ಮೇ.ಜ.ಫಜ್ಲುರ್ ರೆಹಮಾನ್, ಯೂನುಸ್‌ಗೆ ಬಹಳ ಆಪ್ತ ಎನ್ನಲಾಗಿದೆ. ರೆಹಮಾನ್ ಮೊದಲಿನಿಂದಲೂ ಭಾರತವನ್ನು ದ್ವೇಷಿಸುತ್ತಿದ್ದಾನೆ. 2001ರಲ್ಲಿ ರೆಹಮಾನ್ ಬಾಂಗ್ಲಾದೇಶ್ ರೇಂಜರ್ (ಬಿಡಿಆರ್) ಪಡೆ ಮುಖ್ಯಸ್ಥನಾಗಿದ್ದಾಗಲೇ ಬಾಂಗ್ಲಾ-ಭಾರತ ಗಡಿಯಲ್ಲಿ ಘರ್ಷಣೆ ನಡೆದು 16 ಬಿಎಸ್‌ಎಫ್ ಯೋಧರು ಹುತಾತ್ಮರಾದರು ಎಂಬುದನ್ನೂ ನೆನಪಿಸಿಕೊಳ್ಳಬೇಕಿದೆ.

VISHWAVANI TV SPECIAL
ಯುಟ್ಯೂಬ್ ಚಾನೆಲ್ ಸಬ್‌ಸ್ಕ್ರೈಬ್ ಆಗಿ

{ ಸಂಜಯ್ ರಾವತ್ } ಉದ್ಧವ್ ಬಣ ಸಂಸದ

ಪಹಲ್ಗಾಮ್ ಭಯೋತ್ಪಾದಕ ದಾಳಿ ವಿಚಾರದಿಂದ ದೇಶದ ಜನರ ಗಮನ ಬೇರೆಡೆ ಸೆಳೆಯಲು ಕೇಂದ್ರ ಸರಕಾರ ಜಾತಿಗಣತಿ ವಿಚಾರ ಮುನ್ನೆಲೆಗೆ ತಂದಿದೆ. ಉಗ್ರರ ದಾಳಿ ಬಗ್ಗೆ ಜನರ ಪ್ರಶ್ನೆ ಎದುರಿಸಲಾಗದೇ 1 ವಾರದಲ್ಲೇ ಜಾತಿ ಗಣತಿ ನಿರ್ಧಾರವಾಗಿರುವುದು ಗಮನಾರ್ಹ. ಬಿಹಾರ ಚುನಾವಣೆ ಸಮೀಪಿಸಿರುವುದೂ ಜಾತಿಗಣತಿ ನಿರ್ಧಾರಕ್ಕೆ ಕಾರಣವಾಗಿದೆ.

ಜಿಡಿಪಿ ಕುಸಿತ: ಅಮೆರಿಕಕ್ಕೆ ಆರ್ಥಿಕ ಹಿಂಜರಿತ ಭೀತಿ

2025ರ ಮೊದಲ ತ್ರೈಮಾಸಿಕದಲ್ಲೇ ಮೈನಸ್‌ಗೆ ಇಳಿದ ಅಮೆರಿಕದ ಜಿಡಿಪಿ | 2025ರ ವರ್ಷಾಂತ್ಯದಲ್ಲಿ ಆರ್ಥಿಕ ಹಿಂಜರಿತಕ್ಕೆ ಒಳಗಾಗುವ ಸಾಧ್ಯತೆ? | ಆರ್ಥಿಕ ಪ್ರಗತಿಯ ಕುಸಿತಕ್ಕೆ ರಫ್ತಿಗಿಂತ ಆಮದು ಭಾರಿ ಹೆಚ್ಚಳ ಕಾರಣ | ಜತೆಗೆ ಟ್ರಂಪ್ ಸರಕಾರದ ಪ್ರತಿಸುಂಕ ಸಮರದ ಪರಿಣಾಮವೂ ಇದೆ

ವಾಷಿಂಗ್ಟನ್: ಎರಡನೇ ಬಾರಿ ಅಮೆರಿಕದ ಅಧ್ಯಕ್ಷರಾಗಿ ಜ.20ರಂದು ಅಧಿಕಾರ ಸ್ವೀಕರಿಸಿದ ಅನುಭವಿ ಉದ್ಯಮಿ ಡೊನಾಲ್ಡ್ ಟ್ರಂಪ್, 100 ದಿನಗಳ ಆಡಳಿತದ ಸಂಭ್ರಮಾಚರಣೆ ಮಾಡುತ್ತಿದ್ದ ಸಂದರ್ಭದಲ್ಲೇ ಆಘಾತಕಾರಿ ಬೆಳವಣಿಗೆಯಾಗಿದೆ. ಅಮೆರಿಕದ ಜನತೆ, ಮಾರುಕಟ್ಟೆ, ವಾಣಿಜ್ಯ ವಹಿವಾಟು ಕ್ಷೇತ್ರ ಚಿಂತೆಗೀಡಾಗುವಂತಹ ಸುದ್ದಿ ಹೊರಬಿದ್ದಿದೆ.

ಅಮೆರಿಕದ ಆರ್ಥಿಕತೆ 2025ನೇ ಸಾಲಿನ ಮೊದಲ ತ್ರೈಮಾಸಿಕದಲ್ಲೇ ಕುಸಿತ ಕಂಡಿದೆ. 2025ರ ಜನವರಿ-ಮಾರ್ಚ್ ಅವಧಿಯಲ್ಲಿ ವಿಶ್ವದ ಸಿರಿವಂತ ದೇಶ ಅಮೆರಿಕದ 'ಒಟ್ಟಾರೆ ಆಂತರಿಕ ಉತ್ಪಾದನೆ'(ಜಿಡಿಪಿ) ಪ್ರಗತಿಯ ದರ ಶೇ.(ಮೈನಸ್) 0.3ಕ್ಕೆ

ಕುಸಿದಿದೆ. ಪರಿಣಾಮ ವರ್ಷಾಂತ್ಯ ವೇಳೆಗೆ ಅಮೆರಿಕ ಆರ್ಥಿಕ ಹಿಂಜರಿತಕ್ಕೆ ಒಳಗಾಗುವ ಭೀತಿ ಎದುರಾಗಿದೆ. ಒಂದೊಮ್ಮೆ ಅಮೆರಿಕ ಆರ್ಥಿಕ ಹಿಂಜರಿತಕ್ಕೆ (ರಿಸಿಶನ್‌ಗೆ) ಒಳಗಾದರೆ, ಅಮೆರಿಕದ ಮಾರುಕಟ್ಟೆ ಮತ್ತು ಡಾಲರ್ ವಿನಿಮಯ ಆಧರಿಸಿದ ಹಲವಾರು ದೇಶಗಳ ಆರ್ಥಿಕ ಸ್ಥಿತಿಯೂ ಹಿಂಜರಿತಕ್ಕೆ ಒಳಗಾಗುವ ಸಾಧ್ಯತೆ ಹೆಚ್ಚಿದೆ. ಪರಿಣಾಮ, ಜಾಗತಿಕವಾಗಿ ಮತ್ತೊಮ್ಮೆ ಆರ್ಥಿಕ ಹಿಂಜರಿತ(ಗ್ಲೋಬಲ್ ರಿಸಿಶನ್) ಉಂಟಾಗುವ ಸಂಭವವಿದೆ ಎಂದೇ ವಿಶ್ಲೇಷಿಸಲಾಗುತ್ತಿದೆ. ಅಧ್ಯಕ್ಷ ಡೊನಾಲ್ಡ್ ಟ್ರಂಪ್ ನೇತೃತ್ವದ ಅಮೆರಿಕ ಸರಕಾರ 60ಕ್ಕೂ ಅಧಿಕ ದೇಶಗಳ ಉತ್ಪನ್ನಗಳ ಆಮದು ವಹಿವಾಟು ಮೇಲೆ (ಕನಿಷ್ಠ ಶೇ.26) ಪ್ರತಿ ಸುಂಕ ವಿಧಿಸಿದ್ದರಿಂದ ಅಮೆರಿಕದಲ್ಲಿ ಗ್ರಾಹಕ ವೆಚ್ಚ ಕಡಿಮೆಯಾಗಿದೆ. ಇದುವೇ ಆರ್ಥಿಕ ಪ್ರಗತಿಯಲ್ಲಿ ಕುಸಿತವಾಗುವುದಕ್ಕೆ ಕಾರಣ ಎನ್ನಲಾಗಿದೆ.

ಜ.20ರಂದು ಡೊನಾಲ್ಡ್ ಟ್ರಂಪ್ ಅಧಿಕಾರ ವಹಿಸಿಕೊಂಡ ಬೆನ್ನಲ್ಲೇ ಪ್ರತಿಸುಂಕ ಸಮರ ಆರಂಭಿಸಿದ್ದರಿಂದ ಅಮೆರಿಕದ ಜಿಡಿಪಿ ಪ್ರಗತಿ ಇಳಿಜಾರಿನತ್ತ ಸಾಗಿತು. ಆದರೆ, ನಂತರದ ದಿನಗಳಲ್ಲಿ ಏರಿಕೆ ಕಾಣಬಹುದು ಎನ್ನುವ ನಿರೀಕ್ಷೆ ಇತ್ತು. ಆದರೆ, ಸರಕಾರದ ಹಣಕಾಸು ಇಲಾಖೆ ಬುಧವಾರ ಬಿಡುಗಡೆ ಮಾಡಿದ ತ್ರೈಮಾಸಿಕ ವರದಿ ಪ್ರಕಾರ ದೇಶದ ಆರ್ಥಿಕತೆ ಪ್ರಗತಿಯ ಹಾದಿಯಲ್ಲಿ ಸಾಗುವ ಬದಲು ಕುಸಿತ ಕಂಡಿದೆ. ಜನವರಿ-ಮಾರ್ಚ್ ಅವಧಿಯಲ್ಲಿ ಮೈನಸ್ ಶೇ.0.3ಕ್ಕೆ ಜಿಡಿಪಿ ಕುಸಿತವಾಗಿದೆ. ಸದ್ಯ ಟ್ರಂಪ್ ಆಡಳಿತ ಪ್ರತಿಸುಂಕ ಸಮರಕ್ಕೆ 90 ದಿನಗಳ ವಿರಾಮ ಘೋಷಿಸಿದೆ. ಆಮದು ಸುಂಕ ವಿಚಾರದಲ್ಲಿ ವಿವಿಧ ದೇಶಗಳ ಜತೆಗೆ ಮಾತುಕತೆಗೆ ಆಸಕ್ತಿ ತೋರಿದೆ. ಇದೆಲ್ಲವೂ ಸರಿಹೋಗಲು ಸಮಯ ಹಿಡಿಯಲಿದೆ. ಆ ನಂತರದಲ್ಲಿ ಅಮೆರಿಕ ಆರ್ಥಿಕ ಪರಿಸ್ಥಿತಿ ಸರಿದಾರಿಗೆ ಬರಲಿದೆ ಎಂಬುದು ಆರ್ಥಿಕ ತಜ್ಞರ ನಿರೀಕ್ಷೆಯಾಗಿದೆ.

ಜಿಡಿಪಿ ಕುಸಿತವೇಕೆ?

ಅಮೆರಿಕದಲ್ಲಿನ ಆರ್ಥಿಕತೆ 3 ತಿಂಗಳ ಅವಧಿಯಲ್ಲಿ ಕುಸಿತ ಕಾಣಲು ಪ್ರಮುಖ ಕಾರಣ ಪ್ರತಿಸುಂಕ ಸಮರ. ಪ್ರತಿ ಸುಂಕ ಹೇರುವ ವಿಚಾರ ತಿಳಿಯುತ್ತಲೇ ಅಮೆರಿಕದಲ್ಲಿನ ವ್ಯಾಪಾರಿಗಳು, ಕೈಗಾರಿಕೋದ್ಯಮಗಳು ಫೆಬ್ರವರಿ-ಮಾರ್ಚ್‌ನಲ್ಲಿ ದೊಡ್ಡ ಪ್ರಮಾಣದಲ್ಲಿ ಆಮದು

ಮಾಡಿಕೊಂಡಿವೆ. 2024ರ ಅಕ್ಟೋಬರ್-ಡಿಸೆಂಬರ್ ಅವಧಿಯಲ್ಲಿ ಆಮದು ಪ್ರಮಾಣ ಶೇ.1.9ರಷ್ಟು ಕಡಿಮೆಯಾಗಿತ್ತು. ಆದರೆ, 2025ರ ಜನವರಿ-ಮಾರ್ಚ್ ಅವಧಿಯಲ್ಲಿ ಶೇ. 41.3ರಷ್ಟು ಏರಿಕೆಯಾಯಿತು. ಇನ್ನೊಂದೆಡೆ, ರಫ್ತು ಪ್ರಗತಿ ಶೇ.1.8ರಷ್ಟು ದಾಖಲಾಯಿತು. ರಫ್ತು ಪ್ರಮಾಣಕ್ಕಿಂತ ಆಮದು ಪ್ರಮಾಣ ಹೆಚ್ಚಳವಾಗಿದ್ದರಿಂದ ವ್ಯಾಪಾರ ಕೊರತೆ ಪ್ರಮಾಣದಲ್ಲಿ ಭಾರಿ ಹೆಚ್ಚಳವಾಗಿದ್ದರಿಂದ ಜಿಡಿಪಿ ಪ್ರಗತಿಗೆ ಪೆಟ್ಟು ಕೊಟ್ಟಿತು. ಜಿಡಿಪಿ ಮೈನಸ್‌ಗೆ ಕುಸಿಯಿತು.

ಹಿಂದಿನ ತ್ರೈಮಾಸಿಕಗಳಲ್ಲಿನ ಜಿಡಿಪಿ ಪ್ರಮಾಣ



ಅಮೆರಿಕದ ಆರ್ಥಿಕ ವಿಶ್ಲೇಷಣೆ ವಿಭಾಗದ ಅಂಕಿ ಅಂಶ

ಜಿಡಿಪಿ ಪ್ರಗತಿ ಗತಿ

- 2022 ಮೊದಲ ತ್ರೈ(ಮೈನಸ್) ಶೇ.1
- 2022 ಎರಡನೇ ತ್ರೈಮಾಸಿಕ ಶೇ.0.2
- 2022 ಮೂರನೇ ತ್ರೈಮಾಸಿಕ ಶೇ.2.7
- 2022 ನಾಲ್ಕನೇ ತ್ರೈಮಾಸಿಕ ಶೇ.3.4
- 2023 ಮೊದಲ ತ್ರೈಮಾಸಿಕ ಶೇ.2.8
- 2023 ಎರಡನೇ ತ್ರೈಮಾಸಿಕ ಶೇ.2.4
- 2023 ಮೂರನೇ ತ್ರೈಮಾಸಿಕ ಶೇ.4.4
- 2023 ನಾಲ್ಕನೇ ತ್ರೈಮಾಸಿಕ ಶೇ.3.2
- 2024 ಮೊದಲ ತ್ರೈಮಾಸಿಕ ಶೇ.1.6
- 2024 ಎರಡನೇ ತ್ರೈಮಾಸಿಕ ಶೇ.3.0
- 2024 ಮೂರನೇ ತ್ರೈಮಾಸಿಕ ಶೇ.3.1
- 2024 ನಾಲ್ಕನೇ ತ್ರೈಮಾಸಿಕ ಶೇ.2.4
- 2025 ಮೊದಲ ತ್ರೈ(ಮೈನಸ್) ಶೇ.0.3

3 ವರ್ಷಗಳಲ್ಲಿ ಮೊದಲ ಕುಸಿತ

ಅಮೆರಿಕ ಕಳೆದ 3 ವರ್ಷಗಳಲ್ಲಿ ಇದೇ ಮೊದಲ ಬಾರಿ ಆರ್ಥಿಕ ಕುಸಿತಕ್ಕೆ ಒಳಗಾಗಿದೆ. ಈ ಮೊದಲು 2022ರ ಮೊದಲ ತ್ರೈಮಾಸಿ ಕದಲ್ಲಿ ಅಮೆರಿಕದ ಒಟ್ಟಾರೆ ಆಂತರಿಕ ಉತ್ಪಾದನೆ(ಜಿಡಿಪಿ) ಪ್ರಗತಿ ದರ ಮೈನಸ್‌ಗೆ ಇಳಿದಿತ್ತು. ನಂತರದ ವರ್ಷಗಳ ತ್ರೈಮಾಸಿಕಗಳಲ್ಲಿ ಸುಧಾರಿಸಿಕೊಂಡಿತ್ತು. ಮೂರು ವರ್ಷಗಳ ಬಳಿಕ ಈಗ ಮರಳಿ ಮೈನಸ್ ಜಿಡಿಪಿ ಪ್ರಗತಿಯ ಸ್ಥಿತಿಗೆ ಬಂದಿದೆ. ಇದು ಅಮೆರಿಕದ ಆರ್ಥಿಕತೆ ಅವಲಂಬಿಸಿದ ದೇಶಗಳಲ್ಲಿನ ಮಾರುಕಟ್ಟೆಗಳಲ್ಲಿ ನಡುಕ ಹುಟ್ಟಿಸಿದೆ.

ಹಣದುಬ್ಬರ ಹೆಚ್ಚಳ

ಅಮೆರಿಕದಲ್ಲಿ ಸದ್ಯ ಹಣದುಬ್ಬರದ ವಾರ್ಷಿಕ ಪ್ರಮಾಣ ವರ್ಷದ ಮೊದಲ ತ್ರೈಮಾಸಿಕದಲ್ಲಿ ಶೇ.3.6ಕ್ಕೆ ಏರಿಕೆಯಾಗಿದೆ. ಹಿಂದಿನ ತ್ರೈಮಾಸಿ ದಲ್ಲಿ, ಅಂದರೆ 2024ರ 4ನೇ ತ್ರೈಮಾಸಿಕದಲ್ಲಿ ಹಣದುಬ್ಬರ ಶೇ.2.4ರಷ್ಟಿತ್ತು.

ತಗ್ಗಿದ ಗ್ರಾಹಕ ವೆಚ್ಚ

ಜನವರಿ-ಮಾರ್ಚ್ ಅವಧಿಯಲ್ಲಿ ಗ್ರಾಹಕರು ಖರೀದಿ ಮಾಡುವ ಪ್ರಮಾಣವೂ ಕಡಿಮೆಯಾಗಿದೆ. ಈ ಅಂಶ ಕೂಡಾ ಅಮೆರಿಕದ ಜಿಡಿಪಿ ದರ ಮೈನಸ್‌ಗೆ ಬರಲು ಕಾರಣವಾಗಿದೆ. ಅಮೆರಿಕದ ವಾಣಿಜ್ಯ ಇಲಾಖೆ ಅಂಕಿ ಅಂಶಗಳ ಪ್ರಕಾರ 2024ರ ಕೊನೆಯ ತ್ರೈಮಾಸಿಕದಲ್ಲಿ ಗ್ರಾಹಕ ವೆಚ್ಚ(ಕನ್ಸೂಮರ್ ಸ್ಪೆಂಡಿಂಗ್) ಪ್ರಮಾಣ ಶೇ.4ರಷ್ಟಿತ್ತು. ಈಗ ಶೇ.1.8ಕ್ಕೆ ಇಳಿಕೆಯಾಗಿದೆ. ಅಮೆರಿಕದ ಆರ್ಥಿಕತೆಗೆ ಗ್ರಾಹಕರ ಖರೀದಿ ವಹಿವಾಟು ಶೇ.70ರಷ್ಟು ಕೊಡುಗೆ

ನೀಡುತ್ತದೆ. ಅಂತಹ ವಿಭಾಗದಿಂದಲೇ ಕಡಿಮೆ ಕೊಡುಗೆ ಬಂದಿರು ವುದರಿಂದ, ಅಂದರೆ ಗ್ರಾಹಕರು ವೆಚ್ಚ ಮಾಡುವ ಪ್ರಮಾಣ ಜನವರಿ-ಮಾರ್ಚ್ ತ್ರೈಮಾಸಿಕದಲ್ಲಿ ಕಡಿಮೆ ಆಗಿರುವುದರಿಂದ ಸಹಜವಾಗಿಯೇ ದೇಶದ ಜಿಡಿಪಿಯಲ್ಲಿ ಭಾರೀ ಕುಸಿತವಾಗಿದೆ ಎಂದು ತಜ್ಞರು ವಿಶ್ಲೇಷಣೆ ಮಾಡಿದ್ದಾರೆ. 2024ರ ದ್ವಿತೀಯಾರ್ಧ ಆರು ತಿಂಗಳಲ್ಲಿ ಅಮೆರಿಕದ ಮಾರುಕಟ್ಟೆಯಲ್ಲಿ ಗ್ರಾಹಕರ ಖರೀದಿ ಪ್ರಮಾಣದ ಏರುಮುಖ ವಾಗಿತ್ತು. ಅಲ್ಲದೇ ತಿಂಗಳಿಂದ ತಿಂಗಳಿಗೆ ಶೇ.1.8ರಷ್ಟು ಪ್ರಮಾಣದಲ್ಲಿ ಸತತ ಏರಿಕೆ ಕಾಣುತ್ತಿತ್ತು. ಜೋ ಬೈಡನ್ ಆಡಳಿತದ ಕಡೆಯ ಎರಡು ತ್ರೈಮಾಸಿಕಗಳಲ್ಲಿ ಕ್ರಮವಾಗಿ ಶೇ.4 ಮತ್ತು ಶೇ.3.7ರಷ್ಟು ಗ್ರಾಹಕ ವೆಚ್ಚ ಪ್ರಮಾಣ ದಾಖಲಾಗಿತ್ತು. 2025ರ ಜನವರಿಯಲ್ಲಿ ಚಳಿಗಾಲ ಮತ್ತು ದೀರ್ಘ ರಜೆ ನಂತರದ ದಿನಗಳ ಕಾರಣ ಗ್ರಾಹಕರಿಂದ ಖರೀದಿ ಕಡಿಮೆ ಆಗಿದೆ. ಅಲ್ಲದೇ, ಟ್ರಂಪ್ ಆಡಳಿತ ಹಲವಾರು ವೆಚ್ಚ ಕಡಿತ ಕ್ರಮಗಳನ್ನು ಕೈಗೊಂಡಿರುವುದ ರಿಂದ ಸರಕಾರದ ಮಟ್ಟದಲ್ಲಿಯೂ ಖರೀದಿ ವಹಿವಾಟು ಭಾರೀ ಪ್ರಮಾಣದಲ್ಲಿ ಕಡಿಮೆ ಆಗಿದೆ. ಇದೆಲ್ಲದರ ಪರಿಣಾಮವಾಗಿ ಗ್ರಾಹಕ ವೆಚ್ಚ ಸೂಚ್ಯಂಕದಲ್ಲಿ ಭಾರೀ ಇಳಿಕೆ ಆಗಿದೆ. ಈ ಮಧ್ಯೆ, ಉದ್ಯೋಗ ಮಾರುಕಟ್ಟೆಯಲ್ಲಿ ಹೊಸ ನೌಕರಿ ಅವಕಾಶ ಸೃಷ್ಟಿ ಆಗುತ್ತಿಲ್ಲ. ಉದ್ಯೋಗ ಕಡಿತವೂ ಹೆಚ್ಚಿನ ಪ್ರಮಾಣದ್ದೇ ಆಗಿದೆ. ಹಾಗಾಗಿ ಮುಂಬರುವ ದಿನಗಳಲ್ಲೂ ಗ್ರಾಹಕರ ಖರೀದಿ ಪ್ರಮಾಣ ಇಳಿಮುಖವಾಗಿಯೆ ಇರಲಿದೆ ಎಂಬ ಮಾತುಗಳು ಮಾರುಕಟ್ಟೆಯಲ್ಲಿ ಕೇಳಿಬಂದಿವೆ.

ಆರ್ಥಿಕ ಹಿಂಜರಿತ ಭೀತಿ

ಸತತ 2 ತ್ರೈಮಾಸಿಕಗಳಲ್ಲಿ ಆರ್ಥಿಕ ಪ್ರಗತಿ ಮೈನಸ್‌ನಲ್ಲಿದ್ದರೆ ಆ ದೇಶದ ಆರ್ಥಿಕತೆ ಹಿಂಜರಿತಕ್ಕೆ(ರಿಸಿಶನ್‌ಗೆ) ಸಿಲುಕಿದೆ ಎಂದರ್ಥ ಎಂಬುದು ಆರ್ಥಿಕ ತಜ್ಞರ ವಿಶ್ಲೇಷಣೆ. ಆದರೆ, ಅಮೆರಿಕದಲ್ಲಿ ಗ್ರಾಹಕ ವೆಚ್ಚ ತಗ್ಗಿದರೆ ಅದನ್ನು ಆರ್ಥಿಕ ಹಿಂಜರಿತದ ಸಂಕೇತ ಎಂದು ಪರಿಗಣಿಸಲಾಗುತ್ತದೆ. ಆರ್ಥಿಕ ಚಟುವಟಿಕೆ ವಿವಿಧ ವಿಭಾಗ ಗಳಲ್ಲಿ ಕೆಲ ತಿಂಗಳ ಕಾಲ ಇಳಿಕೆ ಕಂಡಿದ್ದರೆ ಆಗ ಅದು ಪೂರ್ಣವಾಗಿ ಆರ್ಥಿಕ ಹಿಂಜರಿತ ಎನಿಸಿಕೊಳ್ಳುತ್ತದೆ ಎಂದು ಹೇಳಲಾಗಿದೆ. ಸದ್ಯದ ಸ್ಥಿತಿಯಲ್ಲಿ ಅಮೆರಿಕ 2025ನೇ ವರ್ಷದ ಕೊನೆಗೆ ಆರ್ಥಿಕ ಹಿಂಜರಿ ತಕ್ಕೆ ಒಳಗಾಗುವ ಸಾಧ್ಯತೆ ಶೇ.60ರಷ್ಟಿದೆ ಎಂದು ಜೆಪಿ ಮಾರ್ಗನ್ ಸಂಸ್ಥೆ ಅಂದಾಜು ಮಾಡಿದೆ. ಈ ಮುನ್ಸೂಚನೆ ನಿಜವಾದರೆ ಜಾಗತಿಕ ಆರ್ಥಿಕ ಹಿಂಜರಿತಕ್ಕೆ ಅವಕಾಶ ಮಾಡಿಕೊಡುವ ಸಾಧ್ಯತೆ ಹೆಚ್ಚಿದೆ. ಟ್ರಂಪ್ ಸರಕಾರ ಈಗ ವಿವಿಧ ದೇಶಗಳ ವಿರುದ್ಧ ಆರಂಭಿಸಿರುವ ವಾಣಿಜ್ಯ ಸುಂಕ ಸಮರದಿಂದಾಗಿಯೇ ಈ ಆರ್ಥಿಕ ಕುಸಿತವಾಗಿದೆ. ಇದು ಇಲ್ಲಿಗೇ ನಿಲ್ಲುವುದಿಲ್ಲ. ಒಂದೊಮ್ಮೆ ಸದ್ಯ ನಡೆದಿರುವ 'ಸುಂಕ ಸಮರ'ಕ್ಕೆ ಆದಷ್ಟು ಬೇಗ ಪರಿಹಾರ ಕಂಡುಕೊಳ್ಳದೇ ಇದ್ದಲ್ಲಿ ಮುಂಬರುವ ದಿನಗಳಲ್ಲಿ ಅಮೆರಿಕದ ಮಾರುಕಟ್ಟೆಯಲ್ಲಿ ಎಲ್ಲಾ ವಸ್ತುಗಳ ಧಾರಣೆಗಳೂ ವಿಪರೀತ ಹೆಚ್ಚಲಿವೆ. ಅದರಿಂದಾಗಿ ಹಣದುಬ್ಬರದಲ್ಲೂ ಭಾರಿ ಏರಿಕೆ ಆಗಲಿದೆ. ಇನ್ನೊಂದೆಡೆ ಮಾರುಕಟ್ಟೆಯಲ್ಲಿ ಖರೀದಿ ವಹಿವಾಟು ಗಣನೀಯವಾಗಿ ತಗ್ಗಲಿದೆ. ಪರಿಣಾಮ ಆರ್ಥಿಕ ಪ್ರಗತಿ ಗತಿಯಲ್ಲಿ ಮತ್ತಷ್ಟು ಕುಸಿತವಾಗಿ ಆರ್ಥಿಕ ಹಿಂಜರಿತ ಸಂಭವಿಸಲಿದೆ ಎಂದು ಆರ್ಥಿಕ ತಜ್ಞರು ಈಗಲೇ ಎಚ್ಚರಿಕೆ ನೀಡಿದ್ದಾರೆ.

ಆಫ್ಘನ್ 150 ಟ್ರಕ್ ಭಾರತಕ್ಕೆ ತೆರಳಲು ಪಾಕ್ ಅನುಮತಿ

ದೆಹಲಿ: ಭಾರತಕ್ಕೆ ರಸ್ತೆ ಮಾರ್ಗದಲ್ಲಿ ಸರಕು ಸಾಗಣೆ ಮಾಡುವುದಕ್ಕೆ ಅಫ್ಘಾನಿಸ್ತಾನಕ್ಕೆ ಪಾಕಿಸ್ತಾನ ಸರಕಾರ ಅನುಮತಿ ನೀಡಿದೆ.

ವಾಘಾ-ಅಟ್ಟಾರಿ ಗಡಿಯ ಮೂಲಕ ಅಫ್ಘಾನಿಸ್ತಾನದ ಟ್ರಕ್‌ಗಳು ಸರಕು ಸಾಗಣೆ ಮಾಡಬಹುದಾಗಿದೆ ಎಂದು ಪಾಕಿಸ್ತಾನದ

ವಿದೇಶಾಂಗ ಸಚಿವಾಲಯ ಅಫ್ಘಾನಿಸ್ತಾನದ ರಾಯಭಾರಿ ಕಚೇರಿಗೆ ಪತ್ರ ಬರೆದು ತಿಳಿಸಿದೆ. ಪ್ರಸ್ತುತ ಅಫ್ಘಾನಿಸ್ತಾನದ 150 ಟ್ರಕ್‌ಗಳಿಗೆ ಅಟ್ಟಾರಿ-ವಾಘಾ ಗಡಿ ಮೂಲಕ ಭಾರತ ಪ್ರವೇಶಿಸಲು ಪಾಕ್ ಸರಕಾರ ಅನುಮತಿ ಸಿಕ್ಕಿದೆ. ಮುಖ್ಯವಾಗಿ ಒಣ ಹಣ್ಣುಗಳನ್ನು ಹೊತ್ತು ಬಂದಿರುವ ಟ್ರಕ್‌ಗಳು ಅಟ್ಟಾರಿ-ವಾಘಾ ಗಡಿಯಲ್ಲಿ ಗೇಟ್ ಬಂದ್ ಮಾಡಿರುವುದರಿಂದ ಭಾರತಕ್ಕೆ ಬರಲೂ ಆಗದೇ, ಅಫ್ಘಾನಿಸ್ತಾನಕ್ಕೆ ವಾಪಸ್ ಹೋಗಲೂ ಆಗದೇ ಪಾಕಿಸ್ತಾನದ ಭಾಗದಲ್ಲಿ ಹೆದ್ದಾರಿಯಲ್ಲೇ ಸ್ಥಗಿತಗೊಂಡಿವೆ. ಜಮ್ಮು-ಕಾಶ್ಮೀರದ ಪಹಲ್ಗಾಮ್‌ನಲ್ಲಿ ಏ.22ರ ಭಯೋತ್ಪಾದಕ ದಾಳಿ ಬಳಿಕ ಭಾರತ-ಪಾಕ್ ನಡುವೆ ಉದ್ವಿಗ್ನತೆ ನೆಲೆಸಿದೆ. ಬಳಿಕ ವಾಘಾ ಗಡಿಯನ್ನು ಎರಡೂ ದೇಶಗಳು ಬಂದ್ ಮಾಡಿವೆ. ಪರಿಣಾಮ ಭಾರತಕ್ಕೆ ಅಫ್ಘಾನಿಸ್ತಾನದಿಂದ ಬರುತ್ತಿದ್ದ ಸರಕುಗಳ ಟ್ರಕ್‌ಗಳು ದಾರಿ ಮಧ್ಯೆ ನಿಂತಿವೆ. ಈ ಹಿನ್ನೆಲೆಯಲ್ಲಿ ಅಫ್ಘಾನಿಸ್ತಾನ ಸರಕಾರ, ಸರಕು ಸಾಗಾಟ ಮಾಡಲು ಅನುಮತಿ ನೀಡುವಂತೆ ಪಾಕಿಸ್ತಾನ ಸರಕಾರಕ್ಕೆ ಮನವಿ ಮಾಡಿತ್ತು.

ಅಮೆರಿಕದ ಸಿಐಎ 1993ರ ವರದಿ ಉಲ್ಲೇಖ

ಭಾರತದ ಬಗ್ಗೆ ಪಾಕ್‌ಗೆ ಭಯ

ವಾಷಿಂಗ್ಟನ್: ಭಾರತದ ಹೆಸರು ಕೇಳಿದರೆ ಪಾಕಿಸ್ತಾನ ಭಯ ಪಡುತ್ತದೆ. ಈಗಂತೂ ಏ.22ರ ಪಹಲ್ಗಾಮ್ ದಾಳಿ ನಂತರ ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದ ಎನ್‌ಡಿಎ

ಸರಕಾರ ಕೈಗೊಂಡ ನಿರ್ಧಾರಗಳು ಪಾಕಿಸ್ತಾನ ಆಡಳಿತ ನಡಗುವಂತೆ ಮಾಡಿವೆ. ಈ ಭಯದ ಹಿಂದೆ ದಶಕಗಳಷ್ಟು ಹಳೆಯ ವಾಸ್ತವ ಅಂಶವಿದೆ ಎಂಬುದನ್ನು ಅಮೆರಿಕದ ಗುಪ್ತಚರ ಇಲಾಖೆಯ 1993ರಲ್ಲಿನ ರಹಸ್ಯ ವರದಿಯೊಂದು ಹೊರಹಾಕಿದೆ.

ಸಿಐಎ ದಾಖಲೆಗಳ ಪ್ರಕಾರ, ಪಾಕಿಸ್ತಾನ ಭಾರತಕ್ಕೆ ಬಹಳ ಭಯಪಡುತ್ತದೆ. ಆರ್ಥಿಕವಾಗಿ ಮತ್ತು ಸೇನಾಪಡೆ ವಿಚಾರಗಳಲ್ಲಿ ಮಾತ್ರವಲ್ಲ ತನ್ನದೇ ಅಸ್ತಿತ್ವದ ವಿಚಾರವಾಗಿಯೂ ಭಾರತ ಎಂದರೆ ಪಾಕ್‌ಗೆ ಇನ್ನಿಲ್ಲದಷ್ಟು ಭಯ ಎಂಬುದನ್ನು ಅಮೆರಿಕದ ರಾಷ್ಟ್ರೀಯ ಗುಪ್ತಚರ ಅಂದಾಜು(ಎನ್‌ಐಇ) ದಾಖಲೆ ಹೇಳುತ್ತಿದೆ. ಇದು ಭಾರತ-ಪಾಕ್ ನಡುವಿನ ಹಲವು ಪ್ರಸಂಗಗಳನ್ನು ಅಧ್ಯಯನ ಮಾಡಿ ಈ ತೀರ್ಮಾನಕ್ಕೆ ಬಂದಿದೆ. ಬಾಬರಿ ಮಸೀದಿ ಧ್ವಂಸ ಸಂದರ್ಭ(1992) ಮತ್ತು ಪಾಕಿಸ್ತಾನ ಆಂತರಿಕ ಅಸ್ಥಿರತೆಯಿಂದ ಪರಿತಪಿ ಸುತ್ತಿದ್ದ ಸಂದರ್ಭವನ್ನು ಅಧ್ಯಯನ ಮಾಡಿ ಈ ವರದಿ ಸಿದ್ಧಪಡಿಸಲಾಗಿದೆ. ಅಮೆರಿಕದ 'ಕೇಂದ್ರೀಯ ತನಿಖಾ ಸಂಸ್ಥೆ'(ಸಿಐಎ) ಅನುಭವಿ ಅಧಿಕಾರಿ ಬ್ರೂಸ್ ರೀಡೆಲ್ ನೇತೃತ್ವದಲ್ಲಿ 'ಎನ್‌ಐಇ' ವರದಿ ಸಿದ್ಧವಾಗಿದೆ.

ಕುಬ್ಜತೆಯೇ ಪಾಕ್ ಭಯಕ್ಕೆ ಕಾರಣ

ಭಾರತದ ಬೆಳೆಯುತ್ತಿರುವ ಶಕ್ತಿಯಿಂದ ಕುಬ್ಜವಾಗಿರುವ ಪಾಕಿಸ್ತಾನ ಭಯದಿಂದ ವರ್ತಿಸುತ್ತಿದೆ ಎಂದು ಸಿಐಎ ಹೇಳಿದೆ. ಅಧಿಕಾರದ ಸಮತೋಲನ ಭಾರತದ ಪರವಾಗಿ ವಾಲಿದೆ. ಆರ್ಥಿಕವಾಗಿ, ಮಿಲಿಟರಿ ಮತ್ತು ರಾಜತಾಂತ್ರಿಕವಾಗಿ ದೆಹಲಿ ಏರುಗತಿಯಲ್ಲಿದ್ದರೆ, ಪಾಕಿಸ್ತಾನ ಹತ್ತಿರಕ್ಕೂ ತಲುಪಲು ಸಾಧ್ಯವಾಗಿಲ್ಲ. ಈ ಅಂತರ ಫೈರ್ ಪವರ್‌ನಲ್ಲಷ್ಟೇ ಅಲ್ಲ, ಸ್ಥಿರತೆ ವಿಚಾರದಲ್ಲೂ ಇರುವುದರಿಂದ ಭಾರತ ಎಂದರೆ ಪಾಕ್‌ಗೆ ವಿಪರೀತ ಭಯ ಎಂದು ಸಿಐಎ ವಿಶ್ಲೇಷಿಸಿದೆ. ಈಗ ಪಹಲ್ಗಾಮ್ ದಾಳಿ ಹಿನ್ನೆಲೆ ಯುದ್ಧ ಆರಂಭಗೊಂಡರೆ ಎಂಬ ಭಯದಲ್ಲೇ ಪಾಕಿಸ್ತಾನ ಹಿಂದೆ ಸರಿಯಲು ಯತ್ನಿಸುತ್ತಿದೆ ಎಂದು ಈ ವರದಿ ಹಿನ್ನೆಲೆಯಲ್ಲಿಯೇ ವಿಶ್ಲೇಷಿಸಲಾಗಿದೆ.

ಗಡಿಯ ರಾಜ್ಯಗಳಲ್ಲಿ ಭತ್ತ, ಗೋಧಿ ಫಸಲು

ಉದ್ವಿಗ್ನತೆ ಮಧ್ಯೆ ಕೊಯಿಲು

ಶ್ರೀನಗರ: ಭಾರತ-ಪಾಕಿಸ್ತಾನ ಗಡಿಯಲ್ಲಿ ದಿನದಿಂದ ದಿನಕ್ಕೆ ಉದ್ವಿಗ್ನತೆ ಹೆಚ್ಚುತ್ತಲೇ ಇದೆ. ಕಳೆದ 7 ದಿನಗಳಿಂದಲೂ ಗಡಿ ನಿಯಂತ್ರಣ ರೇಖೆಯ (ಎಲ್‌ಒಸಿ) ಉದ್ದಕ್ಕೂ ಪಾಕ್ ಸೇನಾಪಡೆ ಯೋಧರು ಅಪ್ರಚೋದಿತವಾಗಿ ಗುಂಡು ಹಾರಿಸುವುದನ್ನು ಮುಂದುವರಿಸುತ್ತಲೇ ಇದ್ದಾರೆ. ಭಾರತದ ಸೇನಾಪಡೆಯೂ ಪ್ರತ್ಯುತ್ತರ ನೀಡುತ್ತಲೇ ಇದೆ. ಈ ಮಧ್ಯೆ, ಜಮ್ಮು-ಕಾಶ್ಮೀರ ಭಾಗದಲ್ಲಿನ ಗಡಿಯಂಚಿನ ಕೃಷಿ ಭೂಮಿಯಲ್ಲಿ ಕೊಯ್ಲು ಚಟುವಟಿಕೆ ಜೋರಾಗಿ ಸಾಗಿದೆ. ಅಲ್ಲದೇ, ಇತರೆ 3 ರಾಜ್ಯಗಳಾದ ಪಾಕ್ ಗಡಿಗೆ (3,300 ಕಿಮೀ) ತಾಗಿಕೊಂಡಿರುವ ರಾಜ್ಯಗಳಾದ ರಾಜಸ್ಥಾನ, ಗುಜರಾತ್ ಮತ್ತು ಪಂಜಾಬ್‌ನ ರೈತರು ಗಡಿಯಂಚಿನ ಕೃಷಿ ಭೂಮಿಯಲ್ಲಿ ಬೆಳೆದು ನಿಂತ ಫಸಲನ್ನು ಕೊಯ್ಲು ಮಾಡಿ ಮನೆಗೆ ತುಂಬಿಸಿಕೊಳ್ಳುವ ಕಾರ್ಯವನ್ನು ತರಾತುರಿಯಲ್ಲಿ ನಡೆಸುತ್ತಿದ್ದಾರೆ. ಗಡಿ ಭಾಗಕ್ಕೆ ಸಮೀಪದ ಗ್ರಾಮಗಳಲ್ಲಿನ ಜನರು ಸೇನೆಯ ಸೂಚನೆ ಮೇರೆಗೆ ಗೋಧಿ ಕೊಯಿಲು ಕಾರ್ಯ ಚುರುಕುಗೊಳಿಸಿದ್ದಾರೆ. ಗುರುವಾರದ ವೇಳೆಗೆ ಈ ರಾಜ್ಯಗಳಲ್ಲಿನ ಗಡಿ ಭಾಗದಲ್ಲಿನ ಕೃಷಿ ಭೂಮಿಯ ಕೊಯ್ಲು ಕಾರ್ಯ ಬಹುತೇಕ ಪೂರ್ಣಗೊಂಡಂತಾಗಿದೆ. ವಾಡಿಕೆಯಲ್ಲಿ ಈ ಭಾಗದಲ್ಲಿ ಮೇ ಮಾಸಾಂತ್ಯದಲ್ಲಿ ಕೊಯ್ಲು ನಡೆಯುತ್ತಿತ್ತು. ಈಗ ಸೇನೆಯ ಸೂಚನೆ ಇರುವುದರಿಂದ 2-3 ವಾರ ಮುಂಚಿತವಾಗಿಯೇ ಕೊಯ್ಲು ಮಾಡಿಸುವುದು ಅನಿವಾರ್ಯವಾಯಿತು ಎಂದು ಅಧಿಕಾರಿಗಳು ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

ವಾಘಾ ಗಡಿ ಬಂದ್

ಏ.22ರ ಪಹಲ್ಗಾಮ್ ದಾಳಿ ಬಳಿಕ ಭಾರತ ಸರಕಾರ ವಾಘಾ ಗಡಿ ಬಂದ್ ಮಾಡುವ ಆದೇಶ ಹೊರಡಿಸಿದ ಬಳಿಕ ಭಾರತದಲ್ಲಿದ್ದ ಪಾಕಿಸ್ತಾನದ ಪ್ರಜೆಗಳು(ಅಲ್ಪಾವಧಿ ವೀಸಾದವರು) ವಾಘಾ ಗಡಿ ಮಾರ್ಗವಾಗಿ ಇಸ್ಲಾಮಾಬಾದ್‌ಗೆ ಮರಳು ಪ್ರಕ್ರಿಯೆ, ಪಾಕ್‌ನಲ್ಲಿದ್ದ ಭಾರತೀಯ ಪ್ರಜೆಗಳು ವಾಪಸಾಗುವ ಪ್ರಕ್ರಿಯೆ ತ್ವರಿತಗತಿಯಲ್ಲಿ ನಡೆದಿದೆ. 7 ದಿನಗಳಲ್ಲಿ ಪಾಕ್‌ನ ಒಟ್ಟು 911 ಪ್ರಜೆಗಳು ವಾಘಾ ಗಡಿಯಲ್ಲಿ ವಾಪಸಾಗಿದ್ದಾರೆ ಎಂಬ ಅಂಕಿ ಅಂಶ ಲಭ್ಯವಾಗಿದೆ. ಗುರುವಾರ ವಾಘಾ ಗಡಿ ಗೇಟ್ ಬಂದ್ ಮಾಡಿರುವುದರಿಂದ ಭಾರತದಲ್ಲಿ ಈಗಲೂ ಉಳಿದಿರುವ ಅಲ್ಪಾವಧಿ ವೀಸಾ ಹೊಂದಿದ ಪಾಕ್ ಪ್ರಜೆಗಳ ವಿರುದ್ಧ ಕಾನೂನು ಕ್ರಮ ಜರುಗುವ ಸಾಧ್ಯತೆ ಇದೆ ಎನ್ನಲಾಗಿದೆ.

ಇಸ್ರೇಲ್ ಕಾಡ್ಗಿಚ್ಚು: 18 ಶಂಕಿತರ ಬಂಧನ

ಜೆರುಸಲೇಂ: ಇಸ್ರೇಲ್‌ನಲ್ಲಿ ಬುಧವಾರ ರಾತ್ರಿ ಭಾರಿ ಕಾಡ್ಗಿಚ್ಚು ಉಂಟಾಗಿದ್ದು, 13 ಮಂದಿ ಗಂಭೀರವಾಗಿ ಗಾಯಗೊಂಡಿದ್ದಾರೆ. ಜೆರುಸಲೆಮ್ ನಗರದ ಹೊರವಲಯ ಮತ್ತು ಸುತ್ತಲಿನ

ಬೆಟ್ಟಗಳ ತುದಿಯಲ್ಲಿ ದಟ್ಟ ಹೊಗೆ ಆವರಿಸಿದೆ. ಕಾರು ಮತ್ತಿತರ ವಾಹನಗಳಲ್ಲಿ ಸಂಚರಿ ಸುತ್ತಿದ್ದ ಜನರು ಸುತ್ತಲೂ ಕಾಡ್ಗಿಚ್ಚು ಆವರಿಸಿದ್ದರಿಂದ ವಾಹನಗಳಿಂದ ಇಳಿದು ಓಡಿ ಹೋಗುತ್ತಿರುವುದು ಕಂಡು ಬಂದಿದೆ. 150ಕ್ಕೂ ಹೆಚ್ಚು ರಕ್ಷಣಾ ತಂಡಗಳು ಮತ್ತು ಅಗ್ನಿಶಾಮಕ ದಳದ ವಾಹನಗಳು ಅಗ್ನಿ ಶಮನ ಕಾರ್ಯಾಚರಣೆಯಲ್ಲಿ ತೊಡಗಿವೆ. ಅಧಿಕಾರಿಗಳು 24 ಗಂಟೆಗಳಲ್ಲಿ ಸಾವಿರಾರು ನಿವಾಸಿಗಳನ್ನು ಕಾಡ್ಗಿಚ್ಚು ಆವರಿಸಿದ ಪ್ರದೇಶಗಳಿಂದ ಬೇರೆಡೆಗೆ ಸ್ಥಳಾಂತರಿಸಿದ್ದಾರೆ ಎಂದು ವರದಿಯಾಗಿದೆ.

ದುರುದ್ದೇಶ: ಈ ಕಾಡ್ಗಿಚ್ಚು ಸಹಜವಾಗಿ ಉಂಟಾಗಿದ್ದಲ್ಲ. ದುರುದ್ದೇಶದಿಂದ ಕೆಲವರು ಜೆರುಸಲೇಂನ ಹೊರವಲಯದಲ್ಲಿನ ಕಾಡಿಗೆ ಕಿಚ್ಚು ಹಚ್ಚಿದ್ದಾರೆ. ಕಾಡಿಗೆ ಕಿಚ್ಚಿಟ್ಟ ಆರೋಪದಡಿ ಈವರೆಗೆ 18 ದುಷ್ಕರ್ಮಿಗಳನ್ನು ಬಂಧಿಸಲಾಗಿದೆ. ಇವರಲ್ಲಿ ಒಬ್ಬನನ್ನು ಬೆಂಕಿ ಹಚ್ಚುತ್ತಿದ್ದಾಗಲೇ 'ಸಾಕ್ಷಿ ಸಮೇತ' ಸೆರೆ ಹಿಡಿಯಲಾಗಿದೆ ಎಂದು ಇಸ್ರೇಲ್ ಪ್ರಧಾನಿ ಬೆಂಜಮಿನ್ ನೇತನ್ಯಾಹು ಸುದ್ದಿಸಂಸ್ಥೆಗೆ ಗುರುವಾರ ತಿಳಿಸಿದ್ದಾರೆ.

ಲೆ.ಜ.ಅಸಿಮ್ ಮಲಿಕ್ ಪಾಕ್‌ಗೆ 'ಎನ್‌ಎಸ್‌ಎ'

ಇಸ್ಲಾಮಾಬಾದ್: ಪಹಲ್ಗಾಮ್ ಭಯೋತ್ಪಾದಕ ದಾಳಿಗೆ ಕಾರಣವಾಗಿ ಭಾರತದ ವೈಷಮ್ಯ ಕಟ್ಟಿ ಕೊಂಡಿರುವ ಪಾಕಿಸ್ತಾನ, ಭಾರತದಿಂದ ಪ್ರತಿಕಾರ ಭೀತಿ ಎದುರಿಸುತ್ತಿದೆ.

ಪರಿಣಾಮವಾಗಿ 'ರಾಷ್ಟ್ರೀಯ ಭದ್ರತಾ ಸಲಹೆಗಾರ' ಹುದ್ದೆಗೆ ಗುಪ್ತಚರ ಇಲಾಖೆ (ಐಎಸ್‌ಐ) ಮುಖ್ಯಸ್ಥ ಲೆಫ್ಟಿನೆಂಟ್ ಜನರಲ್ ಮುಹಮ್ಮದ್ ಅಸಿಮ್ ಮಲಿಕ್ ರನ್ನೇ ನೇಮಕ ಮಾಡಿದೆ. ಮಲಿಕ್ 2024ರ ಅಕ್ಟೋಬರ್‌ನಲ್ಲಷ್ಟೇ ಇಂಟರ್-ಸರ್ವೀಸಸ್ ಇಂಟೆಲಿಜೆನ್ಸ್ (ಐಎಸ್‌ಐ) ಮಹಾನಿರ್ದೇಶಕರಾಗಿ ನೇಮಕಗೊಂಡಿದ್ದರು.

ಲೆ.ಜ.ಮಲಿಕ್‌ಗೇ ಎನ್‌ಎಸ್‌ಎ ಜವಾಬ್ದಾರಿಯನ್ನೂ ವಹಿಸಿಕೊಡಲು ಮಂಗಳವಾರ ಸಂಪುಟ ಸಭೆ ನಿರ್ಧರಿಸಿತ್ತು. ತಕ್ಷಣದಿಂದಲೇ ಜಾರಿಗೊಳ್ಳುವಂತೆ ಎನ್‌ಎಸ್‌ಎ ಹುದ್ದೆಯನ್ನೂ ಹೆಚ್ಚುವರಿಯಾಗಿ ಮಲಿಕ್ ವಹಿಸಿಕೊಳ್ಳಲಿದ್ದಾರೆ ಎಂದು ಗುರುವಾರ ಅಧಿಸೂಚನೆ ಹೊರಡಿಸಲಾಗಿದೆ. ಮಲಿಕ್ ದೇಶದ 10ನೇ ರಾಷ್ಟ್ರೀಯ ಭದ್ರತಾ ಸಲಹೆಗಾರ ಆಗಿದ್ದಾರೆ. ಆದರೆ, ಐಎಸ್‌ಐ ಮತ್ತು ಎನ್‌ಎಸ್‌ಎ ಎರಡೂ ಪ್ರಮುಖ ಹುದ್ದೆಗಳಲ್ಲಿ ಒಬ್ಬರೇ ಇರುವುದು ಇದೇ ಮೊದಲು.

ಅಜ್ಮೀರ್ ಹೋಟೆಲ್ ಬೆಂಕಿ, ನಾಲ್ವರ ಸಾವು

ಜೈಪುರ: ರಾಜಸ್ಥಾನದ ಅಜ್ಮೀರ್‌ನ ಡಿಗ್ಗಿ ಬಜಾರ್ ಪ್ರದೇಶದಲ್ಲಿನ ಹೋಟೆಲೊಂದರಲ್ಲಿ ಗುರುವಾರ ಬೆಳಗ್ಗೆ ಭಾರಿ ಬೆಂಕಿ ಅವಘಡವಾಗಿದ್ದು, ನಾಲ್ವರು ಸಾವಿಗೀಡಾಗಿದ್ದಾರೆ. ಐದು

ಅಂತಸ್ತಿನ ಹೋಟೆಲ್‌ನಲ್ಲಿ ಬೆಂಕಿ ಕಾಣಿಸಿಕೊಂಡು ಎಲ್ಲೆಡೆ ಹೊಗೆ ತುಂಬಿಕೊಳ್ಳುತ್ತಲೇ ಜೀವಭಯದಲ್ಲಿ ಕೆಲ ಅತಿಥಿಗಳು ಮೇಲಿನ ಮಹಡಿಯ ಕಿಟಕಿಗಳಿಂದ ಹಾರಿ ಗಾಯಗೊಂಡಿದ್ದಾರೆ ಎಂದು ವರದಿಯಾಗಿದೆ. ಬೆಂಕಿ ಅವಘಡದಲ್ಲಿ ಮಗು, ಒಬ್ಬ ಮಹಿಳೆ ಸೇರಿದಂತೆ ನಾಲ್ವರು ಸಾವನ್ನಪ್ಪಿ ದ್ದಾರೆ ಎಂದು ಜೆಎಲ್‌ಎನ್ ವೈದ್ಯಕೀಯ ಕಾಲೇಜಿನ ಡಾ.ಅನಿಲ್ ಸಮರಿಯ ಸುದ್ದಿಗಾರರಿಗೆ ತಿಳಿಸಿದ್ದಾರೆ. ಕಿರಿದಾದ ಮಾರ್ಗದಲ್ಲಿ ಹೋಟೆಲ್ ಇರುವುದರಿಂದ ಬೆಂಕಿ ನಂದಿಸುವ ಕಾರ್ಯಕ್ಕೆ ಸಮಸ್ಯೆಯಾಗಿದೆ ಎಂದು ಅಧಿಕಾರಿಗಳು ತಿಳಿಸಿ ದ್ದಾರೆ. ದಿಢೀರ್ ಎಂಬಂತೆ ಸ್ಫೋಟದ ಶಬ್ದ ಕೇಳಿಸಿತು, ಬೆನ್ನಲ್ಲೇ ಬೆಂಕಿ ಕಾಣಿಸಿಕೊಂಡಿತು. ಹೋಟೆಲ್‌ನಿಂದ ಹೊರ ಗೋಡಿ ಬಂದೆ. ಮಹಡಿಯ ಕೊಠಡಿಯ ಕಿಟಕಿಯಿಂದ ಮಹಿಳೆಯೊಬ್ಬರು ಮಗುವನ್ನು ಕೆಳಕ್ಕೆ ಹಾಕಿದಾಗ ನನ್ನ ಮಡಿ ಲಲ್ಲಿ ಹಿಡಿದುಕೊಂಡೆ. ಕಿಟಕಿಯಿಂದ ಜಿಗಿದ ಒಬ್ಬರ ತಲೆಗೆ ಗಾಯವಾಗಿದೆ ಎಂದು ಗ್ರಾಹಕ ಮಂಗಿಲಾ ಕಲೋಸಿಯಾ ಹೇಳಿದ್ದಾರೆ.

ಉಕ್ರೇನ್ ಖನಿಜಕ್ಕೆ ಅಮೆರಿಕ ಒಪ್ಪಂದ

ವಾಷಿಂಗ್ಟನ್: ಇಬ್ಬರ ಜಗಳ, ಮೂರನೆಯವರಿಗೆ ಲಾಭ ಎಂಬ ಗಾದೆ ಮಾತು ಅಮೆರಿಕ ವಿಷಯದಲ್ಲಿ ನಿಜವಾಗಿದೆ. ರಷ್ಯಾ-ಉಕ್ರೇನ್ ವರ್ಷ ಕಾಲದಿಂದ ಯುದ್ಧದಲ್ಲಿ ಪರಿತಪಿಸುತ್ತಿದ್ದರೆ, ಅಮೆರಿಕ ಮಾತ್ರ ಉಕ್ರೇನ್

ಜತೆಗೆ ಅಪರೂಪದ ಖನಿಜಗಳನ್ನು ಪಡೆಯುವ ಆರ್ಥಿಕ ಪಾಲುದಾರಿಕೆ ಒಪ್ಪಂದಕ್ಕೆ ಬುಧವಾರ ಸಹಿ ಹಾಕಿದೆ. ಇದಕ್ಕೆ ಪ್ರತಿಯಾಗಿ ಅಮೆರಿಕದಲ್ಲಿ ಹೂಡಿಕೆ ಆಕರ್ಷಿಸುವುದಕ್ಕೆ ಉಕ್ರೇನ್‌ಗೆ ಅವಕಾಶ ಮಾಡಿಕೊಡಲಾಗಿದೆ. ಆರ್ಥಿಕ ಪಾಲುದಾರಿಕೆ ಒಪ್ಪಂದಗಳಿಗೆ ಉಭಯ ರಾಷ್ಟ್ರಗಳು ಬುಧವಾರ ಸಹಿ ಹಾಕಿವೆ ಎಂದು ಅಮೆರಿಕ ವಾಣಿಜ್ಯ ಇಲಾಖೆ ಖಜಾನೆ ಕಾರ್ಯದರ್ಶಿ ಸ್ಕಾಟ್ ಬೆಸೆಂಟ್ ತಿಳಿಸಿದ್ದಾರೆ. ಒಪ್ಪಂದಕ್ಕೆ ಸಹಿ ಹಾಕಲು ಉಕ್ರೇನ್ ಹಣಕಾಸು ಸಚಿವೆ ಯೂಲಿಯಾ ಸ್ವೈರಿಡೆಂಕೊ ಅಮೆರಿಕಕ್ಕೆ ತೆರಳಿದ್ದರು. ನಮ್ಮ ದೇಶಕ್ಕೆ ಜಾಗತಿಕ ಹೂಡಿಕೆದಾರರನ್ನು ಆಕರ್ಷಿಸಲು ಹೂಡಿಕೆ ನಿಧಿ ಸಮಿತಿ ರಚಿಸುತ್ತಿದ್ದೇವೆ ಎಂದು ಸಚಿವೆ ಹೇಳಿದ್ದಾರೆ.2ನೇ ಬಾರಿ ಅಧ್ಯಕ್ಷ ಹುದ್ದೆಯನ್ನು ಜ.20ರಂದು ಅಲಂಕರಿಸಿದ ಡೊನಾಲ್ಡ್ ಟ್ರಂಪ್, ಆಗಿನಿಂದಲೇ ಉಕ್ರೇನ್‌ನ ನೈಸರ್ಗಿಕ ಸಂಪನ್ಮೂಲಗಳ ಕುರಿತು ಒಪ್ಪಂದ ಮಾಡಿಕೊಳ್ಳುವುದಕ್ಕೆ ಉತ್ಸುಕತೆ ತೋರಿದ್ದರು. ಆದರೆ, ರಷ್ಯಾ- ಉಕ್ರೇನ್ ಕದನ ವಿರಾಮಕ್ಕೆ ಮಧ್ಯಸ್ಥಿಕೆ ವಹಿಸಲು ಹೋಗಿ ಉಕ್ರೇನ್ ಅಧ್ಯಕ್ಷ ವ್ಲಾದಿಮೀರ್ ಝೆಲೆನ್‌ಸ್ಕಿ ಜತೆ ಸಂಘರ್ಷ ಮಾಡಿಕೊಂಡಿದ್ದರು. ಆದರೆ, ಕಡೆಗೂ ಖನಿಜ ಒಪ್ಪಂದ ಮಾಡಿಕೊಳ್ಳುವಲ್ಲಿ ಉದ್ಯಮಿ ಟ್ರಂಪ್ ಸಫಲರಾಗಿದ್ದಾರೆ.

ಸಮಾಚಾರ ಸಣ್ಣದಲ್ಲ

ವಿದ್ಯುತ್ ಶಾಕ್‌ನಿಂದ ಮಹಿಳೆ ಸಾವು

ಪುತ್ತೂರು: ಬೋರ್ ವೆಲ್ ನ ವಿದ್ಯುತ್ ತಂತಿ ತಗುಲಿ ಕರೆಂಟ್ ಶಾಕ್ ಹೊಡೆದು ಮಹಿಳೆಯೊಬ್ಬರು ಸಾವನಪ್ಪಿದ ಘಟನೆ ಅರಿಯಡ್ಕ ಗ್ರಾಮದ ಬೇಂಗತ್ತಡ್ಕ ಎಂಬಲ್ಲಿ ಮಹಿಳೆಯೊಬ್ಬರು ಮೃತಪಟ್ಟಿದ್ದಾರೆ. ಅರಿಯಡ್ಕ ಗ್ರಾಮದ ಬೇಂಗತ್ತಡ್ಕ ನಿವಾಸಿ ದೇವಪ್ಪ ನಾಯ್ಕ ಅವರ ಪತ್ನಿ ಭಾಗೀರಥಿ (59) ಮೃತಪಟ್ಟವರು. ಮನೆಯ ತಾರಸಿಯ ಮೇಲೆ ಬದಿಯಲ್ಲಿ ಮಳೆನೀರು ತುಂಬಿಕೊಂಡಿತ್ತು. ಭಾಗೀರಥಿ ಅವರು ತಾರಸಿಗೆ ಹೋಗಿ ಸ್ವಚ್ಛ ಮಾಡುತ್ತಿದ್ದ ವೇಳೆ ಮನೆಯ ಬದಿಯಲ್ಲಿ ಹಾದು ಹೋಗಿದ್ದ ಕೊಳವೆಬಾವಿ ಸಂಪರ್ಕದ ವಿದ್ಯುತ್ ತಂತಿಯನ್ನು ಆಕಸ್ಮಿಕವಾಗಿ ಸ್ಪರ್ಶಿಸಿದ್ದಾರೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ. ಸಂಪ್ಯ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಜಾಲತಾಣ ಸುಳ್ಳು ಸುದ್ದಿ: 3 ಠಾಣೆಗಳಲ್ಲಿ ಎಫ್‌ಐಆರ್

ಮಂಗಳೂರು: ನಗರ ಹೊರವಲಯದ ಕುಡುಪು ಸಮೀಪದ ಸಾಮ್ರಾಟ್ ಮೈದಾನದಲ್ಲಿ ಕೇರಳದ ವಯನಾಡಿನ ಸುಲ್ತಾನ್ ಬತ್ತೇರಿ ತಾಲೂಕಿನ ಪುಲ್ಪಳ್ಳಿ ಗ್ರಾಮದ ಅಶ್ರಫ್ ಹತ್ಯೆ ಘಟನೆಗೆ ಸಂಬಂಧಿಸಿದಂತೆ ಸಾಮಾಜಿಕ ಜಾಲತಾಣಗಳಲ್ಲಿ ಸುಳ್ಳು ಸುದ್ದಿ ಹರಡಿದ ಆರೋಪದಲ್ಲಿ ಕೊಣಾಜೆ, ಬರ್ಕೆ, ಕಂಕನಾಡಿ ನಗರ ಠಾಣೆಗಳಲ್ಲಿ ಪ್ರಕರಣ ದಾಖಲಾಗಿದೆ. ಬ್ಯಾರಿ ಮುಸ್ಲಿಂ ಆರ್ಮಿ ಎಂಬ ವಾಟ್ಸ್‌ಪ್ ಗ್ರೂಪ್‌ನಲ್ಲಿ ಕುಡುಪು ಕೂಲಿ ಕಾರ್ಮಿಕನ ಹತ್ಯೆಗೆ ಬಳಸಿದ ಬ್ಯಾಟ್ ಸ್ಟಂಪ್ ವಶಕ್ಕೆ. ಹತ್ಯೆಗೆ ಬಳಸಿದ ಮಾರಕಾಸ್ತ್ರ ಕಾಣೆಯಾಗಿದೆ. ಇದರ ಹಿಂದೆ ಯಾರ ಕೈವಾಡವಿದೆ? ಎಂದು ಪೋಸ್ಟ್ ಮಾಡಿ ಸುಳ್ಳು ವದಂತಿ ಹಬ್ಬಿಸಿದ ಬಗ್ಗೆ ಪ್ರಕರಣ ದಾಖಲಾಗಿದೆ. ಬ್ಯಾರಿ ರಾಯಲ್ ನವಾಬ್ ಇನ್‌ಸ್ಟಾಗ್ರಾಮ್ ನಲ್ಲಿ ಸುಳ್ಳು ಮಾಹಿತಿ ಹಾಕಿದವರ ಮೇಲೆ ಬರ್ಕೆ ಠಾಣೆ ಪ್ರಕರಣ ದಾಖಲಾಗಿದೆ. ಮೈಕಾಲ್ತೊ ಬ್ಯಾರಿ ಗ್ರೂಪ್ ನಲ್ಲಿ ಸುಳ್ಳು ಸುದ್ದಿ ಹಬ್ಬಿದ ಆರೋಪದ ಮೇರೆಗೆ ಉಳ್ಳಾಲ ತಾಲೂಕಿನ ಮುನ್ನೂರು ಗ್ರಾಮದ ಝಾಕಿರ್ ಹುಸೇನ್ ಎಂಬಾತನ ವಿರುದ್ಧ ಪ್ರಕರಣ ದಾಖಲಾಗಿದೆ ಎಂದು ತಿಳಿದು ಬಂದಿದೆ.

ಶ್ರದ್ಧಾಂಜಲಿ ಸಭೆ ಇಂದು

ಮೂಡುಬಿದಿರೆ: ಮೂಡುಬಿದಿರೆ ಸಮಸ್ತ ನಾಗರಿಕರು ಹಾಗೂ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನ(ರಿ.) ದ ಸಹಯೋಗದಲ್ಲಿ ಕ್ರಾಂತಿಕಾರಿ ಸುಧಾರಣಾ ಕ್ರಮಗಳಿಂದ ಜನರ 'ಪೋಪ್' ಎಂದೇ ಜನಜನಿತರಾದ ಅತೀ ವಂದನೀಯ ಪೋಪ್ ಫ್ರಾನ್ಸಿಸ್ ಅವರ ನಿಧನ ಹಾಗೂ ಜಮ್ಮು ಕಾಶ್ಮೀರದ ಪಹಲ್ಗಾಮ್‌ನಲ್ಲಿ ಇತ್ತೀಚೆಗೆ ಉಗ್ರರ ದಾಳಿಯಲ್ಲಿ ಹತರಾದವರಿಗೆ ಶ್ರದ್ಧಾಂಜಲಿ ಸಭೆಯನ್ನು ಮೂಡುಬಿದಿರೆಯ ಕನ್ನಡ ಭವನದಲ್ಲಿ ಮೇ 2 ರಂದು ಸಂಜೆ 5 ಗಂಟೆಗೆ ಹಮ್ಮಿಕೊಳ್ಳಲಾಗಿದೆ.

ಕೊಲೆ ಆರೋಪಿ ಹತ್ಯೆ

ಮಂಗಳೂರು: ಬಜಪೆ ಕಿನ್ನಿಪದವು ಸಮೀಪ ರೌಡಿ ಶೀಟರ್ ಮತ್ತು ಫಾಜಿಲ್ ಕೊಲೆ ಪ್ರಕರಣದ ಪ್ರಮುಖ ಆರೋಪಿ ಸುಹಾಸ್ ಶೆಟ್ಟಿ ಮೇಲೆ ತಲವಾರು ದಾಳಿ ನಡೆದಿದೆ. ಈ ದಾಳಿಯಿಂದ ಗಂಭೀರವಾಗಿ ಗಾಯಗೊಂಡಿರುವ ಸುಹಾಸ್ ಶೆಟ್ಟಿ ಪ್ರಸ್ತುತ ಮಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ಅಸುನೀಗಿದ್ದಾರೆ. ಆಸ್ಪತ್ರೆಯ ಸುತ್ತಮುತ್ತ ಜನ ಜಮಾಯಿಸಿದ್ದಾರೆ. ಬಜಪೆ ಪರಿಸರದಲ್ಲಿ ಆತಂಕದ ವಾತಾವರಣ ಸೃಷ್ಟಿಯಾಗಿದೆ. ಸುಹಾಸ್ ಶೆಟ್ಟಿ, ಈ ಹಿಂದೆ ಬಜರಂಗದಳದ ಗೋರಕ್ಷಾ ವಿಭಾಗದ ಸದಸ್ಯ. 2022ರ ಜುಲೈ 28ರಂದು ಸುರತ್ಕಲ್‌ನಲ್ಲಿ ನಡೆದ ಫಾಜಿಲ್ ಎಂಬ ಯುವಕನ ಕೊಲೆ ಪ್ರಕರಣದಲ್ಲಿ ಪ್ರಮುಖ ಆರೋಪಿಯಾಗಿದ್ದ. ಈ ಕೊಲೆಯು ಬಿಜೆಪಿ ಕಾರ್ಯಕರ್ತ ಪ್ರವೀಣ್ ನೆಟ್ಟಾರು ಅವರ ಹತ್ಯೆಗೆ ಪ್ರತೀಕಾರವಾಗಿ ನಡೆದಿತ್ತು ಎಂದು ತನಿಖೆಯಲ್ಲಿ ತಿಳಿದು ಬಂದಿತ್ತು.

ಬಸವೇಶ್ವರರ ಆದರ್ಶ ಇಡೀ ವಿಶ್ವಕ್ಕೆ ಮಾದರಿ

ಹೊಸದುರ್ಗ: ಜಗಜ್ಯೋತಿ ಬಸವೇಶ್ವರ ಅವರ ಆದರ್ಶ ಜೀವನ ಇಡೀ ವಿಶ್ವಕ್ಕೆ ಮಾದರಿಯಾಗಿದ್ದು, ಪ್ರತಿಯೊಬ್ಬರೂ ಬಸವಪ್ರಜ್ಞೆ ಪಾಲಿಸಿದಲ್ಲಿ ಮಾತ್ರ ಅಭಿವೃದ್ಧಿ ಸಾಧಿಸಲು ಸಾಧ್ಯ ಎಂದು ಚಿತ್ರದುರ್ಗ ಜಿಲ್ಲಾ ಪಂಚಾಯಿತಿ ಕೆಡಿಪಿ ಸದಸ್ಯೆ ಪಿ.ದೀಪಿಕಾ ಸತೀಶ್ ತಿಳಿಸಿದರು. ಬಸವೇಶ್ವರ ಜಯಂತಿಯ ಪ್ರಯುಕ್ತ ನಗರದ ಬಸವೇಶ್ವರ ವಿವಿಧೋದ್ದೇಶ ಸಹಕಾರ ಸಂಘದ ವತಿಯಿಂದ ವೃದ್ಧಾಶ್ರಮ ಸರಕಾರಿ ಆಸ್ಪತ್ರೆ, ಪೊಲೀಸ್ ಇಲಾಖೆ, ಪುರಸಭೆ ಸಿಬ್ಬಂದಿಗೆ ಹಾಲು, ಹಣ್ಣು, ತಿಂಡಿಯನ್ನು ವಿತರಿಸಿ ಅವರು ಮಾತನಾಡಿದರು. ಬಸವೇಶ್ವರ ಆದರ್ಶವನ್ನು ಮಾತಿನಲ್ಲಿ ಅಷ್ಟೇ ತೋರಿಸದೇ ನಿಜಜೀವನದಲ್ಲಿ ಪಾಲಿಸುವುದು ಮುಖ್ಯ. ಜಾತ್ಯತೀತವಾಗಿ ಪ್ರತಿಯೊಬ್ಬರ ಮನೆ, ಮನದಲ್ಲಿ ಅರ್ಥಪೂರ್ಣವಾಗಿ ಜಯಂತಿ ಆಚರಣೆ ಮಾಡಬೇಕು. ಬಸವೇಶ್ವರರ ವಚನ ಸಾಹಿತ್ಯವನ್ನು ಎಲ್ಲರೂ ಓದಿ ಕಾಯಕ ಶ್ರೇಷ್ಠತೆಯನ್ನು ಅರಿತು, ಅದಕ್ಕೆ ಪೂರಕವಾಗಿ ಜೀವನ ನಡೆಸಿದಲ್ಲಿ ನೆಮ್ಮದಿ ಸಾಧ್ಯವಾಗುತ್ತದೆ ಎಂದರು. ಈ ಸಂದರ್ಭದಲ್ಲಿ ಶ್ರೀ ಬಸವೇಶ್ವರ ವಿವಿದ್ದೋದೇಶ ಸಹಕಾರ ಸಂಘದ ಅಧ್ಯಕ್ಷ ಸಿ.ಪ್ರಕಾಶ್, ಉಪಾಧ್ಯಕ್ಷ ರಾಜಣ್ಣ, ನಿರ್ದೇಶಕ ಜಿ.ಆರ್.ಸತೀಶ್, ರವಿನಾಯಕ, ಜಯಣ್ಣ ಇದ್ದರು.

{ಎಚ್.ವಿಶ್ವನಾಥ್} ಎಂಎಲ್‌ಸಿ

ಸಿದ್ದರಾಮಯ್ಯ ಎಲ್ಲರನ್ನೂ ಏಕವಚನದಲ್ಲಿ ಮಾತನಾಡಿಸುತ್ತಾರೆ. ಇದರಿಂದಾಗಿ ಅವರು ಏಕಾಂಗಿಯಾಗುತ್ತಿದ್ದಾರೆ. ಅವರ ಗೌರವ ಅವರೇ ಕಳೆದುಕೊಳ್ಳುತ್ತಿದ್ದಾರೆ. ಸರಕಾರದ ಉನ್ನತ ಸ್ಥಾನದಲ್ಲಿರುವ ನೀವೇ ಈ ರೀತಿ ಮಾಡೋದು ತಪ್ಪು. ಅಧಿಕಾರಿಗಳ ಮೇಲೆ ಕೈ ಎತ್ತಿದರೆ ಅಧಿಕಾರಿಗಳು ಕೆಲಸ ಮಾಡುವುದಾದರೂ ಹೇಗೆ..?



ಕುಡುಪು ಗುಂಪು ಹತ್ಯೆ ಕೇಸ್ | ಎಸ್‌ಐಟಿ ತನಿಖೆ ಆಗಲಿ | ರಮಾನಾಥ ರೈ ಆಗ್ರಹ

ಜಿಲ್ಲೆಗೆ ಸಮರ್ಥ ಅಧಿಕಾರಿ ಬೇಕು

ಮಂಗಳೂರು: ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಡೆದಿರುವ ಧರ್ಮಾಧರಿತ ಹತ್ಯೆಗಳ ಬಗ್ಗೆ ತನಿಖೆ ನಡೆಸಲು ಎಸ್ ಐಟಿ ರಚನೆ ಆಗಬೇಕು. ಹತ್ಯೆಗೆ ಕಾರಣಗಳೇನು, ಅದರ ಹಿಂದಿರುವ ವ್ಯಕ್ತಿಗಳು ಯಾರು ಎನ್ನುವ ಬಗ್ಗೆ ತನಿಖೆ ಆಗಬೇಕಾಗಿದೆ. ಕೋಮು ಆಧಾರಿತ ಹತ್ಯೆಗಳು ನಿಲ್ಲಬೇಕಾದರೆ ಇಂತಹ ಪ್ರಕರಣಗಳ ತನಿಖೆಗೆ ವಿಶೇಷ ತನಿಖಾ ತಂಡವನ್ನು (ಎಸ್‌ಐಟಿ) ರಚಿಸಬೇಕು. ಕುಡುಪು ಗುಂಪು ಹತ್ಯೆ ಪ್ರಕರಣವನ್ನೂ ಎಸ್‌ಐಟಿಯಿಂದ ತನಿಖೆಗೆ ಒಳಪಡಿಸಬೇಕು ಎಂದು ಮಾಜಿ ಶಾಸಕ ರಮಾನಾಥ ರೈ ಒತ್ತಾಯಿಸಿದ್ದಾರೆ.

ಕಾಂಗ್ರೆಸ್ ಕಚೇರಿಯಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿ, ಕುಡುಪು ಭಾಗದಲ್ಲಿ ನಡೆದಿರುವ ಗುಂಪು ಹತ್ಯೆಯನ್ನು ಪ್ರಸ್ತಾಪಿಸಿ, ಆ ಯುವಕ ಪಾಕಿಸ್ತಾನ ಪರವಾಗಿ ಘೋಷಣೆ ಕೂಗಿದ್ದಾನೆಯೇ, ಇಲ್ಲವೇ ಎನ್ನುವುದು ಅಲ್ಲಿದ್ದವರಿಗೆ ಮಾತ್ರ ಗೊತ್ತು. ಯಾರು ಹೊಡೆದಿದ್ದಾರೋ ಅವರು ಮತ್ತು ಅಲ್ಲಿ ಸಾಕ್ಷಿಗಳಾಗಿದ್ದವರಿಗೆ ತಿಳಿದಿರಬಹುದು. ಅದನ್ನು ಹೊರತುಪಡಿಸಿ ಸತ್ತ ಯುವಕನಿಗೆ ಮಾತ್ರ ಗೊತ್ತಿರಬಹುದು. ಆರಂಭದಲ್ಲಿ ಪೊಲೀಸರು ಸ್ವಲ್ಪ ತಡವರಿಸಿದ್ದಾರೆ, ಆನಂತರ ಶೀಘ್ರ ತನಿಖೆ ನಡೆಸಿ ಆರೋಪಿಗಳನ್ನು ಬಂಧಿಸಿದ್ದಾರೆ. ಇಂತಹ ಹತ್ಯೆಗಳ ಹಿಂದೆ ಮತೀಯವಾದಿ ಶಕ್ತಿಗಳ ಕೈವಾಡ ಇದೆ ಎಂದರು.

ಕೋಮುಘರ್ಷಣೆ:

ಕೋಮುಘರ್ಷಣೆ ವಿವಿಧ ಕಡೆ ನಡೆಯುತ್ತದೆ. ಬಳಿಕ ಪರಿಸ್ಥಿತಿ ಯಥಾಸ್ಥಿತಿಗೆ ಬರುತ್ತದೆ. ಆದರೆ ನಮ್ಮ ಜಿಲ್ಲೆಯಲ್ಲಿ ಉದ್ದೇಶಿತ ಹತ್ಯೆಗಳು ನಡೆಯುತ್ತವೆ. ಒಂದು ಹತ್ಯೆಗೆ ಪ್ರತೀಕಾರವಾಗಿ ಇನ್ನೊಂದು ಹತ್ಯೆ ನಡೆಯುತ್ತದೆ. ಇಂತಹ ಹತ್ಯೆಗಳನ್ನು ನಿಗ್ರಹಕ್ಕೆ ತರಬೇಕಾದರೆ ಅವುಗಳ ಹಿಂದೆ ಯಾರಿದ್ದಾರೆ ಎಂಬುದನ್ನು ಪತ್ತೆಹಚ್ಚಬೇಕು. ಅವರು ಎಷ್ಟೇ ಪ್ರಭಾವಿಗಳಾಗಿದ್ದರೂ ಅವರ ವಿರುದ್ಧ ಕ್ರಮ ಕೈಗೊಳ್ಳಬೇಕು. ಇದಕ್ಕಾಗಿ ಎಸ್ ಐಟಿ ರಚಿಸುವ ಅಗತ್ಯವಿದೆ ಎಂದು ಪ್ರತಿಪಾದಿಸಿದರು.

ಸಿಎಂ ಬಳಿಗೆ ನಿಯೋಗ

ಮತೀಯ ಸೂಕ್ಷ್ಮ ಜಿಲ್ಲೆಗೆ ಯಾವುದೇ ಅಧಿಕಾರಿಯನ್ನು ನಿಯೋಜಿಸಬೇಕಾದರೆ ಆಲೋಚಿಸಬೇಕು. ಸಮರ್ಥ ಅಧಿಕಾರಿಗಳನ್ನು ಜಿಲ್ಲೆಗೆ ಹಾಕಬೇಕು. ಕುಡುಪು ಹತ್ಯೆ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಬಳಿಗೆ ಆದಷ್ಟು ಶೀಘ್ರ ನಿಯೋಗಕ್ಕೆ ಒಯ್ಯುತ್ತೇವೆ. ಜಿಲ್ಲೆಯ ಎಲ್ಲ ವಿಚಾರಗಳನ್ನು ಸವಿಸ್ತಾರವಾಗಿ ವಿವರಿಸುತ್ತೇವೆ. ಅವರು ಇಂತಹ ವಿಚಾರ ಗಮನ ವಹಿಸುತ್ತಾರೆ ಎಂಬ ನಂಬಿಕೆ ಇದೆ ಎಂದು ಮಾಜಿ ಶಾಸಕ ರಮಾನಾಥ ರೈ ಹೇಳಿದರು.

ಅಮಾಯಕ ಹಿಂದೂ ಯುವಕ ಬಲಿಪಶು: ಶಾಸಕ

ಮಂಗಳೂರು: ಮಂಗಳೂರಿನ ಕುಡುಪು ಬಳಿ ನಡೆದ ದುರ್ಘಟನೆಗೆ ಸಂಬಂಧಿಸಿದಂತೆ ಆಡಳಿತ ಪಕ್ಷ ಕಾಂಗ್ರೆಸ್ ರಾಜಕೀಯ ಪ್ರೇರಿತವಾಗಿ ಅಮಾಯಕ ಹಿಂದೂ ಯುವಕರನ್ನು ಬಲಿಪಶು ಮಾಡುವ ಷಡ್ಯಂತ್ರ ನಡೆಸುತ್ತಿದೆ ಎಂದು ಶಾಸಕ ವೇದವ್ಯಾಸ ಕಾಮತ್ ರವರು ತೀವ್ರ ಆಕ್ರೋಶ ವ್ಯಕ್ತಪಡಿಸಿದರು. ಸ್ಥಳೀಯ ಕಾಂಗ್ರೆಸ್ ಹಾಗೂ ಅದೇ ಮನಸ್ಥಿತಿಯ ಇನ್ನಿತರರು ಪೊಲೀಸ್ ಇಲಾಖೆಯ ಮೇಲೆ ಒತ್ತಡ ಹೇರುವ ಮೂಲಕ ಅಮಾಯಕ ಹಿಂದೂಗಳನ್ನು ಈ ಪ್ರಕರಣದಲ್ಲಿ ಸಿಲುಕಿಸಲು ನೋಡುತ್ತಿದ್ದು, ಪೊಲೀಸ್ ಇಲಾಖೆ ಆಡಳಿತ ಪಕ್ಷದ ಏಜೆಂಟ್ ರೀತಿ ವರ್ತಿಸಬಾರದೆಂದು ಆಗ್ರಹಿಸಿದರು. ಘಟನೆಗೆ ಸಂಬಂಧಿಸಿ ನ್ಯಾಯಯುತ ತನಿಖೆ ನಡೆಯಲಿ. ಆದರೆ ತನಿಖೆ ನೆಪದಲ್ಲಿ ಹಿಂದೂ ಯುವಕರಿಗೆ ಕಿರುಕುಳ ನೀಡುವುದು, ಬೆದರಿಕೆ ಹಾಕುವುದು ಮಾಡಿದರೆ ಯಾವುದೇ ಕಾರಣಕ್ಕೂ ಸಹಿಸುವುದಿಲ್ಲ ಎಂದು ಶಾಸಕರು ಎಚ್ಚರಿಕೆ ನೀಡಿದರು

ಮೂವರು ಪೊಲೀಸರ ಅಮಾನತು

ಮಂಗಳೂರು: ಮಂಗಳೂರಿನಲ್ಲಿ ಕೇರಳದ ಅಶ್ರಫ್ ಅವರ ಗುಂಪು ಹತ್ಯೆಯನ್ನು ಮುಚ್ಚಿ ಹಾಕಲು ಪೊಲೀಸರೇ ಪ್ರಯತ್ನಿಸಿರುವುದು ಕೊನೆಗೂ ಅಧಿಕೃತವಾಗಿ ಬಯಲಾಗಿದೆ. ಮೂವರು ಪೊಲೀಸ್ ಅಧಿಕಾರಿ, ಸಿಬ್ಬಂದಿ ಅಮಾನತು ಆದೇಶದಲ್ಲಿ ಈ ಬಗ್ಗೆ ವಿವರಿಸಲಾಗಿದೆ.

ಮಂಗಳೂರಿನ ಕುಡುಪು ಗುಂಪು ಹತ್ಯೆ ಪ್ರಕರಣದಲ್ಲಿ ಗ್ರಾಮಾಂತರ ಠಾಣೆ ಇನ್ಸ್ ಪೆಕ್ಟರ್ ಶಿವಕುಮಾರ್ ಕೆ ಆರ್, ಹೆಡ್ ಕಾನ್ ಸ್ಟೇಬಲ್ ಚಂದ್ರ ಪಿ. ಮತ್ತು ಪೊಲೀಸ್ ಕಾನ್ ಸ್ಟೇಬಲ್ ಯಲ್ಲಾಲಿಂಗ ಅವರನ್ನು ಅಮಾನತುಗೊಳಿಸಿ ಪೊಲೀಸ್ ಆಯುಕ್ತ ಅನುಪಮ್ ಅಗರ್ವಾಲ್ ಆದೇಶ ಹೊರಡಿಸಿದ್ದಾರೆ.

ಗುಂಪು ಹತ್ಯೆ ಎಂದು ಸ್ಥಳೀಯರು ತಿಳಿಸಿದ್ದರೂ ಅದನ್ನು ಅಸಹಜ ಸಾವು ಎಂಬಂತೆ ತೋರಿಸಲು ಪೊಲೀಸರೇ ಪ್ರಯತ್ನಿಸಿರುವುದು ಖಚಿತವಾಗಿದೆ. ಈ ಪ್ರಕರಣದಲ್ಲಿ ಗಂಭೀರ ಕರ್ತವ್ಯಲೋಪದಡಿ ಇನ್ಸ್ ಪೆಕ್ಟರ್ ಶಿವಕುಮಾರ್ ಕೆ ಆರ್, ಹೆಡ್ ಕಾನ್ ಸ್ಟೇಬಲ್ ಚಂದ್ರ ಪಿ. ಮತ್ತು ಪೊಲೀಸ್ ಕಾನ್ ಸ್ಟೇಬಲ್ ಯಲ್ಲಾಲಿಂಗ ಅವರನ್ನು ಅಮಾನತುಗೊಳಿಸಲಾಗಿದೆ.

ಅಮಾನತು ಆದೇಶ: ಮಂಗಳೂರು ನಗರ ಪೊಲೀಸ್‌ನ ದಕ್ಷಿಣ ಉಪ ವಿಭಾಗದ ಸಹಾಯಕ ಪೊಲೀಸ್ ಆಯುಕ್ತರ ವರದಿಯಂತೆ ಏ.27 ರಂದು ಕುಡುಪು ಗ್ರಾಮದ ಭಟ್ರ ಕಲ್ಲುರ್ಟಿ ದೈವಸ್ಥಾನದ ಹಿಂಬದಿ ಮೈದಾನ ಬಳಿ ಅಪರಿಚಿತ ವ್ಯಕ್ತಿ ಮೃತಪಟ್ಟಿರುವ ಬಗ್ಗೆ ಮಂಗಳೂರು ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಯುಡಿಆರ್ ದೂರು ದಾಖಲಾಗಿತ್ತು. ಇದೇ ಘಟನೆ ಬಗ್ಗೆ ಏ.28ರಂದು ದೀಪಕ್ ಎಂಬವರು ನೀಡಿದ ದೂರಿನಂತೆ ಪ್ರಕರಣ ದಾಖಲಾಗಿರುತ್ತದೆ.

ಮೈದಾನದಲ್ಲಿ ಕ್ರಿಕೆಟ್ ಪಂದ್ಯಾ ನಡೆಯುತ್ತಿದ್ದ ಸಂದರ್ಭ ಅಪರಿಚಿತ ವ್ಯಕ್ತಿಗೆ, ಕ್ರಿಕೆಟ್ ಆಟಗಾರರು ಮತ್ತು ಅಲ್ಲಿ ನರೆದಿದ್ದ ಪ್ರೇಕ್ಷಕರು ಗುಂಪು ಹಲ್ಲೆ ನಡೆಸುತ್ತಿದ್ದ ಬಗ್ಗೆ ದೀಪಕ್ ಎಂಬವರು ಪೊಲೀಸರಿಗೆ ಫೋನ್ ಕರೆ ಮಾಡಿ ತಿಳಿಸಿದ್ದರು. ಗುಂಪು ಹಲ್ಲೆ ನಡೆದ ಬಗ್ಗೆ ಮಂಗಳೂರು ಗ್ರಾಮಾಂತರ ಠಾಣಾ ಪೊಲೀಸ್ ನಿರೀಕ್ಷಕರ ಮತ್ತು ಸಿಬ್ಬಂದಿಗಳಿಗೆ ಮಾಹಿತಿಯಿತ್ತು. ಆದರೆ ಇನ್ಸ್ ಪೆಕ್ಟರ್ ಶಿವಕುಮಾರ್ ಕೆ ಆರ್ ಅವರು ಘಟನೆಯ ಬಗ್ಗೆ ಮೇಲಾಧಿಕಾರಿಗೆ ತಿಳಿಸದೇ ಅಸಹಜ ಸಾವು ಪ್ರಕರಣ ದಾಖಲಿಸಿದ್ದರು. ಆ ಬಳಿಕ ಒತ್ತಡ ಹೆಚ್ಚಿದ ಬಳಿಕ ಗುಂಪು ಹತ್ಯೆ ಪ್ರಕರಣ ದಾಖಲಿಸಲಾಯಿತು.

ಗುಪ್ತದಳದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಹೆಡ್ ಕಾನ್ಸ್ ಟೇಬಲ್ ಚಂದ್ರ.ಪಿ ಅವರಿಗೆ ತಿಳಿಸಿದ್ದರು. ಆದರೆ ಅವರು ಈ ಬಗ್ಗೆ ಯಾವುದೇ ಮಾಹಿತಿಯನ್ನು ಕಲೆ ಹಾಕಲಿಲ್ಲ. ಕ್ರಿಕೆಟ್ ಪಂದ್ಯಾಟವನ್ನು ಆಯೋಜಿಸಿದ್ದ ಸ್ಥಳದಲ್ಲಿ ಬೀಟ್ ಕರ್ತವ್ಯಕ್ಕೆ ಸಿವಿಲ್ ಪೊಲೀಸ್ ಕಾನ್ಸ್ ಟೇಬಲ್ ಯಲ್ಲಾಲಿಂಗ ಅವರನ್ನು ನಿಯೋಜಿಸಲಾಗಿತ್ತು. ಆದರೆ ಅವರು ಕೂಡ ಕರ್ತವ್ಯದಲ್ಲಿ ತೀವ್ರ ನಿರ್ಲಕ್ಷತನ ತೋರಿದ್ದಾರೆ ಎಂದು ಆರೋಪಿಸಲಾಗಿದೆ.

ಉಡುಪಿಯ ರಾಜಾಂಗಣದಲ್ಲಿ ಸ್ಪೇಸ್ ಮೀಡಿಯಾ ಹಾಗೂ ಸನಾತನ ಟ್ರಸ್ಟ್ ವತಿಯಿಂದ ಪರ್ಯಾಯ ಶ್ರೀಸುಗುಣೇಂದ್ರ ತೀರ್ಥ ಸ್ವಾಮೀಜಿ ಉಪಸ್ಥಿತಿಯಲ್ಲಿ ನಡೆದ ವಿಕ್ರಮ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಬೆಂಗಳೂರಿನ ಸೃಷ್ಟಿ ಕಲಾ ವಿದ್ಯಾಲಯ ತಂಡದಿಂದ ನೃತ್ಯ ವೈಭವ ನೆರವೇರಿತು.

53ನೇ ಸಾಮೂಹಿಕ ವಿವಾಹಕ್ಕೆ ಧರ್ಮಸ್ಥಳ ಸಜ್ಜು

ಮಂಗಳೂರು: ನಾಡಿನ ಪವಿತ್ರ ಕ್ಷೇತ್ರ ಧರ್ಮಸ್ಥಳದಲ್ಲಿ ಮದುವೆ ಮನೆಯ ಸಂಭ್ರಮ, ಸಡಗರ. ಮೇ 2ರ ಶನಿವಾರ ಸಂಜೆ 6.48ರ ಗೋಧೂಳಿ ಲಗ್ನ ಸುಮುಹೂರ್ತದಲ್ಲಿ ಅಮೃತವರ್ಷಿಣಿ ಸಭಾಭವನದಲ್ಲಿ ನಡೆಯುವ 53ನೆ ವರ್ಷದ ಉಚಿತ ಸಾಮೂಹಿಕ ವಿವಾಹದಲ್ಲಿ ಮದುವೆಯಾಗಲು ಈಗಾಗಲೆ 90ಕ್ಕೂ ಮಿಕ್ಕಿ ವಧೂ-ವರರು ಹೆಸರು ನೋಂದಾಯಿಸಿದ್ದಾರೆ.

ಧರ್ಮಾಧಿಕಾರಿ ಡಿ. ವೀರೇಂದ್ರ ಹೆಗ್ಗಡೆಯವರು, ಹೇಮಾವತಿ ವೀ. ಹೆಗ್ಗಡೆ, ಹರ್ಷೇಂದ್ರ ಕುಮಾರ್ ಅವರ ಮಾರ್ಗದರ್ಶನದಲ್ಲಿ ಸಕಲ ಸಿದ್ಧತೆಗಳನ್ನೂ ಪೂರೈಸಲಾಗಿದೆ. ನವದೆಹಲಿಯಲ್ಲಿ ಕರ್ನಾಟಕ ಸರ್ಕಾರದ ವಿಶೇಷ ಪ್ರತಿನಿಧಿ ಟಿ.ಬಿ. ಜಯಚಂದ್ರ, ಶಾಸಕ ಹರೀಶ್ ಪೂಂಜ ಮತ್ತು ವಿಧಾನ ಪರಿಷತ್ ಸದಸ್ಯರಾದ ಕೆ. ಪ್ರತಾಪಸಿಂಹ ನಾಯಕ್ ನೂತನ ದಂಪತಿಗಳಿಗೆ ಶುಭ ಹಾರೈಸುವರು.

ವರದಕ್ಷಿಣೆ ಹಾಗೂ ಮದುವೆಗಾಗುವ ದುಂದುವೆಚ್ಚವನ್ನು ತಡೆಯುವ ಉದ್ದೇಶದಿಂದ ಧರ್ಮಸ್ಥಳದ ಧರ್ಮಾ ಧಿಕಾರಿ ಡಿ. ವೀರೇಂದ್ರ ಹೆಗ್ಗಡೆಯವರು 1972ರಲ್ಲಿ 88 ಜೊತೆ ವಿವಾಹದೊಂದಿಗೆ ಆರಂಭಿಸಿದ ಉಚಿತ ಸಾಮೂಹಿಕ ವಿವಾಹವನ್ನು ಪ್ರತಿ ವರ್ಷವೂ ನಡೆಸುತ್ತಿದ್ದು, ಕಳೆದ ವರ್ಷದವರೆಗೆ 12,900 ಜೋಡಿ ಸಾಮೂಹಿಕ ವಿವಾಹದಲ್ಲಿ ಮದುವೆಯಾಗಿದ್ದಾರೆ.



ವಿಚ್ಛೇದನ ಪ್ರಕರಣ ಇಲ್ಲ:

ಇಲ್ಲಿಯ ವರೆಗೂ ಒಂದು ಕೂಡಾ ವಿಚ್ಛೇದನ ಪ್ರಕರಣ ವರದಿಯಾಗಿಲ್ಲ ಎಂಬುದು ಗಮನಿಸಬೇಕಾದ ಅಂಶ. ರೋಟರಿಕ್ಲಬ್, ಲಯನ್ಸ್ ಕ್ಲಬ್, ಸ್ವಯಂ-ಸೇವಾ ಸಂಸ್ಥೆಗಳು ಹಾಗೂ ಕಟೀಲು, ಸುಬ್ರಹ್ಮಣ್ಯ ದೇವಸ್ಥಾನಗಳಲ್ಲಿಯೂ ಧರ್ಮಸ್ಥಳದಲ್ಲಿ ನಡೆಯುವ ಉಚಿತ ಸಾಮೂಹಿಕ ವಿವಾಹ ಮಾದರಿ ಅನುಸರಿಸುತ್ತಿರುವ ಬಗ್ಗೆ ಧರ್ಮಾಧಿಕಾರಿ ಡಿ. ವೀರೇಂದ್ರ ಹೆಗ್ಗಡೆಯವರು ವಿಶೇಷ ಸಂತಸ ವ್ಯಕ್ತ ಪಡಿಸಿದ್ದಾರೆ.

ವಸತಿ ಸೌಲಭ್ಯ :

ಶುಕ್ರವಾರವೇ ವಧೂ-ವರರು ಹಾಗೂ ಅವರ ಹಿರಿಯರು ಧರ್ಮಸ್ಥಳಕ್ಕೆ ಆಗಮಿಸಿದ್ದು ಅವರಿಗೆ ವಸತಿ ಸೌಲಭ್ಯ ಕಲ್ಪಿಸಲಾಗಿದೆ. ಅವರು ನೀಡಿದ ಪ್ರಮಾಣಪತ್ರ ಹಾಗೂ ದಾಖಲೆಗಳ ಮೂಲಪ್ರತಿಗಳನ್ನು ಪರಿಶೀಲಿಸಿ ಎಲ್ಲವೂ ಕ್ರಮಬದ್ಧವಾಗಿದ್ದಲ್ಲಿ ಅವರಿಗೆ ಮದುವೆಯಾಗಲು ಅವಕಾಶ ನೀಡಲಾಗುವುದು. ವರನಿಗೆ ಧೋತಿ, ಶಾಲು ಹಾಗೂ ವಧುವಿಗೆ ಸೀರೆ, ರವಿಕೆ ಮತ್ತು ಮೂಗು, ಮಂಗಳಸೂತ್ರ ನೀಡಲಾಗುವುದು. ಶನಿವಾರ ಸಂಜೆ 4 ಗಂಟೆಗೆ ಭವ್ಯ ಮೆರವಣಿಗೆಯಲ್ಲಿ ವಧೂ-ವರರು ದೇವಸ್ಥಾನಕ್ಕೆ ಪ್ರದಕ್ಷಿಣೆ ಬಂದು ಅಮೃತವರ್ಷಿಣಿ ಸಭಾಭವನಕ್ಕೆ ತೆರಳುವರು. ವೇದಘೋಷ, ಮಂಗಳವಾದ್ಯ, ಮಂತ್ರಾಕ್ಷತೆ ವಿತರಣೆಯೊಂದಿಗೆ 6.48ರ ಶುಭ ಮುಹೂರ್ತದಲ್ಲಿ ಹಾರ ವಿನಿಮಯ, ಮಾಂಗಲ್ಯಧಾರಣೆ ನಡೆಯುತ್ತದೆ. ಬಳಿಕ ದೇವರ ದರ್ಶನ ಮಾಡಿ, ಅನ್ನಪೂರ್ಣ ಭೋಜನಾಲಯದಲ್ಲಿ ಮದುವೆ ಊಟದ ವ್ಯವಸ್ಥೆ ಇರಲಿದೆ. ವಿವಾಹ ನೋಂದಣಿ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದು ಅಧಿಕೃತ ವಿವಾಹ ನೋಂದಣಿ ಪ್ರಮಾಣಪತ್ರವನ್ನು ದಂಪತಿಗಳಿಗೆ ನೀಡಲಾಗುವುದು.

ಶ್ರೀರಾಮಚಂದ್ರ ದೇವರ ಪ್ರತಿಷ್ಠಾಪನೆ ಮೇ 4ರಿಂದ

ಉಡುಪಿ: ಬೈಂದೂರು ತಾಲೂಕಿನ ಬೋಳಂಬಳ್ಳಿಯ ಪಾರ್ಶ್ವನಾಥ ಸ್ವಾಮಿ ಮತ್ತು ಪದ್ಮಾವತಿ ಅಮ್ಮನವರ ಬಸದಿಯ ಸಾನಿಧ್ಯದಲ್ಲಿ ಭಗವಾನ್ ಶ್ರೀಆದಿನಾಥ ಸ್ವಾಮಿ ಪಂಚಕಲ್ಯಾಣ ಮತ್ತು ನೂತನ ಬಾಹುಬಲಿ ಸ್ವಾಮಿಯ ಪ್ರತಿಷ್ಠ ಪೂರ್ವಕ ಮಹಾಮಸ್ತಕಾಭಿಷೇಕ, ವಾರ್ಷಿಕ ರಥೋತ್ಸವ, ಸಿದ್ಧಕೇವಲಿ ಭಗವಾನ್ ಶ್ರೀರಾಮಚಂದ್ರ ದೇವರ ಪ್ರತಿಷ್ಠಾಪನಾ ಪೂಜಾ ಮಹೋತ್ಸವ ಮೇ 4 ರಿಂದ 9 ರವರೆಗೆ ನಡೆಯಲಿದೆ ಎಂದು ದೇವಸ್ಥಾನದ ಟ್ರಸ್ಟಿ ಡಾ. ಆಕಾಶ್‌ರಾಜ್ ಜೈನ್ ತಿಳಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಭಗವಾನ್ ಬಾಹುಬಲಿ ಸ್ವಾಮಿಯ ಏಕಶಿಲಾ ಮೂರ್ತಿ 27 ಅಡಿ ಎತ್ತರ ಹಾಗು ಶ್ರೀರಾಮಚಂದ್ರ ದೇವರ ಏಕಶಿಲಾ ಮೂರ್ತಿ 21 ಅಡಿ ಎತ್ತರವಿದೆ ಎಂದರು.

ಭಗವಾನ್ ಬಾಹುಬಲಿಗೆ ಮಹಾಮಸ್ತಕಾಭಿಷೇಕವು ಮೇ 7 ರಿಂದ 9 ರವರೆಗೆ ಪ್ರತಿದಿನ ಸಂಜೆ 4 ಗಂಟೆಯಿಂದ ನಡೆಯಲಿದೆ. ಧಾರ್ಮಿಕ ಕಾರ್ಯಕ್ರಮಗಳು ಕ್ಷೇತ್ರ ಹೊಂಬುಜ ಜೈನ ಮಠದ ದೇವೇಂದ್ರಕೀರ್ತಿ ಭಟ್ಟಾಕರ ಸ್ವಾಮೀಜಿ ನೇತೃತ್ವದಲ್ಲಿ ಹಾಗು 108 ಗುಲಾಬ್‌ಭೂಷಣ್ ಮುನಿಮಹಾರಾಜರ ಮಾರ್ಗದರ್ಶನದಲ್ಲಿ ನಡೆಯಲಿದೆ. ಬಾಹುಬಲಿ ರಾಮಚಂದ್ರ ದೇವರ ಮೂರ್ತಿಯನ್ನು ಮೇ 9 ರಂದು ಧರ್ಮಸ್ಥಳದ ಧರ್ಮಾಧಿಕಾರಿ ಡಾ.ಡಿ.ವಿರೇಂದ್ರ ಹೆಗ್ಗಡೆ ಲೋಕಾರ್ಪಣೆಗೊಳಿಸಲಿದ್ದಾರೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಪ್ರಮುಖರಾದ ರಾಜಶೇಖರ್ ಹೆಬ್ಬಾರ್, ಪದ್ಮಪ್ರಸಾದ್ ಜೈನ್ ನೆಲ್ಲಿಕಾರ್, ರಾಜೇಶ್ ಜೈನ್ ಕೊಕ್ಕರ್ಣೆ ಉಪಸ್ಥಿತರಿದ್ದರು.

ಕ್ರೀಡಾ ಪ್ರತಿಭೆಗಳಿಗೆ ಉದ್ಯೋಗ ಅವಶ್ಯ

ಮಂಗಳೂರು: ಛಲ, ಶಿಸ್ತು, ಕಠಿಣ ಪರಿಶ್ರಮ ಇದ್ದರೆ ಮಾತ್ರ ಕ್ರೀಡಾ ಕ್ಷೇತ್ರದಲ್ಲಿ ಯಶಸ್ಸು ಸಾಧಿಸಲು ಸಾಧ್ಯ. ಯುವ ಕ್ರೀಡಾ ಪ್ರತಿಭೆಗಳು ವೈಯಕ್ತಿಕ ಸಾಧನೆಯ ಜತೆಗೆ ದೇಶಕ್ಕೆ ಕೀರ್ತಿ ತರುವ ಉನ್ನತ ಕನಸು ಕಾಣಬೇಕು ಎಂದು ಅಂತಾರಾಷ್ಟ್ರೀಯ ದೇಹದಾಢ್ಯ ಪಟು, ಮಿ. ವರ್ಲ್ಡ್ ರೇಮಂಡ್ ಡಿಸೋಜಾ ಹೇಳಿದರು.

ಮಂಗಳೂರು ಪ್ರೆಸ್ ಕ್ಲಬ್ ವತಿಯಿಂದ ಮಂಗಳೂರು ಪ್ರೆಸ್‌ಕ್ಲಬ್ ಗೌರವ ಅತಿಥಿ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು ಇತ್ತೀಚಿನ ವರ್ಷಗಳಲ್ಲಿ ಕ್ರೀಡಾ ಪ್ರತಿಭೆಗಳಿಗೆ ಬ್ಯಾಂಕ್ ಹಾಗೂ ಸರಕಾರಿ ಸ್ವಾಮ್ಯದ ಸಂಸ್ಥೆಗಳಲ್ಲಿ ಉದ್ಯೋಗಾವಕಾಶ ಇಲ್ಲದಾಗಿದೆ. ಉದ್ಯೋಗದಲ್ಲಿ ಕ್ರೀಡಾ ಕೋಟಾ ಕಡಿಮೆಯಾದ ಕಾರಣ ವಿದ್ಯಾರ್ಥಿಗಳು ಕ್ರೀಡೆಯಿಂದ ವಿಮುಖರಾಗುವ ವಾತಾವರಣ ನಿರ್ಮಾಣವಾಗಿದೆ. ಕ್ರೀಡಾಪಟುಗಳಿಗೆ ಉದ್ಯೋಗ ಭದ್ರತೆ ಕಲ್ಪಿಸಲು ಸರಕಾರ ಆದ್ಯತೆ ನೀಡಬೇಕು ಎಂದರು.

ಹದಿ ಹರೆಯದಲ್ಲೇ ಬಾಡಿ ಬಿಲ್ಡಿಂಗ್ ಕ್ಷೇತ್ರದಲ್ಲಿ ಸಾಧನೆ ಮಾಡಬೇಕೆಂಬ ಛಲ ಮೂಡಿತು. ಹಾಗಾಗಿ ಬಡತನ ಇದ್ದರೂ ಅದನ್ನು ಸವಾಲಾಗಿ ಸ್ವೀಕರಿಸಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ದೇಶಕ್ಕೆ ಕೀರ್ತಿ ತರುವ ಸಾಧನೆ ಮಾಡಿದೆ. ಬಂಟ್ವಾಳದ ಮೊಡಂಕಾಪುವಿನಲ್ಲಿ ಪ್ರೌಢ ಶಿಕ್ಷಣ ಪಡೆದ ಬಳಿಕ ಬಡತನದ ಕಾರಣ ವಿದ್ಯಾಭ್ಯಾಸ ಮುಂದುವರಿಸಲು ಆಗಲಿಲ್ಲ. ಓದಿನಲ್ಲಿ ಹೆಚ್ಚಿನ ಉದ್ಯೋಗ ಆಸಕ್ತಿಯೂ ಇರಲಿಲ್ಲ. ಉದ್ಯೋಗ ಅರಸಿ ಮಂಗಳೂರಿಗೆ ಬಂದವನು ಅಲೋಶಿಯಸ್ ಹಾಸ್ಟೆಲ್‌ನಲ್ಲಿ ಕೆಲಸಕ್ಕೆ ಸೇರಿದೆ. ಸುಮಾರು ನೂರು ವಿದ್ಯಾರ್ಥಿಗಳಿಗೆ 3 ಸಿಬ್ಬಂದಿ ಅಡುಗೆ ಮಾಡಬೇಕಿತು ಎಂದರು.

ಹಿರಿಯ ಪತ್ರಕರ್ತ ಕೇಶವ ಕುಂದರ್ ಕಾರ್ಯಕ್ರಮ ಉದ್ಘಾಟಿಸಿದರು. ಪ್ರೆಸ್‌ಕ್ಲಬ್ ಅಧ್ಯಕ್ಷ ಪಿ.ಬಿ.ಹರೀಶ್ ರೈ ಅಧ್ಯಕ್ಷತೆ ವಹಿಸಿದ್ದರು.

ದ.ಕ.ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಶ್ರೀನಿವಾಸ ನಾಯಕ್ ಇಂದಾಜೆ, ರಾಜ್ಯ ಕಾರ್ಯಕಾರಿ ಸಮಿತಿ ಸದಸ್ಯ ಜಗನ್ನಾಥ ಶೆಟ್ಟಿ ಬಾಳ , ನಿವೃತ್ತ ಅಪರ ಜಿಲ್ಲಾಧಿಕಾರಿ ಪ್ರಭಾಕರ ಶರ್ಮ ಉಪಸ್ಥಿತರಿದ್ದರು. ಪ್ರೆಸ್‌ಕ್ಲಬ್ ಪ್ರಧಾನ ಕಾರ್ಯದರ್ಶಿ ಇಬ್ರಾಹಿಂ ಅಡ್ಕಸ್ಥಳ ವಂದಿಸಿದರು. ಆರ್.ಸಿ.ಭಟ್ ನಿರೂಪಿಸಿದರು.

ಪ್ರೆಸ್ ಕ್ಲಬ್ ವತಿಯಿಂದ ಮಂಗಳೂರು ಪ್ರೆಸ್‌ಕ್ಲಬ್ ಗೌರವ ಅತಿಥಿ ಸನ್ಮಾನವನ್ನು ವರ್ಲ್ಡ್ ರೇಮಂಡ್ ಡಿಸೋಜಾ ಸ್ವೀಕರಿಸಿದರು.

ಅಕ್ಷಯ: ಶ್ರೀಕೃಷ್ಣನಿಗೆ ಸುವರ್ಣ ತುಲಾಭಾರ

ಉಡುಪಿ: ಅಕ್ಷಯ ತೃತೀಯ ಪರ್ವ ದಿನವಾದ ಬುಧವಾರ ಶ್ರೀಕೃಷ್ಣನಿಗೆ ಪರ್ಯಾಯ ಪುತ್ತಿಗೆ ಶ್ರೀ ಸುಗುಣೇಂದ್ರತೀರ್ಥರು ಹಾಗೂ ಕಿರಿಯ ಯತಿ ಶ್ರೀ ಸುಶೀಂದ್ರತೀರ್ಥರ ನೇತೃತ್ವದಲ್ಲಿ ಸುವರ್ಣ ತುಲಾಭಾರ ನಡೆಸಲಾಯಿತು. ಇದೇ ಸಂದರ್ಭದಲ್ಲಿ ಶ್ರೀಕೃಷ್ಣನ ಮೂಲ ವಿಗ್ರಹಕ್ಕೆ ಪರ್ಯಾಯ ಶ್ರೀಪಾದರ ಉಪಸ್ಥಿತಿಯಲ್ಲಿ ಪುತ್ತಿಗೆ ಕಿರಿಯ ಶ್ರೀಪಾದರು ಸುವರ್ಣ ಕನಕಾಭಿಷೇಕ ನೆರವೇರಿಸಿದರು.

ಸಂಜೆ ಚಂದ್ರಶಾಲೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಆಶೀರ್ವಚನ ನೀಡಿದ ಪರ್ಯಾಯ ಪುತ್ತಿಗೆಶ್ರೀ ಸುಗುಣೇಂದ್ರತೀರ್ಥರು, ಅಕ್ಷಯ ತೃತೀಯಾ ದಿನದಂದು ಅಗ್ನಿಪರೀಕ್ಷೆ ಮೂಲಕ ಸೀತಾಮಾತೆ ಶ್ರೀರಾಮನನ್ನು ಸೇರಿದ ದಿನ. ಸೀತೆ ಭೂಜಾತೆ, ಸಾಕ್ಷಾತ್ ಲಕ್ಷ್ಮಿ. ಚಿನ್ನ ಭೂಮಿಯಲ್ಲಿ ಲಭಿಸುವ ಅಮೂಲ್ಯ ಲೋಹ. ಅದೂ ಕೂಡಾ ಲಕ್ಷ್ಮೀಸ್ವರೂಪ. ಚಿನ್ನವನ್ನು ದೇವರಿಗೆ ಸಮರ್ಪಿಸಿ ಧರಿಸುವುದರಿಂದ ಶ್ರೇಯಸ್ಸು ಎಂದರು.

ಸೀತೆಯನ್ನು ರಾಮನಿಗೆ ಒಪ್ಪಿಸಿದಾತ ಹನುಮ. ಹಾಗಾಗಿ ಹನುಮನ ಮೂಲಕ ಚಿನ್ನ ಸಮರ್ಪಿಸಿದರೆ ರಾಮಾನುಗ್ರಹ ಸಾಧ್ಯ. ಪರಶುರಾಮ ಜಯಂತಿಯ ಈ ದಿನ ಸುವರ್ಣ ಸಮರ್ಪಣೆಗೆ ವಿಶೇಷತೆ ಇದೆ ಎಂದರು.

ಭಂಡಾರಕೇರಿ ಮಠದ ಶ್ರೀ ವಿದ್ಯೇಂದ್ರತೀರ್ಥರು ಸಾನ್ನಿಧ್ಯ ವಹಿಸಿದ್ದರು. ಪರ್ಯಾಯ ಪುತ್ತಿಗೆ ಮಠದ ದಿವಾನ ನಾಗರಜ ಆಚಾರ್ಯ, ಕಾರ್ಯದರ್ಶಿ ಪ್ರಸನ್ನಾಚಾರ್ಯ ಇದ್ದರು.

ಶಾಂತಿ ಕದಡುವ ದುಷ್ಟ ಶಕ್ತಿಗಳು

ಮಂಗಳೂರು: ಕುಡುಪು ಬಳಿ ಅಶ್ರಫ್ ಎಂಬ ಯುವಕನ ಹತ್ಯೆ ಸಮಾಜದ ಶಾಂತಿ ಕದಡುವ ದುಷ್ಟ ಶಕ್ತಿಗಳ ಕೃತ್ಯ ಎಂದು ಉಸ್ತುವಾರಿ ಸಚಿವ ದಿನೇಶ್ ಗುಂಡೂರಾವ್ ಹೇಳಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆ ಹಿಂದೆ ಸಾಮರಸ್ಯ ಮತ್ತು ಭಾವೈಕ್ಯತೆಯ ನೆಲೆಯಾಗಿತ್ತು. ಆದರೆ ಕೆಲ ಸಮಾಜಘಾತುಕ ಶಕ್ತಿಗಳು ಹಲವು ವರ್ಷ ಗಳಿಂದ ಜಿಲ್ಲೆಯ ಕೋಮು ಸೌಹಾರ್ದಕ್ಕೆ ಕೊಳ್ಳಿ ಇಡುವ ಯತ್ನ ಮಾಡುತ್ತಿವೆ. ಮೊನ್ನೆಯ ಕುಡುಪು ಘಟನೆ ಇದರ ಒಂದು ಭಾಗ. ಯುವಕನ ಕೊಲೆ ಸಂಬಂಧ ಈಗಾಗಲೇ ಮಂಗಳೂರು ಪೊಲೀಸರು ಶೀಘ್ರ ಕ್ರಮ ತೆಗೆದುಕೊಂಡಿದ್ದಾರೆ. ಕೃತ್ಯದಲ್ಲಿ ಭಾಗಿಯಾದ 15 ಆರೋಪಿಗಳನ್ನು ಬಂಧಿಸಿದ್ದಾರೆ. ಇನ್ನೂ ಕೆಲವು ದುಷ್ಕರ್ಮಿಗಳು ಈ ಕೃತ್ಯದಲ್ಲಿ ಭಾಗಿ ಯಾಗಿದ್ದು ಅವರ ಹೆಡೆಮುರಿ ಕಟ್ಟುವುದು ಖಂಡಿತ. ಕೊಲೆ ಪ್ರಕರಣವನ್ನು ತ್ವರಿತವಾಗಿ ಬೇಧಿಸಿ ಆರೋಪಗಳನ್ನು ಬಂಧಿಸಿದ ಮಂಗಳೂರು ಪೊಲೀಸರಿಗೆ ನಾನು ಅಭಿನಂದನೆ ಸಲ್ಲಿಸುತ್ತೇನೆ. ಅದೇ ರೀತಿ ಜಿಲ್ಲೆಯ ಸೌಹಾರ್ದತೆ ಕಾಪಾಡು ವುದು ಕೂಡ ಪೊಲೀಸರ ಜವಾಬ್ದಾರಿ. ಈ ಘಟನೆಯ ಬಳಿಕ ಕೆಲ ಸಮಾಜಘಾತಕ ಶಕ್ತಿಗಳು ದ್ವೇಷ ಹರಡುವ ಪ್ರಯತ್ನ ನಡೆಸುವ ಸಾಧ್ಯತೆಯಿದೆ. ಪೊಲೀಸರು ಅದಕ್ಕೆ ಅವಕಾಶ ಕೊಡಬಾರದು. ಕಾನೂನು ಕೈಗೆತ್ತಿಕೊಳ್ಳುವ, ಸಮಾಜದ ಸ್ವಾಸ್ಥ್ಯ ಕೆಡಿಸುವ, ಸಾಮರಸ್ಯಕ್ಕೆ ಕೊಳ್ಳಿ ಇಡುವ ಯಾವುದೇ ದುಷ್ಟ ಪ್ರಯತ್ನಕ್ಕೆ ನಮ್ಮ ಸರ್ಕಾರ ಅವಕಾಶ ಮಾಡಿಕೊಡುವುದಿಲ್ಲ. ಯಾರೂ ಸಮಾಜದ ಶಾಂತಿ ಕದಡಬಾರದು ಎಂದು ಮನವಿ ಮಾಡಿದ್ದಾರೆ.

ಭಾರತಕ್ಕೆ ವಿಶ್ವಗುರು ಆಗುವ ಸಾಮರ್ಥ್ಯವಿದೆ

ಉಡುಪಿ: ಭಾರತಕ್ಕೆ ವಿಶ್ವಗುರು ಆಗುವ ಎಲ್ಲಾ ಕ್ಷಮತೆ, ಸಾಮರ್ಥ್ಯಗಳಿವೆ. ವಿದ್ಯಾದಾನ ಭಾರತದ ಮಣ್ಣಿನ ಗುಣ. ಸಾವಿರಾರು ವರ್ಷಗಳಿಂದ ಜಗದ್ವಿಖ್ಯಾತ ವಿದ್ಯಾಕೇಂದ್ರಗಳು ಭಾರತದಲ್ಲಿ ಮೆರೆದಿದ್ದು, ಹಲವು ಮುಖದಲ್ಲಿ ಶಿಕ್ಷಣ ನೀಡುವ ವ್ಯವಸ್ಥೆ ಈ ದೇಶದಲ್ಲಿತ್ತು. ಪರಕೀಯರು ಇದ್ದನ್ನು ಮಣ್ಣುಗೂಡಿಸಿದರು. ಆದರೆ ರಾಷ್ಟ್ರೋತ್ಥಾನ ವಿದ್ಯಾಕೇಂದ್ರದಲ್ಲಿ ಸಂಸ್ಕಾರಯುತ ಶಿಕ್ಷಣ ನೀಡಲಾಗುತ್ತಿದೆ ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘ ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ಅಭಿಪ್ರಾಯಪಟ್ಟರು.

ಬ್ರಹ್ಮಾವರ ತಾಲೂಕಿನ ಚೇರ್ಕಾಡಿ ಗ್ರಾಮದ ಕೇಶವನಗರದಲ್ಲಿ ನಿರ್ಮಾಣಗೊಂಡಿರುವ ವಿದ್ಯಾಕೇಂದ್ರದ ಲೋಕಾರ್ಪಣೆ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿದರು.

ವಿದ್ವಾಂಸ ಧರ್ಮಪಾಲ್ ಎಂಬವರ ಅಧ್ಯಯನದ ಪ್ರಕಾರ 18 ನೇ ಶತಮಾನಕ್ಕೂ ಮುನ್ನ ಭಾರತದ ಬಂಗಾಳ ಪ್ರೆಸಿಡೆನ್ಸಿಯಲ್ಲಿ 5 ಲಕ್ಷ, ಮದ್ರಾಸ್ ಪ್ರೆಸಿಡೆನ್ಸಿಯಲ್ಲಿ 3 ಲಕ್ಷ ಶಾಲೆಗಳಿದ್ದವು. ಇವೆಲ್ಲವೂ ಭಾಷೆ, ವ್ಯಾಕರಣ, ಸಾಹಿತ್ಯ, ಜೀವನ ಪದ್ಧತಿಯ ಬಗ್ಗೆ ಹೀಗೆ ಹಲವು ಮುಖದಲ್ಲಿ ಶಿಕ್ಷಣ ಕೊಡುತ್ತಿತ್ತು ಎಂದರು.

ಗುರುಕುಲದಲ್ಲಿ ಕೇವಲ ಮಂತ್ರಗಳನ್ನು ಮಾತ್ರವಲ್ಲದೇ ಜೀವನ ಮೌಲ್ಯಗಳನ್ನು ಭೋದಿಸಲಾಗುತ್ತಿತ್ತು. ಶಿಕ್ಷಣದ ಮೇರು ಪರ್ವತ ತಲುಪಿತ್ತು. ಇದನ್ನು ಬ್ರಿಟಿಷರು ಧ್ವಂಸ ಮಾಡಿದರು. ಸ್ವಾತಂತ್ರ್ಯ ನಂತರ ಸಮಗ್ರ ಶಿಕ್ಷಣ ನೀತಿಯನ್ನು ಅನುಷ್ಠಾನ ಮಾಡುವಲ್ಲಿ ಆಡಳಿತ ವ್ಯವಸ್ಥೆ ಸಂಪೂರ್ಣ ವಿಫಲವಾಗಿದೆ. ಸರಕಾರಿ ಶಿಕ್ಷಣ ಜನಹಿತ ಮಾಡಲಿಲ್ಲ. ಸಂಸ್ಕೃತಿ, ಇತಿಹಾಸವನ್ನು ಸರಿಯಾಗಿ ಅರ್ಥೈಸಿಲ್ಲ. ಭಾರತೀಯ ಜ್ಞಾನಪರಂಪರೆಯನ್ನು ಯುವಪೀಳಿಗೆಗೆ ತಿಳಿಸಿಲ್ಲ. ಇದನ್ನು ತಿಳಿಸುವ ನೂತನ ರಾಷ್ಟ್ರೀಯ ಶಿಕ್ಷಣ ನೀತಿ ಬಂದಿದೆ ಎಂದರು.

ಚೇರ್ಕಾಡಿ ಗ್ರಾಮದ ಕೇಶವನಗರದಲ್ಲಿ ವಿದ್ಯಾಕೇಂದ್ರದ ಲೋಕಾರ್ಪಣೆ ಸಮಾರಂಭವನ್ನು ದತ್ತಾತ್ರೇಯ ಹೊಸಬಾಳೆ ಉದ್ಘಾಟಿಸಿದರು.

ದೇಶದಲ್ಲಿ ಉನ್ನತ ಶಿಕ್ಷಣ ಪಡೆದವರು ಕೆಲವರು ಉಗ್ರಗಾಮಿಗಳಾಗಿದ್ದಾರೆ. ಕೆಲವರು ಭ್ರಷ್ಟರಾಗಿದ್ದಾರೆ. ಮನುಷ್ಯನಿಗೆ ಲಾಲಾಸೆ, ದುರಾಸೆಯನ್ನು ನೀಡುವ ಒಂದು ವರ್ಗವಿದೆ. ಆದರೆ ಆತನು ತನ್ನೊಳಗಿನ ದೇಶಪ್ರೇಮದ ದೀಪವನ್ನು ಆರಿಸಲು ಬಿಡಬಾರದು. ದೇಶಪ್ರೇಮ ಗಟ್ಟಿಯಾಗಿ ಬೇರೂರಬೇಕು ಎಂದು ನುಡಿದರು.

ಇಸ್ರೋದ ನಿಕಟಪೂರ್ವ ಅಧ್ಯಕ್ಷ ಡಾ.ಎಸ್.ಸೋಮನಾಥ್ ಮಾತನಾಡಿ, ದೇಶ ಯಾವ ರೀತಿಯ ಸವಾಲುಗಳನ್ನು ಮುಂದೆ ಎದುರಿಸಲಿದೆ ಎಂಬುದರ ಬಗ್ಗೆ ಚಿಂತನೆ ನಡೆಸಬೇಕಾಗಿದೆ. ಇಂದಿನ ಮಕ್ಕಳೇ ಮುಂದೆ ಈ ದೇಶವನ್ನು ಮುನ್ನಡೆಸಲಿದ್ದು, ಅವರಿಗೆ ಸಂಸ್ಕಾರಯುತ ಶಿಕ್ಷಣ ನೀಡಬೇಕು ಎಂದರು.

ಪೇಜಾವರ ಶ್ರೀ ವಿಶ್ವಪ್ರಸನ್ನತೀರ್ಥರು ಆಶೀರ್ವಚನ ನೀಡಿ, ನಮ್ಮ ಶತ್ರು ದೇಶಕ್ಕೆ ಸ್ವಾಗತಕೋರುವ ಜನಪ್ರತಿನಿಧಿಗಳು ನಮ್ಮ ನಡುವೆ ಇದ್ದಾರೆ. ಇದಕ್ಕೆ ಸಂಸ್ಕಾರಯುತ ಶಿಕ್ಷಣದ ಕೊರತೆಯೇ ಕಾರಣ. ಇಂದು ಅನೇಕ ಶಿಕ್ಷಣ ಸಂಸ್ಥೆಗಳು ಪೂತನಿಯೋಪಾದಿಯಲ್ಲಿ ಮಕ್ಕಳನ್ನು ಆಕರ್ಷಿಸಿವೆ. ಅದಕ್ಕೆ ಮಾರುಹೋಗಿ ನಮ್ಮ ಮಕ್ಕಳನ್ನು ಅಂತಹ ಶಾಲೆಗಳಿಗೆ ಸೇರಿಸುತ್ತೇವೆ. ಅಲ್ಲಿ ಸಂಸ್ಕೃತಿಯ ಬದಲು ವಿಕೃತಿಯನ್ನು ತುಂಬಲಾಗುತ್ತಿದೆ. ಇದರಿಂದ ಈ ದೇಶದ ಅಂತಸತ್ವ ಕುಗ್ಗಿಹೋಗುತ್ತಿದೆ. ಅದನ್ನು ಸಮರ್ಥವಾಗಿ ಎದುರಿಸುವ ಪಡೆ ಸಿದ್ದವಾಗಬೇಕು ಎಂದರು.

ವೇದಿಕೆಯಲ್ಲಿ ಸ್ಥಾನೀಯ ಸಮಿತಿ ಅಧ್ಯಕ್ಷ ಸಾಧು ಸಾಲ್ಯಾನ್, ಕಾರ್ಯದರ್ಶಿ ಋಷಿರಾಜ್, ರಾಷ್ಟ್ರೀಯ ಪರಿಷತ್ ಅಧ್ಯಕ್ಷ ಎಂ.ಪಿ ಕುಮಾರ್ ಉಪಸ್ಥಿತರಿದ್ದರು.

ಸಮಗ್ರ ಶಿಕ್ಷಣ ಜಾರಿಗೆ ವಿಫಲ

ಗುರುಕುಲದಲ್ಲಿ ಕೇವಲ ಮಂತ್ರಗಳನ್ನು ಮಾತ್ರವಲ್ಲದೇ ಜೀವನ ಮೌಲ್ಯಗಳನ್ನು ಭೋದಿಸಲಾಗುತ್ತಿತ್ತು. ಶಿಕ್ಷಣದ ಮೇರು ಪರ್ವತ ತಲುಪಿತ್ತು. ಇದನ್ನು ಬ್ರಿಟಿಷರು ಧ್ವಂಸ ಮಾಡಿದರು. ಸ್ವಾತಂತ್ರ್ಯ ನಂತರ ಸಮಗ್ರ ಶಿಕ್ಷಣ ನೀತಿಯನ್ನು ಅನುಷ್ಠಾನ ಮಾಡುವಲ್ಲಿ ಆಡಳಿತ ವ್ಯವಸ್ಥೆ ವಿಫಲವಾಗಿದೆ. ಸರಕಾರಿ ಶಿಕ್ಷಣ ಜನಹಿತ ಮಾಡಲಿಲ್ಲ. ಸಂಸ್ಕೃತಿ, ಇತಿಹಾಸವನ್ನು ಸರಿಯಾಗಿ ಅರ್ಥೈಸಿಲ್ಲ. ಭಾರತೀಯ ಜ್ಞಾನ ಪರಂಪರೆ ಯುವಪೀಳಿಗೆಗೆ ತಿಳಿಸಿಲ್ಲ. ಇದನ್ನು ತಿಳಿಸುವ ನೂತನ ರಾಷ್ಟ್ರೀಯ ಶಿಕ್ಷಣ ನೀತಿ ಬಂದಿದೆ ಎಂದು ದತ್ತಾತ್ರೇಯ ಹೊಸಬಾಳೆ ಹೇಳಿದರು.

ಈತನಿನ್ನೂ 14ರ ಹುಡುಗ. ಹೆಸರು ವೈಭವ್ ಸೂರ್ಯವಂಶಿ. ಹುಮ್ಮಸ್ಸಿಗೇನೂ ಕಮ್ಮಿಯಿಲ್ಲ, ಪ್ರತಿಭೆಗೇನೂ ಕೊರತೆಯಿಲ್ಲ. ಮೊನ್ನಿನ ಐಪಿಎಲ್ ಪಂದ್ಯದಲ್ಲಿ ಈ ಅಭಿಮನ್ಯುವನ್ನು ಬೇಟೆಯಾಡಲು ಹತ್ತಾರು ಫೀಲ್ಡರುಗಳು ಚಕ್ರವ್ಯೂಹವನ್ನೇ ಕಟ್ಟಿದ್ದರು. ಆದರೆ ಈತ ಎಲ್ಲ ತಡೆಗೋಡೆಗಳನ್ನೂ ಮೀರಿ ಅತಿವೇಗದ ಸೆಂಚುರಿ ಬಾರಿಸಿಯೇ ಬಿಟ್ಟ. ಈ 'ಸೂರ್ಯವಂಶಿ'ಯ ಬ್ಯಾಟಿಂಗ್ 'ವೈಭವ'ದ ಸುತ್ತಮುತ್ತಲ ಕಿರುನೋಟ ಇಲ್ಲಿದೆ.

ಯಗಟಿ ರಘು ನಾಡಿಗ್

ಸೂರ್ಯ ಸ್ಫೋಟದ ಸುತ್ತಮುತ್ತ

ಹುಡುಗಾಟವಲ್ಲ, ಹುಡುಗನ ಆಟ!

ಐಪಿಎಲ್ ಹಬ್ಬದಲ್ಲಿ ಕ್ರೀಡಾಭಿಮಾನಿಗಳಿಗೆ ಸವಿಯಲು ರಸಕವಳವೇ ಸಿಕ್ಕಿಬಿಟ್ಟಿತು. ಅದಕ್ಕೆ ಬಾಳೆಲೆ ಹಾಸಿದ್ದು ಗುಜರಾತ್ ಟೈಟನ್ಸ್ ತಂಡ. ಇದರ ವಿರುದ್ಧ ಏಪ್ರಿಲ್ 29ರಂದು ನಡೆದ ಪಂದ್ಯದಲ್ಲಿ ರಾಜಸ್ಥಾನ್ ರಾಯಲ್ಸ್ ತಂಡ ಗೆದ್ದು ಬೀಗಿತು. ಅದಕ್ಕೆ ನೆರವಾಗಿದ್ದು ವೈಭವ್ ಸೂರ್ಯವಂಶಿ ಎಂಬ 14ರ ಹುಡುಗನ ಸ್ಫೋಟಕ ಬ್ಯಾಟಿಂಗ್. 35 ಎಸೆತಗಳಲ್ಲಿ 11 ಸಿಕ್ಸರ್, 7 ಬೌಂಡರಿಗಳನ್ನು ಚಚ್ಚಿ 101 ರನ್ನುಗಳನ್ನು ಸಿಡಿಸಿದ ಈ ಪೋರನ ಆಟದ ಪರಿಗೆ ಜಗವೇ ಮೆಚ್ಚಿ 'ಉಫೇ ಉಫೇ' ಎಂದಿದೆ. 'ಕ್ರೀಡಾಭಕ್ತಾದಿ'ಗಳಿಂದ 'ಕ್ರಿಕೆಟ್ ದೇವರು' ಎಂದೇ ಕರೆಸಿಕೊಳ್ಳುವ ಸಚಿನ್ ತೆಂಡೂಲ್ಕರ್ ಅವರೇ ಈತನ ಬ್ಯಾಟಿಂಗ್ 'ವೈಭವ'ವನ್ನು ಮುಕ್ತಕಂಠದಿಂದ ಶ್ಲಾಘಿಸಿದ್ದಾರೆ. ಪರಿಣಾಮವಾಗಿ, ದೇಶಾದ್ಯಂತ ರಾತ್ರೋರಾತ್ರಿ ಹೀರೋ ಆಗಿಬಿಟ್ಟಿದ್ದಾರೆ ವೈಭವ್ ಸೂರ್ಯವಂಶಿ. 2013ರಲ್ಲಿ ಪುಣೆ ವಾರಿಯರ್ಸ್ ತಂಡದ ವಿರುದ್ಧ ಸ್ಫೋಟಕ ಬ್ಯಾಟ್ಸ್‌ಮನ್ ಕ್ರಿಸ್ ಗೇಲ್ ಅವರು ಕೇವಲ 30 ಎಸೆತಗಳಲ್ಲಿ ಸೆಂಚುರಿ ಚಚ್ಚಿದ್ದರು. ವೈಭವ್ ತಮ್ಮ ಈ ಸಾಧನೆಯೊಂದಿಗೆ ಕ್ರಿಸ್ ಗೇಲ್ ನಂತರದ ಸ್ಥಾನದಲ್ಲಿ ನಿಂತಿದ್ದಾರೆ ಎಂಬುದು ಹೆಮ್ಮೆಯ ಸಂಗತಿ.

ಬಂತು ಬಹುಮಾನ

35 ಚೆಂಡುಗಳಲ್ಲಿ 100 ರನ್ನುಗಳ ಸುರಿಮಳೆ ಸುರಿಸಿದ, ಮೂಲತಃ ಬಿಹಾರದವರಾದ ವೈಭವ್ ಸೂರ್ಯವಂಶಿಗೆ ಅದಕ್ಕೆ ಪ್ರತಿಯಾಗಿ ಬಹುಮಾನದ ಸುರಿಮಳೆಯೇ ಆಗಿದೆ. ಈ ಸಾಧನೆಗೆ ಅಭಿನಂದಿಸಿರುವ ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್, ವೈಭವ್‌ರಿಗೆ ಬರೋಬ್ಬರಿ 10 ಲಕ್ಷ ರುಪಾಯಿ ನಗದು ಇನಾಮು ಘೋಷಿಸಿ, ''ವೈಭವ್ ಭವಿಷ್ಯದಲ್ಲಿ ಭಾರತೀಯ ತಂಡಕ್ಕಾಗಿ ಹೊಸ ದಾಖಲೆಗಳನ್ನು ಸೃಷ್ಟಿಸಿ ದೇಶಕ್ಕೆ ಕೀರ್ತಿ ತರಲಿ ಎಂದು ಹಾರೈಸುತ್ತೇನೆ'' ಎಂದು 'ಎಕ್ಸ್' (ಟ್ವಿಟರ್) ಮಾಧ್ಯಮದಲ್ಲಿ ಬರೆದುಕೊಂಡಿದ್ದಾರೆ.

ಹೀಗೊಂದು ಜೋಕು

ವೈಭವ್ ಶರವೇಗದ 100 ರನ್ನು ಚಚ್ಚುತ್ತಿದ್ದಂತೆ ವಾಟ್ಸ್ಯಾಪ್‌ನಲ್ಲಿ ಹರಿದಾಡಿದ ಹನಿಯಿದು: ''ನಾವು 14 ವರ್ಷದವರಾಗಿದ್ದಾಗ ಪರೀಕ್ಷೆಯಲ್ಲಿ 100ಕ್ಕೆ 35 ಅಂಕ ಸ್ಕೋರ್ ಮಾಡೋಕ್ಕೆ ಇನ್ನಿಲ್ಲದ ಹರಸಾಹಸ ಪಡ್ತಾ ಇದ್ವಿ, ಏದುಸಿರು ಬಿಡ್ತಾ ಇದ್ವಿ; ಆದರೆ ಈ ವೈಭವ್ ಸೂರ್ಯವಂಶಿ 35 ಚೆಂಡಲ್ಲೇ 100 ರನ್ನು ಸ್ಕೋರ್ ಮಾಡಿಬಿಟ್ನಲ್ಲಾ ಗುರೂ....

''ವೈಭವ್ ಒಬ್ಬ ಯುವ ಪ್ರತಿಭೆ. ಇಷ್ಟು ಚಿಕ್ಕ ವಯಸ್ಸಿನಲ್ಲೇ ಎಷ್ಟೊಂದು ಸುಂದರ ಆರಂಭ ಮಾಡಿರುವ ಅವರ ಭವಿಷ್ಯ ಉಜ್ವಲವಾಗಿದೆ. ಪಕ್ಷದ ಪರವಾಗಿ ಅವರಿಗೆ ಶುಭ ಹಾರೈಸುತ್ತೇನೆ''.
- ಚಿರಾಗ್ ಪಾಸ್ವಾನ್, ಕೇಂದ್ರ ಸಚಿವ

ಯೋಗ್ದಾಗೆ ಐತೆ ಹೆತ್ತವರ ತ್ಯಾಗ

'ಬೆವರು ಸುರಿಸಿ ಕೆಲಸ ಮಾಡುವವರನ್ನು ದೇವರು ಸೋಲಲು ಬಿಡುವುದಿಲ್ಲ' ಎಂಬುದು ಈ ತರುಣ ಆಟಗಾರನ ಗಟ್ಟಿನಂಬಿಕೆ. ವೈಭವ್‌ಗೆ ಹೀಗೊಂದು 'ಯೋಗ' ಮತ್ತು 'ಯೋಗ್ಯತೆ' ದಕ್ಕಿದ್ದರ ಹಿಂದೆ ಅವರ ಹೆತ್ತವರ 'ಯೋಗದಾನ'ವೂ ಇದೆ. ಪ್ರತಿರಾತ್ರಿ 11 ಗಂಟೆಗೆ ಮಲಗುತ್ತಿದ್ದ ವೈಭವ್ ತಾಯಿ ಆರತಿಯವರಿಗೆ ಮಗನ ಭವಿಷ್ಯದ್ದೇ ಕನಸು ಮತ್ತು ಕನವರಿಕೆ ಇತ್ತೇನೋ? ಹೀಗಾಗಿ ತಡರಾತ್ರಿ ಮಲಗಿದರೂ ಮುಂಜಾನೆ 3ಕ್ಕೆಲ್ಲಾ ಎದ್ದು, ವೈಭವ್‌ಗೆಂದು ತಿಂಡಿ-ತಿನಿಸು ತಯಾರಿಗೆ ಇಳಿದುಬಿಡುತ್ತಿತ್ತಂತೆ ಆ ಮಾತೃಹೃದಯ. ಮತ್ತೊಂದೆಡೆ, ಮಗನ ಭವಿಷ್ಯಕ್ಕೆ ಭದ್ರ ಅಡಿಪಾಯ ಹಾಕಲು ತಾವು ಮಾಡುತ್ತಿದ್ದ ಉದ್ಯೋಗವನ್ನೇ ಕೈಬಿಟ್ಟು ಮಗನಿಗೆ ಒತ್ತಾಸೆಯಾಗಿ ನಿಂತವರು ತಂದೆ ಸಂಜೀವ್ ಸೂರ್ಯವಂಶಿ. ಮಗನ ಕನಸನ್ನು ಸಾಕಾರಗೊಳಿಸಲು ತಮ್ಮ ತೆಕ್ಕೆಯಲ್ಲಿದ್ದ ಕೃಷಿಭೂಮಿಯನ್ನೇ ಮಾರಿಬಿಟ್ಟ ಮಹಾತ್ಯಾಗಿ ಅವರು. ಹೀಗಾಗಿ, ಮೊನ್ನೆ ಬಾರಿಸಿದ ಶತಕದ ಶ್ರೇಯವನ್ನು ಹೆತ್ತವರಿಗೇ ಸಲ್ಲಿಸಿಬಿಟ್ಟರು ವೈಭವ್!

ಐಪಿಎಲ್ ಚಕ್ರವ್ಯೂಹದಲ್ಲಿ ವೈಭವ್ ಎಂಬ ಅಭಿಮನ್ಯು

ಅಂಬೆಗಾಲಿಗನ ಆಣಿಮುತ್ತುಗಳು...

ನಾನು ಈಗಷ್ಟೇ ಕ್ರಿಕೆಟ್ ಆಡಲು ಶುರುಹಚ್ಚಿಕೊಂಡಿರುವಾತ, ಈಗಿನದಕ್ಕಿಂತ ಮತ್ತಷ್ಟು ಉತ್ತಮವಾಗಿ ಆಡಲು ಇಚ್ಛಿಸುತ್ತೇನೆ.

ಟ್ರಯಲ್ಸ್ ಸಂದರ್ಭದಲ್ಲಿ ನನ್ನ ಬ್ಯಾಟಿಂಗ್ ವೈಖರಿ ಚೆನ್ನಾಗಿದ್ದುದರಿಂದ ತರಬೇತುದಾರ ರಾಬಿನ್ ಸಿಂಗ್ ಅವರಿಗೆ ಮೆಚ್ಚುಗೆಯಾಗಿ ನನ್ನಲ್ಲಿ ಮತ್ತಷ್ಟು ಹುರುಪು ಮತ್ತು ಆತ್ಮವಿಶ್ವಾಸವನ್ನು ತುಂಬಿದರು. ಕೋಚಿಂಗ್ ಸಿಬ್ಬಂದಿ ಕೂಡ ಮಾನಸಿಕವಾಗಿ ನನ್ನಲ್ಲಿ ಬಲ ತುಂಬಿದರು.

ರಾಜಸ್ಥಾನ ರಾಯಲ್ಸ್ ತಂಡಕ್ಕೆ ನಾನು ಆಯ್ಕೆಯಾದಾಗ ಮೊಟ್ಟಮೊದಲಿಗೆ ಕರೆಬಂದಿದ್ದೇ ರಾಬಿನ್ ಸಿಂಗ್ ಅವರಿಂದ. ಮತ್ತೋರ್ವ ತರಬೇತುದಾರ ರಾಹುಲ್ ದ್ರಾವಿಡ್‌ರ ಜತೆ ಮಾತಾಡಲು ಅವರೇ ಅನುವುಮಾಡಿಕೊಟ್ಟದ್ದು. ರಾಹುಲ್ ಸರ್ ಮಾರ್ಗದರ್ಶನದಲ್ಲಿ ಕ್ರಿಕೆಟ್ ಕಲಿಯುವ ನನ್ನ ಕನಸು ನನಸಾಗಿದೆ.

ಟೀಮ್ ಇಂಡಿಯಾ ಪರ ಆಡುವುದು ನನ್ನ ಕನಸು; ಆ ಗುರಿಯನ್ನು ತಲುಪುವವರೆಗೂ ಆಡುತ್ತಲೇ ಇರುತ್ತೇನೆ,

ಐಪಿಎಲ್‌ನಲ್ಲಿ ಸೆಂಚುರಿ ಚಚ್ಚುವುದು ನನ್ನ ಪಾಲಿನ ಕನಸಾಗಿತ್ತು. ನನಗಿಲ್ಲಿ ಭಯವಿಲ್ಲ, ಜನ ಏನನ್ನುತ್ತಾರೆ ಅನ್ನೋದರ ಬಗ್ಗೆ ತಲೆ ಕೆಡಿಸಿಕೊಳ್ಳೋದಿಲ್ಲ. ಉತ್ತಮ ಪ್ರದರ್ಶನ ನೀಡೋದಷ್ಟೇ ನನ್ನ ಕೆಲಸ.

ಆಡಿದ 3ನೇ ಐಪಿಎಲ್ ಪಂದ್ಯದಲ್ಲಿ ಶತಕದ ಸಾಧನೆಯಾಗಿದ್ದು ನನಗೆ ಸಂತಸ ತಂದಿದೆ. ಇದಕ್ಕಾಗಿ ಕಳೆದ 4 ತಿಂಗಳಿಂದ ಬೆವರು ಸುರಿಸಿದ್ದೇನೆ. ನಾನು ಬೌಲರ್‌ಗಳನ್ನು ನೋಡೋದೇ ಇಲ್ಲ, ಪಂದ್ಯದ ಸ್ಥಿತಿ-ಗತಿಯ ಮೇಲಷ್ಟೇ ನನ್ನ ಗಮನ.

ಯಶಸ್ವಿ ಜೈಸ್ವಾಲ್ ಜತೆಗೆ ಬ್ಯಾಟಿಂಗ್ ಮಾಡುವಾಗ ನನ್ನ ಆತ್ಮವಿಶ್ವಾಸ ಮತ್ತಷ್ಟು ವರ್ಧಿಸಿತು. ಕ್ರೀಸ್‌ನಲ್ಲಿದ್ದಷ್ಟು ಹೊತ್ತೂ ಅವರು ನನಗೆ ಅಮೂಲ್ಯ ಸಲಹೆಗಳನ್ನು ನೀಡುತ್ತಿದ್ದುದುಂಟು.

ಕಿರೀಟದ ವೈಭವಪೂರ್ಣ ಗರಿಗಳು

- ಗುಜರಾತ್ ಟೈಟನ್ಸ್ ವಿರುದ್ಧ ಬಿರುಸಿನ ಶತಕ ಬಾರಿಸಿ ರಾಜಸ್ಥಾನ್ ರಾಯಲ್ಸ್ ತಂಡವನ್ನು ಗೆಲುವಿನತ್ತ ಕೊಂಡೊಯ್ದಿದ್ದಕ್ಕೆ 'ಪಂದ್ಯದ ಆಟಗಾರ' ಪ್ರಶಸ್ತಿ. ಐಪಿಎಲ್ ಇತಿಹಾಸದಲ್ಲಿ ಈ ಪುರಸ್ಕಾರವನ್ನು ಗೆದ್ದ ಅತಿಕಿರಿಯ ಆಟಗಾರ ಎಂಬ ಹೆಗ್ಗಳಿಕೆ.
- ಕೇವಲ ಸಿಕ್ಸರ್-ಬೌಂಡರಿಗಳಿಂದಲೇ 94 ರನ್ನುಗಳನ್ನು ಪೇರಿಸುವ ಮೂಲಕ ಟಿ-20 ಪಂದ್ಯವೊಂದರಲ್ಲಿ ಅತಿಹೆಚ್ಚು ಸಿಕ್ಸರ್-ಬೌಂಡರಿಗಳನ್ನು ಒಳಗೊಂಡ ಶತಕವೊಂದನ್ನು ದಾಖಲಿಸಿದ ಹೆಮ್ಮೆ.
- ಐಪಿಎಲ್‌ನ ಒಂದೇ ಇನ್ನಿಂಗ್ಸ್‌ನಲ್ಲಿ ಅತಿಹೆಚ್ಚು ಸಿಕ್ಸರ್‌ಗಳನ್ನು (11) ಚಚ್ಚಿದ ಭಾರತೀಯ ಆಟಗಾರರ ಪೈಕಿ ಮುರಳಿ ವಿಜಯ್ ಜತೆಗೆ ದಾಖಲೆ ಹಂಚಿಕೊಂಡಿರುವ ಹೆಗ್ಗಳಿಕೆ; 2010ರ ಐಪಿಎಲ್‌ನಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ಪರ ಆಡಿದ್ದ ಮುರಳಿ ಕೂಡ ರಾಜಸ್ಥಾನ್ ರಾಯಲ್ಸ್ ವಿರುದ್ಧದ ಪಂದ್ಯವೊಂದರಲ್ಲಿ 11 ಸಿಕ್ಸರ್ ಬಾರಿಸಿದ್ದಾರೆ.
- ಟಿ-20 ಪಂದ್ಯವೊಂದರಲ್ಲಿ ಅತಿವೇಗದ ಶತಕ ಗಳಿಸಿದ ಭಾರತೀಯ ಎಂಬ ದಾಖಲೆ ಇದುವರೆಗೆ ರಾಜಸ್ಥಾನ್ ರಾಯಲ್ಸ್ ತಂಡದ ಯೂಸುಫ್ ಪಠಾಣ್ ಹೆಸರಲ್ಲಿತ್ತು; ಇವರು 2010ರಲ್ಲಿ ಮುಂಬೈ ಇಂಡಿಯನ್ಸ್ ವಿರುದ್ಧ 37 ಎಸೆತಗಳಲ್ಲಿ ಶತಕವನ್ನು ಗಳಿಸಿದ್ದರು. ಪ್ರಸ್ತುತ 35 ಎಸೆತಗಳಲ್ಲೇ ಈ ಸಾಧನೆ ಮಾಡುವ ಮೂಲಕ ಪಠಾಣ್ ಹೆಸರಿನಲ್ಲಿದ್ದ ದಾಖಲೆಯನ್ನು ತಮ್ಮ ಹೆಸರಿಗೆ ವರ್ಗಾಯಿಸಿ ಕೊಂಡಿದ್ದಾರೆ ವೈಭವ್.
- ಅತಿವೇಗದ ಶತಕ ದಾಖಲಿಸಿದ ಸಂದರ್ಭದಲ್ಲಿ ವೈಭವ್ ಸೂರ್ಯವಂಶಿ ವಯಸ್ಸು 14 ವರ್ಷ 32 ದಿನಗಳಾಗಿದ್ದವು. ಇದಕ್ಕೂ ಮೊದಲು 2009ರಲ್ಲಿ ಆರ್‌ಸಿಬಿ ತಂಡದ ಪರವಾಗಿ ಕನ್ನಡಿಗ ಮನೀಶ್ ಪಾಂಡೆ ಅವರು ಡೆಕ್ಕನ್ ಚಾರ್ಜರ್ಸ್ ವಿರುದ್ಧ ಅತಿವೇಗದ ಶತಕ ಬಾರಿಸಿದಾಗ ಅವರ ವಯಸ್ಸು 19 ವರ್ಷ 253 ದಿನಗಳಾಗಿದ್ದವು.

ಬೆಂಬಿಡದ ಅಪಸ್ವರ

ಕಳೆದ ಡಿಸೆಂಬರ್‌ನಲ್ಲಿ ನಡೆದ ಐಪಿಎಲ್ ಮೆಗಾ ಹರಾಜಿನಲ್ಲಿ ರಾಜಸ್ಥಾನ್ ರಾಯಲ್ಸ್ ತಂಡವು 1.10 ಕೋಟಿ ರು. ನೀಡಿ ವೈಭವ್‌ರನ್ನು ಖರೀದಿಸಿತ್ತು. ಆಗಿನಿಂದಲೂ ಅವರ ಬಗ್ಗೆ ಒಂದಷ್ಟು ಅಪಸ್ವರ ಎದ್ದಿದ್ದುಂಟು. ವಯಸ್ಸಿನ ವಿಷಯದಲ್ಲಿ ವೈಭವ್ ಕಡೆಯಿಂದ ವಂಚನೆಯಾಗಿದೆ, ಅವರು ತಪ್ಪು ಮಾಹಿತಿ ನೀಡಿದ್ದಾರೆ ಎಂಬ ಆರೋಪ ಕೇಳಿಬಂದಿದ್ದುಂಟು. ಕಳೆದ ವರ್ಷದ 'ಅಂಡರ್ 19' ಏಷ್ಯಾ ಕಪ್‌ನಲ್ಲಿ ಅವರ ಭರ್ಜರಿ ಪ್ರದರ್ಶನ ಕಂಡ ನಂತರ ಪಾಕಿಸ್ತಾನದ ಮಾಜಿ ಕ್ರಿಕೆಟಿಗ ಜುನೈದ್ ಖಾನ್, ''13ರ ಹರೆಯದ ಹುಡುಗನಿಗೆ ಇಂಥದೊಂದು ಶಕ್ತಿ ಇರಲು ಸಾಧ್ಯವೇ? ಅಂತಾರಾಷ್ಟ್ರೀಯ ಸರಣಿಗಳಲ್ಲಿ ಇಷ್ಟು ಚಿಕ್ಕ ಹುಡುಗ ಹೇಗೆ ಆಡಬಲ್ಲ?'' ಎಂದು ಪ್ರಶ್ನಿಸಿದ್ದುಂಟು. ಇದಕ್ಕೆ ವೈಭವ್ ತಂದೆ ಸಂಜೀವ್ ಸೂರ್ಯವಂಶಿ, ''ವೈಭವ್ ಎಂಟು ವರ್ಷದವನಿದ್ದಾಗಲೇ, ಬಿಸಿಸಿಐ ವತಿಯಿಂದ ಅಂಗೀಕರಿಸಲ್ಪಟ್ಟ ಮೂಳೆ ಪರೀಕ್ಷೆಗೆ ಆತ ಒಳಗಾಗಿದ್ದ'' ಎಂದುತ್ತರಿಸಿ ಈ ಆರೋಪಗಳನ್ನು ತಳ್ಳಿಹಾಕಿದರೆನ್ನಿ (ಯುವ ಕ್ರಿಕೆಟಿಗರ ನೈಜ ವಯಸ್ಸನ್ನು ಪರಿಶೀಲಿಸಲು ಮೂಳೆ ಪರೀಕ್ಷೆಯ ಕ್ರಮವನ್ನು ಅನುಸರಿಸುವುದು ವಾಡಿಕೆ ಎಂಬುದು ನಿಮ್ಮ ಗಮನಕ್ಕೆ).

ವೀರುಗೆ ತಿರುಗೇಟು!

ಏಪ್ರಿಲ್ 24ರಂದು ರಾಜಸ್ಥಾನ್ ರಾಯಲ್ಸ್ ತಂಡವು ರಾಯಲ್ ಚಾಲೆಂಜರ್ಸ್ ವಿರುದ್ಧ ತೊಡೆತಟ್ಟಿದ್ದು ನಿಮಗೆ ಗೊತ್ತು. ಆ ಪಂದ್ಯದಲ್ಲಿ ವೈಭವ್ ಬೇಗನೆ ಔಟಾಗಿ ಪೆವಿಲಿಯನ್ ಸೇರಿದ್ದರು. ಈ ಕುರಿತು ಮಾಜಿ ಕ್ರಿಕೆಟಿಗ ಮತ್ತು ಬ್ಲಾಸ್ಟರ್ ವೀರೇಂದರ್ ಸೆಹ್ವಾಗ್ ಪ್ರತಿಕ್ರಿಯಿಸುತ್ತಾ, ''ವೈಭವ್ ಅವರ ಕ್ರಿಕೆಟ್ ಪದಾರ್ಪಣೆಯೇನೋ ಚೆನ್ನಾಗೇ ಆಯ್ತು, ಮೊದಲ ಎಸೆತದಲ್ಲೇ ಅವರು ಸಿಕ್ಸರ್ ಬಾರಿಸಿಬಿಟ್ರು; ಆದರೆ ಮುಂದಿನ ವರ್ಷ 'ಈತ ಆಡುವ ಅಗತ್ಯವಿಲ್ಲ' ಎನ್ನುವಂಥ ಸನ್ನಿವೇಶ ನಿರ್ಮಾಣವಾದರೆ ಅಚ್ಚರಿಯೇನೂ ಅಲ್ಲ. ಏಕೆಂದರೆ ಕೇವಲ ಒಂದೆರಡು ಪಂದ್ಯಗಳಲ್ಲಿ ಹೀಗೊಂದು ಸಂಚಲನ ಸೃಷ್ಟಿಸಿ ಮಿಂಚಿದ ಸಾಕಷ್ಟು ಆಟಗಾರರನ್ನು ನಾನು ಕಂಡಿರುವೆ; ಆ ಪಂದ್ಯಗಳ ಬಳಿಕ ತಾವು ಸ್ಟಾರ್ ಆಗಿರುವುದಾಗಿ ಅವರು ಭಾವಿಸಿಬಿಟ್ಟಿರುತ್ತಾರೆ. ಐಪಿಎಲ್‌ನಲ್ಲಿ ಕೇವಲ ಕೆಲ ಸಮಯದವರೆಗಷ್ಟೇ ಖುಷಿಯಾಗಿರಬಹುದು'' ಎಂದು ಕಾಮೆಂಟ್ ಮಾಡಿದ್ದರು. ಈ ಮಾತಿನೇಟು ಹೊಮ್ಮಿದ ನೂರೇ ಗಂಟೆಗಳಲ್ಲಿ 100 ರನ್ನುಗಳನ್ನು ಚಚ್ಚುವ ಮೂಲಕ 'ವೀರು'ಗೆ ವೈಭವ್ ತಿರುಗೇಟು ನೀಡಿದ್ದಾರೆ.

ಥರಾವರಿ ತಳಿ ಮಾವಿನ ಮುಖ ಈ ಬಾರಿ ಇಳುವರಿ ಇಳಿಮುಖ

ಜಿಲ್ಲಾ ನೋಟ

ರಂಗನಾಥ ಕೆ.ಹೊನ್ನಮರಡಿ, ತುಮಕೂರು

- ಕಾರ್ಬೈಡ್ ಬಳಸಿದ ಮಾವು ತಿನ್ನಬೇಡಿ
- ಮಾವು ಮಾಗಿಸಲು ರಾಸಾಯನಿಕ ಬಳಕೆ

ಹಣ್ಣುಗಳ ರಾಜ ಮಾವಿನ ಹಣ್ಣಿನ ಸೀಸನ್ ಶುರುವಾಗಿದೆ. ಈಗಾಗಲೇ ಮಾರುಕಟ್ಟೆಗೆ ವಿವಿಧ ತಳಿ ಹಣ್ಣುಗಳು ಕಾಲಿಟ್ಟಿದ್ದು ರಾರಾಜಿಸುತ್ತಿವೆ. ಆದರೆ ಹಣ್ಣಿನ ಕೆಂಪಾದ ಬಣ್ಣ ನೋಡಿ ಯಾಮಾರಬೇಡಿ. ಯಾಕೆಂದರೆ ಮಾವಿನ ಹಣ್ಣನ್ನು ಮಾಗಿಸಲು ರಾಸಾಯನಿಕ ಬಳಕೆ ಈಚೆಗೆ ಹೆಚ್ಚುತ್ತಿದೆ. ಇಂಥ ಹಣ್ಣು ಸವಿದು ಆರೋಗ್ಯಕ್ಕೆ ಹಾನಿ ಮಾಡಿಕೊಳ್ಳುವಂತಹ ದುರಂತ ಎದುರಾಗಿದೆ..!

ಕ್ಯಾಲ್ಸಿಯಂ ಕಾರ್ಬೈಡ್

ವ್ಯಾಪಾರಸ್ಥರು ನೈಸರ್ಗಿಕವಾಗಿ ಹಣ್ಣು ಮಾಗಿಸುವ ಬದಲು ಕ್ಯಾಲ್ಸಿಯಂ ಕಾರ್ಬೈಡ್ ಎಂಬ ರಾಸಾಯನಿಕ ಬಳಸಿ ಹಣ್ಣು ಮಾಡುತ್ತಿದ್ದಾರೆ. ಇಂಥ ಹಣ್ಣು ಮಾರುಕಟ್ಟೆಗೆ ಲಗ್ಗೆ ಇಡುತ್ತಿದೆ. ಈ ಬಗ್ಗೆ ಮಾಹಿತಿ ಇದ್ದವರು ಮಾತ್ರ ಆರೋಗ್ಯದ ಮೇಲೆ ಪರಿಣಾಮ ಬೀರುವ ಇಂಥ ಮಾವನ್ನು ಸೇವಿಸಲು ಹಿಂದೇಟು ಹಾಕುತ್ತಿದ್ದಾರೆ. ರಾಸಾಯನಿಕ ಬಳಸಿ ಮಾಗಿಸಿದ ಮಾವಿನ ಹಣ್ಣನ್ನು ಮಾರಾಟ ಮಾಡುವ ವ್ಯಾಪಾರಸ್ಥರ ವಿರುದ್ಧ ಅಧಿಕಾರಿಗಳು ಕ್ರಮ ಕೈಗೊಳ್ಳುವುದು ಕಂಡು ಬರುತ್ತಿಲ್ಲ. ಈ ಬಗೆಗಿನ ನಿರ್ಲಕ್ಷ್ಯವೂ ಆತಂಕಕಾರಿ. ಗ್ರಾಹಕರಿಗೆ ನೈಸರ್ಗಿಕ ಮಾವಿನ ಹಣ್ಣನ್ನು ಬಳಸುವಂತೆ ಅರಿವು ಮೂಡಿಸುವ ಜತೆ ರಾಸಾಯನಿಕ ಬಳಸುವ ವ್ಯಾಪಾರಸ್ಥರ ವಿರುದ್ಧ ತೋಟಗಾರಿಕೆ ಇಲಾಖೆ ಹಾಗೂ ಆರೋಗ್ಯ ಇಲಾಖೆ ಕಠಿಣ ಕ್ರಮ ಕೈಗೊಳ್ಳಬೇಕಿದೆ.

ಥರಾವರಿ ತಳಿಗಳು

ಮಾವಿನಲ್ಲಿ ಅನೇಕ ತಳಿಗಳಿವೆ. ಒಂದೊಂದಕ್ಕೆ ಒಂದೊಂದು ರುಚಿ, ಆಕಾರ, ಗಾತ್ರ, ಸ್ವಾದ. ರಸಪುರಿ, ಅಲ್ಫಾನ್ಸೊ, ಮಲ್ಲಿಕಾ, ತೋತಾಪುರಿ, ಬೈಗನಪಲ್ಲಿ, ಪೈರಿ, ನೀಲಂ, ಮಲ್ಗೋವಾ, ರಾಜಗಿರಿ, ಬಾದಾಮಿ, ಬೇನಿಷಾ, ಕಾಲಾಪಾನಿ, ನಾಟಿ ತಳಿ ಸೇರಿದಂತೆ ಸುಮಾರು ಹತ್ತಕ್ಕೂ ಹೆಚ್ಚಿನ ವಿವಿಧ ತಳಿಯ ಮಾವನ್ನು ತುಮಕೂರು ಜಿಲ್ಲೆಯಲ್ಲಿ ಬೆಳೆಯಲಾಗುತ್ತದೆ.

ಇಳುವರಿ ಇಳಿಮುಖ

ಜಿಲ್ಲೆಯಲ್ಲಿ ಕಳೆದ ವರ್ಷ ಜಿಲ್ಲೆಯಲ್ಲಿ 1.19 ಲಕ್ಷ ಮೆಟ್ರಿಕ್ ಟನ್ ಮಾವಿನ ಹಣ್ಣು ಉತ್ಪಾದನೆಯಾಗಿತ್ತು. ಆದರೆ ಈ ಬಾರಿ 60 ಲಕ್ಷ ಮೆಟ್ರಿಕ್ ಟನ್‌ಗಳಿಂದ 70 ಲಕ್ಷ ಮೆಟ್ರಿಕ್ ಟನ್‌ಗಳಷ್ಟು ಇಳುವರಿ ಬರಬಹುದು. ಮರದಿಂದ ಕಾಯಿ ಉದುರುತ್ತಿರುವುದರಿಂದ ಸರಾಸರಿ ಇಳುವರಿಯಲ್ಲಿ ಅರ್ಧದಷ್ಟು ಕಡಿಮೆಯಾಗಬಹುದು ಎಂದು ತೋಟಗಾರಿಕೆ ಇಲಾಖೆ ಅಂದಾಜಿಸಿದೆ.

ಹಣ್ಣಿನ ಬೆಲೆ ಏರಿಕೆ

ವಾತಾವರಣದಲ್ಲಿ ತಾಪಮಾನ ದಿನದಿಂದ ದಿನಕ್ಕೆ ಹೆಚ್ಚುತ್ತಿದ್ದು ಮಾವಿನ ಮರದಿಂದ ಕಾಯಿ ಉದುರುತ್ತಿದೆ. ಹಿಂದಿನ ವರ್ಷ ಸಹ ಬೇಡಿಕೆಯಷ್ಟು ಹಣ್ಣು ಮಾರುಕಟ್ಟೆಗೆ ಬಂದಿರಲಿಲ್ಲ. ಹಣ್ಣಿನ ಉತ್ಪಾದನೆ ಕಡಿಮೆಯಾದಷ್ಟು ಬೆಲೆ ದುಬಾರಿಯಾಗುತ್ತದೆ. ಈ ಬಾರಿಯೂ ರೈತರಿಗೆ ಉತ್ತಮ ಬೆಲೆ ಸಿಗಲಿದೆ ಎಂದು ತೋಟಗಾರಿಕೆ ಇಲಾಖೆ ಉಪನಿರ್ದೇಶಕಿ ಬಿ.ಸಿ.ಶಾರದಮ್ಮ ಹೇಳುತ್ತಾರೆ.

ನೈಸರ್ಗಿಕ ಹಣ್ಣಿನ ಲಕ್ಷಣ

ನೈಸರ್ಗಿಕವಾಗಿ ಹಣ್ಣು ಮಾಡುವುದರಿಂದ ಹಣ್ಣುಗಳು ಆಕರ್ಷಕವಾಗಿರುತ್ತವೆ. ಆದರೆ ಏಕರೂಪವಾಗಿ ಹಳದಿ ಬಣ್ಣದಿಂದಿರುವುದಿಲ್ಲ. ಹೆಚ್ಚು ಸುವಾಸನೆ ಹೊಂದಿರುತ್ತವೆ. ಒಳ ತಿರುಳುನಲ್ಲಿ ಹುಳಿಯಾಗಿರುವುದಿಲ್ಲ ಹೆಚ್ಚು ಸಿಹಿ ಇರುತ್ತದೆ. ಕಪ್ಪು ಚುಕ್ಕೆಗಳು ಕಡಿಮೆ ಇರುತ್ತದೆ. ನೀರಿನಲ್ಲಿ ಹಾಕಿದಾಗ ಮುಳುಗುತ್ತವೆ. ಎಥಿಲಿನ್ ಮತ್ತು ಸಾಮಾನ್ಯವಾಗಿ ಭತ್ತದ ಒಣ ಹುಲ್ಲನ್ನು ಬಳಸಿ ಮಾಗಿಸಲಾಗುತ್ತದೆ. ಎಥಿಲಿನ್ (100 ಪಿಪಿಎಮ್) ಬಳಸಿ ಹಣ್ಣು ಮಾಡುವುದರಿಂದ ರುಚಿಭರಿತ ಹಣ್ಣಿನ ಸೇವನೆ ಜತೆಗೆ ಆರೋಗ್ಯಕ್ಕೆ ಅಷ್ಟು ಹಾನಿಯೇನಲ್ಲ.

ಮಾವಿನ ಹಣ್ಣು ಹೆಚ್ಚು ಪೌಷ್ಟಿಕಾಂಶ ಹೊಂದಿರುವ ಹಣ್ಣು. ಇದರಲ್ಲಿ ಎ ಮತ್ತು ಸಿ ವಿಟಮಿನ್ ಹೇರಳವಾಗಿರುತ್ತದೆ. ಮಾವು ಫೈಬರ್ ಮತ್ತು ಆಂಟಿ ಆಕ್ಸಿಡೆಂಟ್‌ಗಳ ಉತ್ತಮ ಮೂಲ ಕೂಡ.
-ಸಾಯಿ ಪ್ರಸಾದ್, ವೈದ್ಯರು, ತುಮಕೂರು

ರಾಸಾಯನಿಕ ಬಳಸಿದ ಮಾವಿನ ಹಣ್ಣನ್ನು ತಿನ್ನಬೇಡಿ. ಇದು ಆರೋಗ್ಯದ ಮೇಲೆ ಪರಿಣಾಮ ಬೀರುತ್ತದೆ. ನೈಸರ್ಗಿಕವಾಗಿ ಮಾಗಿದ ಮಾವಿನ ಹಣ್ಣನ್ನು ಮಾತ್ರ ಸವಿದರೆ ಆರೋಗ್ಯಕ್ಕೆ ತುಂಬಾ ಒಳ್ಳೆಯದು.
-ಶಾರದಮ್ಮ, ತೋಟಗಾರಿಕಾ ಉಪ ನಿರ್ದೇಶಕರು,ತುಮಕೂರು

ಮಾರುಕಟ್ಟೆಯಲ್ಲಿ ಕ್ಯಾಲ್ಸಿಯಂ ಕಾರ್ಬೈಡ್ ರಾಸಾಯನಿಕ ಬಳಸಿ ಮಾಗಿಸಿದ ಮಾವಿನ ಹಣ್ಣುಗಳು ಎಲ್ಲ ಕಡೆ ರಾರಾಜಿಸುತ್ತಿವೆ. ರುಚಿಗೆ ಮಾರು ಹೋಗಿ ತಿಂದರೆ ಆರೋಗ್ಯಕ್ಕೆ ಅಪಾಯ ಕಟ್ಟಿಟ್ಟ ಬುತ್ತಿ. ರಾಸಾಯನಿಕ ಬಳಸುವ ವ್ಯಾಪಾರಸ್ಥರ ವಿರುದ್ಧ ಸಂಬಂಧಪಟ್ಟ ಇಲಾಖೆಗಳು ಕಠಿಣ ಕ್ರಮ ಕೈಗೊಳ್ಳಬೇಕು.
-ಸಂಜಯ್, ಮಾವು ಬೆಳೆಗಾರ, ಗುಬ್ಬಿ

ಕೆಮಿಕಲ್ ಬಳಸಿದ ಹಣ್ಣು

ಕ್ಯಾಲ್ಸಿಯಂ ಕಾರ್ಬೈಡ್ ಬಳಸಿ ಕೃತಕವಾಗಿ ಹಣ್ಣು ಮಾಗಿಸುವುದರಿಂದ ಹಣ್ಣುಗಳು ಅತಿ ಹೆಚ್ಚು ಆಕರ್ಷಕವಾಗಿ ಇರುವುದಿಲ್ಲ. ಆದರೆ ಏಕ ರೂಪವಾಗಿ ಹಳದಿ ಬಣ್ಣದಿಂದ ಕೂಡಿರುತ್ತದೆ. ಕಡಿಮೆ ಸುವಾಸನೆ ಹೊಂದಿರುತ್ತವೆ. ಒಳ ತಿರುಳಿನಲ್ಲಿ ಹುಳಿಯಿರುತ್ತದೆ. ಸಿಹಿ ಸ್ವಲ್ಪ ಕಡಿಮೆ ಇರುತ್ತದೆ. ಎರಡು ಮೂರು ದಿನದಲ್ಲಿ ಹಣ್ಣಿನ ಮೇಲೆ ಸಣ್ಣ ಕಪ್ಪು ಚುಕ್ಕೆಗಳು ಕಾಣಿಸಿಕೊಳ್ಳುತ್ತವೆ. ನೀರಿನಲ್ಲಿ ಹಾಕಿದಾಗ ತೇಲುತ್ತವೆ. ಕ್ಯಾಲ್ಸಿಯಂ ಕಾರ್ಬೈಡ್ ತೇವಾಂಶದ ಜತೆ ಸೇರಿದಾಗ ಆಸಿಟಲೀನ್ ಅನಿಲ ಬಿಡುಗಡೆಯಾಗಿ ಹಣ್ಣು ಮಾಗುತ್ತವೆ. ಆದರೆ ಇದರಲ್ಲಿ ಆರ್ಸೆನಿಕ್ ಮತ್ತು ಫಾಸ್ಪರಸ್ ಇರುವುದರಿಂದ ಇದು ಆರೋಗ್ಯಕ್ಕೆ ಹಾನಿಕಾರಕ ಎನ್ನುತ್ತಾರೆ ತಜ್ಞರು.

ಬಿಜೆಪಿಗರ ದಾಂಧಲೆ - ಗದ್ದಲ ಮುಖ್ಯಮಂತ್ರಿಗೆ ಮುಜುಗರ

ಜಿಲ್ಲಾ ನೋಟ

ವಿನಾಯಕ ಮಠಪತಿ, ಬೆಳಗಾವಿ

- ಬಿಜೆಪಿಯಿಂದ ಕಪ್ಪು ಬಾವುಟ ದರ್ಶನ
- ಸಿ.ಟಿ.ರವಿ ಪ್ರಕರಣದಲ್ಲೂ ಎಡವಟ್ಟು
- ಜಿಲ್ಲಾ ಪೊಲೀಸ್ ಇಲಾಖೆಯ ವೈಫಲ್ಯ
- ಇಬ್ಬರು ಪೇದೆಗಳಿಗೆ ಅಮಾನತು ಶಿಕ್ಷೆ

ಸಾಮಾನ್ಯವಾಗಿ ರಾಜಕೀಯ ಪಕ್ಷಗಳ ಕಾರ್ಯಕರ್ತರು ಸಮಾವೇಶಗಳ ವೇದಿಕೆಗೆ ತೆರಳಿ ಪ್ರತಿಭಟಿಸುವುದು ತೀರಾ ವಿರಳ. ಅದರಲ್ಲೂ ಸಿಎಂ ಭಾಗವಹಿಸುವ ಸಾರ್ವಜನಿಕ ವೇದಿಕೆಗಳ ಬಳಿ ಬಿಗಿ ಬಂದೋಬಸ್ತ್ ಇರುತ್ತದೆ. ಹಾಗಾಗಿ ಅಂಥ ಕಡೆಯೂ ವಿಪಕ್ಷಗಳ ಅಥವಾ ವಿವಿಧ ಸಂಘಟನೆಗಳ ಪ್ರತಿಭಟನೆ, ಕಪ್ಪು ಪಟ್ಟಿ ಪ್ರದರ್ಶನ ಅಪರೂಪ. ಆದರೆ ಮೊನ್ನೆ ಬೆಳಗಾವಿ ನಗರದಲ್ಲಿ ನಡೆದ ಕಾಂಗ್ರೆಸ್‌ನ ಪ್ರತಿಭಟನಾ ಸಮಾವೇಶದಲ್ಲಿ ಬಿಜೆಪಿ ಕಾರ್ಯಕರ್ತೆಯರು ನಡೆದುಕೊಂಡ ರೀತಿ ಮಾತ್ರ ಕೈ ನಾಯಕರಿಗೆ ಸಾಕಷ್ಟು ಇರುಸು ಮುರುಸು ತಂದಿಟ್ಟಿತು. ಕೇಂದ್ರ ಸರಕಾರದ ಬೆಲೆ ಏರಿಕೆ ನೀತಿ ಖಂಡಿಸಿ ಕಾಂಗ್ರೆಸ್ ಆಯೋಜಿಸಿದ ಬೃಹತ್ ಪ್ರತಿಭಟನಾ ಸಮಾವೇಶದಲ್ಲಿ ಇಂಥಾದ್ದೊಂದು ಎಡವಟ್ಟು ನಡೆದು ಹೋಯಿತು.

ಸಿಎಂ ಭಾಷಣಕ್ಕೆ ಅಡ್ಡಿ

ಪಾಕಿಸ್ತಾನದ ಜೊತೆ ಯುದ್ಧ ಬೇಡ ಎಂಬ ಸಿಎಂ ಸಿದ್ದರಾಮಯ್ಯ ಹೇಳಿಕೆ ವಿರೋಧಿಸಿ ಬಿಜೆಪಿ ಮಹಿಳಾ ಕಾರ್ಯಕರ್ತೆಯರು ಸಮಾವೇಶದ ವೇದಿಕೆಗೆ ನುಗ್ಗಿ ಸಿಎಂ ಭಾಷಣಕ್ಕೆ ಅಡ್ಡಿಪಡಿಸಲು ಮುಂದಾದರು. ಇದು ಸಿಎಂಗೆ ತೀರಾ ಮುಜುಗರ ಉಂಟು ಮಾಡಿದ್ದೂ ಹೌದು. ಅವರು ವೇದಿಕೆ ಮೇಲೆಯೇ ಪೊಲೀಸ್ ಇಲಾಖೆಯ ಭದ್ರತಾ ವೈಫಲ್ಯದ ಬಗ್ಗೆ ಕೂಗಾಡಿದ್ದು ಘಟಿಸಿ ಬಿಟ್ಟಿತು.

ಸಿ.ಟಿ.ರವಿ ಪ್ರಕರಣ

ಕಳೆದ 2024ರ ಚಳಿಗಾಲ ಅಧಿವೇಶನ ಸಂದರ್ಭದಲ್ಲಿ ಸಿ.ಟಿ ರವಿ ಬಂಧನ ವಿಚಾರವಾಗಿ ಪೊಲೀಸರ ನಡೆಗೆ ಸಾಕಷ್ಟು ಟೀಕೆಗಳು ಕೇಳಿಬಂದಿದ್ದವು. ಸ್ವತಃ ಗೃಹ ಸಚಿವರೇ ಕೆಲ ಪ್ರಶ್ನೆಗಳಿಗೆ ಉತ್ತರಿಸಲಾಗದೆ ತಡಬಡಾಯಿಸುವ ಪರಿಸ್ಥಿತಿ ನಿರ್ಮಾಣವಾಗಿತ್ತು. ಪೊಲೀಸ್ ಅಧಿಕಾರಿಗಳು ಒಬ್ಬ ವಿಧಾನ ಪರಿಷತ್ ಸದಸ್ಯನಿಗೆ ಇಷ್ಟೆಲ್ಲ ಕಾಟ ಕೊಡಬಹುದು ಎಂಬ ನಿರೀಕ್ಷೆ ಸಾಮಾನ್ಯ ಜನರಿಗೂ ಇರಲಿಲ್ಲ. ಆ ಘಟನೆಯಿಂದ ಸರಕಾರಕ್ಕೂ ಕೊಂಚ ಮುಜುಗರ ಉಂಟಾಗಿದ್ದು ಹೌದು. ಮೊನ್ನೆಯ ಕಾಂಗ್ರೆಸ್ ಸಮಾವೇಶದ ಹೊರಗಡೆ ಕೆಲ ಪೊಲೀಸ್ ಅಧಿಕಾರಿಗಳು ಮಾಡಿದ ಎಡವಟ್ಟಿನಿಂದ ಮತ್ತೊಮ್ಮೆ ಕೈ ನಾಯಕರನ್ನು ಮುಜುಗರಕ್ಕೆ ತಳ್ಳಿದೆ.

ಕಪ್ಪು ಬಾವುಟ ದರ್ಶನ

ನಗರದ ಸಿಪಿಎಡ್ ಮೈದಾನದಲ್ಲಿ ನಡೆದ ಕಾಂಗ್ರೆಸ್ ಸಮಾವೇಶದಲ್ಲಿ ಸಾವಿರಾರು ಸಂಖ್ಯೆ ಜನ ಸೇರಿದ್ದರು. ವೇದಿಕೆ ಮೇಲೆ ನಿಂತು ಸಿಎಂ ಸಿದ್ದರಾಮಯ್ಯ ಕೇಂದ್ರ ಬಿಜೆಪಿ ಸರಕಾರದ ವಿರುದ್ಧ ಆಕ್ರೋಶ ಹೊರ ಹಾಕುವ ಸಂದರ್ಭದಲ್ಲೇ ಇತ್ತ ಸಿಎಂ ವಿರುದ್ಧ ಬಿಜೆಪಿ ಮಹಿಳಾ ಕಾರ್ಯಕರ್ತೆಯರು ಕಪ್ಪು ಬಾವುಟ ಪ್ರದರ್ಶಿಸಿ ಘೋಷಣೆ ಕೂಗಿದರು. ಅನಿರೀಕ್ಷಿತವಾಗಿ ಸಂಭವಿಸಿದ ಘಟನೆಯಿಂದ ಪೊಲೀಸರು ಸೇರಿದಂತೆ ಕೈ ನಾಯಕರು ಕೂಡ ವಿಚಲಿತರಾದರು.

ಸಿಎಂ ಸಿಡಿಮಿಡಿ

ಸಾಮಾನ್ಯವಾಗಿ ಸಿಎಂ ಸಿದ್ದರಾಮಯ್ಯ ಅವರ ಭಾಷಣಕ್ಕೆ ಜನ ಕಾತರತೆಯಿಂದ ಕಾಯುತ್ತಾರೆ. ವೇದಿಕೆ ಮೇಲೆ ಇವರು ಅಬ್ಬರಿಸುತ್ತಿದ್ದರೆ ಎಲ್ಲರ ಚಿತ್ತ ಇವರ ಮೇಲೆ ನೆಟ್ಟಿರುತ್ತದೆ. ಅಂಥ ಹೊತ್ತಿನಲ್ಲಿ ಸಿಎಂ ಭಾಷಣಕ್ಕೆ ಬಿಜೆಪಿ ಕಾರ್ಯಕರ್ತೆಯರು ಅಡ್ಡಿಪಡಿಸಿದ್ದಕ್ಕೆ ಖುದ್ದು ಸಿದ್ದರಾಮಯ್ಯ ಸಂಯಮ ಕಳೆದುಕೊಂಡೇ ಬಿಟ್ಟರು. ಅವರಿಗೆ ವೇದಿಕೆ ಮುಂದೆ ಬಂದು ಪ್ರತಿಭಟನೆ ನಡೆಸಲು ಅವಕಾಶ ನೀಡಿದ ಪೊಲೀಸ್ ಅಧಿಕಾರಿಗಳ ವಿರುದ್ಧ ಸಿಎಂ ಗರಂ ಆದರು.

ಗುಬ್ಬಿ ಮೇಲೆ ಬ್ರಹ್ಮಾಸ್ತ್ರ

ಕಾಂಗ್ರೆಸ್ ಸಮಾವೇಶದ ವೇಳೆ ಉಂಟಾದ ಗದ್ದಲಕ್ಕೆ ಸಂಬಂಧಿಸಿದಂತೆ ಇಬ್ಬರು ಪೊಲೀಸ್ ಪೇದೆಗಳನ್ನು ಅಮಾನತು ಮಾಡಿ ಉತ್ತರ ವಲಯದ ಐಜಿಪಿ ಚೇತನಸಿಂಗ್ ರಾಥೋಡ್ ಆದೇಶ ಹೊರಡಿಸಿದ್ದಾರೆ. ಘಟನೆ ನಡೆದಾಗಲೂ ಡಿಸಿಪಿಗಳ ವಿರುದ್ಧ ಸಚಿವೆ ಲಕ್ಷ್ಮೀ ಹೆಬ್ಬಾಳಕರ್ ಕೂಡ ರೇಗಾಡಿದ್ದರು. ಆದರೆ ಹಿರಿಯ ಅಧಿಕಾರಿಗಳು ತಮ್ಮ ತಪ್ಪು ಮುಚ್ಚಿಕೊಳ್ಳುವ ಭರದಲ್ಲಿ ಅಮಾಯಕ ಪೊಲೀಸ್ ಪೇದೆಗಳನ್ನು ಬಲಿಪಶು ಮಾಡಿದ್ದು ಎಷ್ಟರಮಟ್ಟಿಗೆ ಸರಿ ಎಂಬ ಪ್ರಶ್ನೆ ಎದ್ದಿದೆ.

ಇಬ್ಬರ ಅಮಾನತು

ಸಿಎಂ ಭಾಷಣಕ್ಕೆ ಅಡ್ಡಿಪಡಿಸಿರುವ ಪ್ರಕರಣದಲ್ಲಿ ಖಡೇಬಜಾರ್ ಠಾಣೆಯ ಬಿ.ಎ. ನೌಕುಡಿ ಹಾಗೂ ಕ್ಯಾಂಪ್ ಠಾಣೆಯ ಮಲ್ಲಪ್ಪ ಹಡಗಿನಾಳ ಎಂಬ ಇಬ್ಬರು ಪೊಲೀಸ್ ಪೇದೆಗಳನ್ನು ಅಮಾನತು ಮಾಡಲಾಗಿದೆ. ಸಾರ್ವಜನಿಕರ ಥರವೇ ಮುಖ್ಯ ವೇದಿಕೆವರೆಗೆ ನಡೆದು ಬಂದ ಬಿಜೆಪಿ ಕಾರ್ಯಕರ್ತೆಯರನ್ನು ಗುರುತಿಸಲು ಪೊಲೀಸರಿಗೂ ಸಾಧ್ಯವಾಗಿಲ್ಲ. ಯಾರೋ ಹಿರಿಯ ಅಧಿಕಾರಿಗಳಿಂದಾದ ಎಡವಟ್ಟಿಗೆ ಪೇದೆಗಳಿಗೆ ಅಮಾನತಿನ ಶಿಕ್ಷೆ ವಿಧಿಸಿದ್ದಕ್ಕೆ ಜಿಲ್ಲೆಯ ಸಾರ್ವಜನಿಕರೂ ಅಸಮಾಧಾನ ಹೊರ ಹಾಕಿದ್ದಾರೆ.



ಬಿಜೆಪಿ ನಾಯಕರು ನಮ್ಮ ನಾಯಕ ರಾಹುಲ್ ಗಾಂಧಿ ಅವರಿಗೆ ಸಂಸತ್ತಿನ ಸದನದ ಒಳಗೂ ಹೊರಗೂ ಬೈದರೂ ಪ್ರಜಾಪ್ರಭುತ್ವ ವ್ಯವಸ್ಥೆಗೆ ಬೆಲೆ ಕೊಟ್ಟು ನಾವು ಶಾಂತಿಯಿಂದ ವರ್ತನೆ ಮಾಡುತ್ತಿದ್ದೇವೆ. ರಾಜ್ಯದ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಭಾಷಣದ ವೇಳೆ ಬಿಜೆಪಿ ಕಾರ್ಯಕರ್ತರು ಕೆಟ್ಟದಾಗಿ ವರ್ತನೆ ಮಾಡಿದ್ದಾರೆ.
-ಲಕ್ಷ್ಮೀ ಹೆಬ್ಬಾಳಕರ್, ಸಚಿವೆ

ಅನುದಿನವೂ ವಿರಾಮಕ್ಕೆ ಒಂದು ನೆಪ
ಆರಾಮ
ವಿಶ್ವವಾಣಿ
@vishwavaninews
ಬೆಂಗಳೂರು
02-05-2025 ಶುಕ್ರವಾರ



ಚಿತ್ತವಿಹಾರ

ರಚನಾತ್ಮಕ ಕಲ್ಪನೆಗಳು

• ಮಾಯಾ ಬಾಲಚಂದ್ರ

ಕೆಲವು ವಿಚಾರಗಳ ಬಗ್ಗೆ ವಿಶ್ವಾಸ ಇಲ್ಲವಾಗಿದ್ದರೂ, ಅವುಗಳ ಕಲ್ಪನೆ ಮಾಡಿಕೊಳ್ಳಲು ಸಾಧ್ಯ. ಆದರೆ ಕಲ್ಪನೆಗಳ ಆಸರೆ ಇಲ್ಲದೆ ವಿಶ್ವಾಸ ಮೂಡಲಾರದು. ಕಲ್ಪನೆ ಕನಸುಗಳಿಗೆ ಆಧಾರ. ಕನಸುಗಳು ಗರಿಗೆದುರಿದಾಗಲೇ ಸಾಧನೆಗಳು ಸಾಕಾರವಾಗುವುದು. ಕಲ್ಪನೆಗಳು ಹೆಚ್ಚು ಬಾರಿ ನಕಾರಾತ್ಮಕ ದಿಕ್ಕಿನಲ್ಲಿಯೇ ಸಾಗುತ್ತಿರುತ್ತವೆ. ಅವುಗಳನ್ನು ಸಕಾರಾತ್ಮಕ ಹಾದಿಗೆ ತಿರುಗಿಸುವುದು ಕಷ್ಟವೇನಲ್ಲ.

20 ಅಡಿ ಉದ್ದದ, ಒಂದು ಅಡಿ ಅಗಲದ, ಎರಡು ಇಂಚು ದಪ್ಪದ ಒಂದು ಹಲಗೆಯನ್ನು ನೆಲದ ಮೇಲಿಟ್ಟು, ಹುಡುಗನೊಬ್ಬನಿಗೆ ಅದರ ಮೇಲೆ ನಡೆಯಲು ಹೇಳಿದರೆ ಅನಾಯಾಸವಾಗಿ ನಡೆದು ಬಿಡುತ್ತಾನೆ. ಅದೇ ಹಲಗೆಯನ್ನು 20 ಅಡಿ ಎತ್ತರದ ಎರಡು ಕಂಬಗಳ ಮೇಲೆ ಸೇತುವೆಯಂತೆ ಇಟ್ಟು ನಡೆಯಲು ಹೇಳಿದರೆ ಆತ ನಡೆಯಲಾರ. ಮೇಲಿಂದ ಕೆಳಗೆ ಬೀಳುವ ಸಾಧ್ಯತೆಯೇ ಹೆಚ್ಚಾಗಿ ಕಾಣತೊಡಗುತ್ತದೆ. ಭಯದ ಕಲ್ಪನೆ ನಡೆಯಲಾರದಂತೆ ಮಾಡಿಬಿಡುತ್ತದೆ. ಬದಲಿಗೆ ಅದೇ ಹಲಗೆಯನ್ನು ನೆಲದಿಂದ ಹಂತ ಹಂತವಾಗಿ ಒಂದೊಂದೇ ಅಡಿ ಎತ್ತರಕ್ಕೆ ಏರಿಸುತ್ತಾ, ಪ್ರತಿಬಾರಿಯೂ ನಡೆಯಲು ಪ್ರೋತ್ಸಾಹಿಸುತ್ತಾ ಸಾಗಿದರೆ, ಎತ್ತರದ ಬಗೆಗಿನ ಭ್ರಾಮಕ ಭಯ ಕಡಿಮೆಯಾಗುತ್ತಾ, ಪ್ರತಿ ಬಾರಿಯೂ ತನ್ನ ನಡಿಗೆಯ ಬಗ್ಗೆ ನಂಬಿಕೆ ಹೆಚ್ಚಾಗುತ್ತಾ, 20 ಅಡಿ ಎತ್ತರದಲ್ಲಿಯೂ ಆತ್ಮವಿಶ್ವಾಸದಿಂದ ನಡೆಯಲು ಸಮರ್ಥನಾಗುತ್ತಾನೆ. ಆಗ ಭಯದ ಕಲ್ಪನೆ ದೂರವಾಗಿ ಆ ಜಾಗವನ್ನು ವಿಶ್ವಾಸ ಆಕ್ರಮಿಸಿಕೊಳ್ಳುತ್ತದೆ. ಪ್ರಾರಂಭದಲ್ಲಿದ್ದ ''ತಾನು ಬೀಳಬಹುದು'' ಎಂಬ ಭಯದ ಕಲ್ಪನೆಯು, ಕ್ರಮಬದ್ಧವಾದ ಅಭ್ಯಾಸದ ಮೂಲಕ ''ತನಗೆ ಸಾಧ್ಯ'' ಎನ್ನುವ ರಚನಾತ್ಮಕ ಕಲ್ಪನೆಯಾಗಿ ಬದಲಾಗಿಬಿಡುತ್ತದೆ.

ನಕಾರಾತ್ಮಕ ಕಲ್ಪನೆಗಳನ್ನು ಅನುಭವದಿಂದ ಸರಿಪಡಿಸಿಕೊಂಡು, ಅಭ್ಯಾಸದ ಮೂಲಕ ಪಳಗಿಸಿದರೆ, ಅವು ವಿಶ್ವಾಸವಾಗಿ ಪರಿವರ್ತನೆ ಹೊಂದುತ್ತವೆ. ಇಚ್ಛಾಶಕ್ತಿಯನ್ನು ಅನೇಕ ಬಾರಿ ಭಯದ ಕಲ್ಪನೆ ಕಂಗೆಡಿಸಿ ಬಿಡಬಹುದು. ಪ್ರಾಯೋಗಿಕವಾಗಿ ಕಾರ್ಯಪ್ರವೃತ್ತರಾಗಿ, ಇಚ್ಛಾಶಕ್ತಿಯನ್ನು ಹುರುಪುಗೊಳಿಸುತ್ತಾ ನಡೆದರೆ, ಭಯದ ಕಲ್ಪನೆಯು ಯಾವುದೇ ಸಂಕಲ್ಪಗಳನ್ನು ತಡೆಹಿಡಿಯಲಾರದು. ಭಯದ ಕಲ್ಪನೆಗಳನ್ನು ರಚನಾತ್ಮಕವಾಗಿ ಮಾರ್ಪಡಿಸುವ ಬುದ್ಧಿವಂತಿಕೆ ನಮ್ಮದಾಗ ಬೇಕಷ್ಟೇ.

ಹನಿ ಮಳೆ

ಬಲು ಮುಖ್ಯ

ಕೈ ಬಾಯಿಯ ಮೇಲೆ
ಬಿಗಿಯಾದ ಹಿಡಿತ
ಜೊತೆ ಜೊತೆಗೆ ತಾಳ್ಮೆ
ಸಡಿಲಗೊಂಡರೆ
ಜನ ಸಾಮಾನ್ಯರ ಮುಂದೆ
ದೊಡ್ಡವರೂ ಬಲು ಸಣ್ಣ
ಎಷ್ಟೇ ಇದ್ದರೂ ಜಾಣ್ಮೆ

• ಮಹಾಂತೇಶ ಮಾಗನೂರ

ಆದಿಲ್ ಶಾಹಿ ಅರಸರ ಬೇಸಗೆ ಅರಮನೆ

ಉತ್ತರ ಕರ್ನಾಟಕ ಭಾಗದಲ್ಲಿ ಬೇಸಗೆಯ ತಾಪಮಾನ ತೀಕ್ಷ್ಣವಾಗಿರುತ್ತದೆ. ತಾವು ವಾಸಿಸುವ ಕಟ್ಟಡದ ವಾತಾವರಣವನ್ನು ತಂಪಾಗಿಸಲು, ವಿಜಯಪುರದ ಅರಸರು ನೀರನ್ನು ಹರಿಸುವ ತಂತ್ರಜ್ಞಾನವನ್ನು ಉಪಯೋಗಿಸಿರುವುದನ್ನು ಇಲ್ಲಿ ಕಾಣಬಹುದು.

• ಡಾ.ಕರವೀರಪ್ರಭು ಕ್ಯಾಲಕೊಂಡ

ವಿಜಯಪುರವು ಪುರಾತತ್ವ ಸ್ಮಾರಕಗಳ ಕಣಜ. ನಾವು ಬೇಸಿಗೆಯಲ್ಲಿ ತಣ್ಣಗಿರಲು ಎ.ಸಿ.ಯನ್ನು ಬಳಸುತ್ತೇವೆ. ಆದರೆ, ವಿಜಯಪುರದ ಆದಿಲ್ ಶಾಹಿ ಅರಸರು ಬೇಸಿಗೆಯಲ್ಲಿ ತಣ್ಣನೆಯ ಪರಿಸರ ನಿರ್ಮಿಸಿಕೊಂಡು, ತಮ್ಮ ಸುತ್ತಲಿನ



ಗಾಳಿಯೇ ತಂಪಾಗಿ ಬೀಸುವಂತಹ ವ್ಯವಸ್ಥೆಯನ್ನು ಮಾಡಿಕೊಂಡು, ಆ ಪ್ರದೇಶದ ಬೇಸಗೆಯನ್ನು ಎದುರಿಸುವ ಕಲೆ ಕರಗತ ಮಾಡಿಕೊಂಡಿದ್ದರು. ಆದಿಲ್ ಶಾಹಿ ಅರಸರು ಉರಿಬಿಸಿಲಿನಿಂದ ರಕ್ಷಣೆ ಪಡೆಯಲು ಕಟ್ಟಡ ನಿರ್ಮಾಣದಲ್ಲಿ ವಾತಾನುಕೂಲ ತಂತ್ರಜ್ಞಾನ ಅಳವಡಿಸಿಕೊಂಡಿದ್ದರು. ತಮ್ಮ ಅರಮನೆ ಆವರಣದಲ್ಲಿ ನೀರಿನ ಕೊಳ, ಕೊಳದಲ್ಲಿ ಪುಟ್ಟ ಕಾರಂಜಿ, ಅರಮನೆ ಸುತ್ತ ಮುತ್ತ ಕೈತೋಟ ನಿರ್ಮಿಸಿಕೊಂಡಿದ್ದರು.

ವಿಜಯಪುರ ಸುಲ್ತಾನರ 'ಬೇಸಗೆ ಅರಮನೆ 'ಎಂದೇ ಖ್ಯಾತಿ ಪಡೆದಿರುವ ಕುಮಟಗಿ ಕೆರೆಯ ಅಂಚಿನಲ್ಲಿರುವ ಕಟ್ಟಡಗಳು, ವಿಜಯಪುರದಿಂದ 10 ಕಿ.ಮೀ . ದೂರದಲ್ಲಿ ಸಿಂದಗಿ ರಸ್ತೆಯಲ್ಲಿದೆ. ಇಲ್ಲಿಯ ವಾತಾವರಣ, ಕಟ್ಟಡ, ವ್ಯವಸ್ಥೆ, ವಾಸ್ತು ಶೈಲಿ ಎಲ್ಲವೂ ಗಮನ ಸೆಳೆಯುತ್ತವೆ. ಕುಮಟಗಿ ಒಂದು ಪುಟ್ಟ ಗ್ರಾಮ. ಗ್ರಾಮದ ಹತ್ತಿರವಿರುವ ವಿಶಾಲವಾದ ಕೆರೆಯ ದಡದಲ್ಲಿ ಎರಡಂತಸ್ತಿನ ಕಟ್ಟಡ ಕಟ್ಟಲಾಗಿದೆ. ಕೆರೆಯಿಂದ ಹರಿದು ಬರುವ ನೀರು ಕಟ್ಟಡದ ಗೋಡೆಗಳ ನಡುವೆ ಹರಿದು ಇಡೀ ಕನ್ನಡವನ್ನು ತಂಪಾಗಿಸುತ್ತದೆ. ಯಾವುದೇ ಯಂತ್ರದ ಸಹಾಯವಿಲ್ಲದೇ ನೀರು ಸರಾಗವಾಗಿ ಹರಿದು ಬರುವಂತೆ ಕಟ್ಟಡ ನಿರ್ಮಿಸಲಾಗಿರುವುದು ವಿಶೇಷ.

ಪಾತರಗಿತ್ತಿ ಮಹಲ್

ಮಹಲಿನ ಸುತ್ತಲೂ ನೀರು ಹರಿಯುವಂತೆ ಮಾಡಲಾಗಿದೆ. ನೀರನ್ನು ಸೂಕ್ತವಾಗಿ ಹರಿಸಲು ಅಗತ್ಯವೆನಿಸುವ ನಿಯಂತ್ರಣಕ್ಕೆ ತೂಬು, ಗೋಪುರ ನಿರ್ಮಿಸಲಾಗಿದೆ. ಕುಮಟಗಿ ಕೆರೆಯ ಮಧ್ಯದಲ್ಲಿಯೂ ಒಂದು ಸಣ್ಣ ಮಹಲ್ ಇರುವುದು ಇಂದಿಗೂ ಕಾಣುತ್ತದೆ. ನೀರಿನ ಸಂಗ್ರಹಕ್ಕಾಗಿ 'ಪಾತರಗಿತ್ತಿ ಮಹಲ್ ' ಕಟ್ಟಲಾಗಿದೆ. ಈ ಬೇಸಗೆ ಅರಮನೆಯನ್ನು ಮೊಹಮ್ಮದ್ ಆದಿಲ್ ಶಾಹಿ (1627 – 1636) ಕಾಲದಲ್ಲಿ ನಿರ್ಮಿಸಲಾಗಿದೆ.

ಕುಮಟಗಿ ಕೆರೆ ಆದಿಲ್ ಶಾಹಿ ಅರಸರು ಮೋಜಿಗಾಗಿ ನಿರ್ಮಿಸಿಕೊಂಡ ತಾಣವಷ್ಟೇ ಅಲ್ಲ, ಬೇಸಗೆಯ ಉರಿಬಿಸಿಲಿನಿಂದ ರಕ್ಷಣೆ ಪಡೆಯಲು ನಿರ್ಮಿಸಿದ ತಾಣವೂ ಹೌದು. ಅರಮನೆಯ ನೆಲಮಹಡಿಯಲ್ಲಿ ಗೋಡೆಗಳ ಮಧ್ಯೆ ಹಾಗೂ ಮಾಳಿಗೆಯ ಎರಡು ಪದರುಗಳ ನಡುವೆ ನೀರಿನ ಕೊಳವೆಗಳನ್ನು ಅಳವಡಿಸಿ, ಅಲ್ಲಿ ನೀರು ಹರಿಸುತ್ತಿದ್ದರು. ಹಾಗೆ ಗೋಡೆಗಳಲ್ಲಿ ಹರಿಯುವ ನೀರು ಆ ಕಟ್ಟಡವನ್ನು ತಂಪಾಗಿಸುತ್ತಿತ್ತು. ಹೀಗಾಗಿ ಅಂಥ ಕಟ್ಟಡಗಳಲ್ಲಿ ವಾಸಿಸುವವರು, ಬೇಸಗೆಯ ತಾಪದ ಸುಳಿಗೆ ಸಿಲುಕದೇ, ತಂಪಾದ ವಾತಾವರಣದಲ್ಲಿ ದಿನ ಕಳೆಯಬಹುದಿತ್ತು. ಸಹಜವಾಗಿ ಹರಿಯುವ ನೀರಿನ ಸಹಾಯದಿಂದ, ಕಟ್ಟಡದ

ವಾತಾವರಣವನ್ನು ತಂಪಾಗಿಸಿರುವ ಜಾಣ್ಮೆಯು, ಆ ಕಾಲದ ವಾಸ್ತುಶಿಲ್ಪಿಗಳ ಸೃಜನಶೀಲತೆ , ಕೌಶಲ್ಯಕ್ಕೆ ಸಾಕ್ಷಿ.

ಈ ಕಟ್ಟಡವನ್ನು ಮನಸ್ಸಿಗೆ ಮುದ ನೀಡುವಂತೆ ಅಲಂಕರಿಸಲಾಗಿದೆ. ಅಲಂಕಾರ ಮಂಟಪದ ಗೋಡೆಯ ಮೇಲೆ ಕೆಲವು ವರ್ಣ ಚಿತ್ರಗಳಿವೆ. ಈ ಅರಮನೆಯ ಡ್ರೆಸ್ಸಿಂಗ್ ರೂಮಿನಲ್ಲಿ ಆಕರ್ಷಕ ಪೇಂಟಿಂಗ್‌ಗಳಿವೆ. ಅರಮನೆಯ ಸ್ನಾನಗೃಹವೂ ವಿಶಿಷ್ಟವಾಗಿದೆ. ಅಲ್ಲಿ ಶವರ್ ಅಳವಡಿಸಲಾಗಿದೆ. ಋತುಮಾನಕ್ಕೆ ತಕ್ಕಂತೆ ಬಿಸಿನೀರು, ತಣ್ಣೀರು ಬರುವಂತೆ ವ್ಯವಸ್ಥೆ ಮಾಡಲಾಗಿದೆ. ಅರಮನೆಯ ಸುತ್ತಲೂ ಗೋಪುರಗಳಿವೆ. ಅರಸರು ಮತ್ತು ಅರಸು ಮನೆತನದ ಮಹಿಳೆಯರು ಅಲ್ಲಿ ಸ್ನಾನ ಮಾಡುತ್ತಿದ್ದರು ಎನ್ನಲಾಗಿದೆ. ಹೊರಗಿನವರು ಯಾರೂ ಹತ್ತಿರಕ್ಕೆ ಸುಳಿಯದಂತೆ ಸುತ್ತಲೂ ಇರುವ ಗೋಪುರಗಳಲ್ಲಿ ಕಾವಲುಗಾರರು ಇರುತ್ತಿದ್ದರಂತೆ. ಮಹಲಿನ ದಕ್ಷಿಣಕ್ಕೆ ಹಳೆಯ ಕಟ್ಟಡಗಳ ಅವಶೇಷಗಳಿವೆ. ಪ್ರಾಚ್ಯವಸ್ತು ಸರ್ವೇಕ್ಷಣಾ ಇಲಾಖೆ ಈ ಕೆರೆಯನ್ನು ರಿಪೇರಿ ಮಾಡಿ, ಸುಂದರವಾದ ಪುಟ್ಟ ಉದ್ಯಾನ ನಿರ್ಮಿಸಿದೆ. ಕೆರೆಯ ಮಧ್ಯದಲ್ಲಿ ಮಹಲಿರುವ ಪ್ರದೇಶವನ್ನು ಬಳಸಿಕೊಂಡು ದೋಣಿ ವಿಹಾರ ಸೌಲಭ್ಯ ಕಲ್ಪಿಸಿದರೆ ಇದು ಸುಂದರ ಪ್ರವಾಸಿ ತಾಣವಾಗಬಹುದು.

ಹದಿನೇಳನೆಯ ಶತಮಾನದಲ್ಲಿ ಬೇಸಗೆಯನ್ನು ಎದುರಿಸಲು ಕಟ್ಟಡದ ಸುತ್ತಲಿನ ವಾತಾವರಣವನ್ನೇ ತಂಪಾಗಿಸುವ ಈ ಸರಳ ತಂತ್ರಜ್ಞಾನವನ್ನು ಇಂದು ಪ್ರವಾಸಿಗರು ವೀಕ್ಷಿಸುವ ಮೂಲಕ, ಹೆಚ್ಚು ಹೆಚ್ಚು ಪರಿಚಯಮಾಡಿಕೊಳ್ಳಬಹುದು.

ಕೆಲಸದವನ ಮೇಲೆ ಕರುಣೆ

**ರಣದಿ ಬಿದ್ದಾ ಸೈನ್ಯಪತಿ ಸಿಡ್ನಿಯುತ್ತಮಣ-
ದೊಣಗುಬಾಯಿಗೆ ನೀರನೊಡ್ಡಲ್ ಅದನವನು
ತನಗಿಂತ ಕೆಲಸದ ಭಟಗದು ಸಲ್ವುದೆಂದಿತ್ತು
ತಣಿವನಾಂತುದ ನೆನೆಯೊ - ಮಂಕುತಿಮ್ಮ ||**

ರಣರಂಗದಲ್ಲಿ ಯುದ್ಧ ಮಾಡುತ್ತಿರುವಾಗ ಸಿಡ್ನಿ ಎಂಬ ಸೈನ್ಯಾಧಿಕಾರಿಯು ಬಾಯಾರಿಕೆಯಿಂದ ಬಳಲಿ ಬಿದ್ದಾಗ, ಆತನ ಕೈ ಕೆಳಗಿನ ಸೈನಿಕ ನೀರು ತಂದು ಕುಡಿಸಲು ಯತ್ನಿಸುತ್ತಾನೆ. ಆದರೆ ಸಿಡ್ನಿಯು ನನ್ನ ಹಾಗೆಯೇ ಈ ಯುದ್ಧಭೂಮಿಯಲ್ಲಿ ಸೈನಿಕನೂ ಬಳಲಿರುತ್ತಾನೆ, ನನ್ನ ಹಾಗೆಯೇ ಆತನಿಗೂ ಬಾಯಾರಿಕೆ ಆಗಿರಬಹುದು, ನಾನು ಉನ್ನತ ಅಧಿಕಾರಿಯಾಗಿರುವುದರಿಂದ ಆತ ನನಗೆ ನೀರು ಕೊಡುತ್ತಿದ್ದಾನೆ, ಆದರೆ ಆತನೂ ನನ್ನ ಹಾಗೆಯೇ ಎಂದು ತಿಳಿದು ಮೊದಲು ನೀರು ತಂದ ಸೈನಿಕನಿಗೇ ಆ ನೀರನ್ನು ಕುಡಿಸಿ, ತನ್ನಡಿಯಲ್ಲಿ ಬರುವಂತಹ ಸೈನಿಕರಿಗೂ ನೀರು ಕೊಟ್ಟು ಅವರುಗಳ ದಾಹ ತಣಿಯುವುದನ್ನು ನೋಡಿ ಮೈ ಮನಗಳಿಂದ ಆನಂದ ತುಲಲಿತನಾಗಿ ಖುಷಿ ಪಡುತ್ತಾನೆ. ಸಿಡ್ನಿಯ ಮನದಲ್ಲಿರುವ ದಯೆ, ಕರುಣೆ, ಪರೋಪಕಾರವನ್ನು ನೀನು ನೆನೆ ಯುತ್ತಲೇ ಇದ್ದು ಆ ತತ್ವವನ್ನು ನೀನು ಅನುಸರಿಸು ಎಂದು ಈ ಮುಕ್ತಕದಲ್ಲಿ ಹೇಳಿದ್ದಾರೆ.



ಶುಭೋದಯಕ್ಕೊಂದು ಕಗ್ಗ
ರವೀ ಚಿಕ್ಕನಾಯಕನಹಳ್ಳಿ

ಪರರ ಹಿತದಲ್ಲಿ ಪರತತ್ವವನ್ನು ಕಾಣುವುದೇ ಜೀವನದಲ್ಲಿ ಸಂತೋಷ ತರುವಂತಹ ಸಂಗತಿ. ಎಲ್ಲರೂ ಅವರವರ ಸ್ವಾರ್ಥಕ್ಕೆ ಬದು ಕುತ್ತಾರೆ, ಆದರೆ ಪರರ ಹಿತದಲ್ಲಿ, ಪರೋಪಕಾರದಲ್ಲಿ ಸಂತೋಷಿ ಯಾಗಿ, ನಿಸ್ವಾರ್ಥತೆಯಲ್ಲಿ ಬದು ಕುವ ಜೀವನವೇ ಶ್ರೇಷ್ಠವಾಗಿರು ತ್ತದೆ. ಈ ಬಗ್ಗೆ ಈ ಮುಕ್ತಕದಲ್ಲಿ ಮನುಷ್ಯನು ತಾನು ತನ್ನ ಜೀವನ ವನ್ನು ಹೇಗೆ ಜೀವನ ನಡೆಸಬೇಕೆಂದು ಒಂದು ಸೊಗಸಾದ ಉದಾಹರಣೆಯೊಂದಿಗೆ ವಿವರಿಸಿದ್ದಾರೆ. ಐರೀಶ್ ನ ಆಂತರಿಕ ಗಲಭೆಯ ಯುದ್ಧರಂಗದಲ್ಲಿ ಸೇನೆಯನ್ನು ಮುನ್ನಡೆಸುತ್ತಿದ್ದ ಸಿಡ್ನಿಯೆಂಬ ಸೈನ್ಯಾಧಿಕಾರಿಯು ಯುದ್ಧಭೂಮಿಯಲ್ಲಿ ಹೋರಾಟ ಮಾಡುತ್ತಾ ಬಳಲಿ ಧರೆಗೊರಗುತ್ತಾನೆ. ಆತ ಬೀಳುವುದನ್ನು ಕಂಡಂತಹ ಆತನ ಕೈ ಕೆಳಗೆ ಕೆಲಸ ಮಾಡುವಂತಹ ಸೇವಕನೊಬ್ಬ ಸಿಡ್ನಿಗೆ ಕುಡಿಯಲು ನೀರು ತಂದು ಉಪಚರಿಸಲು ಮುಂದಾಗುತ್ತಾನೆ. ಆ ಸಮಯದಲ್ಲಿ ಸಿಡ್ನಿಗೆ ಬಾಯಾರಿಕೆಯ ಬಳಲಿಕೆಯಾ ಗಿದ್ದರೂ ಸಹ ತನ್ನ ಹಾಗೆ ಯುದ್ಧ ಮಾಡುತ್ತಿರುವ ಹಾಗೂ ಅತಿಯಾಗಿ ಬಾಯಾರಿಕೆಯಿಂದ ಬಳಲಿರುವ ಸೈನಿಕರೂ ಆತನಿಗೆ ಕಂಡು ಬರುತ್ತಾರೆ. ಆಗ ಸಿಡ್ನಿಯು ಇತರೆ ಸೈನಿಕರೂ ಸಹ ತನ್ನ ಹಾಗೆ ಬಳಲಿದ್ದಾರೆ ಎಂದು ಮನಗಂಡ ಮನಸ್ಥಿತಿಯಿಂದ ಇತರೆ ಸೈನಿಕರಿಗೆ ನೀರು ಕೊಡಿಸಿ, ಕುಡಿಸುತ್ತಾನೆ. ತನ್ನಂತೆಯೇ ಇತರರು ಎಂಬ ಭಾವನೆಯನ್ನು ಅದೂ ಯುದ್ಧರಂಗ ದಲ್ಲಿ ತೋರಿಸುವ ಆತನ ಔದಾರ್ಯತೆಯು ಎಲ್ಲರ ಮೆಚ್ಚುಗೆಗೆ ಪಾತ್ರವಾಗುತ್ತದೆ. ಈ ಮುಕ್ತಕದ ಮುಖಾಂತರ ಹೇಗೆ ನಮ್ಮನ್ನು ನಾವು ರೂಪಿಸಿಕೊಳ್ಳಬೇಕು ಎಂಬುದನ್ನು ಎತ್ತಿ ತೋರಿಸಿದ್ದಾರೆ.

ಶ್ರೇಯಸ್ಸು ಪ್ರೇಯಸ್ಸು!

• ಪುರುಷೋತ್ತಮ್ ರಾಜ್ ಎನ್.

ಇದೆಂಥಾ ಶೀರ್ಷಿಕೆ ಎಂದು ಯೋಚಿಸುತ್ತಿರುವಿರಾ? ಕೆಲವು ವಿಚಾರಗಳು ನಮ್ಮ ವಿದ್ಯಾರ್ಥಿಗಳ ಮನವನ್ನು ಆಕರ್ಷಿಸಿ, ಸ್ವಲ್ಪ ಮಟ್ಟಿಗೆ ಕೆಣಕಿ, ಸ್ವ-ಚಿಂತನೆಗೆ ಕಾರಣವಾಗಬೇಕೆಂಬುದೇ ಈ ಲೇಖನದ ಆಶಯ.

ಈಗಿನ ಆಧುನಿಕ ಮತ್ತು ತಂತ್ರಜ್ಞಾನಾಧಾರಿತ ಯುಗದಲ್ಲಿ ವಿದ್ಯಾರ್ಥಿಗಳು ತಮ್ಮ ಬದುಕಿನ ''ಶ್ರೇಯಸ್ಸು- ಪ್ರೇಯಸ್ಸು'' ಯಾವುದೆಂದು ಕಂಡುಕೊಳ್ಳುವಲ್ಲಿ ವಿಫಲರಾಗಿದ್ದಾರೆ. ಶ್ರೇಯಸ್ಸು- ಎಂದರೆ ಶ್ರೇಷ್ಠವಾದದ್ದು.; ಪ್ರೇಯಸ್ಸು- ಎಂದರೆ ಪ್ರಿಯವಾದದ್ದು. ವಿದ್ಯಾರ್ಥಿಗಳ ಶ್ರೇಯಸ್ಸು ಪುಸ್ತಕವಾಗಿದ್ದರೂ ಅವರುಗಳು ತಮ್ಮ ಪ್ರೇಯಸ್ಸು ಮೊಬೈಲ್ ಹಿಂದೆ ಬಿದ್ದು ಕಾಲಹರಣ ಮಾಡುತ್ತಿರುವುದನ್ನು ಅಧ್ಯಾಪಕ ರಾದ ನಾವುಗಳು ನೋಡಿಯೂ ಸುಮ್ಮನಿರುವಂತಹ ವಿಷಾದನೀಯ ಸ್ಥಿತಿ ತಲುಪಿದ್ದೇವೆ. ಕಠೋಪನಿಷತ್ತಿ ನಲ್ಲಿ ಯಮನು ನಚಿಕೇತನಿಗೆ ಪ್ರೇಯಸ್ಸನ್ನು ಬಿಟ್ಟು ಶ್ರೇಯಸ್ಸನ್ನೇ ಆಯ್ದುಕೊಳ್ಳು ವವನು ಧೀರನೆಂದು ಹೇಳಿದ್ದಾರೆ. ಇತಿಹಾಸದ ಪುಟಗಳಲ್ಲಿ ಸೇರಿರುವ ಮಹನೀಯರೆಲ್ಲರೂ ಜ್ಞಾನ ನಕ್ಷತ್ರಗಳಾಗಿ ಮಿಂಚುತ್ತಿರು ವುದು ತಮ್ಮ ಬದುಕಿನಲ್ಲಿ ಪ್ರಭಾವ ಬೀರಿದ ಪುಸ್ತಕಗಳಿಂದಲೇ ತಾನೇ?

ವಾಚಸ್ಪತಿ ಮಿಶ್ರ ಎಂಬ ವೇದಾಂತದ ಶಾಸ್ತ್ರಜ್ಞರು ಒಂದು ಪುಸ್ತಕವನ್ನು ಬರೆಯುವುದಕ್ಕಾಗಿ ಹನ್ನೆರಡು ವರ್ಷಗಳ ತಪಸ್ಸಿನ ರೀತಿ ಸಾಧನೆ ಮಾಡಿ, ಮನೆಯಲ್ಲಿ ಇದ್ದ ಪತ್ನಿಯನ್ನೇ ಮರೆತಿದ್ದು ಜ್ಞಾನಕ್ಕಾಗಿ, ಪುಸ್ತಕಕ್ಕಾಗಿ. ಪುಸ್ತಕವನ್ನು ಓದುವುದು ಯಾವುದೋ ಗುರಿ ಸಾಧನೆಗಾಗಿ ಮಾತ್ರವಲ್ಲ, ಬದಲಿಗೆ ಆತ್ಮ ಸಂತೋಷಕ್ಕಾಗಿ. ಭಾರತ ಮಹಿಳಾ ಕ್ರಿಕೆಟ್ ತಂಡದ ಮಾಜಿ ನಾಯಕಿ ಮಿಥಾಲಿ ರಾಜ್ ತಾವು ಆಟದ ಮೈದಾನಕ್ಕೆ ಬರುವ ಅರ್ಧಗಂಟೆ ಮುಂಚಿತವಾಗಿ ತಮ್ಮ ನೆಚ್ಚಿನ ಪುಸ್ತಕವನ್ನು ಓದಿ ಬರುತ್ತಿದ್ದರು. ಅವರೇ ಹೇಳುವಂತೆ ಇದು ಅವರ ಒತ್ತಡ ನಿರ್ವಹಣೆಗೆ ಸಹಕಾರಿಯಾಗುತ್ತಿತ್ತು. ಡಾ. ಬಿ.ಆರ್. ಅಂಬೇಡ್ಕರ್ ಮೈಮೇಲೆ ಹರಿದ ಬಟ್ಟೆ ಇದ್ದರೂ ಪರವಾಗಿಲ್ಲ ಕೈಯಲ್ಲಿ ಒಂದು ಪುಸ್ತಕವಿರಲಿ ಎಂದು ಹೇಳಿದ್ದರು. ನಿಮ್ಮ ಬಳಿ ಎರಡು ರೂಪಾಯಿಗಳಿದ್ದರೆ ಒಂದು ರೂಪಾಯಿಯನ್ನು ಊಟಕ್ಕಾಗಿ ಬಳಸಿ ಮತ್ತೊಂದು ರೂಪಾಯಿಯನ್ನು ಪುಸ್ತಕ ಖರೀದಿಗಾಗಿ ಮೀಸಲಿಡಿ ಎಂದಿದ್ದಾರೆ. ಊಟ ನಮ್ಮನ್ನು ನಿದ್ರಿಸುವಂತೆ ಮಾಡಿದರೆ, ಪುಸ್ತಕ ನಮ್ಮನ್ನು ಸದಾ ಎಚ್ಚರದಲ್ಲಿಡುತ್ತದೆ. 286 ದಿನಗಳ ಗಗನ ಯಾತ್ರೆಯ ಕಠಿಣ ದಿನಗಳಲ್ಲಿ ಸುನಿತಾ ವಿಲಿಯಮ್ಸ್ ಅವರಿಗೆ ಆತ್ಮಸ್ಥೈರ್ಯ ನೀಡಿದ್ದು ಅವರ ಜೊತೆಗಿದ್ದ ಜಗತ್ತಿನ ಶ್ರೇಷ್ಠ ಧರ್ಮಗ್ರಂಥ ಭಗವದ್ಗೀತೆ. ಒಂದು ಕೈಯಲ್ಲಿ ಪುಸ್ತಕ ಹಿಡಿದು ಮತ್ತೊಂದು ಕೈಯಲ್ಲಿ ಮರದ ದಿಂಬೆಯನ್ನು ಕಡಿಯುತ್ತಲೇ ಅಬ್ರಹಾಂ ಲಿಂಕನ್ ಅಮೇರಿಕಾ ದೇಶದ ಹದಿನಾರನೇ ರಾಷ್ಟ್ರಪತಿ ಯಾದದ್ದು.

ಪದಬಂಧ

• ಸಿ.ರವಿಶಂಕರ ಶಾಸ್ತ್ರಿ, ದಂಬೆ

■	1	■	2		3	■	4	■
5				■	6			
■		■	7	8		■		■
9			■		■	10		11
	■	■	12			■	■	
13	14		■		■	15	16	
■		■	17		18	■		■
19				■	20			
■		■	21			■		■

ಎಡದಿಂದ ಬಲಕ್ಕೆ

2. ಇದರ ಬೆಲೆ ಈಚೆಗೆ ಮೇಲಕ್ಕೇರಿದೆ (3)
5. ಮಧ್ಯೆ ಸೂರ್ಯನೊಂದಿಗೆ ಬಂದಿರುವ ತಾವರೆ (4)
6. ಅರ್ಥವಿಲ್ಲದ ನುಡಿ (4)
7. ತಲೆಗೆ ಸುತ್ತಿಕೊಳ್ಳುವ ಮುಂಡಾಸು (3)
9. ವೈಮನಸ್ಯ ಸತ್ವಹೀನವಾದಂತಿದೆ (3)
10. ಹಸುವಿನೊಂದಿಗೆ ಬಂದಿರುವ ಹತೋಟಿ (3)
12. ಗಣಪನಿಗೆ ಪ್ರಿಯವಾದ ಸಿಹಿ ತಿಂಡಿ(3)
13. ಸತ್ತವರಿಗಾಗಿ ಕಟ್ಟುವ ಸ್ಮಾರಕ (3)
15. ಕರಮುಗಿಯಬೇಕಾದ ಶಿವ (3)
17. ನಮ್ರತೆಯಿಲ್ಲಿ ನಯವಾಗಿದೆ (3)
19. ಸಂಸ್ಕೃತದಲ್ಲಿ ನೆಲ್ಲಿಕಾಯಿ (4)
20. ದಮಯಂತಿಯ ಗಂಡನ ಅಡುಗೆ (4)
21. ಕೋಮಲವಾದ (3)

ಮೇಲಿಂದ ಕೆಳಕ್ಕೆ

1. ಪುರದಲ್ಲಿ ಸಿಕ್ಕಿದ ಮನ್ನಣೆ (4)
2. ಹಡಗು ನಿಲ್ಲುವ ಸ್ಥಳ (3)
3. ಅಸ್ತವ್ಯಸ್ತವಾದರೂ ಜೋರಾಗಿ ಕೂಗುವುದು (3)
4. ಭೇಟಿ ಅಥವಾ ಮಿಲನ (4)
8. ಮುಂದುವರಿಯಲು ದಾರಿತೋರಿಸುವಿಕೆ (5)
9. ಅರಳುವಿಕೆ (3)
11. ದೊಡ್ಡದಾದ ಪಟ್ಟಣ (3)
14. ತಾಯಿಯ ತಂದೆಯ ಹೆಸರು (4)
16. ಸುದ್ದಿಗಳನ್ನು ಪ್ರಕಟಿಸುವವನು ತಲೆಕೆಳಗಾಗಿದ್ದಾನೆ (4)
17. ನಷ್ಟವಾದ ಅಥವಾ ನ್ಯೂನತೆ ಎಂದರ್ಥ (3)
18. ದಿಕ್ಕುತಪ್ಪಿಸಿ ಬಂದಿರುವ ಮಗ (3)

ಬಾಲ ಶಂಕರಾಚಾರ್ಯರಿಗೆ ಕಾಳಿಕಾದೇವಿ

ಬಾಲ ಸನ್ಯಾಸಿಗಳಾಗಿದ್ದ ಆದಿ ಶಂಕರಾಚಾರ್ಯರು ದೇಶ ಸಂಚಾರ ಮಾಡುವಾಗ ಒಂದು ಮನೆಗೆ ಭಿಕ್ಷೆಗೆಂದು ಹೋಗುತ್ತಾರೆ. ಮಕ್ಕಳಿಲ್ಲದ ಆ ಮನೆಯ ಯಜಮಾನತಿ ಒಬ್ಬ ವಯಸ್ಸಾದ ಹೆಂಗಸು. ಶಂಕರಿಗೆ ಭಿಕ್ಷೆ ನೀಡಿ ಯಾರು ಮಗು ನೀನು ಈ ಇಳಿ ಸಂಜೆಯಲ್ಲಿ ಎಲ್ಲಿ ಹೊರಟಿರುವೆ ಎಂದು ಕೇಳಿದಳು. ಅಮ್ಮ ನಾನೊಬ್ಬ ಸನ್ಯಾಸಿ,

ಸಧ್ಯ ಕೊಡಚಾದ್ರಿಯತ್ತ ಹೊರಟಿರುವೆ ಎಂದರು ಬಾಲ ಶಂಕರಾಚಾರ್ಯರು. ಆಗ ಆ ಹಿರಿಯ ಹೆಂಗಸು ಅಕ್ಕರೆಯಿಂದ ಬೇಡ ಮಗು ಈ ಸಮಯದಲ್ಲಿ ಅಲ್ಲಿ ಹೋಗುವುದು ಅಷ್ಟು ಒಳ್ಳೆಯಲ್ಲ, ಇಂದು ಅಮಾವಾಸ್ಯೆ ಬೇರೆ, ನೀನು ಊರ ಹೆಬ್ಬಾಗಿಲು ತಲುಪುವ ವೇಳೆಗೆ ಅರ್ಧ ರಾತ್ರಿಯಾಗಿರತ್ತೆ ಎಂದಳು. ಆದರೆ ಏನಮ್ಮ? ಎಂದು ಶಂಕರರು ಕುತೂಹಲದಿಂದ ಕೇಳುತ್ತಾರೆ.

ಆಗ ಆ ಹಿರಿಯ ಹೆಂಗಸು, ಅಯ್ಯೋ ನಿನಗೆ ಗೊತ್ತಿಲ್ಲ ಅಮಾವಾಸ್ಯೆಯ ರಾತ್ರಿ ಈ ಊರಿನ ಗ್ರಾಮದೇವಿ ಉಗ್ರವಾಗಿ ಭದ್ರಕಾಳಿ ಸ್ವರೂಪಳಾಗಿರುತ್ತಾಳೆ. ನೀನು ಆ ದಾರಿಯಾಗಿ ಹೋದರೆ ಬಡಿದು ಬಾಯಿಗೆ ಹಾಕಿ ನುಂಗೇ ಬಿಡುತ್ತಾಳೆ ಎಂದಳು ಆತಂಕದಿಂದ. ಶಂಕರರ ಮುಖದಲ್ಲಿ ಭಯಕ್ಕಿಂತ ಸಂತೋಷನೇ ಜಾಸ್ತಿ ಯಾಯಿತು. ಈ ನೆಪದಿಂದ ಜಗನ್ಮಾತೆಯ ದರ್ಶನವಾಗುವದೆಂದು ನಂತರ ಶಂಕರರು ಎಲ್ಲಿಯೂ ನಿಲ್ಲದೆ ನಡೆಯುತ್ತಾ ಊರ ಬಾಗಿಲನ್ನು ತಲುಪುತ್ತಾರೆ.

ಅಲ್ಲಿ ಆ ಹಿರಿಯ ಹೆಂಗಸು ಹೇಳಿದಂತೆ ಊರ ದೇವಿ ಕಾಳಿಯು, ಹೆಬ್ಬಾಗಿಲ ಬಳಿ ಉಗ್ರ ಸ್ವರೂಪಳಾಗಿ ಘರ್ಜಿಸುತ್ತಿರುತ್ತಾಳೆ. ಅದನ್ನು ಕಂಡ ಶಂಕರರು ಆಹಾ ಧನ್ಯೋಸ್ಮಿ ಎಂದು ಆಕೆಯ ಕಾಲಿಗೆರಗಿ ನಮಸ್ಕರಿಸುತ್ತಾರೆ . ಅದನ್ನು ಕಂಡ ಕಾಳಿ ಹೇ ಬಾಲಕ ನನ್ನನ್ನು ಕಂಡು ಭಯವಿಲ್ಲವೇ? ಏನು ನಿನ್ನ ದುಸ್ಸಾಹಸ ಈ ಸಮಯದಲ್ಲಿ ನನ್ನ ಸ್ಥಳಕ್ಕೆ ಬರುವುದು ಎಂದು ಹೇಳಿ ಶಂಕರನನ್ನು ನುಂಗಲು ಮುಂದಾಗುತ್ತಾಳೆ. ಇತ್ತ ಶಂಕರಾಚಾರ್ಯರು

ಒಂದಿಷ್ಟೂ ಅಳುಕದೆ ಅತ್ಯಂತ ಭಕ್ತಿ ಭಾವದಿಂದ ಧನ್ಯೋಸ್ಮಿ ಮಾತಾ...ಟಟ ಕುಪುತ್ರೋ ಜಾಯತ, ಕೋಚಧಪಿಕೋ ಮಾತಾ ನ ಭವತಿ ಟಟ ಅಂದರೆ ಮಾತೆಯದವಳು ಎಂದು ತನ್ನ ಮಗುವನ್ನು ಕೊಲ್ಲಲಾರಳು . ಸೌಮ್ಯ ರೂಪಕ್ಕೆ ಬಂದು ದರ್ಶನ ನೀಡು ತಾಯೆ ಎಂದು ಬಿಡದೆ ಪ್ರಾರ್ಥಿಸುತ್ತಾರೆ.

ಕಾಳಿ ಆ ಬಾಲಕನ ಧೈರ್ಯ ಮತ್ತು ಭಕ್ತಿಗೆ ಮೆಚ್ಚಿ ಪ್ರಸನ್ನಳಾಗಿ ಸೌಮ್ಯ ರೂಪ ತಾಳಿ. ಸ್ವರ್ಣ ರೇಖಾಂಕಿತ ಶ್ರೀ ಚಕ್ರದ ರಹಸ್ಯವನ್ನ ಶಂಕರರಿಗೆ ಆಶೀರ್ವಾದವಾಗಿ ಅರುಹುತ್ತಾಳೆ. ಅಷ್ಟೇ ಅಲ್ಲ ತನ್ನನ್ನು ಆ ಶ್ರೀ ಚಕ್ರದ ಮೇಲೆ ಪ್ರತಿಷ್ಠಾಪಿಸು. ನಾನು ಸರಸ್ವತಿ, ಲಕ್ಷ್ಮಿ, ಪಾರ್ವತಿ ಸ್ವರೂಪಳಾಗಿ ಮೂಕಾಂಬಿಕಾ ಹೆಸರಿನಲ್ಲಿ ಇಲ್ಲಿಯೇ ನೆಲೆಸುತ್ತೇನೆ. ನೀನು ಜಗದ್ಗುರುವಾಗಿ ಪ್ರಖ್ಯಾತಿಯನ್ನು ಪಡೆ ಎಂದು ಆಶೀರ್ವದಿಸಿದಳು. ಅತ್ಯಂತ ಭಕ್ತಿ ಭಾವದಿಂದ ನಂತರ ಶಂಕರರು ನಮಸ್ತೇಸ್ತು ಮಹಾ ಮಾಯೆ ಶ್ರೀ ಪೀಠೆ ಸುರಪೂಜಿತೇ ಎಂದು ದೇವಿಯನ್ನು ಸ್ತೋತ್ರ ಮಾಡುತ್ತಾರೆ. ಇದೇ ಘಟನೆಯನ್ನು ಪ್ರತಿಬಿಂಬಿಸುವ ಭಾವಚಿತ್ರಗಳನ್ನು ತಾವು ನೋಡಿರುತ್ತೀರಿ.

ಪ್ರಸನ್ನಳಾದ ಭದ್ರ ಕಾಳಿ ಆಗಸದಲ್ಲಿ ಬೃಹದಾಕಾರದ ಮಿಂಚೊಂದು ಪ್ರಕಟವಾಗಿ ಆಕಾಶ ಮತ್ತು ಭೂಮಿ ಏಕವಾದ ರೂಪವನ್ನ ಧರಿಸಿ ಮೂಕಾಂಬಿಕೆಯಾಗಿ ಶಂಕರಾಚಾರ್ಯರ ಹಿಂದೆಯೇ ಬರುತ್ತಿರುವ ಅದ್ಭುತ ದೃಶ್ಯ ನೋಡಿದಷ್ಟೂ ಕಣ್ತುಂಬಿ ಬರುತ್ತದೆ. ಇಂತಹ ದೈವಾಂಶ ಸಂಭೂತರಾದ ಶಂಕರಾಚಾರ್ಯರ ಜಯಂತಿಯ ಹಾರ್ದಿಕ ಶುಭಾಶಯಗಳು.

ಮಾತೃ ಸ್ವರೂಪಿಯಾದ ತಾಯಿ ಅದೆಷ್ಟೇ ಕಠಿಣ ಹೃದಯಿಯಾದರೂ ಬಿಡದೆ ಭಕ್ತಿ ಭಾವದಿಂದ ಅವಳನ್ನು ಒಲಿಸಿಕೊಳ್ಳಬಹುದು. ಅನೇಕ ಬಾರಿ ನಮಗೆ ಬಂದ ಕಷ್ಟಗಳಿಗೆ ದೇವರನ್ನು ದೂರುತ್ತಿರುತ್ತೇವೆ. ದೇವರಿಗೆ ಕರುಣೆಯೇ ಇಲ್ಲ ನಮ್ಮನ್ನು ಈ ಕಷ್ಟದಿಂದ ಪಾರು ಮಾಡುವುದಿಲ್ಲ ಎಂದು ನಂಬಿಕೆಯನ್ನೇ ಕಳೆದುಕೊಳ್ಳುತ್ತೇವೆ. ಆದರೆ ಅಂತಹ ಸಮಯದಲ್ಲೇ ನಾವು ಮತ್ತಷ್ಟು ಉತ್ಕಟವಾಗಿ ಭಕ್ತಿ ಭಾವದಿಂದ ದೇವರನ್ನು ನಂಬಿದರೆ ಖಂಡಿತ ನಮ್ಮ ಕಷ್ಟಗಳಿಗೆ ಆ ದೇವಿ/ ದೇವರು ಸ್ಪಂದಿಸದೆ ಇರುವುದಿಲ್ಲ ಎನ್ನುವುದಕ್ಕೆ ಮೇಲಿನ ಘಟನೆ ಅತ್ಯುತ್ತಮ ಸಾಕ್ಷಿ.

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

ಒಂದೊಳ್ಳೆ ಮಾತು
Vishwavani TV Special ಯೂಟ್ಯೂಬ್ ಚಾನೆಲ್‌ನಲ್ಲಿ

ಪ್ರತಿ ಅಂತ್ಯವೂ ಆರಂಭವಾಗಿದೆ

ಕೃಷ್ಣ ಹೇಳುತ್ತಾನೆ ನಾನು ನಿಮಗೆ ಜ್ಞಾನ ಮತ್ತು ವಿಜ್ಞಾನಗಳನ್ನು ವಿವರಿಸಿ ಹೇಳುತ್ತೇನೆ. ನೀವು ಅವುಗಳನ್ನು ತಿಳಿದುಕೊಂಡರೆ ಮತ್ತೆ ತಿಳಿಯಬೇಕಾದದ್ದು ಯಾವುದು ಇರುವುದಿಲ್ಲ. (7.2) ಇದು ಮನಸ್ಸಿನ ಅಭಿರುಚಿಯುಳ್ಳ ಜನರು ಜ್ಞಾನ ಮತ್ತು ವಿಜ್ಞಾನದ ಮೂಲಕ ಅನುಸರಿಸುವ ಮಾರ್ಗ. ಈ ಮೊದಲು ಕೃಷ್ಣ ಹೃದಯಾಸಕ್ತ (ಭಕ್ತಿ) ಜನರಿಗೆ ಒಂದು ಮಾರ್ಗ ಹೇಳಿದ್ದ ಅದೆಂದರೆ ಆತ್ಮದಲ್ಲಿ ಎಲ್ಲ ಜೀವಿಗಳನ್ನು ನೋಡು, ಎಲ್ಲ ಜೀವಿಗಳಲ್ಲಿಯೂ ಆತ್ಮವನ್ನು ನೋಡು ಹಾಗೂ ಭಗವಂತನನ್ನು ಎಲ್ಲೆಡೆ ನೋಡು. (6.29) ಒಮ್ಮೆ ಇದನ್ನು ತಿಳಿದ ಮೇಲೆ ಮತ್ತೇನೂ ತಿಳಿಯುವುದು ಇರುವುದಿಲ್ಲ.

ಪ್ರಸ್ತುತ ವೈಜ್ಞಾನಿಕ ನಿರ್ಣಯವೆಂದರೆ ಈ ವಿಶ್ವವೆಂಬುದು ಶೂನ್ಯದಿಂದ ಉದ್ಭವವಾಗಿದೆ. ಸದಾ ವಿಕಸನಗೊಳ್ಳುತ್ತಿರುವ ವಿಶ್ವವು ಮಹಾ ಸ್ಫೋಟದಿಂದ 13.8 ಬಿಲಿಯನ್ ವರ್ಷಗಳ ಹಿಂದೆ ರೂಪುಗೊಂಡಿದೆ. ಈ ವಿಶ್ವದ ಮೊದಲು ಬೇರೊಂದು ವಿಶ್ವ ಇತ್ತು ಎಂದು ವಾದಿಸಲಾಗುತ್ತಿದೆ. ಇದಕ್ಕೆ ವಿಶ್ವ ವಿದ್ಯುತ್ಕಾಂತದ ಹಿನ್ನೆಲೆ ವಿಕಿರಣವನ್ನು (ಎಂ.ಬಿ.ಆರ್.) ಆಧಾರವನ್ನಾಗಿ ಕೊಡುತ್ತಾರೆ. ವಿಶ್ವವು ಬಹಳ ತೆಳುವಾಗಿ ವಿಸ್ತರಿಸುತ್ತದೆ ಎಂದು ಅಂದಾಜಿಸಲಾಗಿದೆ. ಆದರೆ ಖಾಲಿ ಸ್ಥಳದ ಶಕ್ತಿಯು ಮತ್ತೊಂದು ವಿಶ್ವವನ್ನು ರಚಿಸಬಹುದು. ಇದರ ಅರ್ಥವೇನೆಂದರೆ ಇದು ಸೃಷ್ಟಿ ಮತ್ತು ಲಯದ ಒಂದು ಚಕ್ರಗತಿಯ ಪ್ರಕ್ರಿಯೆಯಾಗಿದೆ. ಈ ಹಿನ್ನೆಲೆಯಿಂದಾಗಿ ನಾವು ಕೃಷ್ಣ ಹೇಳಿದ ಈ ಮಾತುಗಳನ್ನು ಅರ್ಥಮಾಡಿಕೊಳ್ಳಬಹುದು ಅವನು ಇಡೀ ವಿಶ್ವದ ಪ್ರಳಯಾಂತಕನು. (7.6) ಮೊದಲನೆಯದಾಗಿ ಇದು ಚಕ್ರಗತಿಯ ಪ್ರಕ್ರಿಯೆಯ ಸೂಚನೆ ಯಾಗಿದೆ. ಎರಡನೆಯದಾಗಿ ಏಕತೆ ಸೃಷ್ಟಿ ಹಾಗೂ ಲಯ ಎರಡನ್ನು ಆವರಿಸಿರುತ್ತದೆ. ಪ್ರತಿ ಸಂಸ್ಕೃತಿಯಲ್ಲಿಯೂ ದೇವರನ್ನು ಸೃಷ್ಟಿಕರ್ತ ಎಂದು ವೈಭವೀಕರಿಸಲಾಗಿದೆ. ಆದರೆ ಪರಮಾತ್ಮನಾಗಿ ಕೃಷ್ಣ ತಾನು ಸೃಷ್ಟಿಕರ್ತ ಹಾಗೂ ಲಯ ಕರ್ತ ಎರಡು ಹೌದು ಎಂದು ಘೋಷಿಸುತ್ತಾನೆ.

ಅವನು ಮುಂದುವರಿದು ಹೇಳುತ್ತಾನೆ ನನಗಿಂತ ಶ್ರೇಷ್ಠವಾದದ್ದು ಯಾವುದೂ ಇಲ್ಲ. ದಾರಕ್ಕೆ ಪೋಣಿಸಿದ ಮಣಿಗಳಂತೆ ಇಡೀ ವಿಶ್ವವೂ ನನಗೆ ಜೋಡಿಸಲ್ಪಟ್ಟಿದೆ. (7.7) ಆ ಮಣಿಗಳ ದಾರವನ್ನು ವ್ಯಕ್ತವಾದದ್ದನ್ನು (ಮಣಿಗಳು) ಹಾಗೂ ಅವ್ಯಕ್ತವಾದದ್ದನ್ನು (ದಾರ) ವಿವರಿಸಲು ಉದಾಹರಣೆಯನ್ನಾಗಿ ಉಪಯೋಗಿಸಲಾಗಿದೆ. ದಾರವ ಕಾಣುವುದಿಲ್ಲ ಹಾಗೂ ಕೇವಲ ಮಣಿಗಳಿಂದ ಸುಂದರ ಮಾಲೆಯನ್ನು ಮಾಡಲು ಸಾಧ್ಯವಿಲ್ಲ. ಇದು ಕಾಣದಿರುವ ಬೇರುಗಳಿಲ್ಲದೇ ಮರವು ಇರಲು ಸಾಧ್ಯವಿಲ್ಲ ಎಂಬ ಉದಾಹರಣೆಯಂತಿದೆ. ಹಾಗೆಯೇ ಪರಮಾತ್ಮನಿಲ್ಲದೆ ವಿಶ್ವವು ಇರಲು ಸಾಧ್ಯವಿಲ್ಲ.

ನಿತ್ಯಜೀವನದಲ್ಲಿ ಭಗವದ್ಗೀತೆ



ಕೆ.ಶಿವಪ್ರಸಾದ್
ಹಿರಿಯ ಐಎಎಸ್ ಅಧಿಕಾರಿ

ನೀವೂ ಬರೆಯಬಹುದು
ನಮ್ಮ ವಿಳಾಸ
ಪುರವಣಿ ವಿಭಾಗ, ನಂ.1687, 3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು-560098
e-mail: vishwavanimagazine@gmail.com

ಅಂಕ ಪಟ್ಟಿ

	ಪಂದ್ಯ	ಗೆಲುವು	ಸೋಲು	ಅಂಕ
ಬೆಂಗಳೂರು	10	07	03	14
ಮುಂಬೈ	10	06	04	12
ಗುಜರಾತ್	09	06	03	12
ಡೆಲ್ಲಿ	10	06	04	12
ಪಂಜಾಬ್	09	05	03	11
ಲಖನೌ	10	05	05	10
ಕೋಲ್ಕತ್ತಾ	10	04	05	09
ರಾಜಸ್ಥಾನ್	10	03	07	06
ಹೈದರಾಬಾದ್	09	03	06	06
ಚೆನ್ನೈ	09	02	07	04

ಇಂದಿನ ಪಂದ್ಯ

7.30 PM

ಗುಜರಾತ್ ಟೈಟಾನ್ಸ್ VS ಸನ್‌ರೈಸರ್ಸ್ ಹೈದರಾಬಾದ್

ನರೇಂದ್ರ ಮೋದಿ ಸ್ಟೇಡಿಯಂ, ಅಹಮದಾಬಾದ್

IPL ರಂಗು 2025

ಅಶ್ವಿನ್ ಅವರನ್ನು ಚೆನ್ನೈ ಉಳಿಸೋದು ಅನುಮಾನ

'ಪ್ರಸ್ತುತ ನಡೆಯುತ್ತಿರುವ ಐಪಿಎಲ್ ಟೂರ್ನಿಯಲ್ಲಿ ಕಳಪೆ ಪ್ರದರ್ಶನ ತೋರುತ್ತಿರುವ ಚೆನ್ನೈ ಸೂಪರ್ ಕಿಂಗ್ಸ್ ತಂಡದ ಸ್ಪಿನ್ನರ್ ರವಿಚಂದ್ರನ್ ಅಶ್ವಿನ್ ಹಾಗೂ ವೇಗದ ಬೌಲರ್ ಮತೀಶ ಪತಿರಾನ ಅವರನ್ನು ಮುಂದಿನ ಆವೃತ್ತಿಯಲ್ಲಿ ಫ್ರಾಂಚೈಸಿಯು ಉಳಿಸಿಕೊಳ್ಳುವುದು ಅನುಮಾನ. ಅಶ್ವಿನ್ ಅವರ ಮೂಲಕ ಹೆಚ್ಚಿನ ಮೊತ್ತ ಲಾಕ್ ಆಗಿದೆ, ಹಾಗಾಗಿ ಅವರನ್ನು ಉಳಿಸಿಕೊಳ್ಳುವುದು ಅಥವಾ ಬಿಡುಗಡೆಗೊಳಿಸುವುದು ದೊಡ್ಡ ಪ್ರಶ್ನೆಯಾಗಿದೆ. ತಮ್ಮ ಮೊತ್ತವನ್ನು ಹೆಚ್ಚಿಸಿಕೊಳ್ಳಬೇಕೆಂದು ಬಯಸಿದರೆ, ಅಶ್ವಿನ್ ಅವರನ್ನು ರಿಲೀಸ್ ಮಾಡಬಹುದು, ಅಲ್ಲದೆ ಅವರ ಜತೆಗೆ ಮತೀಶ ಪತಿರನಾ ಅವರನ್ನೂ ಕೂಡ ಬಿಡುಗಡೆಗೊಳಿಸಿ, ಅವರ ಸ್ಥಾನಕ್ಕೆ ಪರ್ಯಾಯ ಆಟಗಾರರನ್ನು ಹುಡುಕುವ ಸಾಧ್ಯತೆ ಹೆಚ್ಚು.

-ಸಂಜಯ್ ಬಾಂಗರ್ ಭಾರತದ ಮಾಜಿ ಆಲ್‌ರೌಂಡರ್

ಅಯ್ಯರ್‌ಗೆ 12 ಲಕ್ಷ ದಂಡ

ಚೆನ್ನೈ: ಬುಧವಾರ ರಾತ್ರಿ ಚೆನ್ನೈ ಸೂಪರ್ ಕಿಂಗ್ಸ್ ವಿರುದ್ಧ ಭರ್ಜರಿ ಗೆಲುವು ಸಾಧಿಸಿದ ಸಂತಸದಲ್ಲಿರುವಾಗಲೇ ಪಂಜಾಬ್ ಕಿಂಗ್ಸ್ ನಾಯಕ ಶ್ರೇಯಸ್ ಅಯ್ಯರ್‌ಗೆ ದಂಡ ಬಿದ್ದಿದೆ. ಪಂದ್ಯದಲ್ಲಿ ನಿಧಾನಗತಿಯ ಓವರ್ ರೇಟ್‌ಗಾಗಿ 12 ಲಕ್ಷ ರು. ದಂಡ ವಿಧಿಸಲಾಗಿದೆ.ಆ ಪಂದ್ಯದಲ್ಲಿ ಅಮೋಘ ಬ್ಯಾಟಿಂಗ್ ನಡೆಸಿದ್ದ ಅಯ್ಯರ್ 72 ರನ್ ಬಾರಿಸಿ ತಂಡದ ಗೆಲುವಿನಲ್ಲಿ ಪ್ರಮುಖ ಪಾತ್ರವಹಿಸಿದ್ದರಲ್ಲದೆ, ಪಂದ್ಯಶ್ರೇಷ್ಠ ಪ್ರಶಸ್ತಿಗೂ ಭಾಜನರಾಗಿದ್ದರು. ಕನಿಷ್ಠ ಓವರ್‌ರೇಟ್ ಬಗ್ಗೆ ಇರುವ ಐಪಿಎಲ್ ನಿಯಮ 2.22ರಡಿ ಪಂಜಾಬ್ ಕಿಂಗ್ಸ್ ತಂಡದ ಮೊದಲ ತಪ್ಪಿಗಾಗಿ ನಾಯಕ ಶ್ರೇಯಸ್ ಅಯ್ಯರ್‌ಗೆ 12 ಲಕ್ಷ ದಂಡ ವಿಧಿಸಲಾಗಿದೆ ಎಂದು ಐಪಿಎಲ್‌ನ ಮಾಧ್ಯಮ ಪ್ರಕಟಣೆ ತಿಳಿಸಿದ್ದು, ಅಯ್ಯರ್ ತಮ್ಮ ತಪ್ಪನ್ನು ಒಪ್ಪಿಕೊಂಡಿದ್ದಾರೆ. ಪಂಜಾಬ್ ತಂಡವು 2ನೇ ಬಾರಿಗೆ ಈ ತಪ್ಪನ್ನು ಮರುಕಳಿಸಿದರೆ, ನಾಯಕ ಅಯ್ಯರ್ 24 ಲಕ್ಷ ರು.ದಂಡಕ್ಕೆ ಗುರಿಯಾಗಲಿದ್ದಾರೆ, ಜತೆಗೆ ತಂಡದ ಇನ್ನುಳಿದ ಆಟಗಾರರಿಗೆ ತಲಾ 6 ಲಕ್ಷ ರು. ಅಥವಾ ಪಂದ್ಯ ಶುಲ್ಕದ ಶೇ. 25ರಷ್ಟು ದಂಡವನ್ನು ವಿಧಿಸಲಾಗುತ್ತದೆ. ಮೂರನೇ ಬಾರಿಗೆ ತಪ್ಪನ್ನು ಮಾಡಿದರೆ ನಾಯಕನಿಗೆ ದಂಡ ವಿಧಿಸಿ, 1 ಡಿಮೆರಿಟ್ ಅಂಕ ನೀಡಲಾಗುತ್ತದೆ. ಡಿಮೆರಿಟ್ ಅಂಕದ ಅವಧಿ 3 ವರ್ಷ ಇರಲಿದ್ದು, ಆ ಅವಧಿಯಲ್ಲಿ 4 ಡಿಮೆರಿಟ್ ಅಂಕ ಪಡೆದರೆ ನಾಯಕನಿಗೆ ಪಂದ್ಯದ ಸಂಭಾವನೆಯ ಶೇ.100ರಷ್ಟು ದಂಡ ವಿಧಿಸಲಾಗುತ್ತದೆ.

ವಿಘ್ನೇಶ್ ಔಟ್, ರಘು ಇನ್

ದೆಹಲಿ: ತಮ್ಮ ಚೊಚ್ಚಲ ಇಂಡಿಯನ್ ಪ್ರೀಮಿಯರ್ ಲೀಗ್ ಟೂರ್ನಿಯಲ್ಲಿಯೇ ಸ್ಪಿನ್ ಮೋಡಿಯ ಮೂಲಕ ಕ್ರಿಕೆಟ್ ಪ್ರೇಮಿಗಳ ಗಮನ ಸೆಳೆದಿದ್ದ ವಿಘ್ನೇಶ್ ಪುತ್ತೂರು ಗಾಯದ ಕಾರಣ ಹದಿನೆಂಟನೇ ಆವೃತ್ತಿಯ ಇನ್ನುಳಿದ ಪಂದ್ಯಗಳಿಂದ ಹೊರ ಬಿದ್ದಿದ್ದಾರೆ. ಅವರ ಬದಲಿ ಆಟಗಾರರಾಗಿ ಜಲಂದರ್ ಮೂಲದ 31 ವಯಸ್ಸಿನ ರಘು ಶರ್ಮಾ ಮುಂಬೈ ಇಂಡಿಯನ್ಸ್ ತಂಡಕ್ಕೆ ಸೇರ್ಪಡೆಯಾಗಿದ್ದಾರೆ. ಶರ್ಮಾ ಅವರು ಪಂಜಾಬ್ ಹಾಗೂ ಪಾಂಡಿಚೇರಿ ಪರ ದೇಶಿ ಕ್ರಿಕೆಟ್ ಆಡಿದ್ದು, ಪ್ರಥಮ ದರ್ಜೆ ಕ್ರಿಕೆಟ್‌ನಲ್ಲಿ ಅತ್ಯುತ್ತಮ ದಾಖಲೆಯನ್ನು ಹೊಂದಿದ್ದು, 11 ಪಂದ್ಯಗಳಿಂದ 57 ವಿಕೆಟ್‌ಗಳನ್ನು ಕಬಳಿಸಿದ್ದಾರೆ. ಲಿಸ್ಟ್-ಎ ಕ್ರಿಕೆಟ್‌ನಲ್ಲಿ ಆಡಿದ 9 ಪಂದ್ಯಗಳಿಂದ 14 ವಿಕೆಟ್‌ಗಳನ್ನು ಕಬಳಿಸಿದ್ದಾರೆ ಹಾಗೂ ಟಿ20 ಕ್ರಿಕೆಟ್‌ನಲ್ಲಿ ಮೂರು ವಿಕೆಟ್‌ಗಳನ್ನು ಕಬಳಿಸಿದ್ದಾರೆ. ರಘು ಶರ್ಮಾ ಅವರ ಪಾಲಿಗೆ ಇದು ಚೊಚ್ಚಲ ಐಪಿಎಲ್ ಟೂರ್ನಿಯಾಗಿದೆ. 30 ಲಕ್ಷ ರು. ಮೂಲಬೆಲೆಯ ಮೂಲಕ ಅವರು ಮುಂಬೈ ಇಂಡಿಯನ್ಸ್ ತಂಡಕ್ಕೆ ಸೇರ್ಪಡೆಯಾಗಿದ್ದಾರೆ. ವಿಘ್ನೇಶ್ ತಮ್ಮ ಚೊಚ್ಚಲ ಪಂದ್ಯದಲ್ಲಿಯೇ ಮುಂಬೈ ಪರ ಮೂರು ವಿಕೆಟ್‌ಗಳನ್ನು ಪಡೆದಿದ್ದು, ಇಲ್ಲಿಯ ತನಕ ಆಡಿದ ಐದು ಪಂದ್ಯಗಳಲ್ಲಿ ಅವರು ಆರು ವಿಕೆಟ್‌ಗಳನ್ನು ಕಬಳಿಸಿದ್ದಾರೆ.

ನದೀಮ್ ಇನ್‌ಸ್ಟಾ ಖಾತೆಗೆ ಭಾರತದಲ್ಲಿ ನಿರ್ಬಂಧ

ದೆಹಲಿ: ಜಮ್ಮು-ಕಾಶ್ಮೀರದ ಪಹಲ್ಗಾಮ್‌ನಲ್ಲಿ ಪಾಕ್ ಭಯೋತ್ಪಾದಕರ ದಾಳಿಯಲ್ಲಿ 26 ಪ್ರವಾಸಿಗರು ಸಾವನ್ನಪ್ಪಿದ ಘಟನೆಯ ನಂತರ ಭಾರತದ ಬಗ್ಗೆ ಸುಳ್ಳು, ಪ್ರಚೋದನಕಾರಿ ಮತ್ತು ಕೋಮು ಭಾವನೆ ಕೆರಳಿಸುವ ಸುದ್ದಿಗಳನ್ನು ಪ್ರಸಾರ ಮಾಡಿದ ಆರೋಪದ ಮೇಲೆ ಪಾಕಿಸ್ತಾನದ 16 ಯೂಟ್ಯೂಬ್ ಚಾನೆಲ್‌ಗಳನ್ನು ಈಗಾಗಲೇ ಕೇಂದ್ರ ಸರಕಾರ ನಿಷೇಧಿಸಿದ್ದು, ಇದೀಗ ಪ್ಯಾರಿಸ್ ಒಲಿಂಪಿಕ್ಸ್ ಚಿನ್ನದ ಪದಕ ವಿಜೇತ ಪಾಕಿಸ್ತಾನದ, ಜಾವೆಲಿನ್ ಎಸೆತಗಾರ ಅರ್ಷದ್ ನದೀಮ್ ಅವರ ಇನ್‌ಸ್ಟಾಗ್ರಾಮ್ ಖಾತೆಯನ್ನು ಭಾರತದಲ್ಲಿ ನಿರ್ಬಂಧಿಸಲಾಗಿದೆ. ನದೀಮ್ ದಾಳಿಯ ಕುರಿತು ಯಾವುದೇ ಪೋಸ್ಟ್ ಅಥವಾ ಪ್ರತಿಕ್ರಿಯೆ ನೀಡದಿದ್ದರೂ, ಅವರ ಇನ್‌ಸ್ಟಾಗ್ರಾಂ ಖಾತೆಯನ್ನು ತೆರೆದಾಗ 'ಕಾನೂನು ಸೂಚನೆಯ ಮೇರೆಗೆ ಖಾತೆ ತಡೆಹಿಡಿಯಲಾಗಿದೆ' ಎಂದು ತಿಳಿಸಿದೆ. ಇತ್ತೀಚೆಗೆ ಬೆಂಗಳೂರಿನಲ್ಲಿ ಮೇ 24ರಂದು ನಡೆಯಲಿರುವ ಚೊಚ್ಚಲ ನೀರಜ್ ಚೋಪ್ರಾ ಕ್ಲಾಸಿಕ್ ಜಾವೆಲಿನ್ ಕೂಟಕ್ಕೆ ಪಾಕಿಸ್ತಾನದ ಅಥ್ಲೀಟ್ ಅರ್ಷದ್ ನದೀಮ್ ಅವರನ್ನು ಭಾರತದ ಜಾವೆಲಿನ್ ತಾರೆ ನೀರಜ್ ಚೋಪ್ರಾ ಆಹ್ವಾನಿಸಿ ವಿವಾದಕ್ಕೆ ಕಾರಣವಾಗಿತ್ತು, ಆದರೆ ಆಹ್ವಾನವನ್ನು ನದೀಂ ತಿರಸ್ಕರಿಸಿದ್ದರು. ಕ್ರಿಕೆಟಿಗ ಶೋಯೆಬ್ ಅಖ್ತರ್, ಶಾಹೀದ್ ಅಫ್ರಿದಿ ಅವರ ಯೂಟ್ಯೂಬ್ ಚಾನೆಲ್‌ಗಳು ಆರಂಭಿಕ ಹಂತದಲ್ಲಿ ನಿಷೇಧಿಸಿದ ಬೆನ್ನಲ್ಲೇ ಇದೀಗ ನದೀಮ್ ಅವರ ಇನ್‌ಸ್ಟಾಗ್ರಾಮ್ ಖಾತೆಯನ್ನು ನಿರ್ಬಂಧಿಸಲಾಗಿದೆ.

ಹಾಕಿ: ಭಾರತಕ್ಕೆ ಸೋಲು

ಪರ್ತ್: ಭಾರತದ ವನಿತೆಯರು ಗುರುವಾರ ನಡೆದ ಹಾಕಿ ಪಂದ್ಯದಲ್ಲಿ 0-2 ಗೋಲುಗಳಿಂದ ಆಸ್ಟ್ರೇಲಿಯಾ ವಿರುದ್ಧ ಪರಾಭವಗೊಂಡರು, ಈ ಮೂಲಕ ಮೂರು ಪಂದ್ಯಗಳ ಸರಣಿಯಲ್ಲಿ ಅತಿಥೇಯ ತಂಡವು 1-0 ಮುನ್ನಡೆ ಪಡೆಯಿತು. ಪರ್ತ್ ಹಾಕಿ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಹರೇಂದ್ರ ಸಿಂಗ್ ಮಾರ್ಗದರ್ಶನದ ಭಾರತ ತಂಡವು

ಕಠಿಣ ಹೋರಾಟ ನಡೆಸಿದರೂ, ಎದುರಾಳಿ ತಂಡದ ಸಾಂಘಿಕ ಆಟದ ಮುಂದೆ ನಿರುತ್ತರರಾದರು. ಪಂದ್ಯದ ಒಂಬತ್ತನೇ ನಿಮಿಷದಲ್ಲಿ ಕೋರ್ಟ್ನಿ ಸ್ಕೋನೆಲ್ ಅವರು ಫೀಲ್ಡ್ ಗೋಲು ಮೂಲಕ ಆತಿಥೇಯ ತಂಡಕ್ಕೆ ಮುನ್ನಡೆ ಒದಗಿಸಿದರು. ಎರಡು ಮತ್ತು ಮೂರನೇ ಕ್ವಾರ್ಟರ್‌ನಲ್ಲಿ ಯಾವುದೇ ತಂಡಕ್ಕೆ ಗೋಲು ಸಿಗಲಿಲ್ಲ. ಕೊನೆಯ ಕಾರ್ಟರ್‌ನಲ್ಲಿ ಗ್ರೇಸ್ ಸ್ಟೀವರ್ಟ್ (52ನೇ ನಿಮಿಷ) ಚೆಂಡನ್ನು ಗುರಿ ಸೇರಿಸಿ ಆಸ್ಟ್ರೇಲಿಯಾ ತಂಡದ ಮುನ್ನಡೆಯನ್ನು ಹೆಚ್ಚಿಸಿದರು. ಇದಕ್ಕೂ ಮೊದಲು ಎರಡು ಅಭ್ಯಾಸ ಪಂದ್ಯದಲ್ಲಿ ಭಾರತ ತಂಡವು ಕ್ರಮವಾಗಿ 3-5, 2-3ರಿಂದ ಆಸ್ಟ್ರೇಲಿಯಾ-ಎ ವಿರುದ್ಧ ಸೋತಿತ್ತು. ಆಸ್ಟ್ರೇಲಿಯಾದ ಪ್ರಮುಖ ತಂಡದ ವಿರುದ್ಧವೂ ಸಲೀಮಾ ಟೆಟೆ ಬಳಗ ನಿರಾಸೆ ಅನುಭವಿಸಿತು. ಎರಡನೇ ಕ್ವಾರ್ಟರ್‌ನಲ್ಲಿ ಸಿಕ್ಕ ಎರಡು ಪೆನಾಲ್ಟಿ ಕಾರ್ನರ್ ಅವಕಾಶವನ್ನು ಕೈಚೆಲ್ಲಿದ್ದು ಭಾರತಕ್ಕೆ ದುಬಾರಿಯಾಯಿತು. ಎರಡನೇ ಪಂದ್ಯ ಶನಿವಾರ ನಡೆಯಲಿದೆ.

ರಿಕಲ್ಟನ್-ರೋಹಿತ್ ಭರ್ಜರಿ ಬ್ಯಾಟಿಂಗ್ | ಬೃಹತ್ ಮೊತ್ತ ದಾಖಲಿಸಿದ ಮುಂಬೈ

ರಾಜಸ್ಥಾನಕ್ಕೆ ಮುಂಬೈ ವಿರುದ್ಧ 218 ರನ್‌ಗಳ ಗೆಲುವಿನ ಗುರಿ

ಜೈಪುರ: ಇಲ್ಲಿನ ಸವಯ್ ಮಾನ್‌ಸಿಂಗ್ ಸ್ಟೇಡಿಯಂನಲ್ಲಿ ಗುರುವಾರ ನಡೆದ ಐಪಿಎಲ್ ಪಂದ್ಯದಲ್ಲಿ ಮುಂಬೈ ಇಂಡಿಯನ್ಸ್ ತಂಡವು ರಾಜಸ್ಥಾನ ತಂಡಕ್ಕೆ 218 ರನ್‌ಗಳ ಗೆಲುವಿನ ಗುರಿಯನ್ನು ನೀಡಿದೆ.

ಟಾಸ್ ಗೆದ್ದ ರಾಜಸ್ಥಾನ್ ರಾಯಲ್ಸ್ ತಂಡ ಬೌಲಿಂಗ್ ಆಯ್ಕೆ ಮಾಡಿಕೊಂಡಿತ್ತು. ಮೊದಲು ಬ್ಯಾಟಿಂಗ್‌ಗೆ ಆಗಮಿಸಿದ ಮುಂಬೈ ಇಂಡಿಯನ್ಸ್ ಆರಂಭದಿಂದಲೇ ಅಬ್ಬರಿಸಿತು. ಆರಂಭಿಕ ಬ್ಯಾಟರ್‌ಗಳಾದ ರಿಕಲ್ಟನ್ ಹಾಗೂ ರೋಹಿತ್ ಶರ್ಮಾ ಅದ್ಭುತವಾಗಿ ಆಟವಾಡಿದರು. ಮೊದಲ ವಿಕೆಟ್‌ಗೆ 11.5 ಓವರ್‌ಗಳಲ್ಲಿ ಇಬ್ಬರೂ ಸೇರಿ 116 ರನ್ ಕಲೆ ಹಾಕಿದರು. ರಿಕೆಲ್ಟನ್ 7 ಬೌಂಡರಿ ಹಾಗೂ 3 ಸಿಕ್ಸರ್ ಒಳಗೊಂಡು 38 ಬಾಲ್‌ಗಳಲ್ಲಿ 61 ರನ್ ಗಳಿಸಿ ಮಹೀಶ್ ಪತಿರಾನ ಬೌಲಿಂಗ್‌ನಲ್ಲಿ ಬೌಲ್ಡ್ ಆದರು.

ರೋಹಿತ್ ಶರ್ಮಾ ಕೂಡ ಗುರುವಾರ ತಮ್ಮ ಬ್ಯಾಟ್ ಮೂಲಕ ಮತ್ತೆ ಅಬ್ಬರಿಸಿದರು. ರೋಹಿತ್ ಎರಡನೇ ಓವರ್‌ನಲ್ಲೇ ಔಟಾ ಗಿದ್ದರು. ವೇಗಿ ಫಜಲ್ಹಕ್ ಫಾರೂಕಿ ಬೌಲಿಂಗ್‌ನಲ್ಲಿ ರೋಹಿತ್ ಔಟ್ ಎಂದು ತೀರ್ಪು ನೀಡಿದ್ದರು. ಆದರೆ ರೋಹಿತ್ ರಿವ್ಯೂ ತೆಗೆದುಕೊಂಡರು. ರಿವ್ಯೂನಲ್ಲಿ ಫಾರೂಕಿ ಅವರ ಚೆಂಡು ಲೆಗ್ ಸ್ಟಂಪ್‌ನ ಹೊರಗೆ ಬಿದ್ದಿದ್ದು ಸ್ಪಷ್ಟವಾದ್ದರಿಂದ ರೋಹಿತ್ ಕೂದಲೆಳೆಯ ಅಂತರದಲ್ಲಿ ಔಟ್ ನಿರ್ಣಯದಿಂದ ಪಾರಾದರು. ಕೇವಲ 36 ಬಾಲ್‌ಗಳಲ್ಲಿ 9 ಬೌಂಡರಿಯನ್ನು ಒಳಗೊಂಡು 53 ರನ್ ಗಳಿಸಿದ ರೋಹಿತ್, ರಿಯಾನ್ ಪರಾಗ್ ಬೌಲಿಂಗ್‌ನಲ್ಲಿ ಜೈಸ್ವಾಲ್‌ಗೆ ಕ್ಯಾಚ್ ನೀಡಿ ಪೆವಿಲಿಯನ್ ಸೇರಿದರು. ಇದು ರೋಹಿತ್ ಶರ್ಮಾ ಈ ಐಪಿಎಲ್‌ನಲ್ಲಿ ಸಿಡಿಸಿದ ಮೂರನೇ ಅರ್ಧ ಶತಕವಾಗಿದೆ. ಆಗಲೇ ಮುಂಬೈಯು 12.4 ಓವರ್‌ಗಳಲ್ಲಿ 123 ರನ್‌ಗಳನ್ನು ಕಲೆ ಹಾಕಿತ್ತು.

ಬಳಿಕ ಮುಂಬೈ ಇಂಡಿಯನ್ಸ್ ತಂಡಕ್ಕೆ ಸೂರ್ಯ ಕುಮಾರ್ ಯಾದವ್ ಹಾಗೂ ನಾಯಕ ಹಾರ್ದಿಕ್ ಪಾಂಡ್ಯ ಆಸರೆಯಾದರು. ಸೂರ್ಯಕುಮಾರ್ 23 ಬಾಲ್‌ಗಳಲ್ಲಿ 4 ಬೌಂಡರಿ ಮತ್ತು 3 ಸಿಕ್ಸರ್ ಒಳಗೊಂಡಂತೆ 48 ರನ್‌ಗಳನ್ನು ಚಚ್ಚಿದರು. ಅವರ ಜತೆ ಉತ್ತಮವಾಗಿ ಬ್ಯಾಟಿಂಗ್ ಮಾಡಿದ ಹಾರ್ದಿಕ್ ಪಾಂಡ್ಯ 23 ಬಾಲ್‌ಗಳಲ್ಲಿ 48 ರನ್ ಗಳಿಸಿದರು. ಅವರ ಇನ್ನಿಂಗ್ಸ್‌ನಲ್ಲಿ 6 ಬೌಂಡರಿಗಳು ಮತ್ತು 1 ಸಿಕ್ಸರ್ ಇತ್ತು.

ರಾಜಸ್ಥಾನ ತಂಡದ ಪರವಾಗಿ ಮಹೀಶ್ ಪತಿರಾನ 47 ರನ್ ನೀಡಿ ಒಂದು ವಿಕೆಟ್ ಹಾಗೂ ರಿಯಾನ್ ಪರಾಗ್ 12 ರನ್ ಕೊಟ್ಟು ಒಂದು ವಿಕೆಟ್ ಪಡೆದರು.

ರೋಹಿತ್ ದಾಖಲೆ

ರಾಜಸ್ಥಾನದ ವಿರುದ್ಧ ಗುರುವಾರ 53 ರನ್‌ಗಳ ಇನ್ನಿಂಗ್ಸ್ ಆಡಿದ ರೋಹಿತ್ ಶರ್ಮಾ, ಮುಂಬೈ ಇಂಡಿಯನ್ಸ್ ಪರ 6000 ರನ್ ಪೂರ್ಣಗೊಳಿಸಿದರು, ಆ ಮೂಲಕ ಟಿ20 ಕ್ರಿಕೆಟ್ ಇತಿಹಾಸದಲ್ಲಿ ಒಂದು ಫ್ರಾಂಚೈಸಿಗಾಗಿ 6000 ಕ್ಕೂ ಹೆಚ್ಚು ರನ್ ಗಳಿಸಿದ ಎರಡನೇ ಆಟಗಾರ ಎಂಬ ದಾಖಲೆಯನ್ನು ಅವರು ಸೃಷ್ಟಿಸಿದರು. ಈ ಸಾಲಿನಲ್ಲಿ ಮೊದಲ ಸ್ಥಾನದಲ್ಲಿರುವ ವಿರಾಟ್ ಕೊಹ್ಲಿ ಆರ್‌ಸಿಬಿ ಪರ 8871 ರನ್ ಗಳಿಸಿದ್ದಾರೆ.

ಅನುಷ್ಕಾಗೆ ವಿರಾಟ್ ಕೊಹ್ಲಿ ಜನ್ಮದಿನದ ಶುಭಾಶಯ

ಮುಂಬೈ: ಬಾಲಿವುಡ್ ನಟಿ ಅನುಷ್ಕಾ ಶರ್ಮಾ ಗುರುವಾರದಂದು 37 ವರ್ಷಕ್ಕೆ ಕಾಲಿಟ್ಟಿದ್ದು, ಪತಿ ವಿರಾಟ್ ಕೊಹ್ಲಿ ತಮ್ಮ ಮನದಾಳದ ಮಾತುಗಳನ್ನು ಸೋಶಿಯಲ್ ಮೀಡಿಯಾದಲ್ಲಿ ಹಂಚಿಕೊಳ್ಳುವ ಮೂಲಕ ಪತ್ನಿಗೆ ಜನ್ಮದಿನದ ಶುಭಾಶಯ ಕೋರಿದ್ದಾರೆ. ತಮ್ಮ ಇನ್‌ಸ್ಟಾಗ್ರಾಮ್ ಖಾತೆಯಲ್ಲಿ 'ನನ್ನ ಆತ್ಮೀಯ ಸ್ನೇಹಿತೆ, ನನ್ನ ಒಡನಾಡಿ, ನೀನು ನಮ್ಮ ಜೀವನದ ಬೆಳಕು, ನಾನು ನಿನ್ನನ್ನು ಪ್ರತಿದಿನ ಹೆಚ್ಚು ಹೆಚ್ಚು ಪ್ರೀತಿಸುವೆ, ಹುಟ್ಟುಹಬ್ಬದ ಶುಭಾಶಯಗಳು' ಎಂದು ವಿರಾಟ್ ಕೊಹ್ಲಿ ತಮ್ಮ ಪೋಸ್ಟ್‌ನಲ್ಲಿ ಬರೆದುಕೊಂಡಿದ್ದಾರೆ.

ಅನುಷ್ಕಾ ಮತ್ತು ವಿರಾಟ್ ಕೊಹ್ಲಿ 2013ರಲ್ಲಿ ಜಾಹೀರಾತೊಂದರ ಚಿತ್ರೀಕರಣದ ಸಮಯದಲ್ಲಿ ಭೇಟಿಯಾದರು, ಬಳಿಕ ಇಬ್ಬರ ನಡುವೆ ಬೆಳೆದ ಸ್ನೇಹ ಪ್ರೇಮವಾಯಿತು. ಹೀಗಾಗಿ ಅನುಷ್ಕಾ, ವಿರಾಟ್ ಅವರ ಪಂದ್ಯಗಳನ್ನು ವೀಕ್ಷಿಸಲು ಕ್ರೀಡಾಂಗಣಕ್ಕೆ ಬರಲು ಪ್ರಾರಂಭಿಸಿದರು. 2017ರಲ್ಲಿ ಪ್ರೀತಿಯಲ್ಲಿ ಬಿದ್ದಿರುವುದಾಗಿ ಒಪ್ಪಿಕೊಂಡಿದ್ದ ಈ ಜೋಡಿ, ಅದೇ ಡಿಸೆಂಬರ್ 21ರಂದು ವೈವಾಹಿಕ ಜೀವನಕ್ಕೆ ಕಾಲಿರಿಸಿದರು. ಪ್ರಸ್ತುತ ದಂಪತಿಗಳಿಬ್ಬರಿಗೆ ಇಬ್ಬರು ಮಕ್ಕಳಿದ್ದು ಮಗಳಿಗೆ ವಾಮಿಕಾ ಮತ್ತು ಮಗನಿಗೆ ಅಕಾಯ್ ಕೊಹ್ಲಿ ಎಂದು ಹೆಸರಿಟ್ಟಿದ್ದಾರೆ.

ಐಪಿಎಲ್‌ನಲ್ಲಿ ಕೊಹ್ಲಿ ಬಿರುಸು: ಈ ಸಲದ ಐಪಿಎಲ್ ಆವೃತ್ತಿಯಲ್ಲಿ ವಿರಾಟ್ ಕೊಹ್ಲಿ ಅದ್ಭುತ ಪ್ರದರ್ಶನ ನೀಡಿದ್ದಾರೆ. ಅವರು 63.28 ಸರಾಸರಿಯಲ್ಲಿ 443 ರನ್ ಗಳಿಸಿದ್ದು, ಆಡಿರುವ 10 ಇನ್ನಿಂಗ್ಸ್‌ಗಳಲ್ಲಿ 6 ಅರ್ಧಶತಕಗಳನ್ನು ಸಿಡಿಸಿ ಆರೆಂಜ್ ಕ್ಯಾಪ್ ರೇಸ್‌ನಲ್ಲಿ ಎರಡನೇ ಸ್ಥಾನದಲ್ಲಿದ್ದಾರೆ. ಮತ್ತೊಂದೆಡೆ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡ ಕೂಡ ವಿರಾಟ್ ಕೊಹ್ಲಿ ಅವರ ಅತ್ಯುತ್ತಮ ಫಾರ್ಮ್‌ನ ಲಾಭ ಪಡೆದಿದೆ. ತಂಡವು ಇದುವರೆಗೆ 7 ಪಂದ್ಯಗಳನ್ನು ಗೆದ್ದು 14 ಅಂಕಗಳನ್ನು ಗಳಿಸಿ ಪಾಯಿಂಟ್ಸ್ ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿದೆ. ಆರ್‌ಸಿಬಿ ತನ್ನ ಮುಂದಿನ ಪಂದ್ಯವನ್ನು ಮೇ-3, ಶನಿವಾರ ಬೆಂಗಳೂರಿನ ಎಂ. ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ವಿರುದ್ಧ ಆಡಲಿದೆ. ಈ ಪಂದ್ಯದಲ್ಲಿ ಆರ್‌ಸಿಬಿ ಗೆದ್ದರೆ ಅಧಿಕೃತವಾಗಿ ಪ್ಲೇಆಫ್‌ನಲ್ಲಿ ಸ್ಥಾನ ಖಚಿತಪಡಿಸಿಕೊಳ್ಳಲಿದೆ.

ಶುಭ್‌ಮನ್ ಗಿಲ್ ಬಳಗಕ್ಕೆ ಟೇಬಲ್ ಟಾಪರ್ ಆಗುವ ತವಕ
ಕಮಿನ್ಸ್ ಪಡೆಗೆ ಗುಜರಾತ್ ವಿರುದ್ಧ ಸೇಡು ತೀರಿಸುವಾಸೆ

ತವರಲ್ಲಿ ಗುಜರಾತ್‌ಗೆ ಹೈದರಾಬಾದ್ ಸವಾಲು

ಗುಜರಾತ್
ಶುಭ್‌ಮನ್ ಗಿಲ್ (ನಾಯಕ)
ಸಾಯಿ ಸುದರ್ಶನ್
ಜೋಸ್ ಬಟ್ಲರ್
ಶಾರುಖ್ ಖಾನ್
ರಾಹುಲ್ ತೆವಾಟಿಯಾ
ಅರ್ಷದ್ ಖಾನ್
ರಶೀದ್ ಖಾನ್
ಸಾಯಿ ಕಿಶೋರ್
ಮೊಹಮ್ಮದ್ ಸಿರಾಜ್
ಪ್ರಸಿದ್ಧ್ ಕೃಷ್ಣ
ಇಶಾಂತ್ ಶರ್ಮಾ
ಕುಮಾರ್ ಕುಶಾಗ್ರ
ವಾಷಿಂಗ್ಟನ್ ಸುಂದರ್
ಜಯಂತ್ ಯಾದವ್

ಹೈದರಾಬಾದ್
ಪ್ಯಾಟ್ ಕಮಿನ್ಸ್ (ನಾಯಕ)
ಅಭಿಷೇಕ್ ಶರ್ಮಾ
ನಿತೀಶ್ ರೆಡ್ಡಿ
ಹೆನ್ರಿಚ್ ಕ್ಲಾಸೆನ್
ಟ್ರಾವಿಸ್ ಹೆಡ್
ಮೊಹಮ್ಮದ್ ಶಮಿ
ಹರ್ಷಲ್ ಪಟೇಲ್
ಇಶಾನ್ ಕಿಶನ್
ರಾಹುಲ್ ಚಹರ್
ಆ್ಯಡಂ ಝಂಪ
ಅಭಿನವ್ ಮನೋಹರ್
ಸಿಮ್ರಾನ್‌ಜೀತ್ ಸಿಂಗ್
ಜಯದೇವ್ ಉನದ್ಕಟ್
ಕಮಿಂದು ಮೆಂಡಿಸ್

ಅಹಮದಾಬಾದ್: ಇಲ್ಲಿನ ನರೇಂದ್ರ ಮೋದಿ ಸ್ಟೇಡಿಯಂನಲ್ಲಿ ಶುಕ್ರವಾರ ನಡೆಯಲಿರುವ ಐಪಿಎಲ್ ಟೂರ್ನಿಯಲ್ಲಿ ಅತಿಥೇಯ ಗುಜರಾತ್ ಟೈಟಾನ್ಸ್ ತಂಡವು ಸನ್‌ರೈಸರ್ಸ್ ಹೈದರಾಬಾದ್ ತಂಡವನ್ನು ಎದುರಿಸಲಿದೆ. ಈಗಾಗಲೇ ಪ್ಲೇ ಆಫ್ ಸನಿಹಕ್ಕೆ ಬಂದು ನಿಂತಿರುವ ಗುಜರಾತ್‌ಗೆ ಮತ್ತೊಮ್ಮೆ ಟೇಬಲ್ ಟಾಪ್ ಆಗಲು ಇದು ಮಹತ್ವದ ಪಂದ್ಯವಾಗಿದ್ದು, ಈಗಾಗಲೇ ಪ್ಲೇ ಆಫ್ ಅವಕಾಶದಿಂದ ಬಹುತೇಕ ಹೊರ ಬಿದ್ದಿರುವ ಹೈದರಾಬಾದ್ ತಂಡವು ಈ ಪಂದ್ಯದಲ್ಲಿ ಗುಜರಾತ್ ತಂಡಕ್ಕೆ ಹೇಗೆ ತಿರುಗೇಟು ನೀಡಲಿದೆ ಎಂಬುದು ನಿಜಕ್ಕೂ ಕುತೂಹಲಕಾರಿಯಾಗಿದೆ.

ಮಾರ್ಚ್-25ರಂದು ನಡೆದಿದ್ದ ತನ್ನ ಮೊದಲ ಪಂದ್ಯದಲ್ಲಿ ಗುಜರಾತ್ ತಂಡವು ಪಂಜಾಬ್ ತಂಡದೆದುರು 11 ರನ್‌ಗಳ ಸೋಲನ್ನೊಪ್ಪಿತ್ತು. ಆದರೆ ಮುಂದಿನ ಪಂದ್ಯದಿಂದಲೇ ಅದು ಪುಟಿದೆದ್ದು ಮತ್ತೆ ಒಂದರ ಹಿಂದೆ ಮತ್ತೊಂದು ಪಂದ್ಯದಂತೆ ಗೆದ್ದಿರುವುದು ಅದರ ಸಾಮರ್ಥ್ಯಕ್ಕೆ ಹಿಡಿದ ಕೈಗನ್ನಡಿ. ಮಾರ್ಚ್-29ರಂದು ಮುಂಬೈ ವಿರುದ್ಧ, ಏಪ್ರಿಲ್-2ರಂದು ಆರ್‌ಸಿಬಿ ವಿರುದ್ಧ, ಏಪ್ರಿಲ್-6ರಂದು ಹೈದರಾಬಾದ್ ತಂಡದ ವಿರುದ್ಧ ಮತ್ತು ಏಪ್ರಿಲ್-9ರಂದು ರಾಜಸ್ಥಾನ ತಂಡದ ವಿರುದ್ಧದ ಸತತ ನಾಲ್ಕು ಗೆಲುವುಗಳನ್ನು ಈ ಐಪಿಎಲ್‌ನಲ್ಲಿ ಗುಜರಾತ್ ಟೈಟನ್ಸ್ ಸಾಲು ಸಾಲಾಗಿ ಪಡೆದಿದೆ.

ಆದರೆ ಏಪ್ರಿಲ್-12ರಂದು ಆಯೋಜಿಸಿದ್ದ ಪಂದ್ಯದಲ್ಲಿ ಲಖನೌ ತಂಡವು ಗುಜರಾತನ್ನು 6 ವಿಕೆಟ್‌ಗಳಿಂದ ಮಣಿಸಿತ್ತು. ಮತ್ತೆ ಏಪ್ರಿಲ್-19ರಂದು ನಡೆದ ಪಂದ್ಯದಲ್ಲಿ ಡೆಲ್ಲಿ ವಿರುದ್ಧ ಗುಜರಾತ್ 7 ವಿಕೆಟ್‌ಗಳ ಜಯ ಪಡೆದಿತ್ತು. ಆ ನಂತರ ಏಪ್ರಿಲ್-21ರಂದು ನಡೆದ ಪಂದ್ಯದಲ್ಲಿ ಕೋಲ್ಕತ್ತಾ ವಿರುದ್ಧವೂ ಗುಜರಾತ್ 39 ರನ್‌ಗಳ ಭರ್ಜರಿ ಗೆಲುವು ದಾಖಲಿಸಿತ್ತು.

ಮತ್ತೊಮ್ಮೆ ಹ್ಯಾಟ್ರಿಕ್ ಗೆಲುವಿನ ಸಂಭ್ರಮದಲ್ಲಿದ್ದ ಗುಜರಾತ್‌ಗೆ ಏಪ್ರಿಲ್-28ರಂದು ರಾಜಸ್ಥಾನದ ಜೈಸ್ವಾಲ್ ಮತ್ತು ವೈಭವ್ ಸೂರ್ಯವಂಶಿ ಜೋಡಿ ಎದಿರೇಟನ್ನು ಕೊಟ್ಟು 8 ವಿಕೆಟ್‌ಗಳ ಭರ್ಜರಿ ಅಂತರದಿಂದ ಗುಜರಾತ್ ತಂಡವನ್ನು ಮಣಿಸಿದ್ದರು.

ಈಗ ಆಡಿರುವ 9 ಪಂದ್ಯಗಳ ಮೂಲಕ ಕೇವಲ 6 ಅಂಕಗಳನ್ನು ಗಳಿಸಿರುವ ಹೈದರಾಬಾದ್ ತಂಡವು ಮಾರ್ಚ್-23ರಂದು ನಡೆದ ಪಂದ್ಯದಲ್ಲಿ 44 ರನ್‌ಗಳಿಂದ ರಾಜಸ್ಥಾನ್ ರಾಯಲ್ಸ್ ತಂಡವನ್ನು ಸೋಲಿಸಿತ್ತು. ಏಪ್ರಿಲ್-27ರಂದು ನಡೆದ ಪಂದ್ಯದಲ್ಲಿ ಹೈದರಾಬಾದ್ ತಂಡವು ಲಖನೌ ವಿರುದ್ಧ 5 ವಿಕೆಟ್ ಅಂತರದಲ್ಲಿ ಸೋತಿತ್ತು. ಏಪ್ರಿಲ್-30ರಂದು ಆಯೋಜಿಸಲಾಗಿದ್ದ ಪಂದ್ಯದಲ್ಲಿ ಹೈದರಾಬಾದ್ ತಂಡವು ಡೆಲ್ಲಿಯ ಎದುರು 7 ವಿಕೆಟ್‌ಗಳ ಅಂತರದಲ್ಲಿ ಸೋತಿತ್ತು. ಏಪ್ರಿಲ್-3ರಂದು ನಡೆದ ಪಂದ್ಯದಲ್ಲಿ ಕೋಲ್ಕತ್ತಾ ತಂಡ ಹಾಗೂ ಏಪ್ರಿಲ್-6ರಂದು ನಡೆದ ಪಂದ್ಯದಲ್ಲಿ ಗುಜರಾತ್ ತಂಡ, ಹೈದರಾಬಾದ್ ತಂಡವನ್ನು ಸೋಲಿಸಿ ಗೆಲುವಿನ ನಗು ಬೀರಿತ್ತು. ಏಪ್ರಿಲ್-12ರಂದು ಆಯೋಜಿಸಿದ್ದ ಪಂದ್ಯದಲ್ಲಿ ಹೈದರಾಬಾದ್ ತಂಡವು ಪಂಜಾಬ್ ಎದುರು 8 ವಿಕೆಟ್‌ಗಳ ಭರ್ಜರಿ ಗೆಲುವನ್ನು ತನ್ನದನ್ನಾಗಿರಿಸಿತ್ತು.

ಏಪ್ರಿಲ್-17ರಂದು ನಡೆದ ಪಂದ್ಯದಲ್ಲಿ ಮುಂಬೈ ಇಂಡಿಯನ್ಸ್ ತಂಡವು ಹೈದರಾಬಾದ್ ತಂಡವನ್ನು 4 ವಿಕೆಟ್‌ಗಳಿಂದ ಮಣಿಸಿತ್ತು. ಏಪ್ರಿಲ್-23ರಂದು ನಡೆದ ಮತ್ತೊಮ್ಮೆ ಮುಂಬೈ ತಂಡವು ಹೈದರಾಬಾದ್‌ಗೆ 7 ವಿಕೆಟ್‌ಗಳ ಸೋಲಿನ ರುಚಿ ತೋರಿಸಿತ್ತು. ಆದರೆ ಏಪ್ರಿಲ್-26ರಂದು ಆಯೋಜಿಸಲಾಗಿದ್ದ ಪಂದ್ಯದಲ್ಲಿ ಚೆನ್ನೈ ತಂಡದ ವಿರುದ್ಧ ಹೈದರಾಬಾದ್ 5 ವಿಕೆಟ್‌ಗಳ ಗೆಲುವು ಪಡೆದಿತ್ತು.

ಪ್ಯಾಟ್ ಕಮಿನ್ಸ್ ನಾಯಕತ್ವದ ಹೈದರಾಬಾದ್ ಪಡೆ ಇದೀಗ ಬಹುತೇಕ ಪ್ಲೇ ಆಫ್ ತಲುಪುವ ಅವಕಾಶವನ್ನು ಕಳೆದುಕೊಂಡಿದೆ. ಆದರೆ ಶುಭ್‌ಮನ್ ಗಿಲ್ ನಾಯಕತ್ವದ ಗುಜರಾತ್ ತಂಡವು ಹೈದರಾಬಾದ್ ತಂಡವನ್ನು ಸೋಲಿಸಿ ಹೆಚ್ಚಿನ ಅಂಕ ಗಳಿಸಿ ಟೇಬಲ್ ಟಾಪರ್ ಆಗುವ ಆತುರದಲ್ಲಿದೆ.

ಶಿಖರ್ ಧವನ್‌ಗೆ ಹೊಸ ಪ್ರೇಯಸಿ

ಮುಂಬೈ: ಕ್ರಿಕೆಟ್‌ಗೆ ಕಳೆದ ವರ್ಷ ಗುಡ್ ಬೈ ಹೇಳಿದ್ದ ಟೀಮ್ ಇಂಡಿಯಾ ಕ್ರಿಕೆಟಿಗ ಶಿಖರ್ ಧವನ್ ಅವರ ವೈಯಕ್ತಿಕ ಜೀವನದಲ್ಲಿ ಹೊಸ ಇನ್ನಿಂಗ್ಸ್ ಪ್ರಾರಂಭವಾಗಿದೆ. ವರ್ಷದ ಹಿಂದೆ ತಮ್ಮ ಮಡದಿಯಿಂದ ವಿಚ್ಛೇದನ ಪಡೆದು ಏಕಾಂಗಿಯಾಗಿದ್ದ ಶಿಖರ್ ಧವನ್ ಜೀವನಕ್ಕೆ ಹೊಸ ಗೆಳತಿಯ ಆಗಮನವಾಗಿದ್ದು, ಇದೀಗ ಈ ವಿಚಾರ ಇಡೀ ಜಗತ್ತಿಗೆ ಗೊತ್ತಾಗಿದೆ. ಇಷ್ಟು ದಿನ ಗರ್ಲ್ ಫ್ರೆಂಡ್ ಎನಿಸಿಕೊಳ್ಳುತ್ತಿದ್ದ ಸೋಫಿ ಶೈನ್ ಬಗ್ಗೆ ಶಿಖರ್ ಧವನ್ ಗುರುವಾರ ಇನ್ಸ್ಟಾಗ್ರಾಮ್‌ನಲ್ಲಿ ಒಂದು ಬರಹ ಪೋಸ್ಟ್ ಮಾಡಿದ್ದು, ಅದರಲ್ಲಿ ಅವರು ತಮ್ಮ ಮತ್ತು ಸೋಫಿಯ ಫೋಟೋವನ್ನು ಹಂಚಿಕೊಂಡಿದ್ದಾರೆ. ಈ ಫೋಟೋಗೆ ನನ್ನ ಪ್ರೀತಿ ಎಂದು ಶೀರ್ಷಿಕೆ ನೀಡಲಾಗಿದ್ದು, ಈ ಇಬ್ಬರ ನಡುವಿನ ಸಂಬಂಧಕ್ಕೆ ಅಧಿಕೃತ ಮುದ್ರೆ ಬಿದ್ದಿದೆ.

ಚಾಂಪಿಯನ್ಸ್ ಟ್ರೋಫಿಯ ಸಮಯದಲ್ಲಿ ಶಿಖರ್ ಧವನ್ ಸೋಫಿ ಜೊತೆ ಕಾಣಿಸಿಕೊಂಡಿದ್ದರು. ಟೀಮ್ ಇಂಡಿಯಾ ಪಂದ್ಯಗಳನ್ನು ವೀಕ್ಷಿಸಲು ಶಿಖರ್ ಧವನ್ ಜೊತೆಗೆ ಬಂದಿದ್ದು ಮಾತ್ರವಲ್ಲದೆ, ಇಬ್ಬರು ಜೊತೆ ಜೊತೆಯಾಗಿ ಮದುವೆ ಸಮಾರಂಭಗಳಲ್ಲೂ ಕಾಣಿಸಿಕೊಂಡಿದ್ದರು. 2024ರಲ್ಲಿ ಚಾಂಪಿಯನ್ಸ್ ಟ್ರೋಫಿಗೆ ಮುಂಚೆಯೇ, ಇಬ್ಬರೂ ವಿಮಾನ ನಿಲ್ದಾಣದಲ್ಲಿ ಒಟ್ಟಿಗೆ ಕಾಣಿಸಿಕೊಂಡಿದ್ದರು. ಇದೀಗ ಶಿಖರ್ ಧವನ್ ಇಬ್ಬರು ಪ್ರೀತಿಯಲ್ಲಿ ಬಿದ್ದಿರುವುದನ್ನು ಖಚಿತಪಡಿಸಿದ್ದಾರೆ. ಸೋಫಿ ಮೂಲತಃ ಐರ್ಲೆಂಡ್‌ನವರಾಗಿದ್ದು, ಸೋಶಿಯಲ್ ಮೀಡಿಯಾದಲ್ಲಿ ಒಬ್ಬರನ್ನೊಬ್ಬರು ಫಾಲೋ ಮಾಡುತ್ತಿದ್ದು, ಸೋಫಿ 44 ಸಾವಿರಕ್ಕೂ ಹೆಚ್ಚು ಅನುಯಾಯಿಗಳನ್ನು ಹೊಂದಿದ್ದಾರೆ.



ಹದಿನೆಂಟು ವರ್ಷಗಳ ಐಪಿಎಲ್ ಇತಿಹಾಸ | 2020ರಲ್ಲೂ ಪ್ಲೇ ಆಫ್ ರೇಸ್‌ನಿಂದ ಹೊರಬಿದ್ದಿದ್ದ ಚೆನ್ನೈ

ಪ್ಲೇ ಆಫ್: ನಿರ್ಗಮಿಸಿದ ಮೊದಲ ತಂಡಗಳು

ಚೆನ್ನೈ: ಚೆನ್ನೈ ಸೂಪರ್ ಕಿಂಗ್ಸ್ ತಂಡವು ಈ ಸಲದ ಐಪಿಎಲ್‌ನ ಪ್ಲೇಆಫ್ ರೇಸ್‌ನಿಂದ ನಿರ್ಗಮಿಸಿದ ಮೊದಲ ತಂಡ ಎನಿಸಿತು, ಆ ಮೂಲಕ ಈ ಆವೃತ್ತಿಯ ಕಳಪೆ ತಂಡವಾಗಿಯೂ ಗುರುತಿಸಿಕೊಂಡಿದೆ. ಇನ್ನೀಗ ಚೆನ್ನೈ ತಂಡವು ಉಳಿದ ಎಲ್ಲಾ ಪಂದ್ಯಗಳನ್ನು ಗೆದ್ದರೆ ಗರಿಷ್ಠ 12 ಅಂಕಗಳನ್ನು ಗಳಿಸಬಹುದು, ಆದರೆ 12 ಅಂಕಗಳೊಂದಿಗೆ 10 ತಂಡಗಳನ್ನು ಹೊಂದಿರುವ ಟೂರ್ನಿಯಲ್ಲಿ ಅಗ್ರ-4 ಸ್ಥಾನ ಪಡೆಯುವುದು ಸಾಧ್ಯವಿಲ್ಲ. 18 ವರ್ಷಗಳ ಐಪಿಎಲ್ ಇತಿಹಾಸದಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ತಂಡ ಪ್ಲೇ ಆಫ್ ರೇಸ್‌ನಿಂದ ಹೊರಬಿದ್ದಿರುವುದು ಇದು ಎರಡನೇ ಸಲ. ಅದು ಈ ಮೊದಲು 2020ರ ಐಪಿಎಲ್‌ನಲ್ಲೂ ಪ್ಲೇಆಫ್ ರೇಸ್‌ನಿಂದ ಹೊರಬಿದ್ದ ಮೊದಲ ತಂಡವಾಗಿತ್ತು.

ಡೆಲ್ಲಿ ಕ್ಯಾಪಿಟಲ್ಸ್ ಮತ್ತು ಡೆಕ್ಕನ್ ಚಾರ್ಜರ್ಸ್ ಹೈದರಾಬಾದ್ ತಂಡಗಳು ಅತಿ ಹೆಚ್ಚು ಬಾರಿ ಅಂದರೆ ತಲಾ 3 ಬಾರಿ ಪ್ಲೇ ಆಫ್ ರೇಸ್‌ನಿಂದ ನಿರ್ಗಮಿಸಿವೆ. ಮುಂಬೈ ಇಂಡಿಯನ್ಸ್, ಪಂಜಾಬ್ ಕಿಂಗ್ಸ್ ಮತ್ತು ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡಗಳು ಸತತ ಎರಡು ಬಾರಿ ಮೊದಲ ತಂಡವಾಗಿ ಪ್ಲೇ ಆಫ್ ರೇಸ್‌ನಿಂದ ನಿರ್ಗಮಿಸಿವೆ. ಅವುಗಳ ಜೊತೆಗೆ, ಕೋಲ್ಕತ್ತಾ ನೈಟ್ ರೈಡರ್ಸ್, ಪುಣೆ ವಾರಿಯರ್ಸ್ ಇಂಡಿಯಾ, ರೈಸಿಂಗ್ ಪುಣೆ ಸೂಪರ್‌ಜೈಂಟ್ಸ್ ಮತ್ತು ಸನ್‌ರೈಸರ್ಸ್ ಹೈದರಾಬಾದ್ ತಂಡಗಳೂ ಸಹ ತಲಾ ಒಮ್ಮೊಮ್ಮೆ ಮೊದಲ ತಂಡವಾಗಿ ಪ್ಲೆ ಆಫ್ ರೇಸ್‌ನಿಂದ ಮೊದಲ ತಂಡವಾಗಿ ಹೊರಬಿದ್ದಿವೆ.

ಐಪಿಎಲ್‌ನಲ್ಲಿ ಮೊದಲು ನಿರ್ಗಮಿಸಿದ ತಂಡಗಳು

2008: ಡೆಕ್ಕನ್ ಚಾರ್ಜರ್ಸ್ ಹೈದರಾಬಾದ್, 2009: ಕೋಲ್ಕತ್ತಾ ನೈಟ್ ರೈಡರ್ಸ್, 2010: ಪಂಜಾಬ್ ಕಿಂಗ್ಸ್, 2011: ಡೆಕ್ಕನ್ ಚಾರ್ಜರ್ಸ್ ಹೈದರಾಬಾದ್, 2012: ಡೆಕ್ಕನ್ ಚಾರ್ಜರ್ಸ್ ಹೈದರಾಬಾದ್, 2013: ಪುಣೆ ವಾರಿಯರ್ಸ್ ಇಂಡಿಯಾ, 2014: ಡೆಲ್ಲಿ ಕ್ಯಾಪಿಟಲ್ಸ್, 2015: ಪಂಜಾಬ್ ಕಿಂಗ್ಸ್, 2016: ರೈಸಿಂಗ್ ಪುಣೆ ಸೂಪರ್‌ಜೈಂಟ್ಸ್, 2017: ರಾಯಲ್ ಚಾಲೆಂಜರ್ಸ್ ಬೆಂಗಳೂರು, 2018: ಡೆಲ್ಲಿ ಕ್ಯಾಪಿಟಲ್ಸ್, 2019: ರಾಯಲ್ ಚಾಲೆಂಜರ್ಸ್ ಬೆಂಗಳೂರು, 2020: ಚೆನ್ನೈ ಸೂಪರ್ ಕಿಂಗ್ಸ್, 2021: ಸನ್‌ರೈಸರ್ಸ್ ಹೈದರಾಬಾದ್, 2022: ಮುಂಬೈ ಇಂಡಿಯನ್ಸ್, 2023: ಡೆಲ್ಲಿ ಕ್ಯಾಪಿಟಲ್ಸ್, 2024: ಮುಂಬೈ ಇಂಡಿಯನ್ಸ್, 2025: ಚೆನ್ನೈಸೂಪರ್ ಕಿಂಗ್ಸ್

24 ದಿನ ನಡೆಯಲಿರುವ ಟೂರ್ನಿ | ಮೊದಲ ಬಾರಿಗೆ ಸ್ಪರ್ಧೆಯಲ್ಲಿ 12 ತಂಡಗಳು

ಮುಂದಿನ ವರ್ಷ ಮಹಿಳಾ ಟಿ20 ವಿಶ್ವಕಪ್: ಲಾರ್ಡ್ಸ್‌ನಲ್ಲಿ ಫೈನಲ್

ಲಂಡನ್: ಮುಂದಿನ ವರ್ಷ ನಡೆಯಲಿರುವ ಮಹಿಳಾ ಟಿ20 ವಿಶ್ವಕಪ್‌ಗೆ ಸಂಬಂಧಿಸಿದಂತೆ ಐಸಿಸಿ ಗುರುವಾರ ಮಹತ್ವದ ಪ್ರಕಟಣೆ ಹೊರಡಿಸಿದ್ದು, ಮೊದಲ ಬಾರಿಗೆ 12 ತಂಡಗಳು ಪಂದ್ಯಾವಳಿಯಲ್ಲಿ ಆಡಲಿವೆ ಎಂದು ತಿಳಿಸಿದೆ.

ಟೂರ್ನಮೆಂಟ್‌ನ ಫೈನಲ್ ಪಂದ್ಯವು ಜುಲೈ 5ರಂದು ಲಾರ್ಡ್ಸ್‌ನಲ್ಲಿ ನಡೆಯಲಿದೆ. ಇದಕ್ಕೂ ಮೊದಲು, 2017ರಲ್ಲಿ ನಡೆದ ಮಹಿಳಾ ಏಕದಿನ ವಿಶ್ವಕಪ್‌ನ ಫೈನಲ್ ಪಂದ್ಯವೂ ಸಹ ಲಾರ್ಡ್ಸ್‌ನಲ್ಲಿ ನಡೆದಿತ್ತು.

24 ದಿನ, 33 ಪಂದ್ಯಗಳು, 12 ತಂಡ: 2026ರ ಮಹಿಳಾ ಟಿ20 ವಿಶ್ವಕಪ್ ಅನ್ನು ಇಂಗ್ಲೆಂಡ್ ಆಯೋಜಿಸಲಿದೆ. ಪಂದ್ಯಾವಳಿ ಜೂನ್ 12ರಂದು ಪ್ರಾರಂಭವಾಗಿ ಜುಲೈ 5ರವರೆಗೆ ನಡೆಯಲಿದೆ. ಮೊದಲ ಬಾರಿಗೆ 12 ತಂಡಗಳು ಟೂರ್ನಿಯಲ್ಲಿ ಭಾಗವಹಿಸಲಿದ್ದು, ಅದರಲ್ಲಿ 8 ತಂಡಗಳು ನೇರವಾಗಿ ಮತ್ತು ಉಳಿದ 4 ತಂಡಗಳು ಅರ್ಹತೆಯ ಮೂಲಕ ಅರ್ಹತೆ ಪಡೆಯಲಿವೆ. 24 ದಿನಗಳ ಮಹಿಳಾ ಟಿ20 ವಿಶ್ವಕಪ್‌ನಲ್ಲಿ ಒಟ್ಟು 33 ಪಂದ್ಯಗಳು ನಡೆಯಲಿವೆ.

ಪಂದ್ಯಾವಳಿಯ ಸ್ವರೂಪ: ತಲಾ 6 ತಂಡಗಳನ್ನು ಎರಡು ಗುಂಪುಗಳಾಗಿ ವಿಂಗಡಿಸಿ, ಗುಂಪು ಹಂತದ ಪಂದ್ಯಗಳ ನಂತರ, ನಾಕೌಟ್ ಹಂತವಿದ್ದು, ಅದರ ಮೂಲಕ ಅಂತಿಮ ಸ್ಪರ್ಧಿಗಳನ್ನು ನಿರ್ಧರಿಸಲಾಗುತ್ತದೆ. ಪಂದ್ಯಗಳು ಇಂಗ್ಲೆಂಡ್‌ನ 7 ಮೈದಾನಗಳಲ್ಲಿ ನಡೆಯಲಿವೆ, ಇದರಲ್ಲಿ ಲಾರ್ಡ್ಸ್, ಓಲ್ಡ್ ಟ್ರಾಫರ್ಡ್, ಹೆಡಿಂಗ್ಲೆ, ಎಡ್ಜ್‌ಬಾಸ್ಟನ್, ಹ್ಯಾಂಪ್‌ಶೈರ್ ಬೌಲ್, ದಿ ಓವಲ್ ಮತ್ತು ಬ್ರಿಸ್ಟಲ್ ಕೌಂಟಿ ಮೈದಾನ ಸೇರಿವೆ.

ಟೂರ್ನಿಯಲ್ಲಿ ಆಡಲಿರುವ 12 ತಂಡಗಳಲ್ಲಿ, ನೇರ ಅರ್ಹತೆ ಪಡೆದ 8 ತಂಡಗಳ ಹೆಸರನ್ನು ಅಂತಿಮಗೊಳಿಸಲಾಗಿದೆ. ಅರ್ಹತೆ ಪಡೆದ 8 ತಂಡಗಳಲ್ಲಿ ಆತಿಥೇಯ ಇಂಗ್ಲೆಂಡ್, ಆಸ್ಟ್ರೇಲಿಯಾ, ಭಾರತ, ನ್ಯೂಜಿಲೆಂಡ್, ದಕ್ಷಿಣ ಆಫ್ರಿಕಾ, ವೆಸ್ಟ್ ಇಂಡೀಸ್, ಪಾಕಿಸ್ತಾನ ಮತ್ತು ಶ್ರೀಲಂಕಾ . ಈ ವರ್ಷ ನಡೆಯಲಿರುವ ಅರ್ಹತಾ ಪಂದ್ಯಗಳ ನಂತರ ಉಳಿದ 4 ತಂಡಗಳ ಹೆಸರನ್ನು ಅಂತಿಮಗೊಳಿಸಲಾಗುತ್ತದೆ.

ಒಂದೇ ದಿನ ಶತಕ ಮತ್ತು 5 ವಿಕೆಟ್ | ಬಾಂಗ್ಲಾ ಕ್ರಿಕೆಟಿಗನ ಸಾಧನೆ

ಕ್ರಿಕೆಟ್ ಟೆಸ್ಟ್: ಮೆಹಿದಿ ಹಸನ್ ವಿಶ್ವ ದಾಖಲೆ

ಢಾಕಾ: ಬಾಂಗ್ಲಾದೇಶ ಕ್ರಿಕೆಟ್ ತಂಡದ ಯುವ ಆಲ್‌ರೌಂಡರ್ ಮೆಹಿದಿ ಹಸನ್ ಟೆಸ್ಟ್ ಕ್ರಿಕೆಟ್‌ನಲ್ಲಿ ಗುರುವಾರ ಹೊಸ ವಿಶ್ವ ದಾಖಲೆ ನಿರ್ಮಾಣ ಮಾಡಿದ್ದಾರೆ. ಇಲ್ಲಿನ ಚಟ್ಟೋಗ್ರಾಮ್‌ನಲ್ಲಿ ನಡೆಯುತ್ತಿರುವ ಜಿಂಬಾಬ್ವೆ ವಿರುದ್ಧದ 2ನೇ ಟೆಸ್ಟ್ ಪಂದ್ಯದಲ್ಲಿ ಆಲ್‌ರೌಂಡರ್ ಪ್ರದರ್ಶನ ನೀಡುವ ಮೂಲಕ ಅವರು ಈ ವಿಶೇಷ ದಾಖಲೆ ನಿರ್ಮಿಸಿದ್ದಾರೆ.

ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ಜಿಂಬಾಬ್ವೆ ತಂಡವು ಮೊದಲ ಇನಿಂಗ್ಸ್‌ನಲ್ಲಿ 227 ರನ್ ಕಲೆ ಹಾಕಿತು. ಅದಕ್ಕುತ್ತರವಾಗಿ ಬ್ಯಾಟಿಂಗ್ ಮಾಡಿದ ಬಾಂಗ್ಲಾದೇಶದ ಪರ ಮೆಹದಿ ಹಸನ್ ಭರ್ಜರಿ ಬ್ಯಾಟಿಂಗ್ ಪ್ರದರ್ಶಿಸಿದ್ದರು. 162 ಎಸೆತಗಳನ್ನು ಎದುರಿಸಿದ ಹಸನ್, 1 ಸಿಕ್ಸ್ 11 ಬೌಂಡರಿಗಳೊಂದಿಗೆ ಮೂರನೇ ದಿನದಾಟದಲ್ಲಿ ಶತಕ ಪೂರೈಸಿ, ಬಾಂಗ್ಲಾದೇಶ ತಂಡದ ಸ್ಕೋರ್ ಅನ್ನು 444ಕ್ಕೆ ತಲುಪಿಸಿದರು.

ಅದರ ಬೆನ್ನಲ್ಲೇ, ದ್ವಿತೀಯ ಇನಿಂಗ್ಸ್ ಆರಂಭಿಸಿದ ಜಿಂಬಾಬ್ವೆ ತಂಡವು ಕೇವಲ 111 ರನ್‌ಗಳಿಗೆ ಆಲೌಟ್ ಆಯಿತು. ಬಾಂಗ್ಲಾದೇಶ್ ಪರ ಮೆಹದಿ ಹಸನ್ 5 ವಿಕೆಟ್ ಕಬಳಿಸಿ ಮಿಂಚಿದರು, ಅದರೊಂದಿಗೆ ಟೆಸ್ಟ್ ಕ್ರಿಕೆಟ್‌ನಲ್ಲಿ ಅವರಿಂದ ಹೊಸ ಇತಿಹಾಸ ಕೂಡ ನಿರ್ಮಾಣವಾಯಿತು

ಟೆಸ್ಟ್ ಕ್ರಿಕೆಟ್ ಇತಿಹಾಸದಲ್ಲಿ ಒಂದೇ ದಿನ ಶತಕ ಪೂರೈಸಿ, 5 ವಿಕೆಟ್ ಕಬಳಿಸಿದ ಏಷ್ಯಾದ ಮೊದಲ ಆಟಗಾರ ಹಾಗೂ ವಿಶ್ವದ 2ನೇ ಆಲ್‌ರೌಂಡರ್ ಎಂಬ ಹೆಗ್ಗಳಿಕೆಯನ್ನು ಮೆಹಿದಿ ಹಸನ್ ತಮ್ಮದಾಗಿಸಿಕೊಂಡರು, ಜಿಂಬಾಬ್ವೆ ವಿರುದ್ಧದ 2ನೇ

ಹಿಂದಿನ ವಿಶ್ವ ದಾಖಲೆ

ಇದಕ್ಕೂ ಮುನ್ನ ಇಂತಹದೊಂದು ವಿಶ್ವ ಸಾಧನೆ ಮಾಡಿದ್ದು ಇಂಗ್ಲೆಂಡ್‌ನ ಇಯಾನ್ ಬಾಥಮ್. 1984ರಲ್ಲಿ ನಡೆದ ನ್ಯೂಜಿಲೆಂಡ್ ವಿರುದ್ಧದ ಟೆಸ್ಟ್ ಪಂದ್ಯದಲ್ಲಿ ಇಂಗ್ಲೆಂಡ್ ಆಲ್‌ರೌಂಡರ್ ಇಯಾನ್ ಬಾಥಮ್ ಒಂದೇ ದಿನ ಶತಕ ಪೂರೈಸಿ, ಅದೇ ದಿನ 5 ವಿಕೆಟ್ ಕಬಳಿಸಿ ವಿಶ್ವ ದಾಖಲೆ ನಿರ್ಮಿಸಿದ್ದರು. ಇದೀಗ 41 ವರ್ಷಗಳ ಬಳಿಕ ಈ ದಾಖಲೆಯನ್ನು ಸರಿಗಟ್ಟುವಲ್ಲಿ ಬಾಂಗ್ಲಾ ಕ್ರಿಕೆಟಿಗ ಮೆಹದಿ ಹಸನ್ ಯಶಸ್ವಿಯಾಗಿದ್ದಾರೆ.

ಟೆಸ್ಟ್ ಪಂದ್ಯದ ಮೂರನೇ ದಿನ ಶತಕ ಪೂರೈಸಿದ ಮೆಹಿದಿ ಹಸನ್ (104), ಅದೇ ದಿನ 21 ಓವರ್‌ಗಳಲ್ಲಿ ಕೇವಲ 32 ರನ್ ನೀಡಿ 5 ವಿಕೆಟ್ ಕಬಳಿಸಿದ್ದಾರೆ. ಆ ಮೂಲಕ ಟೆಸ್ಟ್ ಕ್ರಿಕೆಟ್‌ನಲ್ಲಿ ಮೆಹಿದಿ ಹಸನ್ ಅಪರೂಪದ ವಿಶ್ವ ದಾಖಲೆಯನ್ನು ತಮ್ಮದಾಗಿಸಿಕೊಂಡಿದ್ದಾರೆ.